# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೆಂಟನೆಯ ಅಧಿವೇಶನ

26ನೇ ಡಿಸೆಂಬರ್ 2022

ಸೋಮವಾರ

## ವಿಷಯಾನುಕ್ರಮಣಿಕೆ (INDEX)

01.ಪ್ರಕಟಣೆಗಳು

ಅ) ದೇಶದಲ್ಲಿ ಕೊರೊನ ವೈರಸ್ (ಕೋವಿಡ್-19) ಹರಡುತ್ತಿರುವ ಹಿನ್ನೆಲೆಯಲ್ಲಿ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಕೋವಿಡ್ ಬೂಸ್ಟರ್ ಡೋಸ್ ನೀಡುವ ಬಗ್ಗೆ.

ಆ) ಕರ್ನಾಟಕ ವಿಧಾನ ಸಭೆಯು ಅಂಗೀಕರಿಸಿರುವ "2022ನೇ ಸಾಲಿನ ಕರ್ನಾಟಕ ಸ್ಟಾಂಪ್(ನಾಲ್ಕನೇ ತಿದ್ದುಪಡಿ) ವಿಧೇಯಕಕ್ಕೆ ಸಹಮತಿ ನೀಡಬೇಕೆನ್ನುವ ಬಗ್ಗೆ.

ಇ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 222ರ ಮೇರೆಗೆ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ.

02.ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

754 – ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಚಿತ್ರ, ದೃಶ್ಯ ಪ್ರಸಾರವಾಗುತ್ತಿರುವ ಬಗ್ಗೆ.

- ಶ್ರೀ ಪಿ.ಆರ್.ರಮೇಶ್
- ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು)

**841- ಪೋಲೀಸ್ ಸೈಬರ್ ಸೆಲ್ ಅನ್ನು ಆಧುನೀಕರಣಗೊಳಸುವ ಬಗ್ಗೆ.**

- ಶ್ರೀ ಟಿ.ಎ.ಶರವಣ
- ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

**835- ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯ ಪ್ರಕರಣದ ಆರೋಪಿಗಳಿಗೆ ಶೀರ್ಘವಾಗಿ ಶಿಕ್ಷೆ ನೀಡುವ ಕುರಿತು**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ
- ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು)

**807+883- ತ್ಯಾಜ್ಯ ವಸ್ತುಗಳ ಕುರಿತು**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಡಿ.ಎಸ್. ಅರುಣ್
- ಶ್ರೀ ಆನಂದ್ ಸಿಂಗ್ (ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು)

**894- ಕೊಡಗು ಜಿಲ್ಲೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಮಾಡುವ ಕುರಿತು.**

- ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)
- ಡಾ: ಕೆ.ಸುಧಾಕರ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**790- ಮೈಸೂರು ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ. ಪ್ರವೇಶ ಕುರಿತು.**

- ಶ್ರೀ ಮಧು ಜಿ. ಮಾದೇಗೌಡ

- ಡಾ:ಸಿ.ಎನ್.ಅಶ್ವತ್ಥ್‌ನಾರಾಯಣ
  (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**782- ಅತಿಥಿ ಉಪನ್ಯಾಸಕರಿಗೆ ಸೇವಾ ಸೌಲಭ್ಯ ಕಲ್ಪಿಸುವ ಬಗ್ಗೆ.**

- ಶ್ರೀ ಮರಿತಿಬ್ಬೇಗೌಡ
- ಡಾ:ಸಿ.ಎನ್.ಅಶ್ವತ್ಥ್‌ನಾರಾಯಣ
  (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋದ ಪಕ್ಷದ ನಾಯಕರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಬಿ.ಇ. ಇಂಜಿನೀಯರಿಂಗ್ ಕಾಲೇಜಿನಲ್ಲಿ ಪ್ರವೇಶ ಪಡೆಯುವ ಸಂದರ್ಭದಲ್ಲಿ ಖಾಸಗಿ ಕಾಲೇಜುಗಳು ಹೆಚ್ಚಿನ ಶುಲ್ಕ ಪಡೆಯುತ್ತಿರುವ ಕುರಿತು.**

- ಡಾ:ತಳವಾರ್ ಸಾಬಣ್ಣ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ಬೀದರ್ ಜಿಲ್ಲೆಯಲ್ಲಿ ಕಾರಂಜ ಯೋಜನೆಗೆ ಭೂಮಿ ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ದೊರೆಯದಿರುವ ಕುರಿತು ರೈತರು ಅಹೋರಾತ್ರಿ ಧರಣಿ ನಡೆಸುತ್ತಿರುವ ಕುರಿತು.**

- ಶ್ರೀ ಅರವಿಂದ ಕುಮಾರ ಅರಳಿ

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಬೆಂಗಳೂರು ನಗರದಲ್ಲಿ ಹೊಸದಾಗಿ ಡಿಜಿಟಲ್ ಮೀಟರ್‌ಗಳನ್ನು ಅಳವಡಿಸಿರುವುದರಿಂದ ವಿದ್ಯುತ್ ಬಿಲ್ ಹಳೆಯ ಮೀಟರ್‌ಗಿಂತ ದುಪ್ಪಟ್ಟಾಗುತ್ತಿರುವ ಬಗ್ಗೆ.**

- ಶ್ರೀ ಟಿ.ಎ.ಶರವಣ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಧಾರವಾಡ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಶುಲ್ಕ ವಿಧಿಸುವಲ್ಲಿ ಆಗುತ್ತಿರುವ ಸಮಸ್ಯೆ ಬಗ್ಗೆ.**

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಡಾ:ಸಿ.ಎನ್.ಅಶ್ವತ್ಥ್‌ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**ಉ) ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು ಅಕ್ರಮ-ಸಕ್ರಮ ಯೋಜನೆ ಅಡಿಯಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅಳವಡಿಸುವಲ್ಲಿ ಆಗುತ್ತಿರುವ ವಿಳಂಬ ಕುರಿತು.**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಊ) ರಾಜ್ಯದ ಅಂಗನವಾಡಿಗಳಿಗೆ ಈ ಹಿಂದೆ ಕಳಪೆ ಆಹಾರ ಪೂರೈಕೆ ಮಾಡಿ ಕಪ್ಪು ಪಟ್ಟಿಗೆ ಸೇರಿದ ಸಂಸ್ಥೆಗಳಿಗೆ ಪುನಃ ಪೌಷ್ಠಿಕ ಆಹಾರ ಪದಾರ್ಥ ಪೂರೈಸಲು ಜವಾಬ್ದಾರಿ ನೀಡಿರುವ ಬಗ್ಗೆ.**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಋ) ವನ್ಯ ಜೀವಿಗಳನ್ನು ಸಾಕಾಣಿಕೆ ಮಾಡಿರುವಂತಹವರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ-1972ರ ಅಡಿಯಲ್ಲಿ ಬೆಂಗಳೂರಿನಲ್ಲಿ ಜಿಂಕೆ ಚರ್ಮ ಮಾರಾಟ ಮಾಡಲು**

**ಹೋಗಿದ್ದ ವ್ಯಕ್ತಿಯೊಬ್ಬರನ್ನು ಸಿಸಿಬಿ ಪೋಲೀಸರು ವಶಕ್ಕೆ ಪಡೆದಿರುವ ಕುರಿತು.**

- ಶ್ರೀ ಶಾಂತರಾಮ ಬುಡ್ನ ಸಿದ್ದಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಎ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಇವರು ಇತ್ತೀಚೆಗೆ ವಿದ್ಯಾರ್ಥಿಗಳ ಪರೀಕ್ಷೆಗೆ ಸಂಬಂಧಿಸಿದ ವಿವಿಧ ರೀತಿಯ ಶುಲ್ಕಗಳನ್ನು ಹೆಚ್ಚಿಸಿರುವ ಕುರಿತು**

- ಶ್ರೀ ಎಸ್.ವ್ಹಿ.ಸಂಕನೂರ
- ಡಾ:ಸಿ.ಎನ್.ಅಶ್ವತ್ಥ್‌ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**ಏ) ರಾಜ್ಯದಲ್ಲಿ ಜಲ್ಲಿಕಲ್ಲು ಹಾಗೂ ಕಲ್ಲಿನ ಮರಳು ಸರಬರಾಜುದಾರರು ಸರಬರಾಜನ್ನು ನಿಲ್ಲಿಸಿರುವ ಕುರಿತು.**

- ಶ್ರೀ ಮುನಿರಾಜು ಗೌಡ ಪಿ.ಎಂ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಟಿ.ಎ.ಶರವಣ
- ಡಾ:ಸಿ.ಎನ್.ಅಶ್ವತ್ಥ್‌ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)
- ಶ್ರೀ ಎನ್.ರವಿಕುಮಾರ್
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

**ಐ) ವಿಧಾನ ಪರಿಷತ್ತಿನ ಶಾಸಕರುಗಳ ಕ್ಷೇತ್ರಾಭಿವೃದ್ಧಿ ನಿಧಿಯನ್ನು ಹೆಚ್ಚಿಸುವ ಬಗ್ಗೆ.**

- ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ

- ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

**೦4. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.**

**"ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ."**

- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**೦5. ವಿತ್ತೀಯ ಕಾರ್ಯಕಲಾಪಗಳು**

**ಅ) 2022-23ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಮಂಡನೆ**

**ಆ) 2022-23ನೇ ಸಾಲಿನ ಮಧ್ಯ ವಾರ್ಷಿಕ ಪರಿಶೀಲನಾ ವರದಿ ಮಂಡನೆ.**

**೦6. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ 2021-2022ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಸಂಪುಟ 1 ಮತ್ತು 11) ಸಭೆಯ ಮುಂದಿಡುವುದು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**೦7. ಅರ್ಜಿಗಳನ್ನೊಪ್ಪಿಸುವುದು**

**೦8. ಕಾರ್ಯದರ್ಶಿಯವರ ವರದಿ**

**೦9. ಶಾಸನ ರಚನೆ**

**ವಿಧೇಯಕಗಳ ಪರ್ಯಾಯೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2022**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)

(ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

– ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

– ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಎಂ.ನಾಗರಾಜು

– ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

– ಶ್ರೀ ಎನ್.ನಾಗರಾಜು(ಎಂ.ಟಿ.ಬಿ)(ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು)

– ಶ್ರೀ ಡಿ.ಎಸ್. ಅರುಣ್

– ಶ್ರೀ ಮರಿತಿಬ್ಬೇಗೌಡ

– ಡಾ:ತೇಜಸ್ವಿನಿ ಗೌಡ

– ಶ್ರೀ ಕೆ.ಎಸ್.ನವೀನ್

– ಶ್ರೀ ಪಿ.ಆರ್.ರಮೇಶ್

– ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2022**

- ಶ್ರೀ ಆರ್. ಅಶೋಕ್ (ಕಂದಾಯ ಸಚಿವರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ
- ಶ್ರೀ ಪಿ.ಆರ್.ರಮೇಶ್
- ಶ್ರೀ ಎನ್.ನಾಗರಾಜು (ಎಂ.ಟಿ.ಬಿ)(ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು)
- ಶ್ರೀ ಮುನಿರಾಜುಗೌಡ ಪಿ.ಎಂ.

- ಶ್ರೀ ಆಯನೂರು ಮಂಜುನಾಥ್
- ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)
- ಶ್ರೀ ಎಸ್.ರವಿ
- ಡಾ॥ ತೇಜಸ್ವಿನಿ ಗೌಡ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಟಿ.ಎ.ಶರವಣ
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಆರ್. ಅಶೋಕ್(ಕಂದಾಯ ಸಚಿವರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್ ಕೆ.

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**10. ಗಮನ ಸೆಳೆಯುವ ಸೂಚನೆಗಳು**

**ಅ) 1975ನೇ ಇಸವಿಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸೆರೆಮನೆವಾಸ ಅನುಭವಿಸಿದವರಿಗೆ ವಿವಿಧ ರಾಜ್ಯಗಳಲ್ಲಿ ನೀಡುತ್ತಿರುವಂತೆ ಪಿಂಚಣಿ ಅಥವಾ ಗೌರವಧನವನ್ನು ನೀಡುವ ಕುರಿತು.**

- ಶ್ರೀ ಅರುಣ್ ಡಿ.ಎಸ್.
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಕಂದಾಯ ಸಚಿವರ ಪರವಾಗಿ)

**ಆ) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಪ್ರಕಾರ ಕೊಪ್ಪಳ ನಗರ ವ್ಯಾಪ್ತಿಯಲ್ಲಿರುವ ಲೇಔಟ್‌ಗಳಿಗೆ ಫಾರಂ ನಂ.3 ಅನ್ನು ಸಾರ್ವಜನಿಕರಿಗೆ ವಿತರಿಸದೆ ಇರುವ ಕುರಿತು.**

- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಎನ್.ನಾಗರಾಜು(ಎಂ.ಟಿ.ಬಿ)(ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ

ಉದ್ಯಮಗಳ ಸಚಿವರು)

**ಇ) ಬೆಂಗಳೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಂಬಂಧಿಸಿದ ಪ್ರಧಾನ ವ್ಯವಸ್ಥಾಪಕರು ಅಕ್ರಮ ಎಸಗಿರುವ ಕುರಿತು.**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)
- ಶ್ರೀ ಟಿ.ಎ.ಶರವಣ

**ಈ) ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಜಾತಿ ಸಿಂಧುತ್ವ ಪ್ರಮಾಣ ಪತ್ರ ಸಿಗದೆ ಹಲವು ವರ್ಷಗಳಿಂದ ವಿವಿಧ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು ಅತಂತ್ರರಾಗಿರುವ ಕುರಿತು.**

- ಶ್ರೀ ಶಶೀಲ್ ಜಿ. ನಮೋಶಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ)
- ಡಾ: ತಳವಾರ್ ಸಾಬಣ್ಣ

**ಉ) ಗ್ರಾಮ ಪಂಚಾಯಿತಿಗಳನ್ನು ಆರ್ಥಿಕವಾಗಿ ಸದೃಢಗೊಳಿಸಿ ಪರಿಪೂರ್ಣ ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ನಿಯಮಗಳನ್ನು ರೂಪಿಸುವ ಕುರಿತು.**

- ಶ್ರೀ ಎಸ್.ರವಿ.
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

**11. ನಿಯಮ 330ರ ಮೇರೆಗೆ ಚರ್ಚೆ**

**ಅ) ಕ್ರೈಸ್ ವತಿಯಿಂದ ನಡೆಸಲಾಗುತ್ತಿರುವ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಶಿಕ್ಷಕರಿಗೆ ಮೂಲ ಸೌಲಭ್ಯಗಳನ್ನು ಮಂಜೂರು ಮಾಡದಿರುವುದು ಹಾಗೂ ವಸತಿ ಶಾಲೆಯಲ್ಲಿನ ವಿದ್ಯಾರ್ಥಿಗಳು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಕುರಿತು.**

- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಡೆದಿರುವ ಅವ್ಯವಹಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಈವರೆವಿಗೂ ಕ್ರಮ ಕೈಗೊಳ್ಳದಿರುವ ಬಗ್ಗೆ ಹಾಗೂ ಹಣ ಹೂಡಿಕೆ ಮಾಡಿ ವಂಚಿತರಾದವರಿಗೆ ಪರಿಹಾರ ಒದಗಿಸದಿರುವ ಕುರಿತು.**

- ಶ್ರೀ ಮುನಿರಾಜು ಗೌಡ ಪಿ.ಎಂ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

***

(1155) 26-12-2022 11.20 ಡಿಎಸ್-ಬಿಎನ್‌ಎಸ್

# ಕರ್ನಾಟಕ ವಿಧಾನ ಪರಿಷತ್ತು

**ಸೋಮವಾರ, 26ನೇ ಡಿಸೆಂಬರ್ 2022**

**ಸದನವು ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿರುವ**
**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಪೂರ್ವಾಹ್ನ 11 ಗಂಟೆ 28 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು**
**ಪೀಠದಲ್ಲಿ ಉಪಸ್ಥಿತರಾದರು**

**01. ಪ್ರಕಟಣೆಗಳು**

**ಸಭಾಪತಿಯವರು:-**

ಅ) ದೇಶದಲ್ಲಿ ಕೊರೊನ ವೈರಸ್ (ಕೋವಿಡ್-19) ಹರಡುತ್ತಿರುವ ಹಿನ್ನಲೆಯಲ್ಲಿ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ ದಿನಾಂಕ:26.12.2022ರಂದು ಬೆಳಗ್ಗೆ:10.30 ರಿಂದ ಸಂಜೆ 05.30ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದ ಮೊದಲನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 110 (ಸಮಿತಿ ಸಭಾಂಗಣ)ರಲ್ಲಿ ಕೋವಿಡ್ ಬೂಸ್ಟರ್ ಡೋಸ್ ನೀಡುವ ಕಾರ್ಯಕ್ರಮವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದು, ಎಲ್ಲಾ ಮಾನ್ಯ ಶಾಸಕರುಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಈ ಮೂಲಕ ತಿಳಿಸುತ್ತೇನೆ.

ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:

ಆ) **ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:23.12.2022ರಂದು "2022ನೇ ಸಾಲಿನ ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕ"ವನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.**

**ಇ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 222ರ ಮೇರೆಗೆ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ.**

**ಶ್ರೀಯುತರುಗಳಾದ**

01. ಪ್ರಾಣೇಶ್ ಎಂ.ಕೆ.
    ಮಾನ್ಯ ಉಪ ಸಭಾಪತಿಯವರು, ಸದಸ್ಯರು
02. ಕೋಟ ಶ್ರೀನಿವಾಸ ಪೂಜಾರಿ
    ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ

ಕಲ್ಯಾಣ ಸಚಿವರು ಮತ್ತು ಸಭಾನಾಯಕರು, ಸದಸ್ಯರು

೦3. ಬಿ.ಕೆ. ಹರಿಪ್ರಸಾದ್

ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು ಸದಸ್ಯರು

೦4. ಡಾ:ವೈ.ಎ. ನಾರಾಯಣಸ್ವಾಮಿ

ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಸದಸ್ಯರು

೦5. ಪ್ರಕಾಶ್ ಕೆ. ರಾಥೋಡ್

ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಸದಸ್ಯರು

೦6. ಡಾ:ಕೆ. ಗೋವಿಂದರಾಜ್

ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಸದಸ್ಯರು

೦7. ಎಸ್.ಎಲ್. ಭೋಜೇಗೌಡ

ವಿಧಾನ ಪರಿಷತ್ತಿನ ಜನತಾದಳ(ಜಾ) ಶಾಸಕಾಂಗ ಪಕ್ಷದ ನಾಯಕರು ಸದಸ್ಯರು

೦8. ಸವದಿ ಲಕ್ಷ್ಮಣ

ವಿಧಾನ ಪರಿಷತ್ತಿನ ಮಾನ್ಯ ಶಾಸಕರು ಸದಸ್ಯರು

೦9. ಶರವಣ ಟಿ.ಎ.

ವಿಧಾನ ಪರಿಷತ್ತಿನ ಜನತಾದಳ(ಜಾ) ಶಾಸಕಾಂಗ ಪಕ್ಷದ

ಉಪ ನಾಯಕರು ಸದಸ್ಯರು

**ವಿಶೇಷ ಆಹ್ವಾನಿತರು**

ಶ್ರೀಯುತರುಗಳಾದ

೦1 ಬಸವರಾಜ ಬೊಮ್ಮಾಯಿ : ಮಾನ್ಯ ಮುಖ್ಯಮಂತ್ರಿಗಳು

೦2 ಜೆ.ಸಿ. ಮಾಧುಸ್ವಾಮಿ : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಮಾನ್ಯ ಸಭಾಪತಿಯವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

(ಮುಂದು)

(1156) 26/12/2022/ಎಸ್‌ಪಿಆರ್-ಬಿಎನ್‌ಎಸ್/11:30 (ಸಭಾಪತಿಯವರ ಉಪಸ್ಥಿತಿ)

**02. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಡಾ॥ ವೈ.ಎ.ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಗೃಹ ಸಚಿವರು ಉತ್ತರಿಸುವ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳಿ.

**ಸಭಾಪತಿಯವರು:-** ಹಾಗೆಯೇ ಆಗಲಿ. ಶ್ರೀ ಟಿ.ಎ.ಶರವಣರವರು ಪ್ರಸ್ತುತ ಸದನದಲ್ಲಿ ಉಪಸ್ಥಿತರಿಲ್ಲ.

**ಪ್ರಶ್ನೆ ಸಂಖ್ಯೆ: 754**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ, ನಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಬೆಳಗ್ಗಿನಿಂದ ರಾತ್ರಿಯೆಲ್ಲಾ ಬಿತ್ತರವಾಗುವ ಅಶ್ಲೀಲತೆಯಿಂದ ಕೂಡಿರುವ ರೀಲ್ ಅಥವಾ ಚಿತ್ರಗಳನ್ನು ತಾವುಗಳೆಲ್ಲರೂ ನೋಡಿದ್ದೀರಿ. ಹೆಚ್ಚು ಕಡಿಮೆ ದೇಶದಲ್ಲೆಲ್ಲಾ ಎಲ್ಲರೂ ಎಲ್ಲಾ ಕಡೆಗಳಲ್ಲೂ ನೋಡುತ್ತಿದ್ದಾರೆ. ಇದರ ಬಗ್ಗೆ ಇವತ್ತಿನವರೆಗೆ ಯಾವುದೇ ಪರಿಣಾಮಕಾರಿಯಾದ ಕ್ರಮಗಳನ್ನು ಸರ್ಕಾರವು ತೆಗೆದುಕೊಂಡಿಲ್ಲ. ಹಾಲಿ ಇರುವ ಕೇಂದ್ರ ಮತ್ತು ರಾಜ್ಯ ಕಾಯ್ದೆಗಳಲ್ಲಿ ಆ ರೀತಿಯ ಅಧಿಕಾರಗಳಿವೆ. ಆದರೆ, ಇವತ್ತಿನ ದಿವಸ ನಾನು ಬಹಳ ಗಂಭೀರವಾದ ವಿಚಾರವನ್ನು ಹೇಳಲೇ ಬೇಕಾದ ಅವಶ್ಯಕತೆ ಇದೆ. ನಮ್ಮ ದೇಶ, ರಾಜ್ಯಗಳಲ್ಲಿ ಕೇಸರಿ ಬಿಕನಿ, ಪಬ್, ಜಿಹಾದಿ, ಹಿಜಾಬ್, ಹಲಾಲ್ ಇತ್ಯಾದಿ ವಿಷಯಗಳ ಬಗ್ಗೆ ನಾವುಗಳು ಮಾತನಾಡುತ್ತೇವೆ. ಆದರೆ, ಪ್ರತಿ ಹಳ್ಳಿಗಳ ಮನೆ-ಮನೆಗಳಲ್ಲಿನ ಶಾಲಾ ಕಾಲೇಜುಗಳ ಮಕ್ಕಳು ಮತ್ತು ಯುವಕರುಗಳು ನಿದ್ರೆ ಮಾಡದೇ, ಬೆಳಗಿನ ಜಾವ 2 ಗಂಟೆಯವರೆಗೂ ಸಾಮಾಜಿಕ ಜಾಲತಾಣಗಳನ್ನು ನೋಡುತ್ತಿರುತ್ತಾರೆ. ಇಂತಹ ಪರಿಸ್ಥಿತಿಗೆ ಹೋಗಿರುವ ಸನ್ನಿವೇಶವು ಇಡೀ ರಾಜ್ಯ ಮತ್ತು ದೇಶದಲ್ಲಿರಬಹುದು. ಹೀಗಾಗಿ ಇದು ಬಹಳ ಗಂಭೀರವಾದ ಸಾಮಾಜಿಕ ಪಿಡುಗಾಗಿದೆ. ಸೆನ್ಸಾರ್ ಮಂಡಳಿಯಲ್ಲಿ ಬಹಳಷ್ಟು ವಿಚಾರಗಳ ಬಗ್ಗೆ ಚರ್ಚೆಯಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ

ಭಯೋತ್ಪಾದನಾ ರೀತಿಯಲ್ಲಿ "ಸಾಮಾಜಿಕ ರಚನೆ" ಆಗುತ್ತಿದೆ. ನಮ್ಮ ಭಾರತೀಯ ಹಾಗೂ ಹಿಂದೂ ಸಂಸ್ಕೃತಿಗಳನ್ನು ಸಂಪೂರ್ಣವಾಗಿ ನಾಶ ಮಾಡುವ ರೀತಿಯಲ್ಲಿ ಇದು ಸಾಗುತ್ತಿದೆ. ಹೀಗಾಗಿ ಕೆಲವು ರಾಜಕಾರಣಿಗಳು ಇದನ್ನು ಒಂದು ಉಪಕರಣವನ್ನಾಗಿ ಉಪಯೋಗಿಸುತ್ತಿದ್ದಾರೆ ಎನ್ನುವುದು ನನ್ನ ಭಾವನೆಯಾಗಿದೆ. ನಮ್ಮ ಮಕ್ಕಳಿಗೆ ಮತ್ತು ಯುವಕರಿಗೆ ನಮ್ಮ ದೇಶದ ಸ್ಥಿತಿ-ಗತಿಗಳ ಬಗ್ಗೆ ಸರಿಯಾದ ಮಾಹಿತಿ ನೀಡದಿರುವುದೇ ಇದಕ್ಕೆ ಕಾರಣವಾಗಿದೆ. ಈ ರೀತಿಯಲ್ಲಿ ಇಂತಹ ಅಶ್ಲೀಲತೆಯನ್ನು ನೀಡುತ್ತಿರುವ ಕಾಮಪ್ರಚೋದನೆ, ಚಂಚಲತೆ, ಕಾಮ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಇತ್ಯಾದಿಗಳಿರಬಹುದು. ಇದಕ್ಕೆ ಸಣ್ಣ ಸಣ್ಣ ಮಕ್ಕಳು ಪ್ರಚೋದನೆಗೊಳಗಾಗುತ್ತಿದ್ದಾರೆ. ಈ ಬಗ್ಗೆ ನನಗೆ ಸಾಕಷ್ಟು ದೂರುಗಳು ಬಂದಿದ್ದರಿಂದ ನಾನು ಈ ಬಗ್ಗೆ ಪ್ರಶ್ನೆಯನ್ನು ಕೇಳಬೇಕಾಗಿ ಬಂತು. ಇವತ್ತಿನ ಸಮಾಜದಲ್ಲಿ ನಮ್ಮ ಮಕ್ಕಳು ಬಹಳ ಗಂಭೀರವಾಗಿ ಬೆಳೆಯುವುದು ಬಹಳ ಮುಖ್ಯವಾದುದು. ನಾವು ಪಾಶ್ಚಿಮಾತ್ಯ ದೇಶಗಳಿಗಿಂತಲೂ ಬಹಳ ಹೆಚ್ಚಿನ ಮಟ್ಟದಲ್ಲಿ ಹಾಳಾಗಿ ಹೋಗುತ್ತಿದ್ದೇವೆ ಏನೋ ಎನ್ನುವ ಭಾವನೆಯು ಬಂದಿದೆ. ಯಾರ ಲಾಭಕ್ಕಾಗಿ ಈ ರೀತಿಯ ಪ್ರಸಾರಣೆಯಾಗುತ್ತಿದೆ ಎನ್ನುವುದು ಗೊತ್ತಿಲ್ಲ. ಸುಮಾರು 80,379 ದೂರುಗಳು ಬಂದಿವೆ ಎಂದು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದೆ. ಇದರಲ್ಲಿ ಪರಿಣಾಮಕಾರಿಯಾಗಿ ಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ ತಿಳಿಸಿಲ್ಲ. ಸುಮಾರು 542 ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾಖಲಿಸಿರುವ ಬಗ್ಗೆ ತಿಳಿಸಲಾಗಿದೆ. ಇಷ್ಟೊಂದು ಪ್ರಕರಣಗಳಲ್ಲಿ ಯಾವ ರೀತಿಯ ಶಿಕ್ಷೆ ಯಾರಿಗೆ ಆಗಿದೆ ಎನ್ನುವ ಮಾಹಿತಿಯನ್ನು ಎಲ್ಲಿಯೂ ಸಹ ನೀಡಿಲ್ಲ. ಕೇವಲ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಸರ್ಕಾರವು ತಿಳಿಸಿದೆ ವಿನಃ ಆದ ಶಿಕ್ಷೆಯ ಬಗ್ಗೆ ಎಲ್ಲಿಯೂ ತಿಳಿಸಿಲ್ಲ. ಇಂತಹ ಚಟುವಟಿಕೆಗಳು ಸಂಪೂರ್ಣವಾಗಿ ಕೊನೆಗೊಳ್ಳಲು ಸರ್ಕಾರವು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ ಎನ್ನುವುದನ್ನು ದಯಮಾಡಿ ಸರ್ಕಾರವು ತಿಳಿಸಬೇಕು.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳಿರುವ ಈ ಪ್ರಶ್ನೆಯು ಬಹಳ ಸಮಂಜಸವಾಗಿದೆ. ಇದು ಇಡೀಯಾದ ಸಾಮಾಜಿಕ ಪಿಡುಗಾಗಿದೆ. ವಿದ್ಯಾರ್ಥಿಗಳು, ಎಳೆ ವಯಸ್ಸಿನ ಮಕ್ಕಳು ಓದುವುದನ್ನು ಬಿಟ್ಟು ಬೇರೆಡೆಗೆ ಗಮನ ಹರಿಸುವ ಹಾಗೆ ಆಗಿದೆ. ಈ ಬಗ್ಗೆ ಸರ್ಕಾರವು ಎಲ್ಲಾ ರೀತಿಯ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದೆ. ತಮಗೆ ತಿಳಿದಿರುವಂತೆ, ಸೈಬರ್ ಅಪರಾಧಿಕ ಪ್ರಕರಣಗಳಲ್ಲಿ ವಂಚನೆಗೊಳಗಾದವರ ಅನುಕೂಲಕ್ಕಾಗಿ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದು ಸೈಬರ್ ಕ್ರೈಂ ವಿಭಾಗವನ್ನು ಮಾಡಲಾಗಿದೆ. ಇದಲ್ಲದೇ, ಬೆಂಗಳೂರು ಜಿಲ್ಲೆಯೊಂದರಲ್ಲೇ

ಹೆಚ್ಚುವರಿಯಾಗಿ 8 ಸೈಬರ್ ಕ್ರೈಂ ಪೊಲೀಸ್ ಠಾಣೆಗಳಿವೆ. ಈಗಾಗಲೇ ತಿಳಿಸಿದಂತೆ, ಸುಮಾರು 80 ಸಾವಿರ ದೂರುಗಳು ಅಪ್‌ಲೋಡ್ ಆಗಿದ್ದು, ಅವುಗಳನ್ನು ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೆ ಈಗಾಗಲೇ ಕಳುಹಿಸಲಾಗಿದ್ದು, ಅವುಗಳ ಪ್ರಕ್ರಿಯೆಯು ಜಾರಿಯಲ್ಲಿದೆ. ಈ ವಿಚಾರದಲ್ಲಿ ಸುಮಾರು 528 ಪ್ರಥಮ ವರ್ತಮಾನ ವರದಿಗಳನ್ನು ದಾಖಲಿಸಿದ್ದು, ಅವುಗಳು ವಿಚಾರಣೆಯಲ್ಲಿವೆ. ಬಹಳಷ್ಟು ಅನಾಮಧೇಯ ದೂರುಗಳು ಬರುತ್ತಿವೆ. ಈ ವಿಚಾರದಲ್ಲಿ ನಾವು ವಿಶೇಷವಾಗಿ ತಜ್ಞರ ಕೋಶವನ್ನೂ ಸಹ ರಚಿಸಿದ್ದು, ಇವರಿಗೆಲ್ಲರಿಗೂ ಸಿ.ಓ.ಡಿ. ಸಂಸ್ಥೆಯಲ್ಲಿ ತರಬೇತಿ ನೀಡುವ ವ್ಯವಸ್ಥೆಗಳನ್ನು ಮಾಡಿದ್ದೇವೆ. ಗುಜರಾತ್ ರಾಜ್ಯದ ಅಹಮದಾಬಾದ್ ನಗರದಲ್ಲಿನ Forensic Sciences ವಿಶ್ವವಿದ್ಯಾಲಯದೊಂದಿಗೆ ನಮ್ಮ ರಾಜ್ಯವು ವಿಶೇಷವಾದ ಒಪ್ಪಂದವನ್ನು ಮಾಡಿಕೊಂಡಿದೆ. ಇದರನ್ವಯ, ನಮ್ಮ ರಾಜ್ಯದ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ಪ್ರಕರಣದ ತನಿಖೆಯ ಬಗ್ಗೆ ವಿಶೇಷವಾದ ಅಧ್ಯಯನ, ತರಬೇತಿಗಳನ್ನು ನೀಡುವ ಕೆಲಸಗಳನ್ನು ರಾಜ್ಯ ಸರ್ಕಾರವು ಮಾಡಿದೆ. ಶಾಲಾ – ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸೈಬರ್ ಅಪರಾಧಗಳ ಬಗ್ಗೆ ಆಗಿಂದಾಗ್ಗೆ ಜಾಗೃತಿಗಳನ್ನು ಮೂಡಿಸುವ ಕೆಲಸಗಳನ್ನು ಮಾಡುತ್ತಿದ್ದೇವೆ. ಸಾರ್ವಜನಿಕರಿಗೆ ಸೈಬರ್ ಅಪರಾಧಗಳ ಕುರಿತಾಗಿ ಅರಿವು ಮೂಡಿಸಲು ದೂರದರ್ಶನ, ದಿನಪತ್ರಿಕೆ, ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಇತ್ಯಾದಿ ಮಾಧ್ಯಮಗಳನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಮುಂದುವರೆದು, ಬ್ಯಾಂಕ್ ಅಧಿಕಾರಿಗಳ ಸಹಭಾಗಿತ್ವದಲ್ಲಿ ಪೊಲೀಸ್ ಇಲಾಖೆಯ ಟ್ವೀಟರ್ ಖಾತೆಯ ಮೂಲಕವೂ ಸಹ ಮುಂಜಾಗ್ರತಾ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ. ಸೈಬರ್ ಅಪರಾಧಗಳು ಕಂಡು ಬಂದಲ್ಲಿ, ಸಾರ್ವಜನಿಕರ ತ್ವರಿತ ಸ್ಪಂದನೆಗಾಗಿ "112" ಸಂಖ್ಯೆಗೆ ದೂರವಾಣಿ ಕರೆ ಮಾಡಿದರೆ, ತಕ್ಷಣವೇ ಕ್ರಮ ಕೈಗೊಳ್ಳಲು ಹಾಗೂ ಘಟನೆ ನಡೆದ ಅರ್ಧ ತಾಸಿನೊಳಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡುವ ವಿಶೇಷವಾದ ವ್ಯವಸ್ಥೆಯನ್ನು ಮಾಡಲಾಗಿದೆ.

ಸದಸ್ಯರು ಪ್ರಸ್ತಾಪಿಸಿದಂತೆ, ಕಾಮೋತ್ತೇಜಕ ಪ್ರಸರಣ ಮಾಡುವುದು ಹಾಗೂ ಬ್ಯಾಂಕ್ ಖಾತೆಗಳ ಮೂಲಕ ಹಣವನ್ನು ಲಪಟಾಯಿಸುವ ಕೃತ್ಯಗಳು ಸೈಬರ್ ಅಪರಾಧದ ವ್ಯಾಪ್ತಿಗೊಳಪಡುತ್ತವೆ. ಇಂದಿನ ದಿನಗಳಲ್ಲಿ ಅಪರಾಧಿಕ ಪ್ರಕರಣಗಳ ರೂಪ, ಗುಣಲಕ್ಷಣಗಳು ಬದಲಾವಣೆಯಾಗಿವೆ. ರಸ್ತೆಯಲ್ಲಿ ನಿಂತುಕೊಂಡು ಯಾರದ್ದೋ ತಲೆಯೊಡೆದು ಹಣ ಮಾಡುವ ಪ್ರಕರಣಗಳು ಬೇರೆಯಾಗಿವೆ. ಆದರೆ, ಇವತ್ತಿನ ದಿವಸ ಸೈಬರ್ ಅಪರಾಧಗಳ ಮೂಲಕ ಕೋಟ್ಯಾಂತರ ರೂಪಾಯಿಗಳ ವಂಚನೆ ಮಾಡುವ ಅಪರಾಧಿಕ ಪ್ರಕರಣಗಳು ಇಲಾಖೆಯ

ಗಮನದಲ್ಲಿವೆ. "golden hour" ಎಂದರೆ, ಅಪರಾಧ ನಡೆದ ಎರಡು ಗಂಟೆಯೊಳಗೆ ಕೃತ್ಯದ ಬಗ್ಗೆ ಪೋಲೀಸ್ ಠಾಣೆಗೆ ತಿಳಿಸಿದ್ದಲ್ಲಿ, ಅವರ ಖಾತೆಯನ್ನು ಫ್ರೀಝ್ ಮಾಡುವುದಕ್ಕೆ ವಿಶೇಷವಾದ ವ್ಯವಸ್ಥೆಯನ್ನು ಮಾಡಲಾಗಿದೆ. ಕಳೆದ ವರ್ಷ ಬೆಂಗಳೂರು ನಗರವೊಂದರಲ್ಲೇ ಸುಮಾರು 70 ಕೋಟಿ ರೂಪಾಯಿಗಳಷ್ಟು ಹಣವನ್ನು ಫ್ರೀಝ್ ಮಾಡಲಾಗಿದೆ. ಅಂದರೆ, ಅಷ್ಟು ಮೊತ್ತವು ಖಾತೆದಾರರ ಕೈ ತಪ್ಪಿ ಹೋಗುವುದನ್ನು ನಮ್ಮ ಪೋಲೀಸರು ತಡೆದಿದ್ದಾರೆ. ಹೀಗೆ, ಎಲ್ಲಾ ರೀತಿಯಿಂದಲೂ ಅದರಲ್ಲೂ ವಿಶೇಷವಾಗಿ ಎಲ್ಲಿಂದ ಈ ರೀತಿಯ ಪೋಸ್ಟ್‌ಗಳನ್ನು ಹಾಕಲಾಗುತ್ತಿದೆ ಎನ್ನುವುದನ್ನು ಕಂಡು ಹಿಡಿಯುವ ಪ್ರಯತ್ನ ಮಾಡಿ, ತಪ್ಪಿತಸ್ಥರಿಗೆ ಶಿಕ್ಷಿಸುವುದಕ್ಕೆ ಅಗತ್ಯವಿರುವ ಕ್ರಮವನ್ನು ನಮ್ಮ ಪೋಲೀಸರು ಈಗಾಗಲೇ ಮಾಡುತ್ತಿದ್ದಾರೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಈ ಕಾಯ್ದೆಯ ಪ್ರಕಾರ, 10 ಲಕ್ಷ ರೂಪಾಯಿಗಳವರೆಗೂ ದಂಡವನ್ನು ವಿಧಿಸುವ ಹಾಗೂ 5 ವರ್ಷಗಳಷ್ಟು ಕಾರಾಗೃಹ ವಾಸವನ್ನು ವಿಧಿಸಬಹುದಾಗಿದೆ. ಆದರೆ, ಸರ್ಕಾರವು ಯಾವುದೇ ರೀತಿಯಲ್ಲಿ ಒಂದೇ ಒಂದು ಪ್ರಕರಣದಲ್ಲಿ ಈ ರೀತಿಯಾಗಿ ಶಿಕ್ಷೆಯನ್ನು ವಿಧಿಸುವ ಕೆಲಸಗಳನ್ನು ಮಾಡಿಲ್ಲ. ಕಳೆದ ಐದು ವರ್ಷಗಳಲ್ಲಿ ಸರ್ಕಾರವು ಸುಮಾರು 562 ಪ್ರಕರಣಗಳನ್ನು ಮಾತ್ರವೇ ದಾಖಲಿಸಿದೆ. ಅಂದರೆ ಒಟ್ಟಾರೆಯಾಗಿ ಸ್ವೀಕೃತಗೊಂಡ ದೂರುಗಳ ಪೈಕಿ ಕೇವಲ 0.75 ಪ್ರತಿಶತ ಮಾತ್ರವೇ ಸರ್ಕಾರವು ಈ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ, ಇವತ್ತಿನ ದಿವಸ ಇಡೀಯಾದ ನಮ್ಮ ಸಮಾಜವು ಯಾವ ಮೂಲೆಗೆ ಹೋಗುತ್ತಿದೆ, ಸಮಾಜದಲ್ಲಿ ಏನಾಗುತ್ತಿದೆ ಎನ್ನುವುದರ ಬಗ್ಗೆ ಸರ್ಕಾರವು ಗಮನಿಸಬೇಕು. ತಮಗೆ ತಿಳಿದಿರುವಂತೆ, ಅಂತರ್ಜಾಲ ಮಾಧ್ಯಮದಿಂದಾಗಿ ಇವತ್ತಿನ ದಿವಸ ಪ್ರತಿ ಹಳ್ಳಿಯಲ್ಲಿಯೂ ಸಹ ಮಕ್ಕಳು ಹಾಳಾಗುತ್ತಿದ್ದಾರೆ. ಎಲ್ಲರೂ ನೋಡಿರುವಂತೆ ಹಾಗೂ ನೋಡುತ್ತಿರುವಂತೆ, ರಾತ್ರಿ ಸುಮಾರು 10 ಗಂಟೆಯ ನಂತರ ಅಂತರ್ಜಾಲವನ್ನು ವೀಕ್ಷಿಸುತ್ತಿರುತ್ತಾರೆ. ಈ ಪೈಕಿ ಕೆಲವರು ಆನಂದಿಸುತ್ತಿರಬಹುದು. ಅದರೆ, ನಿಜವಾಗಿಯೂ ಸಹ ಇದರ ಪರಿಣಾಮ ಎಷ್ಟು ಕೆಟ್ಟದಾಗಿ ಸಮಾಜದ ಮೇಲೆ ಬೀರುತ್ತಿದೆ ಎನ್ನುವ ಅಂಶದ ಬಗ್ಗೆ ಸರ್ಕಾರವು ಬಹಳ ಗಂಭೀರವಾಗಿ ಪರಿಗಣಿಸಬೇಕು. ಇದನ್ನು ತಡೆಗಟ್ಟುವ ಕ್ರಮಗಳ ಬಗ್ಗೆಯೂ ಸಹ ಆಲೋಚಿಸಬೇಕು.

"*ಮಾಡುವುದೆಲ್ಲಾ ಅನಾಚಾರ; ಮನೆ ಮುಂದೆ ವೃಂದಾವನ*" ಎಂಬ ನಾಣ್ಣುಡಿಯಂತೆ, ಇವತ್ತಿನ ದಿವಸ ನಮ್ಮ ಸಮಾಜವು ಆಗುತ್ತಿದೆ. ಹೀಗಾಗಿ ಸರ್ಕಾರವು ಈ ವಿಚಾರದಲ್ಲಿ ಬಹಳ ಅಗತ್ಯ ಹಾಗೂ

ಸರಿಯಾದ ಕ್ರಮಗಳನ್ನು ತೆಗೆದುಕೊಂಡು, ಸಂಪೂರ್ಣವಾಗಿ ಇದನ್ನು ಹೋಗಲಾಡಿಸಬೇಕು. ರಾತ್ರಿಯ ಸಂದರ್ಭದಲ್ಲಿ ಸಚಿವರು ಇದನ್ನು ದಯಮಾಡಿ ಗಮನಿಸಬೇಕು. ಆ ವೇಳೆಯಲ್ಲಿ ಅಂತರ್ಜಾಲದಲ್ಲಿ ಪ್ರತಿಯೊಂದೂ ಸಹ ಬಿತ್ತರಗೊಳ್ಳುತ್ತವೆ. ಈ ರೀತಿಯ ಪ್ರಸರಣಗಳನ್ನು ನಾವು ಬೇಕೆಂದು ಮಾಡುವುದಿಲ್ಲ. ಸುಖಾಸುಮ್ಮನೆ ಸಾಮಾಜಿಕ ಜಾಲತಾಣಗಳಲ್ಲಿ ಈ ರೀತಿಯ ಪ್ರಸರಣಗಳಾಗುತ್ತಿವೆ. ಈ ಬಗ್ಗೆ ನಾನು ಸದನದಲ್ಲಿ ಹೆಚ್ಚಿಗೆ ಹೇಳುವುದಕ್ಕಾಗುವುದಿಲ್ಲ. ಒಂದು ವೇಳೆ, ನಾನು ಈ ಬಗ್ಗೆ ಹೆಚ್ಚಾಗಿ ಹೇಳದರೆ, ಅದು ತಪ್ಪಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ನಾವು ಬೇಕಾದ್ದನ್ನು ನೋಡಬಹುದಾಗಿರುತ್ತದೆ. ಇದನ್ನು ನಾವು ನಿರ್ಭಂಧಿಸಿಲ್ಲವೆಂದಾದರೆ, ನಮ್ಮ ಸಮಾಜದಲ್ಲಿ ಈಗ ಇರುವುದಕ್ಕಿಂತಲೂ ಘೋರವಾದ ಕೆಲಸಗಳು ಇನ್ನೂ ಜಾಸ್ತಿಯಾಗುತ್ತವೆ ಹೊರತಾಗಿ ಕಮ್ಮಿಯಾಗುವುದಿಲ್ಲ. ದಯಮಾಡಿ ಸರ್ಕಾರವು ಇದನ್ನು ಸಂಪೂರ್ಣವಾಗಿ ನಿರ್ಭಂಧಗೊಳಸುವ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

(ಮುಂದು)

1157/26-12-2022/11-40/bkp-gr

ಶ್ರೀ **ಅರಗ ಜ್ಞಾನೇಂದ್ರ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಇದು ನಮ್ಮ ಗೃಹ ಇಲಾಖೆಯ ಆದ್ಯತೆ. ತಾವು ಹೇಳರುವಂತಹ ರೀತಿಯಲ್ಲಿ ಮಾಡುತ್ತಿದ್ದೇವೆ. ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದರಲ್ಲಿ ಯಾರು expert ಇದ್ದಾರೆ, ಆ ಅಧಿಕಾರಿಗಳನ್ನೇ ಅಲ್ಲಿಗೆ ನಿಯೋಜನೆ ಮಾಡುತ್ತೇವೆ. ಸುಮ್ಮನೆ ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲುತ್ತಾರೆಂದು ಯಾರೋ ಪೋಲೀಸ್ ಅಧಿಕಾರಿಗಳನ್ನು, ಇದು non-Executive ಎಂದು ಹೇಳ ನಾವು ಸ್ಥಳ ನಿಯೋಜನೆ ಮಾಡುತ್ತಿಲ್ಲ. ಅವರಿಗೆ ಅಲ್ಲಿಗೆ ಹೋಗಲಿಕ್ಕೆ ಇಚ್ಛೆ ಇದೆಯೇ ಮತ್ತು ಅದಕ್ಕೆ ಅವರು expert ಇದ್ದಾರೆ ಎಂದು ಯೋಚನೆ ಮಾಡಿ ಈಗಾಗಲೇ ಸೂಚನೆಗಳನ್ನು ಕೊಡಲಾಗಿದೆ. ತಾವು ಹೇಳುವ ಹಾಗೆ ಇದು ಸಾಮಾಜಿಕ ಪಿಡುಗು. ಇದರ ಬಗ್ಗೆ ನಾವು ವಿಶೇಷವಾಗಿ ಪ್ರಯತ್ನ ಮಾಡುತ್ತಿದ್ದೇವೆ. ಈ ಕೆಲಸವನ್ನು ಸರ್ಕಾರ ಮತ್ತು ಪೋಲೀಸ್ ಇಲಾಖೆ ವಿಶೇಷ ಆದ್ಯತೆ ಕೊಟ್ಟು ಮಾಡುತ್ತಿದೆ . ಇದಕ್ಕೆ ತಾವು ಹೇಳದ ಹಾಗೆ ಕೇವಲ ಪೋಲೀಸ್, ಕಾಯಿದೆ ಸಾಕಾಗುವುದಿಲ್ಲ. ಇದಕ್ಕೆ ಒಂದು ಸಾಮಾಜಿಕ ಜಾಗ್ರತೆ

ಬೇಕಾಗುತ್ತದೆ. ಏಕೆಂದರೆ, ಪೋಷಕರು, ಶಿಕ್ಷಕರು ಮತ್ತು ಸಾರ್ವಜನಿಕರೆಲ್ಲರೂ ಬೆಂಬಲಿಸಿದಾಗ ಮಾತ್ರ ಇದನ್ನು ಹೊರಗಡೆ ತೆಗೆಯಲಿಕ್ಕೆ ಸಾಧ್ಯವಾಗುತ್ತದೆ. ಖಂಡಿತವಾಗಿಯೂ ಸಹ ನಾವು ಇದನ್ನು ಏನು ಕಾಯಿದೆ ಪ್ರಕಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಅದನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 841**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಅವರಿಗೂ ಗೊತ್ತಿದೆ. ಅವರು ಹೇಳುತ್ತಿದ್ದುದನ್ನು ನಾನು ಸಹ ಕೇಳಸಿಕೊಂಡೆ. ಬಹಶಃ ಇವತ್ತು ಈ ಸೈಬರ್ ಕ್ರೈಮ್‌ಗಳಲ್ಲಿ ಯಾವ ರೀತಿಯಲ್ಲಿ ಅಪರಾಧಗಳು ಆಗುತ್ತಿವೆ. ಅದರಲ್ಲೂ ಬಹಳಷ್ಟು ಯುವಕರು ಈ ತಂತ್ರಜ್ಞಾನವನ್ನು ಈ ಸೋಷಿಯಲ್ ಮೀಡಿಯಾದಲ್ಲಿ ಟೆಕ್ನಾಲಜಿ ಇರಬಹುದು, ಡಿಜಿಟಲ್ ಇರಬಹುದು. ಈ ರೀತಿಯಲ್ಲಿ ಅನೇಕ ಮೀಡಿಯಾಗಳನ್ನು ಬಳಕೆ ಮಾಡಿಕೊಂಡು ಯಾವ ರೀತಿಯಲ್ಲಿ ವಂಚನೆ ಮಾಡುತ್ತಿದ್ದಾರೆ, ಮತ್ತೆ ಯಾವ ರೀತಿಯಲ್ಲಿ ಕೆಲವರಿಗೆ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ, ಎನ್ನುವುದನ್ನು ತಾವುಗಳು ಮಾಧ್ಯಮದಲ್ಲಿ ನೋಡುತ್ತಿದ್ದೀರಿ. ಇಂತಹ ಅನೇಕ ಘಟನೆಗಳು ದಿನ-ದಿನಕ್ಕೂ ಜಾಸ್ತಿಯಾಗುತ್ತಿವೆ. ಈ ವಿಚಾರದಲ್ಲಿ ಪಲೀಸ್ ಇಲಾಖೆಯಲ್ಲಿ, ಪೊಲೀಸ್ ಠಾಣೆಗಳಲ್ಲಿ ಇರತಕ್ಕಂತಹ ಸೈಬರ್ ಕ್ರೈಮ್ ವಿಭಾಗಗಳನ್ನು ಸ್ಥಾಪನೆ ಮಾಡಿದ್ದಾರೆ. ಅಲ್ಲಿ ತುರ್ತಾಗಿ ಕೆಲಸಗಳು ಆಗುತ್ತಿಲ್ಲ. ಅಪರಾಧಗಳು ಜಾಸ್ತಿಯಾಗುತ್ತಿವೆ. ಅದಕ್ಕೆ ತಕ್ಕಂತೆ ಏನು ದೊಡ್ಡ ಸಂಖ್ಯೆಯಲ್ಲಿ ಅಪರಾಧಗಳು ಆದಾಗ ಪೊಲೀಸರು ಕ್ರಮ ತೆಗೆದುಕೊಳ್ಳುವಲ್ಲಿ ನಿಧಾನವಾಗುತ್ತಿದೆ. ಜೊತೆಗೆ ತಮಗೆ ಗೊತ್ತಿರುವಂತೆ ಹಲವಾರು ಘಟನೆಗಳನ್ನು ತಾವು ನೋಡಿರುತ್ತೀರಿ. ಇತ್ತೀಚಿನ ದಿನಗಳಲ್ಲಿ ನಡೆದಿರುವ ಘಟನೆಗಳ ಬಗ್ಗೆ ಹೇಳುವುದಾದರೆ ಬಹಳಷ್ಟು ಅಧಿಕಾರಿಗಳ ಮೇಲೆ ವಿಡಿಯೋಗಳನ್ನು ಮಾಡಿ, ಅದರಲ್ಲೂ ನಿವೃತ್ತ ಅಧಿಕಾರಿಗಳನ್ನು ಟಾರ್ಗೆಟ್ ಮಾಡಿ, ವಿಡಿಯೋ ಕಾಲ್ ಮಾಡಿ ಬೇರೆ ಬೇರೆ ರೀತಿಯಲ್ಲಿ ಪ್ರದರ್ಶನ ಮಾಡುವುದು ಇದೆ. ತಮಗೂ ಗೊತ್ತಿರುವಂತೆ 120 ಕೋಟಿಗಿಂತ ಹೆಚ್ಚು ಮೋಸವಾಗಿದೆ. ಈ ವಂಚಕರು ಕರ್ನಾಟಕದಲ್ಲಿ ಸೈಬರ್ ವಂಚಕರು ಏನಿದ್ದಾರೆ, ಅವರಲ್ಲಿ 6-7 ಗ್ಯಾಂಗ್‌ಗಳು ಬರಿ ಇದೇ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯ ಅನೇಕ ಘಟನೆಗಳನ್ನು ತಮ್ಮ ಮುಂದೆ ಹೇಳಬಲ್ಲೆ. ಆದ್ದರಿಂದ, ತಾವು ಒತ್ತುಕೊಟ್ಟು ಈ ಒಂದು ವ್ಯವಸ್ಥೆ ಏನಿದೆ, ಸೈಬರ್ ಕ್ರೈಮ್‌ಗೆ ಹೆಚ್ಚಿನ

ವ್ಯವಸ್ಥೆಗಳು ಏನೇನು ಬೇಕು, ಅದನ್ನೆಲ್ಲಾ ಮಾಡಿ, ಇದನ್ನು ತಡೆಗಟ್ಟುವುದರಲ್ಲಿ ಎಷ್ಟು ಸಾಧ್ಯವಾಗುತ್ತದೋ ಅಷ್ಟು ಕ್ರಮ ಕೈಗೊಳ್ಳಿ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದರ ಬಗ್ಗೆ ನನಗೆ ಬೆಳಕು ಚೆಲ್ಲಬೇಕು.

ಶ್ರೀ **ಅರಗ ಜ್ಞಾನೇಂದ್ರ(ಗೃಹ ಸಚಿವರು):-**ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ರವರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ಎರಡು ಪ್ರಶ್ನೆಗಳು ಸಹ ಒಂದೇ ವಿಷಯವಾಗಿರುತ್ತದೆ. ಇದರ ಬಗ್ಗೆ ವಿಶೇಷವಾದಂತಹ ಜಾಗ್ರತೆಯನ್ನು ವಹಿಸಿದ್ದೇವೆ. ರಾಜ್ಯದಲ್ಲಿ ಮೊದಲಬಾರಿಗೆ ಸೈಬರ್ ತಜ್ಞರನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ವಿಭಾಗವನ್ನು ಇನ್ನು ಹೆಚ್ಚು ಬಲಪಡಿಸಲಿಕ್ಕೆ ಏನೆಲ್ಲಾ ಆಗತ್ಯವಾಗಿ ಆಗಬೇಕಾಗಿದೆ ಎನ್ನುವುದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ನಮ್ಮಲ್ಲಿ ವಿಶ್ವ ಮಟ್ಟದ ಎಫ್.ಎಸ್.ಎಲ್., ಯೂನಿವರ್ಸಿಟಿ ಗುಜರಾತ್‌ನಲ್ಲಿ ಇದೆ. ಅದರ ಜೊತೆಗೆ ನಾವು ಒಪ್ಪಂದ ಮಾಡಿಕೊಂಡು, ವಿಶೇಷವಾಗಿ ಇದರ ಬಗ್ಗೆ ಆಸಕ್ತಿ ಇರುವ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ವಿಶೇಷವಾದಂತಹ ತರಬೇತಿಯನ್ನು ಕೊಡುತ್ತಿದ್ದೇವೆ. ಕರ್ನಾಟಕಕ್ಕೆ ಒಂದು ಸೆಂಟ್ರಲ್ ಎಫ್.ಎಸ್.ಎಲ್., ಯೂನಿವರ್ಸಿಟಿಯನ್ನು ನಮಗೆ ಕೊಡುತ್ತೇವೆಂದು ಮಾನ್ಯ ಕೇಂದ್ರದ ಗೃಹ ಸಚಿವರು ಒಪ್ಪಿದ್ದಾರೆ. ಅದು ಆದಲ್ಲಿ ಎಲ್ಲಾ ವಿಷಯಗಳನ್ನು ಇಲ್ಲಿ ಅಧ್ಯಯನ ಮಾಡಲಿಕ್ಕೆ, ಅನಾಲಿಸಿಸ್ ಮಾಡಲಿಕ್ಕೆ ವ್ಯವಸ್ಥಿತವಾಗಿ ಅನುಕೂಲವಾಗುತ್ತದೆ. ನಮ್ಮ ಸೈಬರ್ ಕ್ರೈಮ್ ವಿಭಾಗ ಸಿ.ಓ.ಡಿ., ನಲ್ಲಿ ಇದೆ, ಅದನ್ನು ಬಹಳ ವ್ಯವಸ್ಥಿತವಾಗಿ ಮಾಡಿದ್ದೇವೆ. ವಿಶೇಷವಾಗಿ Infosys Foundation ಗೆ ಈ ಸಂದರ್ಭದಲ್ಲಿ ನಾನು ಅಭಿನಂದನೆ ಸಲ್ಲಿಸುತ್ತೇನೆ. ಖಂಡಿತವಾಗಿಯೂ ಸಹ ನಮ್ಮ ಹಿರಿಯ ಸದಸ್ಯರು ಅದನ್ನು ನೋಡಬೇಕು. ಅಷ್ಟೊಂದು ಬಹಳ ಚೆನ್ನಾಗಿ ನಿರ್ವಹಿಸುವಂತೆ ಮಾಡಿದ್ದಾರೆ. ತುಂಬಾ ಜಾಗತಿಕ ಮಟ್ಟದಲ್ಲಿ ಇದನ್ನು ಕಂಡು ಹಿಡಿಯುವಂತಹ ಎಲ್ಲಾ ಪ್ರಯತ್ನಗಳು ಮಿಷನರಿಗಳು ನಮ್ಮ ಹತ್ತಿರ ಇವೆ. ಇದಕ್ಕೆ ನಾವು ವಿಶೇಷವಾದ ಆದ್ಯತೆಯನ್ನು ಕೊಟ್ಟಿದ್ದೇವೆ. ಪ್ರತಿ ಜಿಲ್ಲೆಯಲ್ಲಿಯೂ ಕೂಡ ಏನು ವಿಭಾಗ ಇದೆ, ಅಲ್ಲಿ ದೂರನ್ನು ಕೊಡಬೇಕು. ಯಾರಾದರೂ ತಪ್ಪು ಮಾಡಿ

ಅನಾವಶ್ಯಕವಾಗಿ ಇದರ ಬಗ್ಗೆ ಉದಾಸೀನ ಮಾಡಿದರೆ ಅಂತಹ ಅಧಿಕಾರಿಗಳಿಗೂ ಕೂಡ ಶಿಕ್ಷೆ ಕೊಡುತ್ತೇವೆ. ಏಕೆಂದರೆ, ಇದು ತಾವು ಹೇಳಿದ ಹಾಗೆ ನಿಮಿಷ, ನಿಮಿಷವೂ ಬಹಳ ಪ್ರಮುಖವಾಗಿರುತ್ತದೆ. ಎರಡು ಗಂಟೆಯೊಳಗೆ ನನ್ನ ಅಕೌಂಟ್‌ನಿಂದ ದುಡ್ಡು ಹೋಯಿತು ಎಂದು ಹೇಳಿ ದೂರು ಕೊಟ್ಟರೆ, ಅದರ ಬಗ್ಗೆ ಈಗಾಗಲೇ ಬ್ಯಾಂಕ್ ಅಧಿಕಾರಿಗಳ ಜೊತೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದು ಸುತ್ತಿನ ಮಾತುಕತೆ ಮಾಡಿದ್ದಾರೆ. ಅವರು ಕೂಡ ಇದಕ್ಕೆ ಒಪ್ಪಿದ್ದಾರೆ. ಇದನ್ನು freeze ಮಾಡಲಿಕ್ಕೆ ಒಪ್ಪಿದ್ದಾರೆ. ಪೊಲೀಸ್ ಇಲಾಖೆಯೊಂದಿಗೆ ಈಗಾಗಲೇ ಅವರ ಒಪ್ಪಂದಗಳು ಇವೆ. ಆದ್ದರಿಂದ, ಎಲ್ಲಾ ರೀತಿಯಿಂದಲೂ ಕೂಡ ಇದನ್ನು ಕಂಟ್ರೋಲ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಏಕೆಂದರೆ, advanced science ಪ್ರಕಾರ ನಿಮಗೆ ಗೊತ್ತಿರುವಂತೆ ಇವತ್ತು ಇದ್ದುದು, ನಾಳೆ ಇರುವುದಿಲ್ಲ. ಈ ವೈಜ್ಞಾನಿಕ ವ್ಯವಸ್ಥೆ ಎರಡು ಕಡೆ ಇರುತ್ತದೆ. ಇದರಿಂದ ಎಷ್ಟು ಒಳ್ಳೆಯದು ಇದೆಯೋ ಇದನ್ನು ಅಷ್ಟೇ ದುರುಪಯೋಗ ಮಾಡಿಕೊಳ್ಳುವಂತಹ ಜನರು ಸಹ ಇದ್ದಾರೆ. ಈಗ ಉದಾಹರಣೆಗೆ ಒಂದು ಶಸ್ತ್ರ. ಇದು ಆಪರೇಷನ್ ಮಾಡಿ, ರೋಗಿಯನ್ನು ಬದುಕಿಸಲಿಕ್ಕೂ ಬರುತ್ತದೆ, ಮತ್ತೆ ಯಾರದ್ದಾದರೂ ಪ್ರಾಣ ತೆಗೆಯಲಿಕ್ಕೂ ಬರುತ್ತದೆ. ಹೀಗೆ ಯಾರು ಯಾವುದಕ್ಕೆ ಉಪಯೋಗಿಸಿಕೊಳ್ಳುತ್ತಾರೆ ಎನ್ನುವುದು ಮುಖ್ಯವಾಗಿರುತ್ತದೆ. ಖಂಡಿತವಾಗಿಯೂ ತಮ್ಮ ಪ್ರಶ್ನೆ, ತಮ್ಮ ಕಾಳಜಿ ಸರಿಯಾಗಿದೆ. ಆ ನಿಟ್ಟಿನಲ್ಲಿ ನಮ್ಮ ಎಲ್ಲಾ ಪ್ರಯತ್ನಗಳು ಆಗುತ್ತವೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾವು ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ, ಒಳ್ಳೆಯ ಅಧಿಕಾರಿಗಳನ್ನು ಹಾಕಿದ್ದೇವೆಂದು ಮಾನ್ಯ ಗೃಹ ಸಚಿವರು ಹೇಳಿದರು. ಮತ್ತೆ, ಮಾನ್ಯ ಸದಸ್ಯರಾದ ಶ್ರೀ ಟಿ.ಎ. ಶರವಣ ರವರು ಕುಕ್ಕರ್ ಸ್ಫೋಟದ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಈ ಕುಕ್ಕರ್ ಸ್ಫೋಟದ ಪ್ರಕರಣವನ್ನು ಪೊಲೀಸ್‌ನವರು ಹಿಡಿದದ್ದು ಅಲ್ಲ. ಅಲ್ಲಿ ಇರತಕ್ಕಂತಹ ಜನರ ಅದೃಷ್ಟ. ಆಟೋರಿಕ್ಷಾ ಜಂಪ್ ಆಗಿ ಸ್ಫೋಟವಾಗಿದೆ. ಅದನ್ನು ಹಾಗೆಯೇ ಬಿಟ್ಟಿದ್ದರೆ, ಅದು ಎಲ್ಲಿ ಸ್ಫೋಟ ಆಗುತ್ತಿತ್ತೋ

ಯಾರಿಗೂ ಗೊತ್ತಾಗುತ್ತಿರಲಿಲ್ಲ. It was a total failure of the intelligence. ಏನು ಒಳ್ಳೆಯ ಮತ್ತು ತಜ್ಞ ಅಧಿಕಾರಿಗಳನ್ನು ನಿಯೋಜನೆ ಮಾಡಿದ್ದೇವೆಂದು ನೀವು ಹೇಳುತ್ತಿದ್ದೀರಿ. ಬಾಂಬ್ ಮಾಡುವವರಿಗೆ ಏನು ಮಾಡುತ್ತಿದ್ದೀರಿ ಎಂದು ಹೇಳಿ. ಅವರು habitual offender ಎಂದು ಎಲ್ಲರಿಗೂ ಗೊತ್ತು. Intelligence failure ಆದ ಮೇಲೆ ನೀವು ಏನು ಮಾಡಲಿಕ್ಕೆ ಅಗುತ್ತದೆ? ನೀವು ಸೈಬರ್ ಕ್ರೈಮ್ ವಿಚಾರದಲ್ಲಿ ಯಾರು ಸಹ ಏನು ಮಾಡುತ್ತಿಲ್ಲ. ನಾನೇ ಎರಡು ದೂರುಗಳನ್ನು ಕೊಟ್ಟಿದ್ದೇನೆ. ಯಾರು ಸಹ ದೂರನ್ನು ತೆಗೆದುಕೊಳ್ಳುವುದಿಲ್ಲ. ಅವರುಗಳನ್ನು ಎಲ್ಲಿ ಹಿಡಿಯಬೇಕೆಂದು ಹೇಳುತ್ತಾರೆ. ಆದ್ದರಿಂದ, ಇದಕ್ಕೆ ಏನಾದರೊಂದು ಬೇರೆ ಪರಿಹಾರದ ವ್ಯವಸ್ಥೆ ಆಗಬೇಕೇ ವಿನಃ ಇಲ್ಲದಿದ್ದರೆ, ಈ ಒಂದು ಅಪರಾಧಗಳನ್ನು ನಿಲ್ಲಿಸುವುದು ಕಷ್ಟ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಬಹುಶಃ ಈ ರೀತಿಯ ಘಟನೆಗಳು ಆದಾಗ ಮೊದಲನೆಯದಾಗಿ ಸಾರ್ವಜನಿಕವಾಗಿ ಅವೇರ್‌ನೆಸ್ ಕ್ರಿಯೇಟ್ ಮಾಡಿ. ನೀವು ಈ ಸೈಬರ್ ಕ್ರೈಮ್, ಸಿ.ಬಿ.ಐ., ಸಿ.ಓ.ಡಿ., ಇನ್ನು ಮುಂತಾಗಿ ಏನೇನು ಹೇಳುತ್ತಿದ್ದೀರಿ. ಅದರ ಬಗ್ಗೆ ನಿಜವಾಗಿಯೂ ಕೂಡ ಇದರ ಬಗ್ಗೆ ಜ್ಞಾನ ಕಡಿಮೆ ಇದ್ದು, ಅದಕ್ಕೋಸ್ಕರ ಇಂತಹ ಘಟನೆಗಳಾದಾಗ '100', '101', '102' ಈ ರೀತಿಯಲ್ಲಿ ನೀವು ಏನು ವ್ಯವಸ್ಥೆಗಳನ್ನು ಮಾಡಿಕೊಂಡಿದ್ದೀರಿ. ಅದೇ ರೀತಿಯಲ್ಲಿ ಒಂದು free number ಅನ್ನು ಮಾಡಿ, ಅದಕ್ಕೆ ಒತ್ತು ಕೊಟ್ಟು, ಅದರ ಬಗ್ಗೆ ಜಾಗೃತಿ ಮೂಡಿಸಬೇಕು ಮತ್ತು ಎಲ್ಲಾ ಪೊಲೀಸ್ ಠಾಣೆ ಗಳಲ್ಲಿಯೂ ಸಹ ಇದರ ಬಗ್ಗೆ ಅರಿವು ಮೂಡಿಸಬೇಕು. ಈಗ ಸಾಮಾನ್ಯವಾಗಿ ಕ್ರೈಮ್ ಆದಾಗ, ಅದರ ಬಗ್ಗೆ ದೂರನ್ನು ಕೊಡುತ್ತಾರೆ, ಅದರ ಬಗ್ಗೆ ಎಫ್.ಐ.ಆರ್., ಲಾಡ್ಜ್ ಮಾಡುತ್ತಾರೆ, ಬರುತ್ತಾರೆ. ಈ ರೀತಿಯಲ್ಲಿ ಸೈಬರ್ ಎಂದು ಬಂದಾಗ ಎಲ್ಲಿಗೆ ಹೋಗಬೇಕು, ಯಾರಿಗೆ ದೂರನ್ನು ಕೊಡಬೇಕು, ಏನಾಗುತ್ತದೆ ಎನ್ನುವುದರ ಬಗ್ಗೆ ನೀವು ಸ್ವಲ್ಪಮಟ್ಟಿಗೆ ಪ್ರಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ **ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಮಾನ್ಯ ಸದಸ್ಯರಾದ ಶ್ರೀ ಟಿ.ಎ. ಶರವಣರವರು ಹೇಳಿದ್ದಾರೆ. ಕುಕ್ಕರ್ ಬಾಂಬ್ ಸ್ಫೋಟವಾಗಿರುವಂತಹದ್ದು ಒಂದು ಭಾಗ. ಅವರು ಕೇಳಿದ ಪ್ರಶ್ನೆ ಏನೆಂದರೆ, ಇದನ್ನು ಸೈಬರ್‌ನಿಂದ ಅತ ಕಲಿತಿದ್ದಾನೆ ಎನ್ನುವುದನ್ನು ಇಲ್ಲಿ ತಂದಿದ್ದಾರೆ. ಸೈಬರ್ ಮೂಲಕ ಆತ ಕಲಿತು ಇದನ್ನು ಪ್ರಾರಂಭ ಮಾಡಿದ. ಇದರಿಂದ ಅನಾಹುತವಾಗುತ್ತದೆ. ಇಂತಹದ್ದನ್ನು ಕೂಡ ಕಲಿಯಲಿಕ್ಕೆ ಅವಕಾಶವಾಗುತ್ತದೆ. ಈ ವಿಚಾರವಾಗಿ ಆತ ಇನ್ನು ಬಾಯಿ ಬಿಡಬೇಕು. ಆತನ ಹೇಳಿಕೆಯಿಂದ ಇದು ಹೊರ ಬರಬೇಕು. ಈಗಾಗಲೇ ಇದರ ಬಗ್ಗೆ ಮಾಧ್ಯಮಗಳು ಹೇಳುತ್ತಿವೆ. ಆದರೆ, ನಿಜವಾಗಿಯೂ ಕೂಡ ಆತನ ಹೇಳಿಕೆಯಿಂದ ಬರಬೇಕು. ಇದು ಯಾವ ಕಡೆಯಿಂದ ಬರುತ್ತಿದೆ, ಅದು ಎಲ್ಲಿದೆ, ಅದನ್ನು ಬ್ಲಾಕ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ಖಂಡಿತವಾಗಿಯೂ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 835**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ನಾನು ಕೇಳಿರುವಂತಹ ಪ್ರಶ್ನೆಯಲ್ಲಿ ಅನೇಕ ವಿಚಾರಗಳನ್ನು ಮಾನ್ಯ ಸಚಿವರು ಗಮನಿಸಿದ್ದಾರೆ. ಇದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎನ್ನುವ ಪ್ರಶ್ನೆ ಅಲ್ಲ. 2019-20 ರಲ್ಲಿ 700 ಲಕ್ಷಗಳು ಮತ್ತು 2020-21 ರಲ್ಲಿ 100 ಲಕ್ಷಗಳನ್ನು ಕೊಟ್ಟಿರುವಂತಹದ್ದು ಬೇರೆ ವಿಚಾರ. ಆದರೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ರಾಜ್ಯದಲ್ಲಿ ಪದೇ ಪದೇ ಹೆಚ್ಚಾಗುತ್ತಿವೆ.

**ಮುಂದು.**

**(1158) 26.12.2022 11.50 ಎಸ್‌ವಿ-ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ನಾರಾಯಣಸ್ವಾಮಿ (ಮುಂದು):-**

ಆದರೆ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ರಾಜ್ಯದಲ್ಲಿ ಪದೇ ಪದೇ ಹೆಚ್ಚಾಗುತ್ತಿದೆ. ಲೈಂಗಿಕ ಕಿರುಕುಳವನ್ನು ಕೊಡುವಂತಹ ಜನರಿಗೆ ಭಯ ಬರಬೇಕು. ಮತ್ತೆ ಇನ್ನೆಂದೂ ಅವರ ಜೀವಮಾನದಲ್ಲಿ ಅವರು ಇಂತಹ ಕಾರ್ಯಗಳಲ್ಲಿ ತೊಡಗಬಾರದು. ಅದಕ್ಕೆ ಯಾವ ರೀತಿಯ ಕ್ರಮಗಳನ್ನು ಜರುಗಿಸಬೇಕು ಎನ್ನುವ ನಿಟ್ಟಿನಲ್ಲಿ ಸರ್ಕಾರ ಯೋಚಿಸಬೇಕು. ದಿನ ಬೆಳಗಾದರೆ ನಾವು ಪತ್ರಿಕೆಗಳಲ್ಲಿ ನೋಡುತ್ತಿರುತ್ತೇವೆ. **"ವಿದ್ಯಾರ್ಥಿನಿಯರಿಂದ ಶಿಕ್ಷಕನಿಗೆ ಗೂಸಾ", "ಲೈಂಗಿಕ ಕಿರುಕುಳ- ಮುಖ್ಯ ಶಿಕ್ಷಕನಿಗೆ ಧರ್ಮದೇಟು", "ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯ – ಪ್ರಾಂಶುಪಾಲನ ಸೆರೆ"** ಹೀಗೆ ಅನೇಕ ಪ್ರಕರಣಗಳನ್ನು ನಾವು ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ ನೋಡುತ್ತಿರುತ್ತೇವೆ. ಮಾನವರಾದ ನಾವು ಸಮಾಜದಲ್ಲಿ ತಲೆ ತಗ್ಗಿಸುವಂಥ ಪರಿಸ್ಥಿತಿ ಇಂದು ಇದೆ. ಇದೇ ರೀತಿಯಲ್ಲಿ ಬಡವರ ಮೇಲೆ ಸಾಕಷ್ಟು ದೌರ್ಜನ್ಯಗಳಾಗುತ್ತಿವೆ. ತಳ ಸಮುದಾಯಗಳವರು ಅತ್ಯಂತ ಭಯಭೀತರಾಗಿರುತ್ತಾರೆ.

ಪೋಲೀಸ್ ಠಾಣೆಯವರೆಗೆ ಬಂದು ಯಾರೂ ದೂರನ್ನು ನೀಡಲು ಸಿದ್ಧರಿರುವುದಿಲ್ಲ. ಜೊತೆಗೆ ಇನ್ನೊಬ್ಬರ ಬಳಿ ಹೇಳಿಕೊಳ್ಳಲು ಕುಟುಂಬದ ಗೌರವ ಎನ್ನುವ ಕಾರಣಕ್ಕಾಗಿ ಅವರು ಯಾರಿಗೂ ಹೇಳಿಕೊಳ್ಳುವುದಿಲ್ಲ. ಈ ರೀತಿ ಅನೇಕ ಸಮಸ್ಯೆಗಳಿವೆ. ಇಂದು ಸರ್ಕಾರ ಪೋಕ್ಸೋ ಕಾಯಿದೆಯನ್ನು ತಂದಿದೆ. ಪ್ರಕರಣದ ಬಗ್ಗೆ ಪ್ರಚಾರ ಹೆಚ್ಚಾದಾಗ ಮಾತ್ರ ನಾವು ಪೋಕ್ಸೋ ಕಾಯಿದೆಯಡಿಯಲ್ಲಿ ಕೇಸ್ ಹಾಕುತ್ತೇವೆ. ಆದರೆ ಎಷ್ಟು ಪರ್ಸೆಂಟ್ ಶಿಕ್ಷೆಯಾಗಿದೆ ಎನ್ನುವುದು ಮುಖ್ಯವಾಗುತ್ತದೆ. ಇಂತಹ ಪ್ರಕರಣಗಳು ಮುಖ್ಯವಾದವು ಎಂಬುದನ್ನು ತಿಳಿದುಕೊಂಡು ಕಠಿಣವಾದ ಕ್ರಮಗಳನ್ನು ಸಚಿವರು ಜರುಗಿಸಬೇಕು.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯದ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಾರೆ. ಮಹಿಳೆಯರ ಮತ್ತು ಮಕ್ಕಳ ರಕ್ಷಣೆಗಾಗಿ ಮಹಿಳಾ ಸಹಾಯವಾಣಿ, ಮಕ್ಕಳ ಸಹಾಯವಾಣಿ ಕಾರ್ಯ ನಿರ್ವಹಿಸುತ್ತಿದೆ. ಸ್ಪಂದನಾ ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ. ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ 24 ಗಂಟೆಯೂ 'ಪಿಂಕ್ ಹೊಯ್ಸಳ' ಮತ್ತು '112' ಗಸ್ತು ವಾಹನಗಳು ಇಡೀ ರಾಜ್ಯಾದ್ಯಂತ ತಿರುಗಾಟ ಮಾಡುತ್ತಿವೆ. ಪೋಕ್ಸೋ ಕೋರ್ಟ್‌ಗಳನ್ನು ಪ್ರತಿ ಜಿಲ್ಲೆಯಲ್ಲಿಯೂ ಮಾಡಿದ್ದೇವೆ. ಇದಕ್ಕಾಗಿ ಸರ್ಕಾರದಿಂದ ಎ.ಪಿ.ಪಿ., ಗಳ ನೇಮಕ ಪೂರ್ಣ ಪ್ರಮಾಣದಲ್ಲಿ ಈಗಾಗಲೇ ಆಗಿದೆ. ಎಲ್ಲಿ ನೇಮಕವಾಗಿರುವುದಿಲ್ಲವೋ ಅಲ್ಲಿ ಪ್ರಭಾರ ಕೊಟ್ಟು ಆದ್ಯತೆಯ ಮೇಲೆ ಕೋರ್ಟ್‌ಗಳು ನಡೆಯುವಂತೆ ಮಾಡಿ ಶೀಘ್ರವಾಗಿ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು ಎನ್ನುವಂತೆ ಮಾಡಲಾಗಿದೆ. ಇದರ ಬಗ್ಗೆ ವಿಶೇಷವಾಗಿರುವಂತಹ ಪ್ರಯತ್ನಗಳನ್ನು ಮಾಡಿದ್ದೇವೆ. ಎಫ್.ಐ.ಆರ್., ಹಾಕಿ ಚಾರ್ಜ್‌ಶೀಟ್ ಸಲ್ಲಿಸಲಿಕ್ಕೆ ಹೆಚ್ಚು ಅವಧಿಯನ್ನು ತೆಗೆದುಕೊಳ್ಳಬಾರದು. ತಕ್ಷಣ ಅದನ್ನು ವಿಚಾರಣೆ ನಡೆಸಿ ಚಾರ್ಜ್‌ಶೀಟ್ ಅನ್ನು ಆದ್ಯತೆಯ ಮೇಲೆ ಕಳುಹಿಸಬೇಕು ಎಂದು ಈಗಾಗಲೇ ಹೇಳಲಾಗಿದೆ. ಕೆ.ಎಸ್.ಆರ್.ಪಿ., ಯಲ್ಲಿ ಹೆಣ್ಣುಮಕ್ಕಳಿಗೆ ವಿಶೇಷವಾಗಿ ಕರಾಟೆ ತರಬೇತಿಯನ್ನು ಕೊಡಲಾಗುತ್ತಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಂದರೆ ಬಾಗಲಕೋಟೆ ಜಿಲ್ಲೆಯಲ್ಲಿ ಚೆನ್ನಮ್ಮ ಪಡೆ, ಬಳ್ಳಾರಿ ಜಿಲ್ಲೆಯಲ್ಲಿ ಓಬವ್ವ ಪಡೆ, ದಾವಣಗೆರೆ ಜಿಲ್ಲೆಯಲ್ಲಿ ದುರ್ಗಾ ಪಡೆ, ಗದಗ ಜಿಲ್ಲೆಯಲ್ಲಿ ಚೆನ್ನಮ್ಮ ಪಡೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಶರಾವತಿ ಓಬವ್ವ ಪಡೆ,

ಬೀದರ್ ಜಿಲ್ಲೆಯಲ್ಲಿ ರಾಣಿ ಚೆನ್ನಮ್ಮ ಪಡೆಗಳ ವಾಹನವು ಹೆಚ್ಚಾಗಿ ಮಹಿಳೆಯರು ಓಡಾಡುವ ಜನನಿಬಿಡ ಸ್ಥಳಗಳಲ್ಲಿ ಹಾಗೂ ಶಾಲಾ ಕಾಲೇಜುಗಳ ಬಳಿ ಹೆಚ್ಚಿನ ಗಸ್ತು ಕಾರ್ಯವನ್ನು ನಿರ್ವಹಿಸುತ್ತಿರುತ್ತದೆ. ಅನೇಕ ಕಾಲೇಜುಗಳಲ್ಲಿ ಸಿ.ಸಿ.ಟಿ.ವಿ., ಗಳನ್ನು ಅಳವಡಿಸಲು ಈಗಾಗಲೇ ಪೋಲೀಸರ ಕಡೆಯಿಂದ ಸೂಚನೆ ಹೋಗಿದೆ. ಎಲ್ಲಾ ರೀತಿಯಿಂದ ಪ್ರಯತ್ನಗಳಾಗುತ್ತಿವೆ. ಪೋಕ್ಸೋ ಕಾಯಿದೆಯಡಿಯಲ್ಲಿ ಶಿಕ್ಷೆಗೆ ಗುರಿಯಾದವರು ಬಿಡುಗಡೆಯಾಗಿರುವ ಸಂದರ್ಭ ಬಹಳ ಕಡಿಮೆ ಉಂಟು. ಹೆಚ್ಚು ಪ್ರಕರಣಗಳಲ್ಲಿ ಅವರಿಗೆ ಶಿಕ್ಷೆಯಾಗುತ್ತದೆ. ಜಾಮೀನು ಸಿಗುವುದೇ ಇಲ್ಲ. Non-bailable ಆಗಿ ವರ್ಷಗಟ್ಟಲೆ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಇದನ್ನು ನಮ್ಮ ಸರ್ಕಾರ ಬಹಳ ಆದ್ಯತೆಯ ಮೇರೆಗೆ ತೆಗೆದುಕೊಂಡಿದೆ. ಮಹಿಳೆಯರು ಮತ್ತು ಚಿಕ್ಕ ಮಕ್ಕಳ ಮೇಲೆ ಆಗುವಂತಹ ದೌರ್ಜನ್ಯಗಳ ಪ್ರಕರಣಗಳಲ್ಲಿ ಮಕ್ಕಳ ಮೇಲೆ ಆಗುವಂತಹ ಲೈಂಗಿಕ ದೌರ್ಜನ್ಯ ಪರಿಚಿತರಿಂದಲೇ ಆಗುತ್ತಿದೆ. ಹೊಸಬರು ಯಾರಾದರೂ ಬಂದರೆ ಮಕ್ಕಳು ಹೆದರಿ ಓಡಿ ಹೋಗುತ್ತಾರೆ. ಯಾರೋ ಪರಿಚಿತರು ಕರೆದಾಗ ಮಕ್ಕಳು ಹತ್ತಿರ ಬರುತ್ತಾರೆ. ಆಗ ಈ ರೀತಿ ದುರುಪಯೋಗ ಆಗುತ್ತಿದೆ. ಈ ದೃಷ್ಟಿಯಿಂದ ಒಂದು ಸಾಮಾಜಿಕ ಜಾಗೃತಿಯನ್ನು ಮೂಡಿಸುವಂತಹ ಅವಶ್ಯಕತೆ ಇದೆ. ಪೋಲೀಸ್ ಇಲಾಖೆ ಆ ಕೆಲಸವನ್ನು ಕೂಡ ಮಾಡುತ್ತಿದೆ.

**ಶ್ರೀ ಛಲವಾದಿ ನಾರಾಯಣಸ್ವಾಮಿ:-** ಅನೇಕ ಪ್ರಕರಣಗಳಲ್ಲಿ ಜನರು ಭಯಭೀತರಾಗಿ ಪೋಲೀಸ್ ಠಾಣೆಗಳಿಗೆ ಹೋಗುವುದಿಲ್ಲ. ಅದಕ್ಕೆ ಒಂದು ಹೆಚ್ಚಿನ ಪ್ರಚಾರ ದೊರೆಯಬೇಕು. ದಾಖಲಾದ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಪಡಿಸಬೇಕು. ಇಲ್ಲದಿದ್ದರೆ ಬೇರೆ ಬೇರೆ ಒತ್ತಡಗಳಿಗೆ ಮಣಿದು ಅವರನ್ನು ಬಿಡುಗಡೆಗೊಳಿಸುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಅದು ಆಗಬಾರದು. ನೀವು ಕಲಿಸುವ ಕರಾಟೆ ವಯಸ್ಕರಿಗೆ ಆಗಬಹುದು. ಆದರೆ ಸಣ್ಣ ಕೂಸುಗಳಿಗೆ ಅದು ಯಾವ ರೀತಿಯಲ್ಲಿ ಉಪಯೋಗವಾಗುತ್ತದೆ ಎನ್ನುವುದನ್ನು ನೋಡಬೇಕು. ಅದರ ಬಗ್ಗೆ ಕ್ರಮ ಜರುಗಿಸಬೇಕೆಂದು ನಾನು ಸಚಿವರಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಅವರು ಹೇಳುತ್ತಿರುವುದು ಸರಿಯಿದೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಇದಕ್ಕೇನು ಮುಂಜಾಗ್ರತಾ ಕ್ರಮ ವಹಿಸಬಹುದೋ ಅದನ್ನು ಖಂಡಿತವಾಗಿಯೂ ಮಾಡುತ್ತೇವೆ. ಯಾವುದೇ ಅನುಮಾನ ಬೇಡ.

## ಪ್ರಶ್ನೆ ಸಂಖ್ಯೆ 807+883

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಸ್ವಲ್ಪ ಅಪೂರ್ಣವಾಗಿದೆ ಮತ್ತು ಸರಿಯಾದ ಮಾಹಿತಿ ಕೂಡ ಇಲ್ಲ. ಇಂದು ಮಾಹಿತಿ ತಂತ್ರಜ್ಞಾನ ಕ್ಷೇತ್ರ ನಮ್ಮ ಜೀವನ ಶೈಲಿಯನ್ನೇ ಬದಲಿಸಿದೆ. ಇವತ್ತು ಎಲೆಕ್ಟ್ರಾನಿಕ್ ಮತ್ತು ಎಲೆಕ್ಟ್ರಿಕಲ್ ಉಪಕರಣಗಳಿಲ್ಲದೆ ನಾವು ಬದುಕಲಿಕ್ಕೆ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಬಂದಿದೆ. ಐ.ಟಿ.,-ಬಿ.ಟಿ., ನಗರ ಅಥವಾ ಸಿಲಿಕಾನ್ ವ್ಯಾಲಿಯಲ್ಲಿ ಇ-ತ್ಯಾಜ್ಯ ಉತ್ಪತ್ತಿಯು ದೇಶದಲ್ಲಿಯೇ ನಾಲ್ಕನೇ ಸ್ಥಾನದಲ್ಲಿದೆ. ಉತ್ತರದಲ್ಲಿ ಮೂರು ವರ್ಷಗಳ ವಿವರವನ್ನು ಕೊಟ್ಟಿದ್ದಾರೆ. ಅದು ಬಹುಶಃ ಮೆಟ್ರಿಕ್ ಟನ್ ನಲ್ಲಿ ಉತ್ಪತ್ತಿಯಾಗುತ್ತದೆ. ಉತ್ತರದಲ್ಲಿ ಹೇಳಿರುವ ಟಿ.ಪಿ.ಎ., ಎಂದರೇನು ಎಂಬುದನ್ನು ಹೇಳಬೇಕು. ನನಗೆ ಅರ್ಥವಾಗದ ಕಾರಣ ಮಾನ್ಯ ಸಚಿವರು ಸ್ಪಷ್ಟ ಪಡಿಸಬೇಕು. ಅದೇ ರೀತಿಯಲ್ಲಿ E-waste Management ಬಗ್ಗೆ 2016ರ ರೂಲ್ ಅನ್ನು ಹೇಳಿದ್ದಾರೆ. ಈಗ 2022ರ ರೂಲ್ ಬಂದಿದೆ. ಅದರಲ್ಲಿ ಕೂಡ The Municipal solid waste (Management & Handling) Rules ಪ್ರಕಾರ ಅಸಂಘಟಿತ ವಲಯಕ್ಕೂ ಅನ್ವಯವಾಗುತ್ತದೆ. ದಯಮಾಡಿ ಮಾನ್ಯ ಸಚಿವರು ಈ ಮಾಹಿತಿಯನ್ನು ಸರಿಪಡಿಸಿ ಕೊಡಬೇಕು.

ಜಿಲ್ಲಾವಾರು ಸ್ಥಾಪನೆಯಾಗಿರುವಂತಹ ಇ-ತ್ಯಾಜ್ಯ ಸಂಸ್ಕರಣೆ ಮತ್ತು ಮರುಬಳಕೆ ಘಟಕಗಳು ಯಾವುವು ಎನ್ನುವ ಬಗ್ಗೆ ಕೇಳಿದ್ದೆವು. ಉತ್ತರದಲ್ಲಿ 180 ಘಟಕಗಳಿವೆ ಎಂದು ತಿಳಿಸಿದ್ದು, ಅವು ಯಾವ ಯಾವ ಜಿಲ್ಲೆಗಳಲ್ಲಿವೆ ಮತ್ತು ಯಾವ ರೀತಿಯಲ್ಲಿ ಸಂಸ್ಕರಣೆ ಮಾಡಲಾಗುತ್ತದೆ ಎನ್ನುವುದನ್ನು ಹೇಳಬೇಕು. ಇ-ತ್ಯಾಜ್ಯವನ್ನು ಎಲ್ಲಿ ಉಪಯೋಗಿಸಿ ಅನುಪಯುಕ್ತಗೊಳಿಸಲಾಗುವುದೋ ಅಲ್ಲಿಯೇ ಅದನ್ನು ಶೇಖರಿಸಿ, ಪರಿಷ್ಕರಿಸಿ, ಸಂಸ್ಕರಣೆ ಮಾಡಿದರೆ ಒಳ್ಳೆಯದು. ಇ-ತ್ಯಾಜ್ಯ ಎನ್ನುವುದು ಕಸದಿಂದ ರಸ ಮಾಡುವುದಾಗಿದೆ. ಇಂದು ಅಸಂಘಟಿತ ವಲಯವೂ ಸಹ ಒಂದು ದೊಡ್ಡ ಆರ್ಥಿಕ ವಲಯವಾಗಿ ಹೊರಹೊಮ್ಮಿದೆ. ಈ ದೃಷ್ಟಿಯಲ್ಲಿ ಬೆಂಗಳೂರಿನ ಮೈಸೂರು ರಸ್ತೆಯ ನಾಯಂಡಹಳ್ಳಿ, ಬನ್ನೇರುಘಟ್ಟ ರಸ್ತೆ, ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆಯ ಬೊಮ್ಮನಹಳ್ಳಿಗಳಲ್ಲಿ ಅಸಂಘಟಿತ

ವಲಯಗಳು ನಡೆಯುತ್ತಿವೆ. ಏಕೆಂದರೆ ಇದು ಅಪಾಯಕಾರಿ ವೃತ್ತಿಯಾಗಿದೆ. ಇದಕ್ಕೆ ಸರ್ಕಾರ ಯಾವ ರೀತಿಯ ನಿಗಾ ವಹಿಸಿದೆ ಎನ್ನುವುದನ್ನು ತಿಳಿಸಬೇಕು.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒದಗಿಸಿರುವ ಉತ್ತರದಲ್ಲಿ 180 ಘಟಕಗಳಲ್ಲಿ 47 ಘಟಕಗಳು ಸ್ಥಾಪನಾ ಹಂತದಲ್ಲಿರುತ್ತವೆ ಮತ್ತು 40 ಘಟಕಗಳು ಮುಚ್ಚಲ್ಪಟ್ಟಿವೆ ಎಂದು ಹೇಳಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇ-ತ್ಯಾಜ್ಯ ಎನ್ನುವುದು ಸಾಕಷ್ಟು ಅಪಾಯಕಾರಿಯಾಗಿದೆ. ಇದರಲ್ಲಿ ಎಲೆಕ್ಟ್ರಾನಿಕ್ ವಸ್ತುಗಳು ಬಹಳ ಮುಖ್ಯವಾದವು. ಟಿ.ವಿ., ರೆಫ್ರಿಜರೇಟರ್, ಮೊಬೈಲ್ ಮುಂತಾದ ವಸ್ತುಗಳನ್ನು ಅದೇ ಕಂಪನಿಗಳು buy back ಮಾಡಿ ತೆಗೆದುಕೊಳ್ಳುತ್ತವೆ. ಬಹಳ ವಿಶೇಷವಾಗಿ ಗಮನಿಸಬೇಕಾದುದು ಟ್ಯೂಬ್ ಲೈಟ್ಸ್, ಸಿ.ಎಫ್.ಎಲ್., ಮುಂತಾದ ಎಲೆಕ್ಟ್ರಿಕಲ್ ವಸ್ತುಗಳು. ಇವುಗಳಲ್ಲಿ ಆರ್ಸೆನಿಕ್, ಅಮೋನಿಯಂ ಮುಂತಾದ ತ್ಯಾಜ್ಯಗಳು ಬಂದು ಸಾಕಷ್ಟು ಸಮಸ್ಯೆಯಾಗುತ್ತಿವೆ. Battery disposal ಗೆ ನಾವು collection ಗಾಗಲಿ, segregation ಗಾಗಲಿ disposal ಗಾಗಲಿ ಏನು ಕ್ರಮ ವಹಿಸಿದ್ದಾರೆ ಎಂಬುದನ್ನು ಹೇಳಬೇಕು. ಇತ್ತೀಚೆಗೆ ಎಲೆಕ್ಟ್ರಿಕ್ ಚಾಲಿತ ವಾಹನಗಳು ಬಂದಿವೆ. ಜರ್ಮನಿಯಂಥ ದೇಶದಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಎಲೆಕ್ಟ್ರಿಕ್ ವಾಹನಗಳನ್ನು ನಿಲ್ಲಿಸಿದ್ದಾರೆ. ಅದರಲ್ಲಿ ಬ್ಯಾಟರಿ ಕೂಡ ಪ್ರಮುಖ ಪಾತ್ರವನ್ನು ವಹಿಸುತ್ತವೆ.

**(...ಮುಂದು)**

(1159) 26-12-2022 12.00 ಕೆಜಿ.ಎಂಡಿ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಡಿ.ಎಸ್.ಅರುಣ್ (ಮುಂದು).,**

ಆರು ವರ್ಷಗಳಿಗೊಮ್ಮೆ battery ಗಳನ್ನು ಬದಲಾವಣೆ ಮಾಡಬೇಕು. ಮಾನ್ಯ ಸಚಿವರು ಇದಕ್ಕೆ ಏನು ಕ್ರಮ ವಹಿಸಿದ್ದಾರೆಂದು ತಿಳಿಸಬೇಕು.

**ಶ್ರೀ ಆನಂದ್ ಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿಯವರು ಪ್ರತಿ ವರ್ಷ ಎಷ್ಟು ತಾಜ್ಯವನ್ನು ಸಂಗ್ರಹಣೆ ಮಾಡಲಾಗುತ್ತಿದೆ ಹಾಗೂ ಬೇರೆ

ಬೇರೆ ಜಿಲ್ಲೆಗಳಲ್ಲಿ ಎಷ್ಟು ತ್ಯಾಜ್ಯ ಸಂಗ್ರಹಣೆಯಾಗುತ್ತಿದೆ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. 2018-2019ನೇ ಸಾಲಿನಲ್ಲಿ 43,64,670 TPA (Tonne Per Annum), 2019-20ನೇ ಸಾಲಿನಲ್ಲಿ 44,74,170 TPA ಮತ್ತು 2020-21ನೇ ಸಾಲಿನಲ್ಲಿ 40,46,025 TPA ಘನ ತಾಜ್ಯ ಸಂಗ್ರಹಣೆಯಾಗುತ್ತಿದೆ ಎಂದು ಉತ್ತರದಲ್ಲಿ ವಿವರವಾಗಿ ನೀಡಿದ್ದೇವೆ. ಇದರ ಜೊತೆಗೆ, ಮಾನ್ಯ ಸದಸ್ಯರು ರಾಜ್ಯದಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳಿಂದ ಉಂಟಾಗುವ ಇ-ತಾಜ್ಯ ಸಂಸ್ಕರಣೆ ಮತ್ತು ಮರುಬಳಕೆ Processing and Recycling ಘಟಕಗಳನ್ನು ನೋಂದಾಯಿಸಲು ಇರುವ ವ್ಯವಸ್ಥೆ ಯಾವುದು ಎಂದು ಕೇಳಿದ್ದಾರೆ. ನನಗೆ ನಿಯಮದ ಪ್ರಕಾರ, 2016 ಎಂದು ಮಾಹಿತಿ ಇರುವುದರಿಂದ, ಅದು ಬದಲಾವಣೆಯಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ, ಅದು ಬದಲಾವಣೆಯಾಗಿಲ್ಲ. ಅದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಖಂಡಿತವಾಗಿ ತಮ್ಮ ಗಮನಕ್ಕೆ ಮಾಹಿತಿಯನ್ನು ತಂದು ಕೊಡುತ್ತೇನೆ.

ಮೂರನೆಯದಾಗಿ, ರಾಜ್ಯದಲ್ಲಿ ಇದುವರೆಗೂ ಇ-ತ್ಯಾಜ್ಯ ಸಂಸ್ಕರಣೆ ಮತ್ತು ಮರುಬಳಕೆಯ ಎಷ್ಟು ಘಟಕಗಳು ನೋಂದಣಿಯಾಗಿವೆ; ಈ ಘಟಕಗಳು ಸಂಸ್ಕರಣೆ ಮತ್ತು ಮರುಬಳಕೆ ಮಾಡುವ ವಸ್ತುಗಳು ಯಾವುವು ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರುಗಳು ಕೇಳಿದ್ದಾರೆ. ರಾಜ್ಯದಲ್ಲಿ ಇದುವರೆಗೂ 180 ಇ-ತ್ಯಾಜ್ಯ ಘಟಕಗಳಿದ್ದು, ಇದರಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಎಷ್ಟು ಘಟಕಗಳಿವೆ ಎಂಬುದನ್ನು ವಿವರವಾಗಿ ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಲುಪಿಸುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ, Computer, Mobile Phones, TV, Refrigerator, Washing Machines, Lamps, Electrical goods and other equipment, ಅದರಲ್ಲಿ ಹೆಚ್ಚಿನ ಪ್ರಮಾಣವಾಗಿ ಪ್ಲಾಸ್ಟಿಕ್ ಮತ್ತು ಮೆಟಲ್ ಬರುವಂತಹ ಒಂದು product ಅನ್ನು ಮತ್ತೆ by-product ಆಗಿ ತೆಗೆದುಕೊಳ್ಳುವಂತಹ ಬೇರೆ ಬೇರೆ ಕಾರ್ಖಾನೆಗಳು ಅದನ್ನು ಆ ಘಟಕಗಳಿಂದ ತೆಗೆದುಕೊಳ್ಳುವಂತಹ ವ್ಯವಸ್ಥೆ ಇದೆ. ಮಾನ್ಯ ಸದಸ್ಯರು ಜಿಲ್ಲಾವಾರು ಮಾಹಿತಿ ಕೇಳಿರುವುದರಿಂದ ಆ ಮಾಹಿತಿಯನ್ನು ತೆಗೆದುಕೊಂಡು ತಕ್ಷಣ ಕೊಡುತ್ತೇನೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಿ.ಎಸ್.ಅರುಣ್‌ರವರು ಬ್ಯಾಟರಿಗಳ ಬಗ್ಗೆ ಹೇಳಿದ್ದಾರೆ. Battery waste disposal ಗೆ separate rule ತರಬೇಕೆಂದು, ಇದರ ಬಗ್ಗೆ ಮುಂದೆ ಕ್ರಮ ತೆಗೆದುಕೊಳ್ಳುತ್ತೇವೆಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, E-waste ಈಗಿನ ಪರಿಸರಕ್ಕೆ ಬಹಳ ಮಾರಕವಾಗಿದೆ. ಹಾಗಾಗಿ, ಸರ್ಕಾರ ಇದರ ಬಗ್ಗೆ ಸರಿಯಾದಂತಹ ಕ್ರಮವನ್ನು ಜರುಗಿಸಲಿಲ್ಲವೆಂದರೆ, ಮುಂದಿನ ದಿವಸಗಳಲ್ಲಿ ಬಹಳ ಕಷ್ಟವಾಗುತ್ತದೆ. ಸರ್ಕಾರದಿಂದ ಸ್ಥಳೀಯ ಸಂಸ್ಥೆಗಳ ಬಗ್ಗೆ ಬಂದಿರುವಂತಹ guidelines ನಲ್ಲಿ ಸರಿಯಾದಂತಹ ಮಾಹಿತಿ ಇಲ್ಲ. ಅದನ್ನು segregation ಮಾಡುವುದಕ್ಕೆ ಬರುವುದಿಲ್ಲ. ಅದನ್ನು ಯಾವ ರೀತಿ disposal ಮಾಡುವುದು ಎಂದು ಗೊತ್ತಾಗುತ್ತಿಲ್ಲ. ಪ್ರತಿ ದಿವಸ ಯಾವ ರೀತಿ solid waste ಕೊಡುತ್ತಿದ್ದೇವೆಯೋ, ಅದೇರೀತಿ E-waste ಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂಬುದು ಸಹ ಗಮನಕ್ಕೆ ಇದೆ. Public-Private Partnership (PPP) model ನಲ್ಲಿ ಮಾತ್ರ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಿದೆ. ಹಾಗಾಗಿ, ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಬೇಕು. ಏಕೆಂದರೆ, ಇಡೀ ದೇಶದಲ್ಲಿ E-waste ಅನ್ನು ಉತ್ಪಾದನೆ ಮಾಡುತ್ತಿರುವುದರಲ್ಲಿ ನಮ್ಮ ಬೆಂಗಳೂರು 3ನೇ ಸ್ಥಾನದಲ್ಲಿದೆ. ಹಾಗಾಗಿ, ಮಾನ್ಯ ಸಚಿವರು E-waste ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, E-waste ಅನ್ನು ಒಳ್ಳೆಯ ರೀತಿಯಲ್ಲಿ ಸಂಸ್ಕರಣೆ ಮಾಡಿದರೆ ನಗರಸಭೆಗಳಿಗೆ ಮತ್ತು ಪುರಸಭೆಗಳಿಗೆ ಆದಾಯ ಇದೆ. ಒಂದು ವರದಿಯ ಪ್ರಕಾರ, ಒಂದು ಟನ್ ಚಿನ್ನದ ಅದಿರನ್ನು ಸಂಸ್ಕರಣೆ ಮಾಡಿದರೆ, 6 ಗ್ರಾಂ ಚಿನ್ನ ದೊರೆಯುತ್ತದೆ. ಒಂದು ಟನ್ ಇ-ತ್ಯಾಜ್ಯವನ್ನು ಸಂಸ್ಕರಣೆ ಮಾಡಿದರೆ, 24 ಗ್ರಾಂ ಚಿನ್ನ ದೊರೆಯುತ್ತದೆ. ಅದರ ಜೊತೆಗೆ copper, cadmium, lithium ಸಿಗುತ್ತದೆ. ದಯಮಾಡಿ, ಇದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಮಾನ್ಯ ಸಚಿವರು ಇದಕ್ಕೆ nodal agency ಆಗಿದ್ದಾರೆ. ಬಿಬಿಎಂಪಿ ಆಗಬಹುದು, ಇತರೆ ಬೇರೆ ಬೇರೆ ಸಂಸ್ಥೆಗಳು ಆಗಬಹುದು, ಈ ವಿಷಯದಲ್ಲಿ ಅವೆಲ್ಲವೂ ಮಾನ್ಯ ಸಚಿವರ control ಗೆ

ಬರುತ್ತವೆ. State Pollution Control Board ಮಾನ್ಯ ಸಚಿವರ control ಗೆ ಬರುತ್ತವೆ. ಮಾನ್ಯ ಸಚಿವರಿಗೆ ಬಿಬಿಎಂಪಿಯಿಂದ ಬಹುಶಃ ಸಾಕಷ್ಟು ಮಾಹಿತಿ ಕೊಟ್ಟಿಲ್ಲವೆಂದು ಕಾಣುತ್ತದೆ. ಇದರ ಬಗ್ಗೆ ಒಂದು ಪ್ರಶ್ನೆಯನ್ನು ಹಾಕಿದರೆ, ಎಲ್ಲಾ ಮಾಹಿತಿಯನ್ನು ಕೊಡುತ್ತಾರೆ. ಏಕೆಂದರೆ, ಇದು ಬೆಂಗಳೂರಿನಲ್ಲಿ ಮತ್ತು ಇತರೆ ನಗರ ಪ್ರದೇಶಗಳಲ್ಲಿ ಒಂದು ದೊಡ್ಡದಾದ ಆರ್ಥಿಕವಾದ ಉದ್ಯಮವಾಗಿದೆ. ಹಾಗಾಗಿ, ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆನಂದ್ ಸಿಂಗ್:-** ಮಾನ್ಯ ಸಭಾಪತಿಯವರೇ, E-waste ಬಗ್ಗೆ ಅನೇಕ ಬಾರಿ ಮಂಡಳಿಯ ಗಮನಕ್ಕೆ ಬಂದಿದೆ. ಹಾಗಾಗಿ, ನಾವು ಈಗಾಗಲೇ ಬಿಬಿಎಂಪಿ ಮತ್ತು ಬೇರೆ ಬೇರೆ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿದ್ದೇವೆ. ಈಗ ಮಾನ್ಯ ಸದಸ್ಯರುಗಳು ಹೇಳುವ ಪ್ರಕಾರ battery ಗಳಿಂದ ಸಹ ಬಹಳಷ್ಟು ಸಮಸ್ಯೆ ಇರುವುದರಿಂದ 2-3 ಬಾರಿ ಚರ್ಚೆ ಮಾಡಿ ಇದಕ್ಕೆ ಪ್ರತ್ಯೇಕವಾದ ಒಂದು ಕಾನೂನು ತಂದು, ಮಾನ್ಯ ಸದಸ್ಯರು ಹೇಳುವ ಪ್ರಕಾರ, ಎಷ್ಟು ಟನ್ ಪ್ರತ್ಯೇಕವಾಗಿ ಬರುತ್ತದೆ ಎಂಬುದನ್ನು ಚರ್ಚೆ ಮಾಡಿ ಆದಷ್ಟು ಬೇಗ ರೂಲ್ ಜಾರಿಗೆ ತರುವಂತಹ ಕೆಲಸವನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ ೮೩ (೮೯೩)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಚಿದಾನಂದ್ ಎಂ.ಗೌಡರವರೇ, ತಮ್ಮ ಪ್ರಶ್ನೆ ಸಂಖ್ಯೆ **೮೩ (೮೯೩)** ಕ್ಕೆ ಉತ್ತರ ನೀಡಲು ಮಾನ್ಯ ಸಚಿವರು ಸ್ವಲ್ಪ ಟೈಮ್‌ನ್ನು ಕೇಳಿದ್ದಾರೆ.

**ಪ್ರಶ್ನೆ ಸಂಖ್ಯೆ 894**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕೊಡಗು ಜಿಲ್ಲೆಯಲ್ಲಿ Super Speciality Hospital ಬೇಕೆಂದು ಕಳೆದ 10 ವರ್ಷಗಳಿಂದ ಬೇಡಿಕೆ ಇಡುತ್ತಾ ಬಂದಿದ್ದೇವೆ. ಕಳೆದ ಅಧಿವೇಶನದಲ್ಲಿಯೂ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಆದರೆ, ಮಾನ್ಯ ಸಚಿವರು ಇದೇ ಉತ್ತರವನ್ನು ನೀಡಿದ್ದಾರೆ. ಮಾನ್ಯ ಸಚಿವರು Super Speciality Hospital ನ ಕಟ್ಟಡದ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಿದ್ದಾರೆ. ಆದರೆ, ಈ ಕಟ್ಟಡದ ಕಾಮಗಾರಿ ಯಾವಾಗ ಮುಗಿಯುತ್ತದೆ ಮತ್ತು ಇದಕ್ಕೆ ಹಣಕಾಸಿನ ಕೊರತೆ ಇದೆಯೇ ಎಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ನಮ್ಮ ಕೊಡಗು ಜಿಲ್ಲೆ ಗುಡ್ಡಗಾಡು ಪ್ರದೇಶವಾಗಿದೆ. ಆದ್ದರಿಂದ, ಆಸ್ಪತ್ರೆಗಳಿಗೆ ಹೋಗಬೇಕಾದರೆ, ಸುಮಾರು ಎರಡು ಗಂಟೆಗಳ ಅವಧಿ ತೆಗೆದುಕೊಳ್ಳುತ್ತದೆ. ಆದ್ದರಿಂದ, ಮಾನ್ಯ ಸಚಿವರು ಕೊಡಗು ಜಿಲ್ಲೆಗೆ Super Speciality Hospital ಅನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿ Super Speciality Hospital ತುರ್ತು ಸಂದರ್ಭದಲ್ಲಿ ದೂರದ ಸ್ಥಳಕ್ಕೆ ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಸ್ಥಳಾಂತರಿಸುವ ಸಂದರ್ಭದಲ್ಲಿ ಎಷ್ಟು ಜನ ಪ್ರಾಣ ಕಳೆದುಕೊಂಡಿದ್ದಾರೆಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಈ ಪ್ರಶ್ನೆಗೆ ಉತ್ತರವನ್ನು ನೀಡಿಲ್ಲ. ಹಾಗಾಗಿ, ಮಾನ್ಯ ಸಚಿವರು ಇದರ ಬಗ್ಗೆ ವಿವರವನ್ನು ನೀಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹೊಂದಿಕೊಂಡಂತೆ, ಅಧೀನ ಬೋಧಕ ಆಸ್ಪತ್ರೆಯು 300 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿದೆ. ಇದರ ಜೊತೆಗೆ, ಈಗಾಗಲೇ ಹೆಚ್ಚುವರಿಯಾಗಿ 450 ಹಾಸಿಗೆ ಸಾಮರ್ಥ್ಯದ Multi Speciality ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ. ಈ ಕಟ್ಟಡದ ಕಾಮಗಾರಿ 2023ರ ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಮುಗಿಯುತ್ತದೆಂದು ನಮ್ಮ ಅಭಿಯಂತರರವರು ತಿಳಿಸಿದ್ದಾರೆ. ಈಗ ಮಾನ್ಯ ಸದಸ್ಯರು ಕೇಳುವಂತಹ Super Speciality Hospital ನ ಪ್ರಸ್ತಾವನೆ ತಕ್ಷಣಕ್ಕೆ ಸರ್ಕಾರದ ಮುಂದೆ ಇಲ್ಲ. ಈಗ ಅಲ್ಲಿ Multi Speciality Hospital ಘಟಕ ಪ್ರಾರಂಭವಾಗುವುದರಿಂದ, ಈ

ಆಸ್ಪತ್ರೆಯಲ್ಲಿ ಎಲ್ಲಾ ರೀತಿಯ ತಜ್ಞರು ಇರುತ್ತಾರೆ. ವಿಶೇಷವಾಗಿ ಹೃದಯಕ್ಕೆ ಸಂಬಂಧಿಸಿದಂತೆ ಅಥವಾ ಕ್ಯಾನ್ಸರ್ ರೋಗಕ್ಕೆ ಸಂಬಂಧಿಸಿದಂತಹ ಸಂದರ್ಭಗಳು ಬಂದಾಗ referral ನಲ್ಲಿ ಸಧ್ಯಕ್ಕೆ ಅದನ್ನು ಹ್ಯಾಂಡಲ್ ಮಾಡುತ್ತೇವೆ. ಇಡೀ ರಾಜ್ಯದಲ್ಲಿ ಕೇವಲ 10 ಸಂಸ್ಥೆಗಳಲ್ಲಿ Super Speciality Hospital ಗಳಿವೆ. Ultimately, ಪ್ರತಿ ಜಿಲ್ಲೆಯಲ್ಲಿ ಒಂದು Super Speciality Hospital ಆಗಬೇಕೆಂದು ಸರ್ಕಾರದ ಗಮನದಲ್ಲಿದೆ. ಆದರೆ, ಅನುದಾನದ ಇತಿ-ಮಿತಿಯನ್ನು ನೋಡಿಕೊಂಡು, ಅದರ ಲಭ್ಯತೆಯ ಆಧಾರದ ಮತ್ತು ಆದ್ಯತೆಯ ಮೇಲೆ  ಯಾವ ಜಿಲ್ಲೆಗಳಿಗೆ ಹೆಚ್ಚಿನ ಲೋಡ್ ಇದೆ ಅಂತಹ ಕಡೆಗಳಲ್ಲಿ ಈಗಾಗಲೇ Super Speciality Hospital ಪ್ರಾರಂಭ ಮಾಡಿದ್ದೇವೆ. ಕೊಡಗು ಜಿಲ್ಲೆಯಲ್ಲಿ 750 ಹಾಸಿಗೆಗಳ ಆಸ್ಪತ್ರೆ ನಿರ್ಮಾಣವಾಗುತ್ತಿದೆ, ಅದು ಸಾಕು ಎಂಬುದು ಇಲಾಖೆಯ ಅಭಿಪ್ರಾಯವಾಗಿದೆ.

**ಪ್ರಶ್ನೆ ಸಂಖ್ಯೆ 86 (776)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಮಂಜೇಗೌಡರವರೇ ತಮ್ಮ ಪ್ರಶ್ನೆ ಸಂಖ್ಯೆ **86 (776)** ಕ್ಕೆ ಉತ್ತರ ನೀಡಲು ಮಾನ್ಯ ಸಚಿವರು ಸ್ವಲ್ಪ ಟೈಮ್‌ನ್ನು ಕೇಳಿದ್ದಾರೆ. ಮಾನ್ಯ ಸಭಾನಾಯಕರೇ, ಮಾನ್ಯ ಸಚಿವರುಗಳು 10 ದಿವಸಗಳ ಕಾಲ ಟೈಮ್ ಕೇಳುತ್ತಾರೆ. ಆದರೆ, ಅಷ್ಟರಲ್ಲಿ ಸದನವು ಮುಗಿದು ಹೋಗಿರುತ್ತದೆ. ಇದನ್ನು ಪೀಠದಿಂದ ಎಷ್ಟು ಬಾರಿ ಹೇಳುವುದಕ್ಕೆ ಆಗುತ್ತದೆ? ಅದಕ್ಕೆ ತಾವು ಮಾನ್ಯ ಸಚಿವರುಗಳಿಗೆ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮಯ ಕೇಳಿದ್ದರೂ ಸಹ, ತಾವು ಸದನ ಮುಗಿಯುವುದರೊಳಗೆ ಉತ್ತರ ಕೊಡಿ ಎಂದು ಟೈಮ್ ಕೊಡಿ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಹೇಳುತ್ತಿದ್ದೀರಿ ಎಂದು ಸದನ ಮುಗಿಯುವುದರೊಳಗೆ ಉತ್ತರ ಕೊಡಿ ಎಂದು 10 ಬಾರಿ ಹೇಳಬೇಕಾಗುತ್ತದೆ.

**ಪ್ರಶ್ನೆ ಸಂಖ್ಯೆ 790**

**(ಉತ್ತರವನ್ನು ಲಗತ್ತಿಸಲಾಗಿದೆ**

**ಶ್ರೀ ಮಧು ಜಿ.ಮಾದೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಪಿ.ಹೆಚ್.ಡಿ., ಪರೀಕ್ಷೆ ಬರೆದು ಅರ್ಹತೆ ಪಡೆದಿರುವಂತಹ ವಿದ್ಯಾರ್ಥಿಗಳು ಬಹಳ ದೊಡ್ಡ ಸಂಖ್ಯೆಯಲ್ಲಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ಗೈಡ್‌ಗಳು ಸಿಗುತ್ತಿಲ್ಲ. ಬಹಳಷ್ಟು ಹುದ್ದೆಗಳು ಖಾಲಿ ಇದ್ದರೂ ಸಹ, ಆ ಹುದ್ದೆಗಳ ನೇಮಕಾತಿ ಆಗಿಲ್ಲ. ಆದ್ದರಿಂದ, ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಅಲ್ಲದೇ, ವಿಶ್ವವಿದ್ಯಾನಿಲಯಗಳಲ್ಲಿ ಮಾರ್ಗದರ್ಶನದ ತೊಂದರೆ ಇದೆ. ಆದ್ದರಿಂದ, ಮಾನ್ಯ ಸಚಿವರು ನೇಮಕಾತಿಗಳ ಬಗ್ಗೆ ಸ್ವಲ್ಪ ಗಮನ ಕೊಡಬೇಕೆಂಬ ಮನವಿಯನ್ನು ಮಾಡುತ್ತಿದ್ದೇನೆ. ಪದವಿ ಕಾಲೇಜುಗಳಲ್ಲಿ ಪಿ.ಹೆಚ್.ಡಿ., ಮಾಡಿರುವಂತಹ ಬೋಧಕರು ಇದ್ದಾರೆ. ಅವರನ್ನು ಸಂಶೋಧನೆಗೆ ಉಪಯೋಗ ಮಾಡಿಕೊಳ್ಳುವಂತಹ ಕೆಲಸವನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**(ಮುಂದು., )**

**(1160) 26-12-2022 (12.10) ಎಂವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಡಾ॥ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾನಿಲಯಗಳಲ್ಲಿ ಖಾಲಿ ಇರುವಂತಹ ಎಲ್ಲಾ ಪ್ರಾಧ್ಯಾಪಕರ ಮತ್ತು ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸಕ್ಕೆ ಸರ್ಕಾರ ಈಗಾಗಲೇ ಕ್ರಮ ವಹಿಸಲಾಗುತ್ತಿದೆ. ನಾವು ಆ ದಿಕ್ಕಿನಲ್ಲಿ ಕ್ರಮವನ್ನು ವಹಿಸಿ, ತ್ವರಿತವಾಗಿ ಭರ್ತಿ ಮಾಡುವಂತಹ ಪ್ರಯತ್ನಕ್ಕೆ ಸರ್ಕಾರದಲ್ಲಿ ಆದ್ಯತೆಯನ್ನು ನೀಡಿ, ಅವಕಾಶ ಮಾಡಿಕೊಡುವಂಥದ್ದು ಆಗುತ್ತಿದೆ. ಆ ದಿಕ್ಕಿನಲ್ಲಿ statutes ಮಾಡುವಂಥದ್ದು ಆಗುತ್ತಿದೆ. Statutes ಮಾಡಿ, ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಖಾಲಿ ಇರುವಂತಹ ಹುದ್ದೆಗಳನ್ನೆಲ್ಲಾ ಭರ್ತಿ ಮಾಡುವುದಕ್ಕೆ ಉತ್ತಮವಾಗಿ ಕ್ರಮ ವಹಿಸಲಾಗುತ್ತಿದೆ. ಆ ಮೂಲಕ ಪಿಹೆಚ್.ಡಿ.ಗೆ ಗೈಡ್ ಮಾಡುವುದಕ್ಕೆ ಅವಕಾಶ ಮಾಡಿ ಕೊಡುವಂಥದ್ದು ಆಗುತ್ತದೆ. ಮತ್ತೆ ಕೆಲವು ಖಾಸಗಿ ಕಾಲೇಜುಗಳಲ್ಲಿಯೂ ಸಹ Research Centre ಗಳನ್ನು recognize ಮಾಡುವಂಥದ್ದು, ಗೈಡ್‌ಗಳನ್ನು recognize ಮಾಡುವಂಥದ್ದು,

ಮತ್ತೆ ಕೆಲವು ಕೈಗಾರಿಕೆಗಳಲ್ಲಿ Research Centre ಗಳನ್ನು recognize ಮಾಡುವಂಥದ್ದನ್ನು ಮಾಡಬೇಕಾಗುತ್ತದೆ, open-up ಆಗಬೇಕು, ಕೈಗಾರಿಕೆಗಳಿಗೆ Doctoral Programme ನಲ್ಲಿ ಇರುವಂತಹವರು ತುಂಬಾ ಬೇಕಾಗುತ್ತಾರೆ. ಹಾಗಾಗಿ ಅವಶ್ಯಕತೆ ಇರುವುದನ್ನು ಗಮನದಲ್ಲಿಟ್ಟುಕೊಂಡು, ನಮ್ಮ ಸರ್ಕಾರಿ ಕಾಲೇಜುಗಳಲ್ಲೂ Professor ಗಳಿಗೆ promotion ಕೊಟ್ಟಿರುವಂಥದ್ದು ಇಲ್ಲ. ಈಗ ಸರ್ಕಾರಿ ಕಾಲೇಜುಗಳಲ್ಲಿ Professor ಗಳಿಗೂ ಸಹ ಕೊಡುವಂಥದಾಗಿ, ಒಟ್ಟಾರೆ ಎಲ್ಲಾ ಕಡೆಗಳಲ್ಲಿ ಹೆಚ್ಚಿಸುವಂಥದ್ದು ಮತ್ತು ಹುದ್ದೆಗಳನ್ನು ನೇಮಕಾತಿಯ ಮೂಲಕ ಭರ್ತಿ ಮಾಡುವಂಥದ್ದು ಆಗುತ್ತಿದೆ. ಮತ್ತೆ ಹೊರಗೂ ಸಹ recognize ಮಾಡಿ, ಅವಕಾಶಗಳನ್ನು ಹೆಚ್ಚಿಸುವಂಥದ್ದು ಆಗುತ್ತಿದೆ.

**ಶ್ರೀ ಮಧು ಜಿ. ಮಾದೇಗೌಡ:-** ಮಾನ್ಯ ಸಭಾಪತಿಯವರೇ, ಈಗ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡ ಮೇಲೆ ಒಂದು ವರ್ಷ ಮಾತ್ರ ಅವಕಾಶವಿರುತ್ತದೆ. ಆದರೆ, ಇವತ್ತಿನ ದಿವಸ ಬೋಧಕರು ಇಲ್ಲದೇ ಇರುವುದರಿಂದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಆದುದರಿಂದ ಅವರು ಪರೀಕ್ಷೆಯನ್ನು ತೆಗೆದುಕೊಂಡ ಮೇಲೆ, ಕನಿಷ್ಠಪಕ್ಷ ಮೂರು ವರ್ಷಗಳಿಗಾದರೂ ಅವಕಾಶ ಮಾಡಿಕೊಡಬೇಕು.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಈಗ ಪ್ರತಿವರ್ಷ ಇದರಲ್ಲಿ ಬಹಳಷ್ಟು ಪಾರದರ್ಶಕ ಮತ್ತು ಉತ್ತಮವಾಗಿ Doctoral Programme ನಲ್ಲಿ enrolment process ಅನ್ನು ಹೇಗೆ improve ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮತ್ತೆ ಮಾನ್ಯ ಸದಸ್ಯರು ಕೆಲವು subject ಗಳನ್ನು ಸೇರ್ಪಡೆ ಮಾಡುತ್ತೀರಾ ಎಂದು ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಮಧು ಜಿ. ಮಾದೇಗೌಡ:-** ಮಾನ್ಯ ಸಭಾಪತಿಯವರೇ, ನ್ಯಾನೋ ಟೆಕ್ನಾಲಜಿ.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಕೆಲವು ಹಳೆಯ subject ಗಳಿಗೆ ಸೀಮಿತವಾಗಿದ್ದು, ಹೊಸ ವಿಷಯಗಳನ್ನು ತೆಗೆದುಕೊಳ್ಳುವಂಥದ್ದು ಆಗಬೇಕು. ಅದೇರೀತಿ ಹೊಸ ಪ್ರಕ್ರಿಯೆಗಳಲ್ಲಿ ಏನನ್ನು, ಹೇಗೆ ಉತ್ತಮಗೊಳಿಸುವುದಕ್ಕೆ ಏನು ಪ್ರಯತ್ನ

ಮಾಡಬೇಕಾಗುತ್ತದೋ, ಆ ಎಲ್ಲಾ ಪ್ರಯತ್ನಗಳನ್ನು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಮಾಡುವಂಥದ್ದು ಆಗುತ್ತದೆ.

**ಪ್ರಶ್ನೆ ಸಂಖ್ಯೆ: 782**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅತಿಥಿ ಉಪನ್ಯಾಸಕರಿಗೆ ವೇತನ ಪರಿಷ್ಕರಣೆಯಾದ ಮೇಲೆ ಏನಾದರೂ ರಜೆ ಸವಲತ್ತು ನೀಡುತ್ತೀರಾ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ರಜೆ ಸವಲತ್ತು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಆದರೆ, ವಿಶ್ವವಿದ್ಯಾನಿಲಯಗಳಲ್ಲಿ ಅತಿಥಿ ಉಪನ್ಯಾಸಕರಿಗೆ ಹದಿನೈದು ಗಂಟೆಗಳ ಕಾಲ ಕಾರ್ಯನಿರ್ವಹಿಸುವಂತಹವರಿಗೆ ಮಾಸಿಕ ಒಂದು ಸಾಂದರ್ಭಿಕ ರಜೆ ನೀಡಿದ್ದಾರೆ. ಅದೇರೀತಿ ಎಂಟು ಗಂಟೆಗಳ ಕಾಲ ಕಾರ್ಯನಿರ್ವಹಿಸುವಂತಹವರಿಗೆ ಅರ್ಧ ದಿನ ಸಾಂದರ್ಭಿಕ ರಜೆಯನ್ನು ನೀಡಿದ್ದಾರೆ. ಅದನ್ನು ಪದವಿ ತರಗತಿಗಳಲ್ಲಿ ಬೋಧನೆ ಮಾಡುವಂತಹ ಅತಿಥಿ ಉಪನ್ಯಾಸಕರಿಗೂ ಸಹ ಜಾರಿಗೆ ತರುತ್ತಾರೆಯೇ? ಕಳೆದ ಸಾಲಿನಲ್ಲಿ ಅವರು ಸರಿಯಾದ ನಿರ್ದೇಶನವನ್ನು ನೀಡದೆ, ಆನ್‌ಲೈನ್‌ನಲ್ಲಿ ತಿಳಿಸುತ್ತೇವೆಂದು ಹೇಳಿ, ಕೆಲವು ಪ್ರಾಂಶುಪಾಲರು ಗೊಂದಲವಾದ ತೀರ್ಮಾನಗಳನ್ನು ತೆಗೆದುಕೊಂಡಿದ್ದರಿಂದ, ಕೆಲವು ಅತಿಥಿ ಉಪನ್ಯಾಸಕರಿಗೆ ವೇತನ ಸಿಗದಂತೆ ಆಗಿದೆ. ಇವತ್ತು ಅತಿಥಿ ಉಪನ್ಯಾಸಕರು ಇಲ್ಲದೇ ಇದ್ದರೆ, ಯಾವುದೇ ಪದವಿ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅತಿಥಿ ಉಪನ್ಯಾಸಕರು ಮೌಲ್ಯಮಾಪನಕ್ಕೆ ಹೋಗದೇ ಇದ್ದರೆ, ಇಲಾಖೆಯವರು ಶೈಕ್ಷಣಿಕ ವರ್ಷವನ್ನು ಪ್ರಾರಂಭ ಮಾಡುವುದಕ್ಕೇ ಆಗುವುದಿಲ್ಲ. ಆಗ ಕಾಯಂ ಉಪನ್ಯಾಸಕರು ಇಡೀ ವರ್ಷ ಮೌಲ್ಯಮಾಪನವನ್ನು ಮಾಡಬೇಕಾಗುತ್ತದೆ. ಈಗ ಬೋಧನಾ ಅವಧಿಯನ್ನು ಹೊರತುಪಡಿಸಿ, ಅವರು ಬೇರೆ ಅವಧಿಯಲ್ಲಿ ಹೋಗಿ ಮೌಲ್ಯಮಾಪನವನ್ನು ಮಾಡುತ್ತಾರೆ. ಅವರು ಮಾಡುವ ಮೌಲ್ಯಮಾಪನಕ್ಕೆ ಸರ್ಕಾರ ಗೌರವಧನವನ್ನು ನೀಡುವುದಿಲ್ಲ. ಅವರಿಗೆ ಗೌರವಧನವನ್ನು ವಿಶ್ವವಿದ್ಯಾನಿಲಯದವರು ನೀಡುತ್ತಾರೆ. ಅವರು ಅಲ್ಲಿ ಪರೀಕ್ಷಾ ಕಾರ್ಯಕ್ಕೆ ಹೋಗಿ, ಮೌಲ್ಯಮಾಪನ ಮಾಡಿ, ಗೌರವಧನ ಪಡೆದುಕೊಂಡಿರುವಂತಹವರಿಗೆ ಇಲ್ಲಿ ವೇತನ ನೀಡುವುದಿಲ್ಲ ಎನ್ನುವುದು ಎಷ್ಟು ಸೂಕ್ತ? ಅತಿಥಿ ಉಪನ್ಯಾಸಕರು ಮೌಲ್ಯಮಾಪನ ಮಾಡದೇ ಇದ್ದರೆ ಈ ಇಲಾಖೆ ನಡೆಯುವುದೇ ಇಲ್ಲ. ಅವರು ಬೋಧನಾ ಅವಧಿಯನ್ನು ಬಿಟ್ಟು ಹೋಗಿ ಏನು ಕೆಲಸ ಮಾಡಿಲ್ಲ. ಅವರು ತಮ್ಮ ಬೋಧನಾ ಅವಧಿಯಲ್ಲಿ ಮಾಡಿರುವುದಕ್ಕೂ ಕೂಡ, ಅವರು ಅಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಿರುವುದಕ್ಕೆ ಕೊಡುವುದಕ್ಕೆ ಆಗುವುದಿಲ್ಲ ಎನ್ನುವುದು ಸರಿಯಲ್ಲ. ಅತಿಥಿ ಉಪನ್ಯಾಸಕರು ಏನು ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನದಲ್ಲಿ ಭಾಗವಹಿಸಿದ್ದಾರೆ, ಅದಕ್ಕೆ ವಿಶ್ವವಿದ್ಯಾನಿಲಯದವರು ಗೌರವಧನವನ್ನು ನೀಡುತ್ತಾರೆ. ಆದರೆ, ಆ ಅವಧಿಯಲ್ಲಿ ಕಾರ್ಯ ನಿರ್ವಹಿಸಿರುವಂತಹ ಅತಿಥಿ

ಉಪನ್ಯಾಸಕರಿಗೆ ವೇತನವನ್ನು ಕೊಡಿಸಿ ಕೊಡಬೇಕು. ಮತ್ತೆ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಒಂದೊಂದು ರೀತಿಯಲ್ಲಿ ವೇತನ ಪರಿಷ್ಕರಣೆ ಮಾಡಿಕೊಂಡಿದ್ದಾರೆ. ಅದನ್ನು ಅವರಿಗೆ independent ಆಗಿ ಬಿಟ್ಟಿದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ ಅಕ್ಟೋಬರ್‌ನಲ್ಲಿ ಅತಿಥಿ ಉಪನ್ಯಾಸಕರಿಗೆ ವೇತನ ಪರಿಷ್ಕರಣೆ ಮಾಡಿದ್ದಾರೆ. ಆದರೆ, ಅವರಿಗೆ ಇವತ್ತಿನವರೆಗೂ ಕೂಡ, ಪರಿಷ್ಕರಣೆ ಮಾಡಿದಂತಹ ವೇತನ ನೀಡುತ್ತಿಲ್ಲ. ನಿಮಗೆ ರೀತಿ ಪರಿಷ್ಕರಣೆ ಮಾಡಿರುವ ವೇತನ ನೀಡುತ್ತೇವೆಂದು ನೇಮಕಾತಿ ಮಾಡಿಕೊಳ್ಳುವಾಗ ಅದನ್ನು ತಮ್ಮ ಆದೇಶದಲ್ಲಿ ನೀಡಿದ್ದಾರೆ. ಆದರೆ, ಆದೇಶದ ರೀತಿಯಲ್ಲಿ ವೇತನ ನೀಡುತ್ತಿಲ್ಲ. ಆದುದರಿಂದ ಇದಕ್ಕೆ ಸಂಬಂಧಪಟ್ಟಂತೆ ಅತಿಥಿ ಉಪನ್ಯಾಸಕರು ಧರಣಿ ಮಾಡುತ್ತಿದ್ದರು. ನಾನು ಆ ಧರಣಿಯ ಬಳಿಗೆ ಹೋದಾಗ, ವೇತನ ಪರಿಷ್ಕರಣೆ ಮಾಡಿದಂತಹ ಕುಲಪತಿಗಳಾಗಲಿ, ರಿಜಿಸ್ಟ್ರಾರ್‌ರವರಾಗಲಿ ಈ ಇಬ್ಬರು ಸಹ ಇಲ್ಲ. ಅವರುಗಳ ಅವಧಿ ಮುಗಿದಿದೆ. ಈಗ ಪ್ರಭಾರ ಕುಲಪತಿಗಳದ್ದಾರೆ. ಅದೇರೀತಿ ರಿಜಿಸ್ಟ್ರಾರ್ ಆಗಿ ಬೇರೆ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ. ಆರ್ಥಿಕ ಇಲಾಖೆಯ ಕೆಲವು ಅಧಿಕಾರಿಗಳು ಸಭೆಗೆ ಬಂದು ಸೂಚನೆ ನೀಡಿದ್ದೇವೆಂದು ಹೇಳಿದ್ದಾರೆ. ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರಿಗೆ ವೇತನವನ್ನು ಸರ್ಕಾರ ಕೊಡುವುದಿಲ್ಲ. ಅದನ್ನು ವಿಶ್ವವಿದ್ಯಾನಿಲಯದವರು ಭರಿಸುವಂಥದ್ದು. ಆರ್ಥಿಕ ಇಲಾಖೆಯವರು ಅದಕ್ಕೆ query ಹಾಕಿದರು ಎಂದು ಹೇಳಿ, ಪರಿಷ್ಕರಣೆ ಮಾಡಿದಂತಹ ವೇತನವನ್ನು ಬಿಡುಗಡೆ ಮಾಡಿಲ್ಲ. ಈಗ ಪರಿಷ್ಕರಣೆ ಮಾಡಿರುವಂತಹ ವೇತನವನ್ನು ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರಿಗೆ ಕೊಡಿಸಿ ಕೊಡಬೇಕು. ಆದರೆ, ಇಲ್ಲಿ ಏನಾಗಿದೆ ಎಂದರೆ, ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಅತಿಥಿ ಉಪನ್ಯಾಸಕರಿಗೆ 35 ರಿಂದ 40 ಸಾವಿರ ರೂಪಾಯಿಗಳನ್ನು ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೇವಲ 24 ಸಾವಿರ ರೂಪಾಯಿಗಳನ್ನು ಮಾಡಿದ್ದಾರೆ. ಅದನ್ನು ಅಕ್ಟೋಬರ್ ತಿಂಗಳಿನಲ್ಲಿ ಪರಿಷ್ಕರಣೆ ಮಾಡಿದ್ದಾರೆ. ಆದರೆ, ಅದನ್ನು ಕೊಡುವುದಕ್ಕೆ ಬಿಡುತ್ತಿಲ್ಲ. ದಯವಿಟ್ಟು ಮಾನ್ಯ ಸಚಿವರು ಪರಿಷ್ಕರಣೆಯಾಗಿರುವಂತಹ ವೇತನವನ್ನು ಕೊಡಿಸಿ ಕೊಡಬೇಕು. ಮತ್ತೆ ಅವರಿಗೆ ಸಾಂದರ್ಭಿಕ ರಜೆ ಕೊಡುವಂತಹ ವಿಚಾರದಲ್ಲಿ ಹಾಗೂ ಅವರನ್ನು ಮೌಲ್ಯಮಾಪನ ಕಾರ್ಯಕ್ಕೆ ತೊಡಗಿಸಿಕೊಂಡಂತಹ ಸಂದರ್ಭದಲ್ಲಿ ಅವರಿಗೆ ವೇತನ ನೀಡುವುದಕ್ಕೆ ಮಾನ್ಯ ಸಚಿವರು ಏನೆಂದು ಹೇಳುತ್ತಾರೆ?

**ಡಾ॥ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಈ ವಿಷಯ ತಮಗೆ ಗೊತ್ತಿದೆ. ಈಗ ಏನು ಅತಿಥಿ ಉಪನ್ಯಾಸಕರು ಮೌಲ್ಯಮಾಪನ ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅವರಿಗೆ ಏನು ಸಂಭಾವನೆ, incentive ದೊರಕಬೇಕಾಗಿದೆ ಅದನ್ನು

ಗಮನಿಸುವಂತಹ ಕೆಲಸವನ್ನು ಮಾಡುತ್ತೇವೆ. ಅವರು ಮೌಲ್ಯಮಾಪನಕ್ಕೆ ಹೋಗುವುದಕ್ಕೆ ಅವಕಾಶ ಮಾಡಿಕೊಡುವಂಥದ್ದು ಆಗುತ್ತದೆ. ತಮಗೆ ಗೊತ್ತಿರುವಂತಹ ವಿಶ್ವವಿದ್ಯಾನಿಲಯದ academic days ಗಳು ೯೦ ದಿನಗಳಗಿಂತ ಹೆಚ್ಚಿಲ್ಲ. ವರ್ಷವಿಡಿ ತೆಗೆದುಕೊಂಡರು ೧೮೦ ದಿನಗಳು ಮಾತ್ರ ಇರುತ್ತವೆ. ಮೊದಲು ಅತಿಥಿ ಉಪನ್ಯಾಸಕರಿಗೆ ಎಂಟು, ಎಂಟೂವರೆ ಮತ್ತು ಒಂಬತ್ತು ತಿಂಗಳು ಮಾತ್ರ ಇತ್ತು. ಈಗ ಅದನ್ನು ಹತ್ತು ತಿಂಗಳಿಗೆ ಎಂದು ಮಾಡಿಕೊಟ್ಟಿದ್ದೇವೆ. ನಾವು ಎಲ್ಲವನ್ನು ಸಹ ಉತ್ತಮವಾಗಿ ಮಾಡಿಕೊಡುವಂಥದ್ದು ಇದೆ. ಆದರೆ, ಅವರು ಮೌಲ್ಯಮಾಪನಕ್ಕೆ ಹೋದಾಗ, ಯಾವ ರೀತಿಯ ಸಹಕಾರ ಕೊಡಬೇಕಾಗಿದೆಯೋ, ಅದನ್ನು ಗಮನಿಸಿ ಕ್ರಮವಹಿಸುವಂಥದ್ದನ್ನು ಮಾಡುತ್ತೇವೆ. ಅದೇರೀತಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಯು.ಜಿ.ಸಿ. ಮಾರ್ಗಸೂಚಿಗಿಂತಲೂ ಗಂಟೆಗೆ ಒಂದು ಸಾವಿರ ರೂಪಾಯಿಗಿಂತಲೂ ಅತಿ ಹೆಚ್ಚಿನ ಹಣವನ್ನು ಕೊಡುತ್ತಿದ್ದಾರೆ. ಇದನ್ನು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಗೆ ಹೋಲಿಸಿಕೊಳ್ಳುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಇನ್ನು ಹೆಚ್ಚಿಗೆ ಕೊಟ್ಟಿದ್ದಾರೆ. ಅಲ್ಲಿ ಸುಮಾರು ೯೦೦ ಜನ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಂಡಿದ್ದಾರೆ. ಹಾಗಾಗಿ, ಈ ಒಂದು ಹಣವನ್ನು ಹೆಚ್ಚಾಗಿ ಕೊಡುವುದಕ್ಕೆ ವಿಶ್ವವಿದ್ಯಾನಿಲಯದ ಆರ್ಥಿಕ ಸಮಿತಿಯಲ್ಲಿ ಸರ್ಕಾರದ ಪ್ರತಿನಿಧಿ ಸಹ ಇದ್ದರು. ಆರ್ಥಿಕ ಸಮಿತಿಯಲ್ಲಿ ಇದ್ದಂತಹವರು ಅದಕ್ಕೆ ಇನ್ನು ಸಹಮತಿ ನೀಡಿಲ್ಲ. ಅವರು ಸಹಮತಿಯನ್ನು ನೀಡದ ಕಾರಣ, ಅಲ್ಲಿ ಪರಿಷ್ಕರಣೆಯನ್ನು ಮಾಡುವುದಕ್ಕೆ ಆಗಿಲ್ಲ. ಪರಿಷ್ಕರಣೆ ಮಾಡುವುದಕ್ಕೆ ಸಂಬಂಧಪಟ್ಟಂತಹ ವಿಶ್ವವಿದ್ಯಾನಿಲಯದಲ್ಲಿಯೇ ಮಾಡುವುದಕ್ಕೆ ಆಗುತ್ತದೆ. ಆದರೆ, ಸದ್ಯಕ್ಕೆ ಪರಿಷ್ಕರಣೆ ಆಗಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಇದಕ್ಕೆ ಸಂಬಂಧಪಟ್ಟಂತೆ ಬಹಳ ಸ್ಪಷ್ಟವಾಗಿ ಹೇಳಬೇಕು. ಅತಿಥಿ ಉಪನ್ಯಾಸಕರು ಮೌಲ್ಯಮಾಪನಕ್ಕೆ ಹೋದಾಗ, ಅವರು ಬೋಧನೆ ಮಾಡದೆ ಹೋದಾಗ ಕೊಡುವುದು ಬೇಡ. ಆದರೆ, ಅವರು ತಮ್ಮ ಬೋಧನಾ ಅವಧಿಯಲ್ಲಿ ಕೆಲಸ ಮಾಡುತ್ತಾರೆ. ಅವರು ಆ ತಿಂಗಳ ವೇತನ ಕೊಡುತ್ತೇವೆಂದು ಹೇಳಲಿ. ಅದಕ್ಕೆ ಮಾನ್ಯ ಸಚಿವರು ಸ್ಪಷ್ಟವಾಗಿ ಏಕೆ ಹೇಳುತ್ತಿಲ್ಲ. ಎರಡನೆಯದಾಗಿ, ಮೈಸೂರು ವಿಶ್ವವಿದ್ಯಾನಿಲಯ ಈಗಾಗಲೇ ಅಕ್ಟೋಬರ್ ತಿಂಗಳಿನಲ್ಲಿಯೇ ಪರಿಷ್ಕರಣೆ ಮಾಡಿ, ಆ ಪರಿಷ್ಕರಣೆ ಪಟ್ಟಿಯನ್ನು ಅವರ ನೇಮಕಾತಿ ಮಾಡುವಾಗ, ಅತಿಥಿ ಉಪನ್ಯಾಸಕರಿಗೆ ಮುಂದಿನ ತಿಂಗಳಿನಿಂದ ಈ ಸದರಿ ವೇತನವನ್ನು ನೀಡುತ್ತೇವೆಂದು ಅವರ ಆದೇಶದಲ್ಲಿಯೇ ನೀಡಿದ್ದಾರೆ. ಇವರು ಅದನ್ನು ಏಕೆ ಬಿಡುಗಡೆ ಮಾಡುತ್ತಿಲ್ಲ. ಅದನ್ನು ಏನು ಸರ್ಕಾರ ಕೊಡುವುದಿಲ್ಲ. ಅದನ್ನು ವಿಶ್ವವಿದ್ಯಾನಿಲಯ ಕೊಡುವಂಥದ್ದು. ಅವತ್ತು ಇದ್ದಂತಹ ಕುಲಪತಿಗಳು ಮತ್ತು ರಿಜಿಸ್ಟ್ರಾರ್‌ರವರು ಅದನ್ನು ಗಮನದಲ್ಲಿ ಇಟ್ಟುಕೊಳ್ಳದೆ

ಮಾಡಿದ್ದಾರೆಯೇ? ಅತಿಥಿ ಉಪನ್ಯಾಸಕರಿಗೆ ರಾಜ್ಯ ಸರ್ಕಾರದವರು ನೀಡುತ್ತಾರೆಯೇ? ಅದನ್ನು ವಿಶ್ವವಿದ್ಯಾನಿಲಯದವರು ಕೊಡುವಂಥದ್ದು. ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ನಲವತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೇವಲ ಇಪ್ಪತ್ನಾಲ್ಕು ಸಾವಿರ ರೂಪಾಯಿಗಳನ್ನು ನೀಡುತ್ತಿದ್ದಾರೆ.

**(ಮುಂದು)**

(1161) 26.12.2022 12.20 LL-AK **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಮುಂದು...)**

ಇದು ಅನ್ಯಾಯ ಅಲ್ಲವೇ? ಇದನ್ನು ಪರಿಷ್ಕರಣೆ ಮಾಡಿ ಹೋಗಿರುವಂತಹ ಕುಲಪತಿಗಳು/ರಿಜಿಸ್ಟ್ರಾರ್‌ರವರು ಮಾಡಿರುವ ಆದೇಶವನ್ನು ಅನುಷ್ಠಾನ ಮಾಡುವುದಿಲ್ಲವೆಂದರೆ ಹೇಗೆ? ಜೊತೆಗೆ, ಅತಿಥಿ ಉಪನ್ಯಾಸಕರಿಗೆ ಸಾಂದರ್ಭಿಕ ರಜೆಯನ್ನು ಏತಕ್ಕಾಗಿ ಮಂಜೂರು ಮಾಡುವುದಿಲ್ಲ? ಅವರಿಗೆ ಆ ರಜೆಯನ್ನು ಕೊಡುತ್ತಿರೋ ಇಲ್ಲವೋ ಅದನ್ನು ಸ್ಪಷ್ಟಪಡಿಸಬೇಕು.

**ಡಾ: ಅಶ್ವತ್ಥ ನಾರಾಯಣ ಸಿ.ಎನ್.:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಅಲ್ಲಿ ಸರ್ಕಾರ ಅನುದಾನ ಕೊಡದೇ ಇದ್ದರೆ, ಸದರಿ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಿಗೆ ವೇತನವನ್ನು ಕೊಡುವುದಕ್ಕೆ ಆಗುವುದಿಲ್ಲ. ಅವರಿಗೆ ಸರ್ಕಾರದಿಂದಲೇ ವೇತನವನ್ನು ಕೊಡಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, ತಾವು ಅತಿಥಿ ಉಪನ್ಯಾಸಕರಿಗೆ ವೇತನ ಕೊಡುತ್ತಿದ್ದೀರಾ?

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಗೌರವ ಕೊಡುತ್ತೇವೆ. ಆದರೆ, ಈ ರೀತಿ ಉತ್ತರ ನೀಡಿದರೆ ಹೇಗೆ?

**ಡಾ: ವೈ.ಎ. ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದು ಪ್ರಶ್ನೋತ್ತರ ಅವಧಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಯಾವುದಾದರೂ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಿಗೆ ಸರ್ಕಾರ ವೇತನ ನೀಡುತ್ತಿದೆಯೇ? ಮಾನ್ಯ ಸಚಿವರು ಈ ರೀತಿ ಉತ್ತರ ನೀಡಿದರೆ ಹೇಗೆ?

**ಸಭಾಪತಿಯವರು:-** ಮಾನ್ಯ ಸಚಿವರೇ, ಅತಿಥಿ ಉಪನ್ಯಾಸಕರಿಗೆ ಕೊಡುವಂತಹ ವೇತನದಲ್ಲಿ ತಾರತಮ್ಯ ಆಗಬಾರದೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಹೌದು.

**ಡಾ: ಅಶ್ವತ್ಥ ನಾರಾಯಣ ಸಿ.ಎನ್.:-** ಮಾನ್ಯ ಸಭಾಪತಿಯವರೇ, ನನಗೆ ಉತ್ತರ ನೀಡುವುದಕ್ಕೆ ಅವಕಾಶ ಮಾಡಿಕೊಡಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದು.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಆಯಿತು, ನಾನು ನೋಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

**ಡಾ: ಅಶ್ವತ್ಥ ನಾರಾಯಣ ಸಿ.ಎನ್.:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಪ್ಪು ಮಾಹಿತಿ ಕೊಡಬಾರದೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಯಾರು?

**ಡಾ: ಅಶ್ವತ್ಥ ನಾರಾಯಣ ಸಿ.ಎನ್.:-** ಮಾನ್ಯ ಮರಿತಿಬ್ಬೇಗೌಡರೇ, ತಾವು ನಿರ್ದಿಷ್ಟವಾಗಿ ಹೇಳಿದ್ದೀರಾ? ಸರ್ಕಾರ ದುಡ್ಡು ಕೊಡುತ್ತಿಲ್ಲವೆಂದರೆ ಏನರ್ಥ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರ ಕೊಡುವುದಿಲ್ಲ, ಯೂನಿವರ್ಸಿಟಿ ಕೊಡುತ್ತಿದೆ ಎಂದು ಹೇಳಿದ್ದೇನೆ.

**ಸಭಾಪತಿಯವರು:-** ಎಲ್ಲದಕ್ಕೂ ಸರ್ಕಾರ ದುಡ್ಡು ಕೊಡುತ್ತದೆ.

**ಡಾ: ಅಶ್ವತ್ಥ ನಾರಾಯಣ ಸಿ.ಎನ್.:-** ಮಾನ್ಯ ಸಭಾಪತಿಯವರೇ, ಸರ್ಕಾರ ದುಡ್ಡು ಕೊಡದೇ ಯೂನಿವರ್ಸಿಟಿ ನಡೆಯುತ್ತದೆಯೇ?

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಪ್ರಶ್ನೋತ್ತರ ಅವಧಿ. ಇದು ಚರ್ಚೆಯಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಎರಡೂ ಹೇಳುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅತಿಥಿ ಉಪನ್ಯಾಸಕರಿಗೆ ಸರ್ಕಾರ ಕೊಡುತ್ತಿಲ್ಲವೆಂದು ಹೇಳಿದ್ದೇನೆ.

**ಡಾ: ಅಶ್ವತ್ಥ ನಾರಾಯಣ ಸಿ.ಎನ್.:-** ಮಾನ್ಯ ಸಭಾಪತಿಯವರೇ, ಅವರೂ ಸಹ ಅತಿಥಿ ಉಪನ್ಯಾಸಕರು ಎಂದು ಹೇಳಬೇಕಲ್ಲವೇ?

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಪ್ರಶ್ನೋತ್ತರ ಅವಧಿಯಲ್ಲಿ ಎಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎರಡೂ ಉತ್ತರವನ್ನು ಹೇಳುತ್ತಿದ್ದಾರೆ. ಸರ್ಕಾರ ದುಡ್ಡು ಕೊಡುತ್ತದೆ ಎಂದು ಹೇಳುತ್ತಾರೆ. ಮತ್ತೊಂದು ಬಾರಿ ಸರ್ಕಾರ ದುಡ್ಡು ಕೊಡುವುದಿಲ್ಲವೆಂದು ಹೇಳುತ್ತಾರೆ. ಇದರಲ್ಲಿ ಯಾವುದು ಸತ್ಯ ಎಂದು ಹೇಳಬೇಕು.

**ಸಭಾಪತಿಯವರು:-** ಎಲ್ಲದಕ್ಕೂ ಸರ್ಕಾರ ದುಡ್ಡು ಕೊಡುತ್ತದೆ. ಮಾನ್ಯ ಸಚಿವರೇ, ಇದರಲ್ಲಿ ತಪ್ಪು ಇದ್ದರೆ ಸರಿ ಮಾಡಿ. ಮುಂದಿನ ಪ್ರಶ್ನೆ ಶ್ರೀ ಕೆ. ಪ್ರತಾಪಸಿಂಹ ನಾಯಕ್‌ರವರದ್ದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ..

**ಸಭಾಪತಿಯವರು:-** ತಪ್ಪು ಇದ್ದರೆ ಸರಿ ಮಾಡಿ ಎಂದು ಹೇಳಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಲಿ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಮಾನ್ಯ ಸಚಿವರಿಗೆ ಇದೇ ರೀತಿ ಉತ್ತರ ನೀಡಿ ಎಂದು ಹೇಳುವುದಕ್ಕಾಗುವುದಿಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ:-** ಇದು ಪ್ರಶ್ನೋತ್ತರ ಅವಧಿ ಮಾನ್ಯ ಮರಿತಿಬ್ಬೇಗೌಡರವರೇ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅತಿಥಿ ಉಪನ್ಯಾಸಕರು ಧರಣಿ ಮಾಡುತ್ತಿದ್ದಾರೆ. ಜೊತೆಗೆ, ಈ ಪ್ರಶ್ನೆಗೆ ನಾನು ಮತ್ತೊಂದು ಉಪ ಪ್ರಶ್ನೆ ಕೇಳಬೇಕು.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಸಾಕು. ಈಗಾಗಲೇ ತಮಗೆ 10 ನಿಮಿಷ ಕಾಲಾವಕಾಶ ನೀಡಿದ್ದೇನೆ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯಲ್ಲಿ ಒಂದು ಪ್ರಶ್ನೆಗೆ ಎಷ್ಟು ಸಮಯ ಇದೆ? ಈ ರೀತಿ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಉಪನ್ಯಾಸಕ ಬಂಧುಗಳು ಧರಣಿ ಕುಳಿತಿದ್ದಾರೆ.

**ಸಭಾಪತಿಯವರು:-** ಆಯಿತು. ತಪ್ಪು ಇದ್ದರೆ, ಸರಿಪಡಿಸಿ ಎಂದು ನಾನು ಈಗಾಗಲೇ ಹೇಳಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಪರಿಷ್ಕೃತ ವೇತನವನ್ನು...

**ಸಭಾಪತಿಯವರು:-** ತಪ್ಪು ಇದ್ದರೆ ಸರಿಪಡಿಸಿ ಎಂದು ಹೇಳಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅದು ಆಗಲ್ಲ. ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿದ್ದಾರೆ. ಅದಕ್ಕೆ ಉತ್ತರ ಕೊಡಿಸಿಕೊಡಿ.

**ಸಭಾಪತಿಯವರು:-** ಒಂದು ಪ್ರಶ್ನೆಗೆ 10 ನಿಮಿಷ ಕಾಲಾವಕಾಶ ಕೊಡುವುದಕ್ಕೆ ಹೇಗೆ ಸಾಧ್ಯ? ಪ್ರಶ್ನೋತ್ತರ ಅವಧಿಯನ್ನು ಒಂದು ಘಂಟೆ ಕಾಲಾವಧಿಯಲ್ಲಿ ಮುಗಿಸಬೇಕೆಂದು ತಾವೇ ಹೇಳುತ್ತೀರಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅದು ಆಗಲ್ಲ. ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡಿಸಿಕೊಡಿ. ಅತಿಥಿ ಉಪನ್ಯಾಸಕರು ಧರಣಿ ಕುಳಿತಿದ್ದಾರೆಂದು ಅವರು ಹೇಳುತ್ತಿದ್ದಾರೆ.

**ಸಭಾಪತಿಯವರು:-** ನಾನು ಈಗಾಗಲೇ ಅದನ್ನು ಹೇಳಿದ್ದೇನೆ. ಆದರೆ, ಹೀಗೆಯೇ ಉತ್ತರ ನೀಡಬೇಕೆಂದು ನಾನು ಮಾನ್ಯ ಸಚಿವರಿಗೆ ಹೇಳುವುದಕ್ಕಾಗುವುದಿಲ್ಲ. ಆಯಿತು. ಮಾನ್ಯ ಸಚಿವರೇ, ತಪ್ಪನ್ನು ಸರಿಪಡಿಸುತ್ತೇವೆಂದು ತಮ್ಮ ಉತ್ತರವನ್ನು ಹೇಳಿ.

**ಡಾ: ಅಶ್ವತ್ಥ ನಾರಾಯಣ ಸಿ.ಎನ್.:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪರಿಷ್ಕೃತ ವೇತನವನ್ನು ಕೊಡಬೇಕೆಂದು ಏನು ಹೇಳುತ್ತಿದ್ದಾರೆ. ಅಲ್ಲಿನ ಹಣಕಾಸಿನ ಪರಿಸ್ಥಿತಿಯಲ್ಲಿ ಅದನ್ನು ಪರಿಷ್ಕರಣೆ ಮಾಡುವುದಕ್ಕಾಗುವುದಿಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಫೈನಾನ್ಸ್ ಕಮಿಟಿ ಹೇಳಿರುತ್ತದೆ. ಅದಕ್ಕೆ ನಾವು ಬದ್ಧರಾಗಿರುತ್ತೇವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:-** ಆಯಿತು. ಮುಂದಿನ ಪ್ರಶ್ನೆ ಶ್ರೀ ಕೆ. ಪ್ರತಾಪಸಿಂಹ ನಾಯಕ್‌ರವರದ್ದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ,..

**ಶ್ರೀ ಮಧು ಜಿ. ಮಾದೇಗೌಡ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಇಲ್ಲ ಆಗುವುದಿಲ್ಲ. ತಾವು ಎಷ್ಟು ಸಮಯ ಮಾತನಾಡುತ್ತೀರಿ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇವರು ಶಿಕ್ಷಣ ಸಚಿವರಲ್ಲ.

**ಸಭಾಪತಿಯವರು:–** ಆಯಿತು. ಇರಲಿ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಮರಿತಿಬ್ಬೇಗೌಡರವರೇ, ಇವೆಲ್ಲಾ ಕಥೆ ಹೇಳುವುದಕ್ಕೆ ಹೋಗಬೇಡಿ. ತಮಗೆ ಇಷ್ಟ ಬಂದ ಹಾಗೆ ಉತ್ತರ ನೀಡುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:–** ಇದು ಯಾವುದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಮರಿತಿಬ್ಬೇಗೌಡರವರು ಹೇಳಿರುವುದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ರೀತಿ ಉತ್ತರ ಕೊಡುವುದಕ್ಕೆ ಆಗುತ್ತದೆಯೇ? ಮಾನ್ಯ ಸಚಿವರು ಸರ್ಕಾರದ ಉತ್ತರ ನೀಡಿದ್ದಾರೆ. ಇದು ಏನು ಸರ್. ಇದು ಮೊಂಡುತನ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ದಯಮಾಡಿ ಕುಳಿತುಕೊಳ್ಳಿ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಪ್ರಶ್ನೋತ್ತರ ಅವಧಿ.

**ಸಭಾಪತಿಯವರು:–** ತಾವೆಲ್ಲರೂ ಏತಕ್ಕೆ ಮಾತನಾಡುತ್ತಿದ್ದೀರಿ? ನಾನು ಹೇಳುತ್ತಿದ್ದೇನಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಯಮಾಡಿ ಮಾನ್ಯ ಮರಿತಿಬ್ಬೇಗೌಡರವರು ಹೇಳಿರುವಂತಹ ಮಾತನ್ನು ಕಡತದಿಂದ ತೆಗೆಸಬೇಕು. ಹಾಳು ಮಾಡಿದ್ದಾರೆಂದರೆ ಏನರ್ಥ?

**ಸಭಾಪತಿಯವರು:–** ಅವರು ಹೇಳುವುದು ಕಡತಕ್ಕೆ ಹೋಗುವುದಿಲ್ಲ.

**ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ದಯಮಾಡಿ ಅದನ್ನು ಕಡತದಿಂದ ತೆಗೆಸಬೇಕು. ಅವರು ಅನಾವಶ್ಯಕವಾಗಿ ಮಾತನಾಡುತ್ತಿದ್ದಾರೆ. ಇದು ಭಂಡತನ.

**(ಗೊಂದಲ)**

**ಸಭಾಪತಿಯವರು:–** ಕಡತಕ್ಕೆ ಹೋಗಬಾರದೆಂದು ನಾನು ಈಗಾಗಲೇ ಹೇಳಿದ್ದೇನೆ. ಹಾಗಾಗಿ, ಅದು ಕಡತಕ್ಕೆ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣವನ್ನು ಹಾಳು ಮಾಡಿದ್ದಾರೆಂದರೆ ಏನರ್ಥ?

**(ಗೊಂದಲ)**

**ಸಭಾಪತಿಯವರು:–** ಇದು ಯಾವುದು ಕಡತಕ್ಕೆ ಹೋಗುವುದಿಲ್ಲ. ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಕೆ. ಪ್ರತಾಪಸಿಂಹ ನಾಯಕ್‌ರವರದ್ದು.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಏತಕ್ಕೆ ಅವರು ಈ ರೀತಿ ಮಾತನಾಡಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ಏನು ಮಾತನಾಡುತ್ತಿದ್ದಾರೆ. ಇದು ಸರಿಯಲ್ಲ. ಜವಾಬ್ದಾರಿಯುತ ಸದಸ್ಯರು ಈ ರೀತಿ ಮಾತನಾಡಿದರೆ ಹೇಗೆ. ಇದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಅವರು ಹೇಳಿದ ಹಾಗೆ ಕೇಳಬೇಕು ಎಂದರೆ, ಏನರ್ಥ?

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಹೇಳಬೇಕು.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ಎಲ್ಲರೂ ಏತಕ್ಕೆ ಮಾತನಾಡುತ್ತಿದ್ದೀರಿ? ಮಾನ್ಯ ಮರಿತಿಬ್ಬೇಗೌಡರೇ, ತಾವು ದಯಮಾಡಿ ಕುಳಿತುಕೊಳ್ಳಿ.

**(ಈ ಹಂತದಲ್ಲಿ ಮಾನ್ಯ ಮರಿತಿಬ್ಬೇಗೌಡರವರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರಿಗೆ ಮಾತನಾಡುವುದಕ್ಕೆ ಅವಕಾಶ ನೀಡಿ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಇಷ್ಟ ಬಂದ ಹಾಗೆ ಮಾಡುತ್ತಾರೆಯೇ?

**(ಗೊಂದಲ)**

**ಸಭಾಪತಿಯವರು:-** ದಯಮಾಡಿ ತಾವೆಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಾಯಿಗೆ ಬಂದ ಹಾಗೆ ಮಾತನಾಡುತ್ತಿದ್ದಾರೆ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಸದನದ ಬಾವಿಯಲ್ಲಿ ನಿಂತು ಮಾತನಾಡಬೇಡಿ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ರೀತಿ ಮಾತನಾಡಬಾರದು.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಏನು ಸರ್? He cannot take this House for a ride.

**ಸಭಾಪತಿಯವರು:-** ಏನು ಮಾಡುವುದಕ್ಕಾಗುವುದಿಲ್ಲ. ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಆ ರೀತಿ ದಭಾವಣೆ ಮಾಡಿ ಉತ್ತರ ಕೊಡಿಸುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಮರಿತಿಬ್ಬೇಗೌಡರೇ, ಈ ಭಂಡತನಕ್ಕೆ ಬಿದ್ದರೆ ಏನೂ ಸಿಗುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ನಾರಾಯಣಸ್ವಾಮಿಯವರೇ, ದಯಮಾಡಿ ಸ್ವಲ್ಪ ಕೇಳಿ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಮರಿತಿಬ್ಬೇಗೌಡರವರೇ, ತಮ್ಮ ಪ್ರಶ್ನೆಯನ್ನು ಸಮಾಧಾನವಾಗಿ ಕೇಳಿ, ಪರಿಹಾರ ತೆಗೆದುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಒಂದು ನಿಮಿಷ ಕೇಳಿ. ತಾವು ಮಾತನಾಡಬೇಡಿ. ಅವರು ಮಾತನಾಡಿದ್ದನ್ನು ಕಡತಕ್ಕೆ ಹಾಕಬೇಡಿ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಮರಿತಿಬ್ಬೇಗೌಡರವರು ಮಾತನಾಡಿದ್ದನ್ನು ನಡವಳಿಕೆಯಲ್ಲಿ ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ನಾನು ಹೇಳುವುದೇನೆಂದರೆ, ಸರ್ಕಾರಕ್ಕೆ ಹೀಗೆಯೇ ಉತ್ತರ ಕೊಡಿ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಅವರು ಸರ್ಕಾರದ ಇತಿ-ಮಿತಿಯೊಳಗೆ ಉತ್ತರ ನೀಡುತ್ತಾರೆ. ಯೂನಿವರ್ಸಿಟಿಗಾದರೂ ಅನುದಾನವನ್ನು ಸರ್ಕಾರವೇ ಕೊಡುತ್ತದೆ. ಅವರಿಗೂ ಸರ್ಕಾರವೇ ಕೊಡುತ್ತದೆ ಎಂದು ಹೇಳಿದ್ದಾರೆ. ಅದರಲ್ಲಿ ತಪ್ಪೇನಿದೆ. ಇದೇ ರೀತಿ ಮಾಡುವದಕ್ಕಾಗುವುದಿಲ್ಲ. ಸರಿಪಡಿಸಿ ಎಂದು ಹೇಳಿದ್ದೇನೆ. ಅದರಂತೆ, ಸರಿಪಡಿಸುವಂತಹ ಕೆಲಸವನ್ನು ಅವರು ಮಾಡಲಿ. ಆ ನಂತರ ಬೇಕಾದರೆ ಮಾನ್ಯ ಸಚಿವರು, ಮಾನ್ಯ ಮರಿತಿಬ್ಬೇಗೌಡರವರನ್ನು ಕರೆದು ಮಾತನಾಡಲಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದನ್ನು ಸರಿಪಡಿಸುವುದು ಯಾವಾಗ? ಅತಿಥಿ ಉಪನ್ಯಾಸಕರು ಎಷ್ಟು ದಿನದಿಂದ ಧರಣಿ ಮಾಡುತ್ತಿದ್ದಾರೆ?

**ಸಭಾಪತಿಯವರು:-** ಆಯಿತು. ತಪ್ಪಾಗಿದೆ. ಅದನ್ನು ಅವರು ಸರಿಪಡಿಸುತ್ತಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳುವಂಥದ್ದು ಮಾನ್ಯ ಸದಸ್ಯರ ಹಕ್ಕು.

**ಸಭಾಪತಿಯವರು:-** ಆಯಿತು. ಅದಕ್ಕೆ ಅವರು ಏನು ಕಳುಹಿಸಿಕೊಡುತ್ತಾರೋ ಅದನ್ನು ಕಳುಹಿಸಿಕೊಡಲಿ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳಲಿ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಆದರೆ, ಇದೇ ರೀತಿ ಉತ್ತರ ನೀಡಬೇಕೆಂದು ದಬಾವಣೆ ಮಾಡುವುದಕ್ಕೆ ಆಗುತ್ತದೆಯೇ?

**ಸಭಾಪತಿಯವರು:-** ಆಯಿತು. ನಾನು ಹೇಳುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದು ದಬಾವಣೆ ಅಲ್ಲ. ತಮ್ಮ ಪ್ರಶ್ನೆಗೆ ಉತ್ತರ ಬರಲಿಲ್ಲವೆಂದರೆ, ಇನ್ನೇನು ಮಾತನಾಡುತ್ತಾರೆ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಒಂದು ನಿಮಿಷ ನಾನು ಹೇಳುತ್ತೇನೆ ಕೇಳಿ. ಮಾನ್ಯ ನಾರಾಯಣಸ್ವಾಮಿಯವರು ದಯಮಾಡಿ ಕುಳಿತುಕೊಳ್ಳಿ. ಇದು ಯಾವುದೂ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಮರಿತಿಬ್ಬೇಗೌಡರವರು ಮಾತನಾಡಿದ್ದನ್ನು ನಡವಳಿಕೆಯಲ್ಲಿ ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಇದು ಏನು ಧರ್ಮಶಾಲೆಯೇ? ಮಾನ್ಯ ಮರಿತಿಬ್ಬೇಗೌಡರವರೇ, ತಮಗೆ ಸ್ವಲ್ಪವಾದರೂ ತಿಳುವಳಿಕೆ ಬೇಡವೇ? ನಾನು ತಮಗೆ ಅಲೋ ಮಾಡಿರುವುದಿಲ್ಲ. ದಯಮಾಡಿ, ತಮ್ಮ ಪ್ರಶ್ನೆಯನ್ನು ಮುಗಿಸಬೇಕೆಂದು ಹೇಳಿದ್ದೇನೆ. ಇದೇ ರೀತಿ ಉತ್ತರ ಕೊಡಬೇಕೆಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಉತ್ತರ ಬಂದಿಲ್ಲವೆಂದರೆ, ಅವರು ಮತ್ತೊಮ್ಮೆ ಕೇಳಲಿ. ಮಾನ್ಯ ಪ್ರತಾಪ ಸಿಂಹ ನಾಯಕರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಬಂದಿಲ್ಲವೆಂದರೆ, ಮತ್ತೊಮ್ಮೆ ಪ್ರಶ್ನೆ ಕೇಳಲಿ. ಆದರೆ, ಹೀಗೆಯೇ ಉತ್ತರ ನೀಡಬೇಕೆಂದು ಗಲಾಟೆ ಮಾಡಿದರೆ ಸದನ ನಡೆಸುವುದು ಹೇಗೆ? ಇದು ಯಾವ ಅರ್ಥ?

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈಗ ನನ್ನನ್ನು ಏನು ಮಾಡಬೇಕೆಂದು ಹೇಳುತ್ತೀರಿ? ಅದನ್ನು ಹೇಳಿ.

**(ಗೊಂದಲ)**

**ಶ್ರೀ ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಸರ್ಕಾರದ ಯೂನಿವರ್ಸಿಟಿಗಳಲ್ಲಿ ಈ ರೀತಿ ತಾರತಮ್ಯ ಮಾಡಿದರೆ ಹೇಗೆ? ಒಂದು ಯೂನಿವರ್ಸಿಟಿಯಲ್ಲಿ ಒಂದು ರೀತಿ, ಇನ್ನೊಂದು ಯೂನಿವರ್ಸಿಟಿಯಲ್ಲಿ ಮತ್ತೊಂದು ರೀತಿ ಮಾಡಿದರೆ ಹೇಗೆ?

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕೇಳಿ. ನಾನು ಹೇಳುವುದನ್ನು ತಾವು ಯಾರೂ ಕೇಳುವುದೇ ಇಲ್ಲ. ನಾನು ಹೇಳುವುದೇನೆಂದರೆ, ಇದನ್ನು ಮಾನ್ಯ ಮರಿತಿಬ್ಬೇಗೌಡರವರು ತಿಳಿದುಕೊಳ್ಳಬೇಕು. ಮಾನ್ಯ ಸಚಿವರಿಗೆ ಇಂತಹ ರೀತಿಯಲ್ಲಿಯೇ ಉತ್ತರ ಕೊಡಿ ಎಂದು ನಾನು

ಹೇಳುವುದಕ್ಕೆ ಆಗುವುದಿಲ್ಲ. ಅವರು ಉತ್ತರ ಕೊಡುತ್ತಾರೆ. ಒಂದು ವೇಳೆ ಅದು ತಪ್ಪಿದ್ದರೆ, ಅನಂತರ ಅವರ ಜೊತೆ ಕುಳಿತುಕೊಂಡು ಚರ್ಚೆ ಮಾಡಿ ಸರಿಪಡಿಸಿಕೊಳ್ಳಿ. Rectify ಮಾಡಬೇಕೆಂದು ಹೇಳಿದ್ದೇನೆ. ಮತ್ತೇನು ಮಾಡಬೇಕೆಂದು ಹೇಳಬೇಕು. ಮಾನ್ಯ ಪ್ರತಾಪಸಿಂಹ ನಾಯಕ್‌ರವರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಕೆ. ಪ್ರತಾಪಸಿಂಹ ನಾಯಕ್:-** ಮಾನ್ಯ ಸಭಾಪತಿಯವರೇ, ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:೮೦೨ನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರಲ್ಲಿ ಕೇಳಬಯಸುತ್ತೇನೆ.

**(ಗೊಂದಲ)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಮರಿತಿಬ್ಬೇಗೌಡರವರು ಮಾನ್ಯ ಉನ್ನತ ಶಿಕ್ಷಣ ಸಚಿವರ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಏನು ಸರ್?

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೊಬ್ಬರು ಸದನದ ಬಾವಿಯಲ್ಲಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಅದಕ್ಕೆ ಏನು ಮಾಡಬೇಕೆಂದು ಹೇಳುತ್ತೀರಿ ನೀವು? ಸದನದ ಬಾವಿಯಿಂದ ಹೊರಗೆ ಬನ್ನಿ ಎಂದು ಈಗಾಗಲೇ ಹೇಳಿದ್ದೇನೆ. ಅದನ್ನು ಅವರು ಕೇಳಬೇಕಲ್ಲವೇ? ಅವರನ್ನು ಹೊರಗೆ ಹಾಕಬೇಕೆಂದು ಹೇಳಬೇಕೇ? ಮಾನ್ಯ ವಿರೋಧ ಪಕ್ಷದ ನಾಯಕರೇ, ಏನು ಮಾಡಬೇಕೆಂದು ನೀವೇ ಹೇಳಿ ನೋಡೋಣ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸದಸ್ಯರ ಪ್ರಶ್ನೆಗೆ ಸರಿಯಾದ ಉತ್ತರ ಕೊಡಿಸಿ. ಅದರ ಬದಲಾಗಿ, ನಾವು ಬೇರೆ ಏನು ಕೇಳುತ್ತಿಲ್ಲ.

**ಸಭಾಪತಿಯವರು:-** ನೀವು ಕೇಳುತ್ತಿಲ್ಲ. ನೀವೇ ಪ್ರಶ್ನೆ ಕೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳುತ್ತಿಲ್ಲ. ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿದ್ದಾರೆ.

**ಸಭಾಪತಿಯವರು:-** ಇದೇ ರೀತಿ ಉತ್ತರ ನೀಡಿ ಎಂದು ನಾನು ಹೇಳುವುದಕ್ಕಾಗುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸದಸ್ಯರಿಗೆ ಪ್ರತಿಭಟನೆ ಮಾಡುವುದಕ್ಕೆ ಮತ್ತು ಸದನದ ಬಾವಿಗೆ ಬರುವುದಕ್ಕೆ ಹಕ್ಕಿದೆ. ಬರಬೇಡಿ ಎಂದು ಅವರಿಗೆ ಹೇಳುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:-** ಅದನ್ನು ಅವರು ಮಾಡಲಿ. ಹಾಗಾದರೆ, ಸದನದ ಬಾವಿಯಲ್ಲಿ ನಿಂತು ಏನು ಬೇಕಾದರೂ ಮಾತನಾಡಬಹುದೇ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರು ಸದನದ ಬಾವಿಯಲ್ಲಿ ನಿಂತು ಪ್ರತಿಭಟನೆ ಮಾಡುತ್ತಲೇ ಮಾತನಾಡುತ್ತಾರೆ.

**ಸಭಾಪತಿಯವರು:-** ಅದು ಹೇಗೆ ನೀವು ಮಾತನಾಡುತ್ತೀರಿ? ಅದನ್ನು ಹೇಳಿ ನೋಡೋಣ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಮಾತನಾಡುವ ಪ್ರಶ್ನೆಯಲ್ಲ. ಮಾನ್ಯ ಸದಸ್ಯರು ಪದವೀಧರರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ.

**ಸಭಾಪತಿಯವರು:-** ಅದನ್ನು ಹೇಳಿದ್ದೇವೆ. ಅದನ್ನು ಹೇಳಿದಾಗ ಅವರು ಕೇಳಬೇಕಲ್ಲವೇ? ಇನ್ನೇನು ಮಾಡಬೇಕು? ಸದನ ನಡೆಸಬೇಕೋ, ಬೇಡವೋ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಹಕ್ಕಿನ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ. ಅವರ ಬಗ್ಗೆ ನನಗೆ ಗೌರವ ಇದೆ. ಆದರೆ, ಅವರ ಜವಾಬ್ದಾರಿಯ ಬಗ್ಗೆಯೂ ಅವರು ಮಾತನಾಡಬೇಕಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಕೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪದವೀಧರರ ಕ್ಷೇತ್ರದಿಂದ ಆರಿಸಿ ಬಂದಂತಹವರು.

**ಶ್ರೀ ಮಧು ಜಿ. ಮಾದೇಗೌಡ:-** ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು:-** ತಾವು ಏತಕ್ಕೆ ಮಾತನಾಡುತ್ತೀರಿ? ದಯಮಾಡಿ ತಾವು ಕುಳಿತುಕೊಳ್ಳಿ.

**ಶ್ರೀ ಮಧು ಜಿ. ಮಾದೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಸದನದ ಬಾವಿಗೆ ಬರಬೇಕಾಗುತ್ತದೆ.

**ಸಭಾಪತಿಯವರು:-** ಅದು ತಮಗೆ ಬಿಟ್ಟ ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳುವುದೇನೆಂದರೆ,..

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ಸದನದ ಸಮಯವನ್ನು ಹಾಳು ಮಾಡುವಂತಹ ವ್ಯಕ್ತಿತ್ವ ಅದು.

**(ಗೊಂದಲ)**

**ಸಭಾಪತಿಯವರು:-** ನೀವೆಲ್ಲರೂ ಸೇರಿ ಈ ಸದನದ ಮರ್ಯಾದೆ ತೆಗೆಯುತ್ತೀರಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಮಧು ಜಿ. ಮಾದೇಗೌಡರವರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸಂಪೂರ್ಣ ಶಿಕ್ಷಣ ವ್ಯವಸ್ಥೆ ಕುಸಿಯುತ್ತಿರುವಾಗ ಸದನದ ಸಮಸ್ಯೆ...

**ಸಭಾಪತಿಯವರು:-** ಒಂದು ನಿಮಿಷ ನನ್ನ ಮಾತನ್ನು ಕೇಳಿ. ಈಗ ಮಂತ್ರಿಗಳು... (ಗೊಂದಲ) ಮಾನ್ಯ ಮರಿತಿಬ್ಬೇಗೌಡರವರೇ, ದಯಮಾಡಿ ಕುಳಿತುಕೊಳ್ಳಿ. ತಾವೊಬ್ಬರೇ ಈ ಸದನದಲ್ಲಿ ಇದ್ದೀರಾ?

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಸೀನಿಯರ್ ಮೆಂಬರ್ ಆಗಿದ್ದೀರಿ. ತಮಗೆ ಗೊತ್ತಾಗುವುದಿಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಎಲ್ಲರೂ ದಯಮಾಡಿ ಕೇಳಿ. (ಗೊಂದಲ) ಮಾನ್ಯ ನಾರಾಯಣಸ್ವಾಮಿಯವರೇ, ಜವಾಬ್ದಾರಿ ಸ್ಥಾನದಲ್ಲಿರುವ ತಾವೇ ಈ ರೀತಿ ಮಾಡಿದರೆ ಹೇಗೆ?

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಸರ್...

**ಸಭಾಪತಿಯವರು:-** ಹಾಗಾದರೆ, ನೀವೇ ಮಾತನಾಡಿ. ಅದು ಏನು ಉತ್ತರ ಹೇಳುತ್ತೀರೋ ಹೇಳಿ. ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ.

**(ಗೊಂದಲ)**

**(ಈ ಹಂತದಲ್ಲಿ ಡಾ: ಡಿ. ತಿಮ್ಮಯ್ಯನವರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಮ್ಮ ಗಮನಕ್ಕೂ ತಂದಿದ್ದೆವು.

**ಸಭಾಪತಿಯವರು:-** ನಾನು ಹೇಳುವುದನ್ನು ಕೇಳುವುದಿಲ್ಲವೆಂದರೆ ಹೇಗೆ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾನಿಲಯಗಳಲ್ಲಿ ಉಪ ಕುಲಪತಿಗಳ ನೇಮಕ ವಿಚಾರದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತಂದಿದ್ದೇವೆ ಮತ್ತು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಕಾಲಾವಕಾಶವನ್ನು ಸಹ ಕೇಳಿದ್ದೇವೆ. ತಾವು ಇನ್ನು ಸಹ ನಮಗೆ ಅವಕಾಶ ನೀಡಿರುವುದಿಲ್ಲ.

**ಸಭಾಪತಿಯವರು:-** ಸದರಿ ವಿಷಯ ಪ್ರಸ್ತಾಪ ಮಾಡಲು ತಮಗೆ ಅವಕಾಶ ನೀಡುತ್ತೇನೆ. ಎಲ್ಲದಕ್ಕೂ ಸಮಯಾವಕಾಶ ಬೇಕಲ್ಲವೇ? ತಮಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಅದರಂತೆ, ಅವಕಾಶ ಕೊಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಶಿಕ್ಷಣ ಕ್ಷೇತ್ರದಲ್ಲಿ ಇರತಕ್ಕಂತಹ ವ್ಯವಸ್ಥೆ ಕುಸಿದು ಬಿದ್ದಿದೆ. ಅದರ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಎತ್ತಿದ್ದಾರೆ.

**ಸಭಾಪತಿಯವರು:-** ಎಲ್ಲರೂ ಈ ರೀತಿ ಮಾಡಿದರೆ ಹೇಗೆ? ಇದನ್ನು ಸದನ ಎನ್ನುತ್ತಾರೆಯೇ? ಇದನ್ನು ನೋಡಿದ ಜನ ನಗುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಸಚಿವರು ನೀಡಿದ ಉತ್ತರ ಸಮಾಧಾನವಾಗಿಲ್ಲದಿದ್ದರೆ, ಅವರು ಮಾತನಾಡುವುದಕ್ಕೆ ತಾವು ಸೂಚನೆ ನೀಡಬೇಕು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ಇದನ್ನು ಹೇಳಿದ್ದೇನೆ. ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ನೀಡಿದ ಉತ್ತರ ಸರಿಯಿಲ್ಲವೆಂದರೆ, ಅವರ ಜೊತೆ ಕುಳಿತು ಮಾತನಾಡಿ ಸರಿಪಡಿಸಿಕೊಳ್ಳಿ ಎಂದು ಹೇಳಿದ್ದೇನೆ. ನಾನು ಬೇರೆ ಏನು ಹೇಳಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರನ್ನು ಕರೆದು ಮಾತನಾಡಿ ಎಂದು ತಾವು ಪೀಠದಿಂದ ನಿರ್ದೇಶನ ನೀಡಿ ಆಯಿತು. ಹಾಗಾದರೆ, ಇವರಿಗೆ ಮತ್ತೇನು ಮಾಡಬೇಕು?

**ಸಭಾಪತಿಯವರು:-** ತಪ್ಪಾಗಿದ್ದರೆ ಸರಿಪಡಿಸಿ ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಹಕ್ಕಿನ ಬಗ್ಗೆ ಮಾತನಾಡುತ್ತಾರೆ. ಆದರೆ, ಜವಾಬ್ದಾರಿ ಬಗ್ಗೆ ಅವರು ಯೋಚನೆ ಮಾಡಬೇಕಲ್ಲವೇ?

**ಸಭಾಪತಿಯವರು:-** ದಯಮಾಡಿ ಎಲ್ಲ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಬನ್ನಿ. ಇಲ್ಲವಾದರೆ, ನಾನು ಯಾವುದನ್ನೂ ಅಲೋ ಮಾಡುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಸದನದ ಬಾವಿಯಲ್ಲಿ ನಿಂತು ಮಾತನಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡಿದ್ದನ್ನು ನಡವಳಿಕೆಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪ್ರತಿಭಟನೆ ಮಾಡುತ್ತಿದ್ದರೆ ರೆಕಾರ್ಡ್‌ಗೆ ಹೋಗುವುದು ಬೇಡ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಮ್ಮ ಆದೇಶ ಪಾಲನೆ ಮಾಡುತ್ತೇನೆಂದು ಅವರು ಹೇಳಲಿ.

**(ಗೊಂದಲ)**

**(ಮುಂದು...)**

(1162) 26.12.2022 12.30 YL-AK **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ನಾಲ್ಕು ಬಾರಿ ಆಯ್ಕೆಗೊಂಡು ಈ ಸದನಕ್ಕೆ ಬಂದಿದ್ದು, ಈ ಸದನದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬು ತಿಳುವಳಿಕೆ ಬೇಡವೇ? ಈಗಾಗಲೇ ಸುಮಾರು 22 ವರ್ಷಗಳು ಕಳೆದಿದ್ದು, ಬಾವಿ ಒಳಗೆ ಹೋಗಿ ಕುಳಿತುಕೊಂಡರೆ ಹೇಗೆ? ಅವರು ತಿಳಿದುಕೊಳ್ಳಬೇಕು. ನಾನು ಮಾನ್ಯ ಸಚಿವರಿಗೆ ಇದೇ ರೀತಿ ಉತ್ತರ ನೀಡಿ ಎಂದು ಹೇಳುವುದಕ್ಕಾಗುತ್ತದೆಯೇ? ತಪ್ಪು ಇದ್ದರೆ ಸರಿಪಡಿಸಿಕೊಳ್ಳಿ ಎಂದು ಹೇಳಿದ್ದೀನಿ. ಈ ರೀತಿ ಮಾಡಿದರೆ ಹೇಗೆ? ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಹೇಳಿದ ಮಾತನ್ನು ಒಪ್ಪಿಕೊಳ್ಳುತ್ತೇವೆ. ಅಲ್ಲಿ ಏನಾಗಿದೆಯೇಂದರೆ, ಅದನ್ನು ಪರಿಷ್ಕರಣೆ ಮಾಡುವುದಿಲ್ಲ ಎಂದು ಹೇಳಿದ್ದಾರೆ ಅಲ್ಲವೇ? ಹಾಗಾಗಿ ಅವರ ಮನವಿಯೇನೆಂದರೆ, ಅದನ್ನು ಪರಿಷ್ಕರಣೆ ಮಾಡಿ ಎಂಬುವಂಥದ್ದಾಗಿದೆ.

**ಸಭಾಪತಿಯವರು:-** ಒಂದು ನಿಮಿಷ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರು ನ್ಯಾಯಯುತವಾಗಿ ಕೇಳುತ್ತಿದ್ದು, ವಿರೋಧ ಪಕ್ಷದ ಸದಸ್ಯರೆಲ್ಲರ ಸಮ್ಮತಿ ಸಹ ಅದಕ್ಕೆ ಇದೆ.

**ಸಭಾಪತಿಯವರು:-** ಹಾಗೆಂದು ಪ್ರತಿ ಸಲ ಬಾವಿಗೆ ಹೋಗಿ ನಿಂತರೆ ಹೇಗೆ?

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಹಾಗಾಗಿ ಅದನ್ನು ಪರಿಷ್ಕರಣೆ ಮಾಡಬೇಕಾಗಿದ್ದು, ಸರಿ ಮಾಡಲಿ ಎಂದು ನಾವು ಕೇಳುತ್ತಿದ್ದೇವೆ.

**ಸಭಾಪತಿಯವರು:-** ಆ ರೀತಿ ನಾನು ಹೇಗೆ ಹೇಳಲು ಸಾಧ್ಯ? ಆ ರೀತಿ ನಾನು ಹೇಳಲು ಆಗುವುದಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಹೇಳುತ್ತಿಲ್ಲ. ತಾವು ಹೇಳುತ್ತಿರುವುದು ಸರಿಯಾಗಿದೆ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್ ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ತಾವು ಹೇಳುವುದನ್ನು ಒಪ್ಪಿಕೊಳ್ಳುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಪೀಠಾಧ್ಯಕ್ಷರು ದಯವಿಟ್ಟು ಸಿಟ್ಟು ಮಾಡಿಕೊಳ್ಳಬೇಡಿ.

**ಸಭಾಪತಿಯವರು:-** ಎಲ್ಲದಕ್ಕೂ ಒಂದು ಲಿಮಿಟ್ ಇರುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು "ಅತಿಥಿ ಉಪನ್ಯಾಸಕರ ಪರಿಷ್ಕರಣಾ ವೇತನವನ್ನು ಒಂದು ತಿಂಗಳು ನೀಡಿ, ಮತ್ತೆ ವಾಪಸ್ಸು ತೆಗೆದುಕೊಂಡಿದ್ದಾರೆ" ಎಂದು ಹೇಳುತ್ತಿರುವುದು. ಇದು ಯಾವ ನ್ಯಾಯ ನೀವೇ ಹೇಳಿ? ಆ ಸಭೆಯಲ್ಲಿ ಆರ್ಥಿಕ ಇಲಾಖೆಯವರು ಸಹ ಭಾಗವಹಿಸಿದ್ದರು. ತದನಂತರ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕಾರಣವೇನು? ಸರ್ಕಾರ ಏನು ಅವರಿಗೆ ವೇತನ ನೀಡುವುದಿಲ್ಲ, ಯೂನಿವರ್ಸಿಟಿಯವರು ವೇತನ ನೀಡುವುದು. ಆ ಮೂರು ಜನ ಸದಸ್ಯರುಗಳು ಸಹ ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಾಗಿದ್ದಾರೆ.

**ಸಭಾಪತಿಯವರು:-** ನಾನು ಸಹ ಆ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಆ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೀರಿ, ಇವತ್ತು ಪೀಠದಲ್ಲಿ ಕುಳಿತುಕೊಂಡಿದ್ದೀರಿ. ಈ ಸದನದಲ್ಲಿ 48ನೇ ವರ್ಷಕ್ಕೆ ಕಾಲಿಡುತ್ತಿದ್ದೀರಿ. ಹಾಗಾಗಿ ತಾವು ಪರಿಹಾರ ನೀಡಲಿಲ್ಲವೆಂದರೆ, ಯಾರು ಪರಿಹಾರ ನೀಡುತ್ತಾರೆ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ಮಾನ್ಯ ಸಚಿವರು ಆಗುವುದಿಲ್ಲ ಎಂದು ಹೇಳಿದ್ದು, ನಾನು ಸಹ ಅದಕ್ಕೆ ಯೂನಿವರ್ಸಿಟಿಯವರನ್ನು ಕರೆಸಿ ಮಾತನಾಡಿ ಸರಿಪಡಿಸಿ ಎಂದು ಹೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಯೂನಿವರ್ಸಿಟಿಯವರು ಒಪ್ಪುತ್ತಿಲ್ಲ ಎಂದು ಹೇಳಿದ್ದರು. ಸದಸ್ಯರುಗಳು ಮತ್ತು ಸಚಿವರು

ಕುಳಿತು ಮಾತನಾಡಿ ಏನಾದರೂ ಸಲಹೆಯನ್ನು ಹುಡುಕಿ ಎಂದು ಹೇಳಿದ್ದೇನೆ. ಮತ್ತೇನಾದರೂ ಇದ್ದರೆ ನನ್ನ ಹತ್ತಿರ ಬನ್ನಿ, ನಾನು ಆಮೇಲೆ ಮಾತನಾಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)**

**ಡಾ॥ ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಬಾವಿಯಲ್ಲಿ ನಿಂತು ಮಾತನಾಡುವ ಹಾಗಿಲ್ಲ.

**ಸಭಾಪತಿಯವರು:-** ಅವರು ಮಾತನಾಡುವುದು ಕಡತಕ್ಕೆ ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಬಾವಿಯಿಂದ ಹೊರಗೆ ಬಂದು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನ್ನ ವಿಚಾರ,...

**ಶ್ರೀ ಸಿ.ಎನ್.ಅಶ್ವಥ್ ನಾರಾಯಣ (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಇಲಾಖೆ):-** ಮಾನ್ಯ ಸಭಾಪತಿಯವರೇ, ನಾನು ಈ ವಿಷಯದ ಬಗ್ಗೆ ಇನ್ನು ಹೆಚ್ಚಿಗೆ ಚರ್ಚೆ ಮಾಡಿದರೆ, ಅಲ್ಲಿರುವ ಉಪನ್ಯಾಸಕರು ಇರುವುದಿಲ್ಲ. ಹಾಗಾಗಿ ಮಾನ್ಯ ಸದಸ್ಯರು ಬೇಕಂತಲೇ ಉಪನ್ಯಾಸಕರ ಹಿತ ಕಾಪಾಡಲು ಅವರು ಮಾತನಾಡುತ್ತಿದ್ದಾರೆಯೇ ಅಥವಾ ಅವರಿಗೆ ತೊಂದರೆ ತಂದು ಕೊಡಲು ಮಾತನಾಡುತ್ತಿದ್ದಾರೆಯೇ ಗೊತ್ತಿಲ್ಲ. ಮತ್ತೇನಾದರೂ ಹೆಚ್ಚಿಗೆ ಅವರು ಮಾತನಾಡಿದರೆ ಸವಿಸ್ತಾರವಾಗಿ ಈ ವಿಷಯದ ಬಗ್ಗೆ ನಾನು ಮಾತನಾಡಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡಲಿ, ಅವರಿಗೆ ಅವಕಾಶ ನೀಡಿ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಳ್ಳೆಯದೇ ಅಲ್ಲವೇ? ನಾವು ಸಹ ಅದನ್ನೇ ಕೇಳುತ್ತಿರುವುದು. ಮಾನ್ಯ ಸಚಿವರು ಮಾತನಾಡಬೇಕು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಮಾನ್ಯ ಸಚಿವರಾಗಿದ್ದು, ಅವರು ಮಾತನಾಡಲೇ ಬೇಕು.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ದಯವಿಟ್ಟು ಕ್ವಾಲಿಟಿ ಎಜುಕೇಷನ್ ಬಗ್ಗೆ ಮಾತನಾಡಲಿ. **(ಗೊಂದಲ)** ಮಕ್ಕಳ ಹಿತ ದೃಷ್ಟಿಯಿಂದ, ಸಂಶೋಧನಾ, ಗುಣಮಟ್ಟದ ದೃಷ್ಟಿಯಿಂದ ದಯವಿಟ್ಟು ಬೆಳಕು ಚೆಲ್ಲಬೇಕು. ಅದು ಸಹ ಚರ್ಚೆಯಾಗಬೇಕು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಒಂದು ನಿಮಿಷ. ತಾವೆಲ್ಲರೂ ಎಷ್ಟು ಮಾತನಾಡುತ್ತೀರಿ. ಈ ರೀತಿ ಮಾಡಿದರೆ ಸದನವನ್ನು ಹೇಗೆ ನಡೆಸಬೇಕು?

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಸುಮಾರು ರೂ.11,000, ರೂ. 13,000 ಎಂದು ಇತ್ಯಾದಿಯಾಗಿ ನೀಡುತ್ತಿದ್ದರು. ಇತ್ತೀಚೆಗೆ ಅದು ರೂ.28,000/- ರೂ.30,000 ಆಗಿದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅದಲ್ಲ ಪ್ರಶ್ನೆ, ಅವರು ಕುಳಿತುಕೊಳ್ಳಲಿ.

**ಶ್ರೀ ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಮಾನ್ಯ ಶಶೀಲ್ ಜಿ.ನಮೋಶಿಯವರಿಗೆ ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ಅವರೇನು ಸಭಾಪತಿಯವರೇ?

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ತಾವು ಅನುಮತಿ ನೀಡಿದ್ದೀರಿ. ಮಾನ್ಯ ಮರಿತಿಬ್ಬೇಗೌಡರವರು ಯಾರು ನನಗೆ ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ.

**ಶ್ರೀ ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಏನು ಹೇಳುತ್ತಿದ್ದಾರೆ? ಅವರು ಕುಳಿತುಕೊಳ್ಳಲಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಶೀಲ್ ಜಿ.ನಮೋಶಿಯವರು ಕುಳಿತುಕೊಂಡು ಮಾನ್ಯ ಸಚಿವರಿಗೆ ಮಾತನಾಡಲು ಬಿಡಲಿ.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ದೇಶದ ಜನರಿಗೆ ಗೊತ್ತಾಗಲಿ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಯೂನಿವರ್ಸಿಟಿಗಳಲ್ಲಿ ಒಂದು ಸಾವಿರದ ಐದು ನೂರು ರೂಪಾಯಿ,...

**ಸಭಾಪತಿಯವರು:-** ಮಾನ್ಯ ಶಶೀಲ್ ಜಿ.ನಮೋಶಿಯವರೇ, ತಾವು ಕುಳಿತುಕೊಳ್ಳಿ. ಮಾನ್ಯ ಸಚಿವರು ಏತಕ್ಕೆ ಇರುವುದು. ಅವರು ಮಾತನಾಡುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಲಿಖಿತ ಮೂಲಕ ಪ್ರಶ್ನೆಗಳನ್ನು ಕೈಗೊಳ್ಳಲಾಗುವುದು.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಯು.ಬಿ.ವೆಂಕಟೇಶ್‌ರವರನ್ನು ಹೊರತುಪಡಿಸಿ, ಉಳಿದ ಕಾಂಗ್ರೆಸ್ ಸದಸ್ಯರು ಮತ್ತು ಮಾನ್ಯ ಮರಿತಿಬ್ಬೇಗೌಡರವರು ಬಾವಿಗೆ ಬಂದು ಧರಣಿ ನಿರತರಾಗಿದರು ಹಾಗೂ ಮಾನ್ಯ ಮರಿತಿಬ್ಬೇಗೌಡರವರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

ಆ) **<u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>**

**ಅ) ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 26ನೇ ಡಿಸೆಂಬರ್ 2022 ಸಮೂಹ-1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 162 ಪ್ರಶ್ನೆಗಳ ಪೈಕಿ 74 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಆ) ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 19ನೇ ಡಿಸೆಂಬರ್ 2022 ಸಮೂಹ-1ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಒಟ್ಟು 134 ಪ್ರಶ್ನೆಗಳ ಪೈಕಿ 99 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:- ಮಂಡಿಸಲಾಯಿತು**

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**೦೩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಬಿ.ಇ. ಇಂಜಿನಿಯರ್ ಕಾಲೇಜಿನಲ್ಲಿ ಪ್ರವೇಶ ಪಡೆಯುವ ಸಂದರ್ಭದಲ್ಲಿ ಖಾಸಗಿ ಕಾಲೇಜುಗಳು ಹೆಚ್ಚಿನ ಶುಲ್ಕ ಪಡೆಯುತ್ತಿರುವ ಬಗ್ಗೆ.**

*****

**ಡಾ॥ ತಳವಾರ ಸಾಬಣ್ಣ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಪಿ.ಯು.ಸಿ. ಮುಗಿಸಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಾಗೂ ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ತಮ್ಮ ಮುಂದಿನ ವಿದ್ಯಾಭ್ಯಾಸಕ್ಕಾಗಿ ಬಿ.ಇ. ಇಂಜಿನಿಯರ್ ಕಾಲೇಜಿಗೆ ಪ್ರವೇಶ ಪಡೆಯುವ ಸಲುವಾಗಿ ಸಿ.ಇ.ಟಿ. ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಕೊಟ್ಟು ಅದರ ಮುಖಾಂತರ ಪಡೆದ ಅಂಕಗಳ ಆಧಾರದ ಮೇಲೆ ಕೌನ್ಸಿಲಿಂಗ್ ಆದ ನಂತರ ಅವರಿಗೆ ಹಂಚಿಕೆಯಾದ ಇಂಜಿನಿಯರ್ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಹೋದಾಗ ಕಾಲೇಜಿನವರು ವಿದ್ಯಾರ್ಥಿಗಳ ಬಳಿ ಸರ್ಕಾರದ ನಿಗದಿತ ಅಂದಾಜು ೩೦,೦೦೦ ರೂಪಾಯಿ ಮಾತ್ರ ಕಾಲೇಜು ಶುಲ್ಕವನ್ನು ಪಡೆಯಬೇಕು. ಆದರೆ ಎಲ್ಲಾ ಕಾಲೇಜಿನವರು ನಿಮಗೆ ಸರ್ಕಾರದಿಂದ ಸ್ಕಾಲರ್‌ಶಿಪ್ ಹಾಗೂ ಇತರ ಸೌಲಭ್ಯಗಳು ಸಿಗುತ್ತವೆ ಅದಕ್ಕೆ ನೀವು ಮುಂಚಿತವಾಗಿಯೇ ಇತರ ಎಲ್ಲಾ ಶುಲ್ಕಗಳನ್ನು ಕಟ್ಟಲೇಬೇಕು. ಇಲ್ಲದಿದ್ದರೆ ನಿಮಗೆ ನಮ್ಮ ಕಾಲೇಜಿನಲ್ಲಿ ಪ್ರವೇಶ ಸಿಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಹೀಗೆ ಅವರು ಒತ್ತಾಯಪೂರ್ವಕವಾಗಿ ಕಟ್ಟಿಸಿಕೊಳ್ಳುವ ಒಟ್ಟು ಶುಲ್ಕ ರೂಪಾಯಿ ಒಂದು ಲಕ್ಷ. ಇದು ಪ್ರತಿ ವರ್ಷದ ಕಾಲೇಜು ಶುಲ್ಕ. ಇಲ್ಲಿ ಆರ್ಥಿಕ ಶಕ್ತಿಯುಳ್ಳ ವಿದ್ಯಾರ್ಥಿಗಳು ಈ ಶುಲ್ಕವನ್ನು ತುಂಬಿ ಪ್ರವೇಶವನ್ನು ಪಡೆದಿದ್ದಾರೆ. ಆದರೆ, ಓದುವ ಸಾಮರ್ಥ್ಯ ಹೊಂದಿದ್ದರೂ, ಸರ್ಕಾರದಿಂದ ಸೀಟು ದೊರಕಿದ್ದರೂ ಸಹ ಹಣಕಾಸಿನ ಅನಾನುಕೂಲತೆ ಇರುವುದರಿಂದ ಬಹಳಷ್ಟು ಪ್ರತಿಭಾನಿತ್ವ ಬಡ ವಿದ್ಯಾರ್ಥಿಗಳು ಇಂತಹ ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸದರಿ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಉನ್ನತ ಶಿಕ್ಷಣ ಸಚಿವರಿಗೆ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂಥ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಆ) ವಿಷಯ:- ಬೀದರ್ ಜಿಲ್ಲೆಯಲ್ಲಿ ಕಾರಂಜ ಯೋಜನೆಗೆ ಭೂಮಿ ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ದೊರೆಯದಿರುವ ಕುರಿತು ರೈತರು ಅಹೋ ರಾತ್ರಿ ಧರಣಿ ನಡೆಸುತ್ತಿರುವ ಬಗ್ಗೆ.**

*****

**ಶ್ರೀ ಅರವಿಂದ ಕುಮಾರ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆಯ ಕಾರಂಜ ಸಂತ್ರಸ್ತ ರೈತರು ತಮ್ಮ ಸಮಸ್ಯೆಯನ್ನು ಈಡೇರಿಸುವಂತೆ ಒತ್ತಾಯಿಸಿ ಸುಮಾರು 181 ದಿವಸಗಳ ಕಾಲ ಬೀದರ್ ಜಿಲ್ಲಾಧಿಕಾರಿಗಳ ಕಛೇರಿ ಎದುರುಗಡೆ ಪ್ರವಾಸಿ ಮಂದಿರದ ಹತ್ತಿರ ರಸ್ತೆ ಬದಿಯಲ್ಲಿ ಅಹೋ ರಾತ್ರಿ ಧರಣಿ ನಡೆಸುತ್ತಾ, ಕಾರಂಜ ಯೋಜನೆ ನಿರ್ಮಾಣ ಮಾಡಲು ಸುಮಾರು 28-29 ಹಳ್ಳಿಗಳ ರೈತರು ಸಾವಿರಾರು ಎಕರೆ ಭೂಮಿಯನ್ನು ಈ ಯೋಜನೆಯಡಿಯಲ್ಲಿ ತೆಗೆದುಕೊಂಡು ರೈತರಿಗೆ ತಕ್ಕ ಬೆಲೆ ಸಿಗದೆ ಕವಡೆ ಕಿಮ್ಮತ್ತಿನ ಹಣ ನೀಡಿದ್ದರಿಂದ ಅದನ್ನು ಮರು ಪರಿಷ್ಕರಣೆ ಮಾಡಿ ನ್ಯಾಯಯುತವಾಗಿ ಭೂಮಿ ಬೆಲೆ ನೀಡಬೇಕಾಗಿ ಒತ್ತಾಯಿಸುತ್ತಾ ಇದ್ದಾರೆ.

ಆದರೆ ಜಿಲ್ಲಾಡಳಿತವಾಗಲಿ ಸ್ಥಳೀಯವಾಗಿ ವಾಸಿಸುವ ಕೇಂದ್ರ ಸಚಿವರಾಗಲ್ಲಿ ರಾಜ್ಯ ಪಶು ಸಂಗೋಪನೆ ಸಚಿವರಾಗಲಿ ಅಥವಾ ಹೊರ ಜಿಲ್ಲೆಯವರಾದ ಉಸ್ತುವಾರಿ ಸಚಿವರಾಗಲಿ ಹಾಗೂ ಸ್ಥಳೀಯ ಆಡಳಿತ ರೂಢ ಪಕ್ಷದ ಯಾವೊಬ್ಬರು ಶಾಸಕರಾಗಲಿ ರೈತರ ಧರಣಿ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಗೆ ಸ್ಪಂದಿಸುತ್ತಿಲ್ಲ ಎಂದು ರೊಚ್ಚಿಗೆದ ರೈತರು ಇಂದು ನಮ್ಮ ಶಾಸಕರ ಕಛೇರಿಗೆ ಮುತ್ತಿಗೆ ಹಾಕಿರುತ್ತಾರೆ.

ಆದ್ದರಿಂದ ರೈತರು ಅಹೋ ರಾತ್ರಿ ಧರಣಿ ನಡೆಸುತ್ತಿದ್ದ ಅವರ ಸಮಸ್ಯೆಗೆ ಸರ್ಕಾರ ಕೂಡಲೇ ಸ್ಪಂದಿಸಿ ಪರಿಹಾರ ಕಂಡುಕೊಳ್ಳಬೇಕಾಗಿದೆ. ನಾವು ರೈತರನ್ನು ದೇಶದ ಬೆನ್ನೆಲುಬು ಎಂದು ಹೇಳುತ್ತೇವೆ. ಆದರೆ, ಅವರ ಸಮಸ್ಯೆಗೆ ಸರ್ಕಾರ ಸ್ಪಂದನೆ ನೀಡುತ್ತಿಲ್ಲ.

ಹಾಗಾಗಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಾ ರೈತರು ನಡೆಸುತ್ತಿರುವ ಅಹೋ ರಾತ್ರಿ ಧರಣಿ ಸ್ಥಳಕ್ಕೆ ಭೇಟಿ ನೀಡಿ ಸ್ಪಂದಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಂದಿರುವಂಥ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಕಂದಾಯ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಇ) ವಿಷಯ:- ಬೆಂಗಳೂರು ನಗರದಲ್ಲಿ ಹೊಸದಾಗಿ ಡಿಜಿಟಲ್ ಮೀಟರ್‌ಗಳನ್ನು ಅಳವಡಿಸಿರುವುದರಿಂದ ವಿದ್ಯುತ್ ಬಿಲ್ ಹಳೆಯ ಮೀಟರ್‌ಗಿಂತ ದುಪ್ಪಟ್ಟಾಗುತ್ತಿರುವ ಬಗ್ಗೆ.**

*****

**ಶ್ರೀ ಟಿ.ಎ.ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಬೆಸ್ಕಾಂ ಇಲಾಖೆ ವತಿಯಿಂದ ಆಧುನೀಕರಣವಾಗಿರುವಂಥ ಹೆಸರಿನಲ್ಲಿ ಜನ ಸಾಮಾನ್ಯರು ಮತ್ತು ಮಧ್ಯಮ ವರ್ಗದವರ ಜೇಬಿಗೆ ಕತ್ತರಿ ಆಗುತ್ತಿದೆ. ಡಿಜಿಟಲ್ ಮೀಟರ್‌ಗೆ ಅಳವಡಿಕೆಗೆ ಉಚಿತ ಎಂದು ಬೆಸ್ಕಾಂ ಹೇಳಿದ್ದರೂ ಸಹ ಹಲವು ಸಿಬ್ಬಂದಿಗಳು ಗ್ರಾಹಕರಿಂದ ಹಣ ವಸೂಲಿ ಮಾಡುತ್ತಿದ್ದಾರೆ ಮತ್ತು ದುಪ್ಪಟ್ಟಾಗಿ ಅಂದರೆ, 100 ರೂಪಾಯಿ ಇರುವ ಜಾಗದಲ್ಲಿ 200 ರೂಪಾಯಿವರೆಗೂ ಬಿಲ್ ಮೊತ್ತ ಬರುತ್ತಿದೆ. ಇದರಿಂದಾಗಿ ಜನ ಸಾಮಾನ್ಯರಿಗೆ ಬಹಳ ತೊಂದರೆಯಾಗಿದ್ದು, ಇದರ ಕಡೆ ಸರ್ಕಾರ ಗಮನಹರಿಸಿ ಸಾರ್ವಜನಿಕವಾಗಿ ಅವರಿಗೆ ನ್ಯಾಯ ಕೊಡಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಂದಿರುವಂಥ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಈ) ವಿಷಯ:- ಧಾರವಾಡ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಶುಲ್ಕ ವಿಧಿಸುವಲ್ಲಿ ಆಗುತ್ತಿರುವ ಸಮಸ್ಯೆ ಬಗ್ಗೆ.**

*****

**ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧಾರವಾಡ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಕಳೆದ ವರ್ಷ ವಿದ್ಯಾರ್ಥಿ ವೇತನ ಬಂದ ನಂತರ ಅರ್ಧದಷ್ಟು ಶುಲ್ಕವನ್ನು ಪಾವತಿ ಮಾಡುವುದಕ್ಕೆ ಅವಕಾಶ ಇರುತ್ತಿತ್ತು. ಆದರೆ ಕಳೆದ ವರ್ಷ ಹಲವಾರು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬರದೇ ಇರುವ ಕಾರಣ ಶುಲ್ಕ ಭರಿಸಲು ಸಾಧ್ಯವಾಗಿರುವುದಿಲ್ಲ. ಅಂತಹ ವಿದ್ಯಾರ್ಥಿಗಳು ಒಂದು ವೇಳೆ ಶುಲ್ಕ ಭರ್ತಿ ಮಾಡದಿದ್ದಲ್ಲಿ ಪರೀಕ್ಷೆಗೆ ಹಾಜರಾಗಲು ಅನುಮತಿಸುವುದಿಲ್ಲ ಎಂದು ಹೇಳಿರುವುದಾಗಿ ತಿಳಿದು ಬಂದಿದೆ.

ಮುಖ್ಯವಾಗಿ ಎಸ್.ಎಸ್.ಪಿ. ಮೂಲಕ ಬರುತ್ತಿದ್ದ ವಿದ್ಯಾರ್ಥಿ ವೇತನವು ಬರದೆ ಇದ್ದ ಕಾರಣ ಬಡ ವಿದ್ಯಾರ್ಥಿಗಳು ಶುಲ್ಕ ಪಾವತಿಸುವಲ್ಲಿ ಸಮಸ್ಯೆಯಾಗಿದೆ ಹಾಗೂ ಈ ಸಮಸ್ಯೆಯನ್ನು ವಿಶ್ವವಿದ್ಯಾಲಯವು ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಸರಿಪಡಿಸಬೇಕಾಗಿತ್ತು. ಆದರೆ, ಇಲ್ಲಿಯವರೆಗೆ ಸಮಸ್ಯೆಯನ್ನು ಬಗೆಹರಿಸದೇ ವಿನಾಕಾರಣ ವಿದ್ಯಾರ್ಥಿಗಳಿಗೆ ಸಮಸ್ಯೆ ಮಾಡುತ್ತಿರುವುದು ಮತ್ತು ಫಲಿತಾಂಶ ಪ್ರಕಟಣೆ ವಿಳಂಬವನ್ನು ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎ.ಬಿ.ವಿ.ಪಿ.) ರಾಜ್ಯಾದ್ಯಂತ ಪ್ರತಿಭಟನೆ ಮಾಡುತ್ತಿರುವುದು ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಗಮನಿಸಬಹುದಾಗಿದೆ.

ಹಾಗೂ ಪ್ರಸಕ್ತ ವರ್ಷ ಎಸ್.ಎಸ್.ಪಿ. ವಿದ್ಯಾರ್ಥಿ ವೇತನ ಬರುತ್ತದೆಯೋ, ಇಲ್ಲವೋ ಎಂಬ ಗೊಂದಲದಿಂದ ಒಂದೇ ಬಾರಿಗೆ ಸಂಪೂರ್ಣ ಶುಲ್ಕವನ್ನು ಪಾವತಿ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಧಾರವಾಡ ವಿಶ್ವವಿದ್ಯಾಲಯ ಹೇಳುತ್ತಿದೆ.

ಈ ವರ್ಷ ಒಂದೇ ಬಾರಿಗೆ ಪ್ರತಿಷತ 10% ಶುಲ್ಕ ಅಧಿಕವಾಗಿರುವುದರಿಂದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿದೆ ಹಾಗೂ ಕಳೆದ ಬಾರಿ ಮೀಸಲಾತಿ ಮೇಲೆ ನೀಡುತ್ತಿದ್ದ ವಿನಾಯಿತಿಯನ್ನು ಸಹ ಈ ವರ್ಷ ನೀಡದಿರುವುದಾಗಿ ತಿಳಿದು ಬಂದಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಹಾಗೂ ಬಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೂಡಲೇ ಶುಲ್ಕದ ಕುರಿತು ಆಗುತ್ತಿರುವ ಸಮಸ್ಯೆಯನ್ನು ಬಗೆಹರಿಸಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆ ನೀಡುತ್ತಿರುವ ರಾಜ್ಯದ ಹಲವಾರು ವಿಶ್ವವಿದ್ಯಾಲಯಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸುತ್ತಾ, ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವಂತೆ ತಮ್ಮ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ಒತ್ತಾಯಿಸುತ್ತೇನೆ.

**(ಮುಂದು)**

(1163) 26.12.2022/12.40/ಎಸ್‌ಕೆ-ಆರ್‌ಎನ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಡಾ. ಸಿ.ಎನ್. ಅಶ್ವತ್ಥ ನಾರಾಯಣ (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯವೇಳೆ ಪ್ರಶ್ನೆಗೆ ಮಾಹಿತಿಯನ್ನು ಪಡೆದುಕೊಂಡು ಉತ್ತರವನ್ನು ಒದಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ತಮ್ಮ ಶೂನ್ಯವೇಳೆ ಪ್ರಶ್ನೆಯನ್ನು ಕೇಳಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಸದನದ ಬಾವಿಯೊಳಗೆ ನಿಂತುಕೊಂಡು ಪ್ರತಿಭಟನೆ ಮಾಡುತ್ತಿದ್ದೇನೆ. ನಾನು ಶೂನ್ಯವೇಳೆಯಲ್ಲಿ ಪ್ರಶ್ನೆಯನ್ನು ಕೇಳುವುದಿಲ್ಲ.

**ಸಭಾಪತಿಯವರು:-** ಮಾನ್ಯ ಕೆ.ಎ. ತಿಪ್ಪೇಸ್ವಾಮಿಯವರೇ, ತಮ್ಮ ಶೂನ್ಯವೇಳೆ ಪ್ರಶ್ನೆಯನ್ನು ಕೇಳಿ.

**ಉ) ವಿಷಯ: ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು ಅಕ್ರಮ-ಸಕ್ರಮ ಯೋಜನೆ ಅಡಿಯಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅಳವಡಿಸುವಲ್ಲಿ ಆಗುತ್ತಿರುವ ವಿಳಂಬ ಕುರಿತು.**

-----

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯದಲ್ಲಿ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು ತಾತ್ಕಾಲಿಕ ಮತ್ತು ಅಕ್ರಮ-ಸಕ್ರಮ ಯೋಜನೆಗಳ ಅಡಿಯಲ್ಲಿ ಕೃಷಿ ಪಂಪ್-ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅವಕಾಶವಿದೆ. ಈ ಎರಡು ಯೋಜನೆ ಅಡಿಯಲ್ಲಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ರೈತರು ಅರ್ಜಿ ಸಲ್ಲಿಸಿ, ಠೇವಣಿ ಪಾವತಿಸಿದ್ದರೂ ವಿದ್ಯುತ್ ಪರಿವರ್ತಕ ಅಂದರೆ (ಟ್ರಾನ್ಸ್‌ಫಾರ್ಮರ್-ಟಿಸಿ) ನೀಡುತ್ತಿಲ್ಲ. ಈ ಯೋಜನೆಗಳ ಅಡಿಯಲ್ಲಿ ರೈತರು ಸುಮಾರು 28 ಸಾವಿರ ರೂಪಾಯಿಗಳನ್ನು ಠೇವಣಿ ಕಟ್ಟಿ, ಗುತ್ತಿಗೆದಾರರಿಗೆ ನೀಡುವುದು ಇತ್ಯಾದಿ ಸೇರಿ ರೈತರಿಗೆ ಸುಮಾರು 40 ಸಾವಿರ ರೂಪಾಯಿಗಳವರೆಗೆ ಖರ್ಚು ಬರುತ್ತಿದೆ. ಆದರೆ, ರೈತರಿಂದ ಅರ್ಜಿ ಸ್ವೀಕರಿಸಿ, ಹಣ ಕಟ್ಟಿಸಿಕೊಳ್ಳುವಾಗ ಇರುವ ಆಸಕ್ತಿ, ಹಣ ಕಟ್ಟಿಸಿಕೊಂಡ ನಂತರ ವಿದ್ಯುತ್ ಸಂಪರ್ಕ ಕಲ್ಪಿಸುವಾಗ ಇರುವುದಿಲ್ಲ. ಇದರಿಂದ ರಾಜ್ಯದ ಲಕ್ಷಾಂತರ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವಿಲ್ಲದೇ, ಅವರು ದಿಕ್ಕು ತೋಚದಂತಾಗಿದ್ದಾರೆ. ಅಲ್ಲದೆ ರೈತರಿಗೆ ಕಳಪೆ ಗುಣಮಟ್ಟದ ಟ್ರಾನ್ಸ್‌ಫಾರ್ಮರ್-ಟಿಸಿಗಳನ್ನು ನೀಡುತ್ತಿದ್ದು, ಆರೇಳು ತಿಂಗಳಲ್ಲಿ ಸುಟ್ಟು ಹೋಗುತ್ತಿವೆ. ಹಲವಾರು ಜಿಲ್ಲೆಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಉಗ್ರಾಣಗಳಲ್ಲಿ ಕೊಳೆಯುತ್ತಾ

ಬಿದ್ದಿವೆ. ಆದರೆ, ಅಧಿಕಾರಿಗಳು "ಈಗ ಬಜೆಟ್ ಇಲ್ಲ, ಅನುದಾನ ಬಂದ ಕೂಡಲೇ ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಸರಬರಾಜು ನೀಡಲಾಗುವುದು" ಎಂಬ ಪೊಳ್ಳು ಭರವಸೆಗಳನ್ನು ಅಧಿಕಾರಿಗಳು ನೀಡುತ್ತಿದ್ದಾರೆ. ರೈತರು ಚಿನ್ನಾಭರಣ ಅಡವಿಟ್ಟು ಸಾಲ ಮಾಡಿ, ವಿದ್ಯುತ್ ಸಂಪರ್ಕಕ್ಕಾಗಿ ಠೇವಣಿ ಹಣ ಮತ್ತಿತರ ಖರ್ಚುಗಳನ್ನು ಸರಿದೂಗಿಸಿಕೊಂಡಿದ್ದಾರೆ. ವಿದ್ಯುತ್ ಪೂರೈಕೆಯೂ ಇಲ್ಲದೇ ಬೆಳೆಗಳಿಗೆ ನೀರಿನ ಸಮಸ್ಯೆ ಒಂದೆಡೆಯಾದರೆ, ಇನ್ನೊಂದೆಡೆ ಸಾಲ ತೀರಿಸಲು ಪರದಾಡಬೇಕಾಗಿದೆ. ಇಂತಹ ಮಹತ್ವದ ವಿಷಯವನ್ನು ಕುರಿತು ಶೂನ್ಯವೇಳೆಯಲ್ಲಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಶ್ನೆಗೆ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

**ಊ) ವಿಷಯ: ರಾಜ್ಯದ ಅಂಗನವಾಡಿಗಳಿಗೆ ಈ ಹಿಂದೆ ಕಳಪೆ ಆಹಾರ ಪೂರೈಕೆ ಮಾಡಿ ಕಪ್ಪು ಪಟ್ಟಿಗೆ ಸೇರಿದ ಸಂಸ್ಥೆಗಳಿಗೆ ಪುನಃ ಪೌಷ್ಠಿಕ ಆಹಾರ ಪದಾರ್ಥ ಪೂರೈಸಲು ಜವಾಬ್ದಾರಿ ನೀಡಿರುವ ಬಗ್ಗೆ.**

-----

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯದ ಅಂಗನವಾಡಿಗಳಿಗೆ ಪೌಷ್ಠಿಕ ಆಹಾರ ಪದಾರ್ಥ ಪೂರೈಸಲು ಕೇವಲ ಮೂರು ಮಹಿಳಾ ಸಂಘಗಳಿಗೆ ಅನುಮತಿ ನೀಡಿರುವ ಹಾಗೂ ಈ ಹಿಂದೆ ಆಹಾರ ಪೂರೈಕೆ ಮಾಡಿ ಕಪ್ಪು ಪಟ್ಟಿಗೆ ಸೇರಿದ್ದ ತಮಿಳುನಾಡು ಮೂಲದ ಸಂಸ್ಥೆಗಳಿಗೆ ಮತ್ತೆ ಕೆಂಪು ಹಾಸು ಹಾಸಿರುವ ಪ್ರಕರಣದ ಬಗ್ಗೆ ದಿನಾಂಕ 20/12/2022ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ರಾಜ್ಯದಲ್ಲಿ 137 ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳಿದ್ದು, ಅವುಗಳಲ್ಲಿ ಕೇವಲ ಮೂರು ಸಂಘಗಳಿಗೆ ಸರಾಸರಿ ರೂ.2000 (ಎರಡು ಸಾವಿರ)

ಕೋಟಿ ವಹಿವಾಟು ಇರುವ ಹೊಣೆಗಾರಿಕೆ ನಿಭಾಯಿಸಲು ಅನುಮತಿ ನೀಡಲಾಗಿದೆ. ಈ ಮೂರು ಕೇಂದ್ರಗಳನ್ನು ಪರೋಕ್ಷವಾಗಿ 2012 ರಲ್ಲಿ ಅಂದಿನ ಸರ್ಕಾರವು ನಿಷೇಧಿಸಿದ್ದವು. ತಮಿಳುನಾಡು ಮೂಲದ ಕಂಪನಿಯೊಂದು ಪರೋಕ್ಷವಾಗಿ ಮೂರು ಸಂಸ್ಥೆಗಳನ್ನು ರಚಿಸಿತ್ತು ಎನ್ನುವುದಕ್ಕೆ ಹಣ ವರ್ಗಾವಣೆ ಮಾಡಿರುವ ದಾಖಲೆಗಳು ಸಹ ಲಭ್ಯವಾಗಿರುತ್ತವೆ.

ಮಕ್ಕಳಿಗೆ ಸ್ಥಳೀಯ ಆಹಾರ ದೊರಕಬೇಕು ಎನ್ನುವ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಆದೇಶದ ಹಿನ್ನೆಲೆಯಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು, ಮಹಿಳಾ ಮಂಡಳಿಗಳು ಹಾಗೂ ಗ್ರಾಮ ಸಮುದಾಯಗಳಿಗೆ ಪೌಷ್ಠಿಕ ಆಹಾರ ತಯಾರಿಕೆ ಹಾಗೂ ಪೂರೈಕೆಯ ಹೊಣೆ ನೀಡಲು 2009ರಲ್ಲೇ ಸರ್ಕಾರ ಆದೇಶ ಹೊರಡಿಸಿತ್ತು. 2012 ರಿಂದಲೂ 137 ಮಹಿಳಾ ಸ್ವಸಹಾಯ ಗುಂಪುಗಳು ಆಹಾರ ಪೂರೈಕೆ ಮಾಡುತ್ತಾ ಬರುತ್ತಿವೆ. ಇವರುಗಳು ಪೂರೈಸುತ್ತಿದ್ದ ಆಹಾರಗಳಲ್ಲಿ ಗುಣಮಟ್ಟದ ಆಹಾರ ಪದಾರ್ಥ, ಪ್ರೋಟೀನ್, ಕ್ಯಾಲೋರಿ ಅಳೆಯುವ ಮಾಪಕಗಳು ಇಲ್ಲ ಎನ್ನುವ ಆರೋಪ ಹೊರಿಸಿದ ಖಾಸಗೀ ಸಂಸ್ಥೆಗಳು ಮಾನ್ಯ ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದರು. ಮಾನ್ಯ ನ್ಯಾಯಾಲಯವು ಕಡ್ಡಾಯವಾಗಿ ಬಿ.ಐ.ಎಸ್. ಪ್ರಮಾಣಪತ್ರ ಹೊಂದಿರಬೇಕೆಂದು ನೀಡಿದ ತೀರ್ಪಿನನ್ವಯ ಕ್ರಮ ಕೈಗೊಂಡಿರುವುದಾಗಿ ತಿಳಿಸಿರುವ ರಾಜ್ಯ ಸರ್ಕಾರದ ನಡೆಯ ವಿರುದ್ಧ ಅನುಮಾನಗಳು ಕಂಡು ಬಂದಿರುತ್ತವೆ. ಕಾರಣ, ರಾಜ್ಯದಲ್ಲಿ ಈಗಾಗಲೇ ಬಿ.ಐ.ಎಸ್. ಪ್ರಮಾಣ ಪತ್ರ ಹೊಂದಿರುವ 10ಕ್ಕೂ ಹೆಚ್ಚು ಮಹಿಳಾ ಸ್ವಸಹಾಯ ಗುಂಪುಗಳಿದ್ದಾಗ್ಯೂ ಸಹ ಕೆಲವಕ್ಕೆ ಅನುಮತಿ ನೀಡಿ ಉಳಿದವುಗಳಿಗೆ ದೊಡ್ಡ ಪ್ರಮಾಣದಲ್ಲಿ ಆಹಾರ ಉತ್ಪಾದನೆ ಮಾಡುವ ಸಾಮರ್ಥ್ಯ, ಹಣಕಾಸಿನ ವಹಿವಾಟು ನಡೆಸಿದ ಅನುಭವ ಇಲ್ಲ ಎನ್ನುವ ಕಾರಣದಿಂದ ತಿರಸ್ಕರಿಸುವುದು ತಿಳಿದು ಬಂದಿರುತ್ತದೆ.

ಮಾನ್ಯ ನ್ಯಾಯಾಲಯವು ಬಿ.ಐ.ಎಸ್. ಪ್ರಮಾಣಪತ್ರ ಪಡೆಯುವವರೆಗೆ ಪ್ರಮಾಣಪತ್ರ ಹೊಂದಿದ ಸಂಸ್ಥೆಗಳ ಜೊತೆ ತಾಂತ್ರಿಕ ನೆರವು ಪಡೆಯಲು ಒಪ್ಪಂದ ಮಾಡಿಕೊಳ್ಳುವಂತೆ ಸೂಚನೆ ನೀಡಿದ್ದರೂ ಕೇವಲ ಮೂರು ಸಂಸ್ಥೆಗಳಿಗೆ ಮಾತ್ರ ಆಹಾರ ತಯಾರಿಕೆಗೆ ಬೇಕಾದ ಪದಾರ್ಥಗಳ ಖರೀದಿಯ ಜವಾಬ್ದಾರಿಯನ್ನು ಸರ್ಕಾರ ನೀಡಿರುವುದು ಸಂಶಯಕ್ಕೆ ಕಾರಣವಾಗಿರುತ್ತದೆ.

ಸರ್ಕಾರ ಕೂಡಲೇ ಈ ವಿಚಾರದ ಬಗ್ಗೆ ಗಮನಹರಿಸಿ ರೂ. 2000 ಕೋಟಿ ಮೊತ್ತದ ವಹಿವಾಟಿನಲ್ಲಿ ಅಕ್ರಮಕ್ಕೆ ಅವಕಾಶವಿಲ್ಲದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು, ನಾನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಶ್ನೆಗೆ ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

**ಖ) ವಿಷಯ: ವನ್ಯಜೀವಿಗಳನ್ನು ಸಾಕಾಣಿಕೆ ಮಾಡಿರುವಂತಹವರ ವಿರುದ್ಧ ವನ್ಯ ಜೀವಿ ಸಂರಕ್ಷಣಾ ಕಾಯಿದೆ, 1972ರ ಬೆಂಗಳೂರಿನಲ್ಲಿ ಜಿಂಕೆ ಚರ್ಮ ಮಾರಾಟ ಮಾಡಲು ಹೋಗಿದ್ದ ವ್ಯಕ್ತಿಯೊಬ್ಬ ಸಿ.ಸಿ.ಬಿ. ಪೊಲೀಸರ ವಶಕ್ಕೆ ಪಡೆದಿರುವ ಕುರಿತು.**

-----

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬೆಂಗಳೂರಿನಲ್ಲಿ ಜಿಂಕೆ ಚರ್ಮ ಮಾರಾಟ ಮಾಡಲು ಹೋಗಿದ್ದ ವ್ಯಕ್ತಿಯೊಬ್ಬ ಸಿ.ಸಿ.ಬಿ. ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದು, ಆತನ ಮಾಹಿತಿ ಆಧರಿಸಿ ಅರಣ್ಯ ಇಲಾಖೆಯ ಡಿಎಫ್‌ಓ ನೇತೃತ್ವದಲ್ಲಿ ಅರಣ್ಯಾಧಿಕಾರಿಗಳು ದಾಳಿ ನಡೆಸಿ ಜಿಂಕೆಗಳು, ಕಾಡು ಹಂದಿಗಳು, ಮೊಲ ಇತ್ಯಾದಿ ವನ್ಯ ಪ್ರಾಣಿಗಳನ್ನು ಪತ್ತೆ ಮಾಡಿರುವ ಘಟನೆ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಮಾಹಿತಿ ಪ್ರಕಾರ ಈ ಪ್ರಾಣಿಗಳನ್ನು ದಾವಣಗೆರೆ ಮೀರಿ ಶ್ರೀ ಎಸ್. ಎಸ್. ಮಲ್ಲಿಕಾರ್ಜುನರವರ ಒಡೆತನದಲ್ಲಿರುವ ಕಲ್ಲೇಶ್ವರ ಮಿಲ್‌ನ ಆವರಣದಲ್ಲಿ ಸಾಕಲಾಗಿತ್ತು. ವನ್ಯ ಪ್ರಾಣಿಗಳನ್ನು ಸಾಕುವುದು ಶಿಕ್ಷಾರ್ಹ ಅಪರಾಧವಾಗಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖಾಧಿಕಾರಿಗಳು ಈ ಪ್ರಾಣಿಗಳನ್ನು ಕೋರ್ಟ್‌ಗೆ ಹಾಜರುಪಡಿಸಿ ಬಳಿಕ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಅಲ್ಲದೇ ಈ ಸಂಬಂಧ

ತನಿಖೆ ಆರಂಭಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವುದರ ಜೊತೆಗೆ ಮಾನ್ಯ ನ್ಯಾಯಾಲಯದ ಅನುಮತಿ ಪಡೆದು ವನ್ಯಜೀವಿಗಳನ್ನು ಅರಣ್ಯಕ್ಕೆ ಬಿಡಬೇಕೇ ಅಥವಾ ಪ್ರಾಣಿ ಸಂಗ್ರಹಾಲಯಕ್ಕೆ ರವಾನಿಸಬೇಕೇ ಎಂಬ ಕುರಿತು ನಿರ್ಧಾರ ಕೈಗೊಳ್ಳಲಾಗುವುದೆಂದೂ ಅಧಿಕಾರಿಗಳು ತಿಳಿಸಿರುವುದು ಎಲ್ಲಾ ಪತ್ರಿಕೆಗಳಲ್ಲೂ ಸಹ ವರದಿಯಾಗಿರುತ್ತದೆ.

ಕಾಯಿದೆಗಳನ್ನು ಮೀರಿ ಅನಧಿಕೃತವಾಗಿ ವನ್ಯಜೀವಿ ಸಾಕಾಣಿಕೆ ಮಾಡಿರುವಂಥ ಈ ಪ್ರಕರಣವನ್ನು ಹಲವು ಸಂಘಟನೆಗಳು ಖಂಡಿಸಿವೆ. ಈ ಘಟನೆಯಲ್ಲಿ ಅರಣ್ಯ ಅಧಿಕಾರಿಗಳು ಸೂಕ್ತ ತನಿಖೆಯನ್ನು ಮಾಡದೇ ಮಿಲ್ ಮಾಲೀಕರು ಹಾಗೂ ಪ್ರಭಾವಿ ವ್ಯಕ್ತಿಗಳು ಹಾಗೂ ಮಾಜಿ ಸಚಿವರಾದ ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್‌ರವರ ಹೆಸರನ್ನು ಕೈಬಿಟ್ಟು ಅಲ್ಲಿ ಕೆಲಸ ಮಾಡುವ ಸಿಬ್ಬಂದಿ ವರ್ಗದವರ ಮೇಲೆ ಕೇಸ್ ದಾಖಲು ಮಾಡಿರುವುದು ಮಾಧ್ಯಮಗಳ ಮೂಲಕ ವರದಿಯಾಗಿರುತ್ತದೆ ಮತ್ತು ಈಗಾಗಲೇ ಧರಣಿ ಮಾಡಿದರೂ ಸಹ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳದೇ ಇರುವುದು ಕಂಡು ಬಂದಿರುತ್ತದೆ.

ಈ ಪ್ರಕರಣವು ಹಳ್ಳ ಹಿಡಿಯಬಹುದು ಎನ್ನುವ ಸಂಶಯ ಸಾರ್ವಜನಿಕ ವಲಯದಲ್ಲಿ ಇದ್ದು, ಸರ್ಕಾರ ಈ ವಿಚಾರದ ಬಗ್ಗೆ ಹೆಚ್ಚು ಗಮನಹರಿಸಿ ಕಾನೂನು ವ್ಯಾಪ್ತಿ ಮೀರಿ ವನ್ಯಜೀವಿಗಳನ್ನು ಸಾಕಾಣಿಕೆ ಮಾಡಿರುವಂತಹವರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯಿದೆ, 1972ರ ಪ್ರಕಾರ ಕ್ರಮ ಕೈಗೊಂಡು ಶಿಕ್ಷೆಗೆ ಗುರಿಪಡಿಸಬೇಕೆಂದು, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸುತ್ತೇನೆ.

**ಎ) ವಿಷಯ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ಇತ್ತೀಚೆಗೆ ವಿದ್ಯಾರ್ಥಿಗಳ ಪರೀಕ್ಷೆಗೆ ಸಂಬಂಧಿಸಿದ ವಿವಿಧ ರೀತಿಯ ಶುಲ್ಕಗಳನ್ನು ಹೆಚ್ಚಿಸಿರುವ ಕುರಿತು.**

-----

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ಇತ್ತೀಚೆಗೆ ಪರೀಕ್ಷೆಗೆ ಸಂಬಂಧಿಸಿದ ವಿವಿಧ ರೀತಿಯ ಶುಲ್ಕಗಳನ್ನು ಹೆಚ್ಚಿಸಿದ್ದನ್ನು National Students Union of India ಅವರು ವಿರೋಧಿಸಿರುವ ಬಗ್ಗೆ ಹಲವಾರು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ಇತ್ತೀಚೆಗೆ ಅಂದರೆ, ದಿನಾಂಕ 22ನೇ ಡಿಸೆಂಬರ್ 2022ರಂದು ಪರೀಕ್ಷೆಗೆ ಸಂಬಂಧಿಸಿದ ಬೇರೆ ಬೇರೆ ರೀತಿಯ ಶುಲ್ಕಗಳನ್ನು ಶೇಕಡಾ.25 ರಷ್ಟು ಹೆಚ್ಚಿಸಿದ್ದನ್ನು ವಿರೋಧಿಸಿ ಪ್ರತಿಭಟನೆ ಮಾಡಿರುತ್ತಾರೆ. ಈ ಕರಿತು National Students Union of India ಮತ್ತು ಇದರ VTU ದ ಸಂಚಾಲಕರಾದ ಶ್ರೀ ಅನ್ವಿತ್ ಕಟೀಲ ಅವರು ಪತ್ರಿಕಾ ಪ್ರಕಟಣೆ ನೀಡಿ ವಿದ್ಯಾರ್ಥಿಗಳು ಈ ಹಿಂದೆ ಇರುವ ಪರೀಕ್ಷಾ ಶುಲ್ಕಗಳನ್ನು ತುಂಬಲು ಸಾಕಷ್ಟು ತೊಂದರೆಯಾಗುತ್ತಿದ್ದು, ಇಂತಹ ಸಮಯದಲ್ಲಿ ವಿಶ್ವವಿದ್ಯಾಲಯದವರು ಪರೀಕ್ಷಾ ಶುಲ್ಕವನ್ನು ಹೆಚ್ಚಿಸಿರುವುದು ವಿದ್ಯಾರ್ಥಿಗಳಿಗೆ ಇನ್ನಷ್ಟು ತೊಂದರೆಯನ್ನುಂಟು ಮಾಡಿದೆ ಎಂದು ತಿಳಿಸಿರುತ್ತಾರೆ.

ವಿಶ್ವವಿದ್ಯಾಲಯ ಯು.ಜಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ರೂ.1200 ರಿಂದ 1500 ಕ್ಕೆ ಪಿ.ಜಿ. ವಿದ್ಯಾರ್ಥಿಗಳಿಗೆ ರೂ. 1500 ರಿಂದ 1800 ವರೆಗೆ, ಯು.ಜಿ. ವಿದ್ಯಾರ್ಥಿಗಳ ಮರು ಮೌಲ್ಯಮಾಪನಕ್ಕೆ ರೂ. 400 ರಿಂದ 600 ವರೆಗೆ, ಡೂಪ್ಲಿಕೇಟ್ ಅಂಕಪಟ್ಟಿಗೆ ರೂ. 1000 ರಿಂದ 1500 ಕ್ಕೆ ಈ ರೀತಿ ದರಗಳನ್ನು ಹೆಚ್ಚಿಸಿರುವ ಬಗ್ಗೆ ಸಂಘಟನೆ ಅವರು ವಿರೋಧ ವ್ಯಕ್ತಪಡಿಸಿರುತ್ತಾರೆ.

ಆದ್ದರಿಂದ ಉನ್ನತ ಶಿಕ್ಷಣ ಸಚಿವರು ಈ ಕುರಿತು ಸಂಬಂಧಪಟ್ಟ ವಿಶ್ವವಿದ್ಯಾಲಯದ ಕುಲಪತಿಗಳಿಗೆ ನಿರ್ದೇಶನ ನೀಡಿ ಸದ್ಯ ಹೆಚ್ಚಿಸಿರುವ ಶುಲ್ಕವನ್ನು ರದ್ದುಪಡಿಸಲು ಅಥವಾ

ಅನಿವಾರ್ಯವಿದ್ದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ ಆಗದ ರೀತಿಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಿಸುವಂತೆ ಕ್ರಮ ಜರುಗಿಸಬೇಕೆಂದು, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಡಾ. ಸಿ.ಎನ್. ಅಶ್ವತ್ಥ ನಾರಾಯಣ (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಯಾವ ಕಾರಣಕ್ಕಾಗಿ ಏರಿಕೆಯನ್ನು ಮಾಡಿದ್ದಾರೆಂಬ ಬಗ್ಗೆ ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಕೇಳಿರುವ ಪ್ರಶ್ನೆಗೆ ನಾನು ಮಾಹಿತಿಯನ್ನು ಪಡೆದುಕೊಂಡು ಉತ್ತರವನ್ನು ಒದಗಿಸುತ್ತೇನೆ.

**ಏ) ವಿಷಯ: ರಾಜ್ಯದಲ್ಲಿ ಜಲ್ಲಿ ಕಲ್ಲು ಹಾಗೂ ಕಲ್ಲಿನ ಮರಳು ಸರಬರಾಜುದಾರರು ಸರಬರಾಜನ್ನು ನಿಲ್ಲಿಸಿರುವ ಕುರಿತು.**

-----

**ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ರಾಜ್ಯದಲ್ಲಿ ಜಲ್ಲಿ ಕಲ್ಲು ಹಾಗೂ ಕಲ್ಲಿನ ಮರಳು ಸರಬರಾಜುದಾರರು ಸರಬರಾಜನ್ನು ನಿಲ್ಲಿಸಿದ್ದು, ಇದರಿಂದಾಗಿ, ಗ್ರಾಹಕರಿಗೆ ಕಟ್ಟಡ ಸಾಮಾಗ್ರಿ ಸಿಗದಂತಾಗಿದೆ. ಕಲ್ಲು ಕ್ವಾರಿ ಮಾಡುವಂತಹವರು ಸರ್ಕಾರದ ನಿಯಮಗಳ ಸರಳೀಕರಣದ ಬೇಡಿಕೆ ಇಟ್ಟಿರುತ್ತಾರೆ. ಸರ್ಕಾರದ ಸಂಪುಟ ಉಪ ಸಮಿತಿ ತನ್ನ ವರದಿಯನ್ನು ನೀಡಿರುತ್ತದೆ. ಹೊಸ ನೀತಿ ಮತ್ತು ನಿಯಮ ಸರಳೀಕರಣದಿಂದ ಸರ್ಕಾರದ ಆದಾಯ ಹೆಚ್ಚಾಗುತ್ತದೆ, ಜೊತೆಗೆ ಆಡಳಿತ ಸುಧಾರಣೆ ಆಗುತ್ತದೆ. ಇದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡು ಹಾಲಿ ನಡೆಯುತ್ತಿರುವ ಸರಬರಾಜುದಾರರ ಧರಣಿಯನ್ನು ಅಂತ್ಯಗೊಳಿಸಿ, ಸಾರ್ವಜನಿಕರಿಗೆ ಜಲ್ಲಿ ಕಲ್ಲು ಹಾಗೂ ಕಲ್ಲಿನ ಪುಡಿ ದೊರೆಯುವಂತೆ ಮಾಡಲು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

(1164) 26.12.2022, 12.50, TCH-RN (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಇನ್ನುಳಿದ ಸದಸ್ಯರು ಹಾಗೂ ಜನತಾದಳ (ಜಾತ್ಯಾತೀತ) ಪಕ್ಷದ ಶ್ರೀ ಕೆ.ಎ.ತಿಪ್ಪೇಸ್ವಾಮಿಯವರನ್ನು ಹೊರತುಪಡಿಸಿ ಇನ್ನುಳಿದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮುನಿರಾಜುಗೌಡ ಪಿ.ಎಂ.ರವರು ಶೂನ್ಯ ವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ, ಹಿರಿಯ ನಾಗರಿಕರ ಸಬಲೀಕರಣ ಸಚಿವರಿಂದ ಉತ್ತರವನ್ನು ಪಡೆದುಕೊಂಡು ಒದಗಿಸಲಾಗುವುದು.

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನ್ನ ಪ್ರಶ್ನೆಗೆ ದಯವಿಟ್ಟು ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಯಾರಾದರೂ ಒಬ್ಬ ಸದಸ್ಯರು ಮಾತನಾಡಿ. ಮಾನ್ಯ ಶ್ರೀ ಶಶೀಲ್ ಜಿ.ನಮೋಶಿಯವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಸಮಯವನ್ನು ಹಾಳು ಮಾಡಿ ನನ್ನ question lapse ಮಾಡಿದ್ದಾರೆ. ನಾವು ಸಾಕಷ್ಟು ಪ್ರಯತ್ನ ಮಾಡಿ ಪ್ರಶ್ನೆಯನ್ನು ಕೇಳಿರುತ್ತೇವೆ. ನಮ್ಮ ಪ್ರಶ್ನೆ lapse ಆಗುತ್ತದೆಯೆಂದರೆ, ನಾವೇನು ತಪ್ಪು ಮಾಡಿದ್ದೇವೆ? ಇದು ಯಾವ ನೀತಿ? Question Hourನಲ್ಲಿ ಯಾವ ಕಾರಣಕ್ಕೂ ಈ ರೀತಿ ಆಗಬಾರದು. ಈಗ ನಾವೇನು ತಪ್ಪು ಮಾಡಿದ್ದೇವೆ, ನಮ್ಮದೇಕೆ lapse ಆಗಬೇಕು? ಬರೀ ಅವರೊಬ್ಬರದ್ದೇ ಪ್ರಶ್ನೆ ಇರುತ್ತದೆಯೇ? ಅವರು ನಮ್ಮ ಪ್ರಶ್ನೆಯನ್ನೇಕೆ lapse ಮಾಡುತ್ತಿದ್ದಾರೆ? ಮಾನ್ಯ ಸಭಾಪತಿಯವರೇ ಇದು ತಪ್ಪು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶಶೀಲ್ ಜಿ. ನಮೋಶಿಯವರೇ, ತಾವು ಕ್ಷಮಿಸಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಸಂಖ್ಯೆ.724ನ್ನು ಕೇಳಿದ್ದೆನು. ನನ್ನ ಸರದಿ ಬಂದಿತ್ತು. ಮಾನ್ಯ ವಿರೋಧ ಪಕ್ಷದ ಸದಸ್ಯರು ಬಾವಿಗೆ ಬಂದರು. ಒಂದು ಪ್ರಶ್ನೆ ಕೇಳಲು ತಾವು ಸುಮಾರು 3 ರಿಂದ 5 ನಿಮಿಷಗಳ ಕಾಲ fix ಮಾಡಿರುತ್ತೀರಿ. ಈಗ ಎಷ್ಟು ಸಮಯ ಆಗಿದೆ? ಯಾರದೋ ತಪ್ಪಿಗಾಗಿ ನಮಗೇಕೆ ಬರೆ ಎಳೆಯುತ್ತೀರಿ? ಒಂದು question star ಆಗುವುದೇ ಬಹಳ ಅಪರೂಪ. ಈ ರೀತಿ starred question ಇಡೀ ರಾಜ್ಯದ ಸಮಸ್ಯೆಗೆ ಸಂಬಂಧಪಟ್ಟಿರತಕ್ಕಂಥ ಪ್ರಶ್ನೆಯಾಗಿದೆ.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ತಾವು ಒಂದು ನಿಮಿಷ ಕೇಳಿ. ತಾವೆಲ್ಲರೂ ಕುಳಿತುಕೊಳ್ಳಿ ಯಾರೂ ಮಾತನಾಡಬೇಡಿ, ಹೇಳುತ್ತೇನೆ.

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಲು ಒಂದು ನಿಮಿಷ ಅವಕಾಶ ಮಾಡಿಕೊಡಿ. ನಾವು ಬಹಳ ಶ್ರಮಪಟ್ಟು ಪ್ರಶ್ನೆ ಕೇಳಿರುತ್ತೇವೆ.

**(ಗೊಂದಲ)**

**ಸಭಾಪತಿಯವರು:-** ತಾವೆಲ್ಲರೂ ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನಾನು ಕುಳಿತುಕೊಳ್ಳಿ ಎಂದಾಗ ತಾವೆಲ್ಲರೂ ಕುಳಿತುಕೊಳ್ಳಬೇಕು. ನಿಮಗೆ ಈ ಪೀಠದ ಬಗ್ಗೆ ಗೌರವ ಇದೆಯೋ, ಇಲ್ಲವೋ? ಇಂದು ಬೆಳಗ್ಗೆ 11.30 ಗಂಟೆಗೆ ಸದನ ಪ್ರಾರಂಭವಾಗಿದೆ. ಮಾನ್ಯ ಮರಿತಿಬ್ಬೇಗೌಡ ರವರು ಮಧ್ಯಾಹ್ನ 12.15 ಗಂಟೆಗೆ ಪ್ರಶ್ನೆ ಕೇಳಲು ಪ್ರಾರಂಭಿಸಿದರು. ಈಗ ಸುಮಾರು 12.50 ಗಂಟೆಯಾಯಿತು. ಅಂದರೆ ಸುಮಾರು 30 ನಿಮಿಷಗಳವರೆಗೆ ಈ ರೀತಿ ಮಾಡಿದರೆ ನಾನು ಯಾವ ರೀತಿ ಸದನ ನಡೆಸಬೇಕು? ಬೇರೆಯವರು ಹೋಗಲಿ, at-least ಭಾವಿಯಲ್ಲಿ ನಿಂತಿರತಕ್ಕಂಥ ಸದಸ್ಯರು ಸುಮ್ಮನೆ ಇರಬೇಕು. ಈ ರೀತಿ ಕೂಗಾಡುವುದು ಮಾಡಿದರೆ ತಮಗೇ ಏನು ಅನಿಸುತ್ತದೆ ಹೇಳಿ. ಇನ್ನೂ ಸದಸ್ಯರು ಪ್ರಶ್ನೆ ಕೇಳಬೇಕಿದೆ. ನಾನು ಹೇಗೆ ಸದನ ನಡೆಸಬೇಕು ಹೇಳಿ? ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ತಾವು ನಿಯಮ-59ರಲ್ಲಿ ಒಂದು ಗಂಭೀರವಾದ ವಿಷಯವನ್ನು ಕೊಟ್ಟಿದ್ದೀರಿ. ಅದರಲ್ಲಾದರೂ ತೆಗೆದುಕೊಳ್ಳಬಹುದಲ್ಲವೆ? ಆಯಿತು, ತಮಗೆ ಸಮಾಧಾನ ಆಗದಿದ್ದರೆ ಅದಕ್ಕೊಂದು ದಾರಿ ಇದೆಯೋ, ಇಲ್ಲವೋ? ಈ ರೀತಿಯಾದಲ್ಲಿ ನಾನು ಹೇಗೆ ಸದನ ನಡೆಸಬೇಕು ನೀವೇ ಹೇಳಿಬಿಡಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದನದ ಬಾವಿಗೆ ಬಂದು ಸದನದ ಸಮಯವನ್ನು ವ್ಯರ್ಥ ಮಾಡುತ್ತಿಲ್ಲ. ಇದು ಒಂದು ಗಂಭೀರವಾದ ಸಮಸ್ಯೆಯಾಗಿರುವುದರಿಂದ ನಮಗೆ ಉತ್ತರ ಬೇಕೆಂದು ಧರಣಿ ನಡೆಸುತ್ತಿದ್ದಾರೆಯೇ ವಿನಹ ಅವರ ಸ್ವಂತಕ್ಕೆ ಏನೂ ಮಾಡುತ್ತಿಲ್ಲ. ಈ ಪ್ರಶ್ನೋತ್ತರ ವಿಚಾರದಲ್ಲಿ ತಾವು ಸದನವನ್ನು ಬೆಳಗ್ಗೆ 11.30 ಗಂಟೆಗೆ ಪ್ರಾರಂಭ ಮಾಡಿದೆನೆಂದು ಹೇಳಿದಿರಿ. ಸದನ ಬೆಳಗ್ಗೆ 11.00 ಗಂಟೆಗೆ ಪ್ರಾರಂಭವಾಗಬೇಕಾಗಿತ್ತು. Parliament System ನಲ್ಲಿ ನಾವು ಸದನವನ್ನು ಬೆಳಗ್ಗೆ 11.00 ಗಂಟೆಗೆ ಪ್ರಶ್ನೋತ್ತರವನ್ನು ಪ್ರಾರಂಭ ಮಾಡಬೇಕೆಂದು ತಾವೇ ತಮ್ಮ ಭಾಷಣದಲ್ಲಿ ಹೇಳಿದ್ದೀರಿ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ಇಂದು ಬೆಳಗ್ಗೆ Cabinet Meeting ಇದ್ದುದರಿಂದ ತಡವಾಯಿತು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರವನ್ನು ಬೆಳಗ್ಗೆ 11.00 ಗಂಟೆಗೆ ಪ್ರಾರಂಭ ಮಾಡಿ ಮಧ್ಯಾಹ್ನ 12.00 ಗಂಟೆಗೆ ಮುಗಿಸತಕ್ಕಂಥ ಒಂದು ಸಂಪ್ರದಾಯ Parliament ನಲ್ಲಿದೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿದಾಗ, supplementary ಪ್ರಶ್ನೆ ಕೇಳಿದಾಗ, specific ಉತ್ತರವನ್ನು ಪಡದುಕೊಳ್ಳಲು ಅವಕಾಶವಿರುತ್ತದೆ. ನಾವೇನು ಸದನದ ಸಮಯವನ್ನು ವ್ಯರ್ಥ ಮಾಡುವುದಕ್ಕೆ ಬಂದಿಲ್ಲ. ನಾವು ಸರ್ಕಾರದ ಗಮನವನ್ನು ಸೆಳೆಯಲು ಬಂದಿದ್ದೇವೆ. ಒಂದುವೇಳೆ ಸರ್ಕಾರ ಕೇಳದಿದ್ದರೆ ಅದರ ಕಿವಿಯನ್ನು ಹಿಂಡುತ್ತೇವೆ. ಅದಕ್ಕಾಗಿ ಸಮಯ ವ್ಯರ್ಥ ಮಾಡುತ್ತಿದ್ದೇವೆ ಎಂದುಕೊಳ್ಳಬೇಡಿ. ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಆದರೆ ನಮಗೆ ಸರಿಯಾದ ಉತ್ತರ ಕೊಟ್ಟರೆ ಆಯಿತು. ಅದಕ್ಕೋಸ್ಕರ ತಾವು ಇದನ್ನು ಬಗೆಹರಿಸಲು ಸುಮಾರು 5 ನಿಮಿಷಗಳ ಕಾಲ ತಮ್ಮ ಕಚೇರಿಯ chamber ನಲ್ಲಿ ಕುಳಿತುಕೊಂಡು ಮಾತನಾಡಿ. ನಾವು ಕೂಡ ಮಾತನಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಸಾಕಷ್ಟು ಅನುಭವವನ್ನು ಹೊಂದಿದ್ದೀರಿ. ತಾವೇ ಹೇಳಿ. ಈಗ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನಾನು ನೀವು ಇದೇ ರೀತಿ ಉತ್ತರ ಹೇಳಿ ಎಂದು ಹೇಳಿಲ್ಲ. ಮಾನ್ಯ ಸಚಿವರು ಉತ್ತರ ತಪ್ಪಿದೆ, ಅದನ್ನು ವಾಪಸ್ಸು ತೆಗೆದುಕೊಳ್ಳಲಾಗಿದೆ ಎಂದರು. ನನ್ನ ಅಧಿಕಾರದಲ್ಲಿ ಅದನ್ನು ಸರಿಪಡಿಸಿ ಎಂದು ಹೇಳಿದೆನು. ನೀವು ಎಲ್ಲಿಯವರೆಗೆ ಈ ರೀತಿ ಮಾಡುತ್ತೀರಿ? ಒಬ್ಬರು ಸದಸ್ಯರು ಕೇಳಿದ ಒಂದು ಪ್ರಶ್ನೆಗೆ ಸುಮಾರು 21 ನಿಮಿಷವಾದರೆ ಹೇಗೆ ಸದನ ನಡೆಸಬೇಕು? ಒಂದು ಪ್ರಶ್ನೆ ಕೇಳಲು ಸುಮಾರು 5 ನಿಮಿಷ ಕಾಲಾವಕಾಶ ಇದೆ ಅಷ್ಟೇ?

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈ ಸದನದ ಸಣ್ಣ ಅನುಭವದಲ್ಲಿ ಹೇಳುವುದಾದರೆ, ತಾವು ಸೇರಿದಂತೆ, ಮಾನ್ಯ ಮರಿತಿಬ್ಬೇಗೌಡ ಮತ್ತು ಇನ್ನುಳಿದ ಕೆಲವು ಸದಸ್ಯರೆಲ್ಲಾ ಪದವೀಧರರ ಕ್ಷೇತ್ರದಿಂದ ಬಂದಿದ್ದೀರಿ. ತಾವೆಲ್ಲಾ ಒಂದು ರೀತಿ ವಿಷಯ ತಜ್ಞರಲ್ಲ, ವಿಷಯದಲ್ಲಿ

ಆಳವಾಗಿ ತಿಳಿದುಕೊಂಡಿರತಕ್ಕಂಥವರು. ಸರ್ಕಾರ ಸರಿಯಾದ ಉತ್ತರ ಕೊಡದಿದ್ದರೆ ಮಾನ್ಯ ಸದಸ್ಯರು ಏನು ಮಾಡುತ್ತಾರೆ? ಸರಿಪಡಿಸಿ ಉತ್ತರ ಕೊಡುವಂತೆ ಹೇಳಿದಿರಿ. ಆದರೆ ಮಾನ್ಯ ಸದಸ್ಯರಿಗೆ ಸಮಾಧಾನವಾಗಿಲ್ಲ. ಅದಕ್ಕಾಗಿ ಎರಡು ನಿಮಿಷಗಳ ಕಾಲ ತಮ್ಮ chamber ಗೆ ಕರೆಸಿ ಮಾತನಾಡಿ.

**ಸಭಾಪತಿಯವರು:-** ಮಾಡುತ್ತೇನೆ. ಒಂದು ವೇಳೆ ಸರ್ಕಾರ ಸರಿಯಾಗಿ ಉತ್ತರ ಕೊಡದಿದ್ದರೆ ಅದನ್ನು ಅರ್ಧಗಂಟೆ ಕಾಲಾವಕಾಶ ಕೊಡಿ ಎಂದು ಕೇಳುವುದಕ್ಕೆ provision ಇತ್ತು. ನಾವು ಒಬ್ಬರ ಸಲುವಾಗಿ ಇಡೀ ಸದನವನ್ನು ಈ ರೀತಿ ಮಾಡುವುದು ಸರಿಯಾದುದಲ್ಲ. ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಮ್ಮ ಸ್ನೇಹಿತರು. ಅವರು ನಮ್ಮ ಜೊತೆ ಶಾಸಕರಾಗಿದ್ದವರು. ತಾವೇ Parliamentary Systemನಲ್ಲಿ ಪ್ರಶ್ನೋತ್ತರವನ್ನು ಸುಮಾರು ಒಂದು ಗಂಟೆಯಲ್ಲಿ ಮುಗಿಸಬೇಕೆಂದು ಹೇಳಿದ್ದೀರಿ. ಅದಕ್ಕಾಗಿ ದಯಮಾಡಿ ಐದು ನಿಮಿಷ ಮಾನ್ಯ ಸಭಾನಾಯಕರು, ವಿರೋಧ ಪಕ್ಷದ ನಾಯಕರು, ಮಾನ್ಯ ಸರ್ಕಾರದ ಮುಖ್ಯ ಸಚೇತಕರು, ವಿರೋಧ ಪಕ್ಷದ ಮುಖ್ಯ ಸಚೇತಕರು ಮತ್ತು ಜನತಾದಳ (ಜಾತ್ಯಾತೀತ) ಪಕ್ಷದ Floor Leader ನನ್ನ ಕಚೇರಿಯ chamber ಗೆ ಬನ್ನಿ. ಏನಾದರೂ ಒಂದು ತೀರ್ಮಾನ ಮಾಡೋಣ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ಪ್ರಶ್ನೆ ಮುಗಿಸಿ, ಅವರಿಗೆ ಸಮಯ ಕೊಡಿ. ಆಮೇಲೆ ತೀರ್ಮಾನ ಮಾಡಿ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ನಾವು ನಮ್ಮ ಪ್ರಶ್ನೆ ಕೇಳಲು ಸಮಯ ಕೊಟ್ಟುಬಿಡಿ.

**ಸಭಾಪತಿಯವರು:-** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವನ್ನು ಮಧ್ಯಾಹ್ನ 12 ಗಂಟೆ 54 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲಾಯಿತು)**

**(1165) 26.12.2022/1.30/ಹೆಚ್‌ವಿ:ಬಿಎನ್‌ಎಸ್**

**(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀಯುತರುಗಳಾದ ಮರಿತಿಬ್ಬೇಗೌಡ, ಪ್ರಕಾಶ್ ಕೆ.ರಾಥೋಡ್. ಯು.ಬಿ.ವೆಂಕಟೇಶ್, ಅಬ್ದುಲ್ ಜಬ್ಬಾರ್, ಸಿ.ಎಂ.ಲಿಂಗಣ್ಣ ಇನ್ನಿತರ ಸದಸ್ಯರುಗಳು ಸದನದ ಬಾವಿಯೊಳಗೆ ಧರಣಿ ನಿರತರಾಗಿದ್ದರು)**

**ಸಭಾಪತಿಯವರು:-** ದಯಮಾಡಿ ಸದನದ ಬಾವಿಯೊಳಗಿರುವ ಎಲ್ಲ ಸದಸ್ಯರು ತಮ್ಮತಮ್ಮ ಸ್ಥಾನಗಳಿಗೆ ಮರಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭಾಗದಲ್ಲಿ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ, ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ಕುಂದು ಕೊರತೆಗಳ ಬಗ್ಗೆ ಎರಡು ದಿನಗಳ ಕಾಲ ಚರ್ಚೆ ನಡೆಯಬೇಕೆಂದು ತಾವು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿರುವುದನ್ನು ನಾನು ಓದಿದ್ದೇನೆ. ಈ ರೀತಿ ಸದನದ ಸಮಯವನ್ನು ವ್ಯರ್ಥ ಮಾಡುವುದು ಸರ್ಕಾರಕ್ಕೂ ಒಳ್ಳೆಯದಲ್ಲ; ನಮಗೂ ಒಳ್ಳೆಯದಲ್ಲ. ಸಾರ್ವಜನಿಕವಾಗಿ ಮಾಧ್ಯಮಗಳಲ್ಲಿ ಬೇರೆಬೇರೆ ರೀತಿಯ ಚರ್ಚೆಗಳು ನಡೆಯುತ್ತಿವೆ. ಆ ಹಿನ್ನೆಲೆಯಲ್ಲಿ ತಾವು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಒಂದು ಕಿವಿ ಮಾತನ್ನು ಹೇಳಿ ಈ ಸಮಸ್ಯೆಯನ್ನು ಇತ್ಯರ್ಥಗೊಳಿಸುವ ಹಾದಿಯಲ್ಲಿ ಮಾನ್ಯ ಮರಿತಿಬ್ಬೇಗೌಡರನ್ನು ಕರೆದು, ಅಧಿಕಾರಿಗಳ ಮಟ್ಟದಲ್ಲಿ ಒಂದು ಸಭೆ ನಡೆಸಿ ಈ ಪ್ರಕರಣವನ್ನು ಇತ್ಯರ್ಥಗೊಳಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

**ಡಾ॥ಸಿ.ಎನ್.ಅಶ್ವತ್ಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳನ್ನು ಕರೆಯಿಸಿ, ಒಂದು ಸಭೆಯನ್ನು ನಡೆಸಿ, ಸಾಧಕಬಾಧಕಗಳನ್ನು ಪರಿಗಣಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

**ಸಭಾಪತಿಯವರು:-** ಈಗ ಸದನದ ಬಾವಿಯೊಳಗಿರುವ ಎಲ್ಲ ಸದಸ್ಯರುಗಳು ತಮ್ಮತಮ್ಮ ಸ್ಥಾನಗಳಿಗೆ ಮರಳಬೇಕು.

**(ಈ ಹಂತದಲ್ಲಿ ಸದನದ ಬಾವಿಯೊಳಗೆ ಧರಣಿ ನಿರತರಾಗಿದ್ದ ಎಲ್ಲ ಮಾನ್ಯ ಸದಸ್ಯರುಗಳು ತಮ್ಮತಮ್ಮ ಸ್ಥಾನಗಳಿಗೆ ಮರಳಿದರು)**

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:724ಅನ್ನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ಕೇಳಿದ್ದೆ. ನನ್ನ ಮತ್ತು ಇನ್ನಿತರ ಸದಸ್ಯರುಗಳ ಪ್ರಶ್ನೆಗಳಿಗೆ ಉತ್ತರವನ್ನು ನೀಡಬೇಕಾಗಿದ್ದ ಹಿನ್ನೆಲೆಯಲ್ಲಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸಮಯ ಮಾಡಿಕೊಂಡು ಈ ಸದನಕ್ಕೆ ಬಂದಿದ್ದರು. ಈ ರೀತಿ ಯಾರದೋ ತಪ್ಪಿಗೆ, ಬೇರೆ ಯಾರೋ ನಾಲ್ಕು ಜನ ಸದಸ್ಯರಿಗೆ ತಾವು ಬರೆ ಎಳೆಯುವುದು ಎಷ್ಟು ಸರಿ ಎನ್ನುವುದು ನನ್ನ ಪ್ರಶ್ನೆಯಾಗಿದೆ. ತಾವು ಈ ದಿನದ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿ ಬಾಕಿ ಉಳಿದಿರುವ ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸಿದ್ದೀರಿ. ಆದರೆ, ನಾವು ಚುಕ್ಕೆ ಗುರುತಿನ ಪ್ರಶ್ನೆಯನ್ನು ಸದನದಲ್ಲಿ ಕೇಳಲೇ ಬೇಕಾಗಿದೆ. ಅದಕ್ಕಾಗಿ ತಾವು ನಮಗೆ ಸೂಕ್ತ ಅವಕಾಶವನ್ನು ಒದಗಿಸಿಕೊಡಬೇಕಾಗಿದೆ. ಏಕೆಂದರೆ, ನಾವು ಹಾಕುವಂತಹ ಪ್ರಶ್ನೆಗಳು ಚುಕ್ಕೆ ಗುರುತಿನ ಪ್ರಶ್ನೆಗಳಾಗಿ ಆಯ್ಕೆಗೊಳ್ಳುವುದೇ ಬಹಳ ಅಪರೂಪದ ಸಂಗತಿಯಾಗಿದೆ. ಈ ದಿನ ನಾವು ಕೇಳಬೇಕಾಗಿರುವ ಪ್ರಶ್ನೆಗಳು ಸಾರ್ವಜನಿಕರಿಗೆ ಮತ್ತು ಈ ರಾಜ್ಯಕ್ಕೆ ಸಂಬಂಧಪಟ್ಟಿರುವ ಪ್ರಶ್ನೆಗಳಾಗಿವೆ. ಆ ಹಿನ್ನೆಲೆಯಲ್ಲಿ ನನ್ನೊಬ್ಬನಿಗೆ ಮಾತ್ರವಲ್ಲ ಯಾರು ಪ್ರಶ್ನೆಗಳನ್ನು ಕೇಳಿಲ್ಲ ಅವರಿಗೂ ಸಹ ಮತ್ತೊಮ್ಮೆ ಪ್ರಶ್ನೆ ಕೇಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಿದ್ದೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭಾಗದಲ್ಲಿ ನಾವು ಅಧಿವೇಶನವನ್ನು ನಡೆಸುತ್ತಿದ್ದೇವೆ. ಈ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರುಗಳು ಪೀಠಕ್ಕೆ ಗೌರವವನ್ನು ನೀಡದಿದ್ದರೆ, ಇನ್ಯಾರಿಗೆ ಗೌರವವನ್ನು ಕೊಡುತ್ತೀರಿ? ಮಾತನಾಡುವುದಕ್ಕೆ ಅನುಮತಿಯನ್ನು ಕೇಳಿ ಕೈಎತ್ತುವುದಿಲ್ಲ. ಸುಮ್ಮನೆ

ಎದ್ದು ನಿಂತು ಮಾತನಾಡುವುದಕ್ಕೆ ಇದೇನು ವಿಧಾನ ಪರಿಷತ್ತೇ ಅಥವಾ ಬೇರೇನು? ಈ ಸದನದ ಕಾರ್ಯಕಲಾಪಗಳನ್ನು ನೋಡುತ್ತಿರುವ ಜನರು ಏನು ಹೇಳುತ್ತಾರೆ? ಇನ್ನು ಮೇಲೆ ಪ್ರಶ್ನೋತ್ತರ ಅವಧಿಯನ್ನು ನಾನು ಇದೇ ರೀತಿಯಲ್ಲಿ ನಡೆಸುತ್ತೇನೆ. ಒಂದು ಪ್ರಶ್ನೆಗೆ ಐದು ನಿಮಿಷಗಳಿಗಿಂತ ಹೆಚ್ಚು ಸಮಯವನ್ನು ತೆಗೆದುಕೊಂಡರೆ ನಾನು "ಮುಗಿಸಿ" ಎಂದು ಹೇಳುತ್ತೇನೆ. ಆಗ ಮಾನ್ಯ ಸದಸ್ಯರುಗಳು ತಮ್ಮ ಮಾತುಗಳನ್ನು ಮುಗಿಸಬೇಕು. ಇಲ್ಲದಿದ್ದರೆ ನಾನು ಆ ಪ್ರಶ್ನೆಯೊಂದನ್ನೇ ಮುಗಿಸಿ, ಪ್ರಶ್ನೋತ್ತರ ವೇಳೆಯನ್ನು ಮುಕ್ತಾಯಗೊಳಿಸುತ್ತೇನೆ. ಉಳಿದಿರುವ ಪ್ರಶ್ನೆಗಳು ಲ್ಯಾಪ್ಸ್ ಆದರೆ ಅದಕ್ಕೆ ನಾನು ಜವಾಬ್ದಾರನಲ್ಲ. ಎಲ್ಲರೂ ಸಹಕಾರವನ್ನು ನೀಡಿದರೆ ಮಾತ್ರ ಈ ಸದನವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಪಾರ್ಲಿಮೆಂಟ್‌ನ ರೀತಿಯಲ್ಲಿ ಪ್ರಶ್ನೋತ್ತರ ಅವಧಿಯನ್ನು ನಡೆಸಬೇಕೆಂದು ತಾವೆಲ್ಲರೂ ಬಹಳಷ್ಟು ಬಾರಿ ಮಾತನಾಡಿದ್ದೀರಿ. ಆ ರೀತಿ ಸದನವನ್ನು ನಡೆಸುವುದಕ್ಕೆ ಹೋದರೆ ಒಬ್ಬ ಸದಸ್ಯರೂ ಸಹ ಸಹಕಾರವನ್ನು ನೀಡದಿದ್ದರೆ ಹೇಗೆ? ಇದು ಹಿರಿಯರ ಮನೆ ಆಗಿರುವುದರಿಂದ ಅದರ ಗೌರವಕ್ಕೆ ತಕ್ಕಂತೆ ನಡೆದುಕೊಳ್ಳಬೇಕಾಗುತ್ತದೆ.

ಮಾನ್ಯ ರವಿಕುಮಾರ್‌ರವರೇ, ಅದು ಯಾವ ಪ್ರಶ್ನೆಯೆಂದು ತಾವು ಬರೆದುಕೊಡಿ ನೋಡೋಣ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 59ರ ಬಗ್ಗೆ ಪ್ರಸ್ತಾವಿಕ ಭಾಷಣವನ್ನು ಮಾಡಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಹುಕ್ಕೇರಿಯವರು ಒಂದು ವಿಚಾರದ ಬಗ್ಗೆ ಒಂಡೆರಡು ನಿಮಿಷ ಮಾತನಾಡಬೇಕೆಂದು ಬಯಸುತ್ತಿದ್ದಾರೆ. ಅವರ ವಿಚಾರ ಪ್ರಸ್ತಾಪವಾದ ನಂತರ. ನಾನು ಮಾತನಾಡುತ್ತೇನೆ.

**ಸಭಾಪತಿಯವರು:-** ಆಯಿತು. ಮಾನ್ಯ ಪ್ರಕಾಶ್ ಹುಕ್ಕೇರಿಯವರೇ, ಒಂದೆರಡು ನಿಮಿಷಗಳ ಕಾಲ ಮಾತನಾಡಿ.

**ಐ)ವಿಷಯ:- ವಿಧಾನ ಪರಿಷತ್ತಿನ ಶಾಸಕರುಗಳ ಕ್ಷೇತ್ರಾಭಿವೃದ್ಧಿ ನಿಧಿಯನ್ನು ಹೆಚ್ಚಿಸುವ ಬಗ್ಗೆ.**

----

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ನಾವು ಸುಮಾರು 75 ಜನ ಸದಸ್ಯರಿದ್ದೇವೆ. ಅವರುಗಳ ಪೈಕಿ ಸುಮಾರು 58 ಜನ ಸದಸ್ಯರುಗಳು ಪಕ್ಷಭೇದ ಮರೆತು ಮಾನ್ಯ ಮುಖ್ಯಮಂತ್ರಿಗಳಿಗೊಂದು ಮನವಿಯನ್ನು ಸಲ್ಲಿಸಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯ ಸದಸ್ಯರುಗಳಿಗೆ 25 ಕೋಟಿಯಿಂದ 50 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ನೀಡಲಾಗುತ್ತಿದೆ. ಅದರಂತೆ ವಿಧಾನ ಪರಿಷತ್ತಿನ ಸದಸ್ಯರಿಗೂ ಸಹ 25 ಕೋಟಿ ರೂಪಾಯಿಗಳ ಅನುದಾನವನ್ನು ನೀಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೇಳಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಉದಾರವಾಗಿ ಎಲ್ಲ ಇಲಾಖೆಗಳಿಗೂ ಅನುದಾನವನ್ನು ನೀಡುತ್ತಿದ್ದಾರೆ. ಈ ಸರ್ಕಾರ ನನ್ನ 38 ವರ್ಷಗಳ ರಾಜಕೀಯ ಅನುಭವದಲ್ಲಿ ಎಲ್ಲ ಇಲಾಖೆಗಳನ್ನು ಅಭಿವೃದ್ಧಿಪಡಿಸಲು ಎಷ್ಟೊಂದು ಧಾರಾಳವಾಗಿ ಹಣ ನೀಡುತ್ತಿದೆ. ಉದಾಹರಣೆಗೆ ಹೇಳಬೇಕಾದರೆ, ಶಿಕ್ಷಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಗೃಹ ಇಲಾಖೆಗಳಿಗೆ ಹೆಚ್ಚಿನ ಅನುದಾವನ್ನು ಕೊಟ್ಟು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮ ಮತಕ್ಷೇತ್ರದ ವ್ಯಾಪ್ತಿಗೆ ಮೂರು ಜಿಲ್ಲೆಗಳು ಬರುತ್ತವೆ. ಆ ಮೂರು ಜಿಲ್ಲೆಗಳ ಜನರು, "ಮಾನ್ಯ ವಿಧಾನ ಪರಿಷತ್ತಿನ ಸದಸ್ಯರೇ ನಮಗೆ ಶಾಲಾ ಕಟ್ಟಡ ನಿರ್ಮಾಣಕ್ಕೆ ಅನುದಾನವನ್ನು ನೀಡಿ, ದೇವಸ್ಥಾನ ನಿರ್ಮಾಣಕ್ಕೆ ಹಣವನ್ನು ನೀಡಿ ಮತ್ತು ರಸ್ತೆ ಅಭಿವೃದ್ಧಿಗಾಗಿ ಹಣವನ್ನು ನೀಡಿ" ಎಂದು ನಮ್ಮನ್ನು ಕೇಳುತ್ತಾರೆ. ತಮಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಬಹಳ ಒಳ್ಳೆಯ ಸಂಬಂಧವಿದೆ. ತಾವು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಶಿಫಾರಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಸಭಾನಾಯಕರು ಮಾನ್ಯ ವಿರೋಧ ಪಕ್ಷದ ನಾಯಕರುಗಳಲ್ಲಿ ಸಹ ನಾನು ವಿನಂತಿಯನ್ನು ಮಾಡುತ್ತಿದ್ದೇನೆ. ತಾವುಗಳು ಇದರ ಜವಾಬ್ದಾರಿಯನ್ನು ತೆಗೆದುಕೊಂಡು ಈ ಸದನ ಮುಗಿಯುವುದರೊಳಗೆ ಅಂದರೆ, ದಿನಾಂಕ:30.12.2022ರೊಳಗೆ ನಮಗೆ 25 ಕೋಟಿ ರೂಪಾಯಿಗಳನ್ನು ನಮ್ಮ ಕ್ಷೇತ್ರಗಳ ಅಭಿವೃದ್ಧಿಗಾಗಿ ಕೊಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಆ ಕ್ಷೇತ್ರದ ಮಾನ್ಯ ವಿಧಾನಸಭೆಯ ಶಾಸಕರ

ಗಮನಕ್ಕೆ ತಂದು ನಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ಅನುದಾನವನ್ನು ವೆಚ್ಚ ಮಾಡುತ್ತೇವೆ. ಮಾನ್ಯ ಸಭಾನಾಯಕರು 25 ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತೇವೆಂದು ಒಪ್ಪಿಕೊಂಡರೆ, ನಾವೆಲ್ಲ ಸುಮ್ಮನೆ ಕುಳಿತುಬಿಡುತ್ತೇವೆ. ಈ ವಿಷಯದ ಪರವಾಗಿ ಪಕ್ಷಾತೀತವಾಗಿ ಸುಮಾರು 58 ಜನ ಸದಸ್ಯರು ಸಹಿ ಮಾಡಿದ್ದೇವೆ. ತಾವು ಮಾನ್ಯ ಮುಖ್ಯ ಮಂತ್ರಿಗಳೊಂದಿಗೆ ಮಾತನಾಡಿ ಇದಕ್ಕೆ ಅನುಮತಿಯನ್ನು ಕೊಡಿಸಬೇಕೆಂದು ತಮ್ಮಲ್ಲಿ ಸವಿನಿಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಅಬ್ದುಲ್ ಜಬ್ಬಾರ್:-** ಸನ್ಮಾನ್ಯ ಸಭಾಪತಿಯವರೇ, ತಾವೇ ಮಧ್ಯಸ್ಥಿಕೆಯನ್ನು ವಹಿಸಿ, ಅನ್ಯಾಯವಾಗಿರುವುದನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಇದು ಎಲ್ಲರ ಒಟ್ಟು ಅಭಿಪ್ರಾಯವಾಗಿದೆ. ತಾವು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಸಮಯವನ್ನು ತೆಗೆದುಕೊಂಡು ಒಂದು ಸಭೆಯನ್ನು ನಡೆಸಿ, ಆ 58 ಜನರ ಪೈಕಿ 4-5 ಜನರನ್ನು ಕರೆದು, ಒಂದು ತೀರ್ಮಾನವನ್ನು ತೆಗೆದುಕೊಳ್ಳಿ. ಅವರು ತಂದಿರುವಂತಹ ಪ್ರಸ್ತಾವನೆಗೆ ಎಲ್ಲ ಮಾನ್ಯ ಸದಸ್ಯರುಗಳ ಒಪ್ಪಿಗೆ ಇದೆಯೆಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಒಂದು ಸಭೆ ಕರೆದು ಈ ವಿಚಾರ ಪ್ರಸ್ತಾಪ ಮಾಡಿ.

**ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ತಾವು ಮತ್ತು ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ. ಆದರೆ, "ಮಾನ್ಯ ಮುಖ್ಯಮಂತ್ರಿಗಳು ಉದಾರವಾಗಿ ಎಲ್ಲ ಇಲಾಖೆಗಳಿಗೂ ಅನುದಾನವನ್ನು ನೀಡುತ್ತಿದ್ದಾರೆ. ನನ್ನ 38 ವರ್ಷಗಳ ರಾಜಕೀಯ ಅನುಭವದಲ್ಲಿ ಇಷ್ಟೊಂದು ಧಾರಾಳವಾಗಿ ಎಲ್ಲ ಇಲಾಖೆಗಳನ್ನು ಅಭಿವೃದ್ಧಿಪಡಿಸಲು ಈ ಸರ್ಕಾರ ಹಣ ನೀಡಿದೆ" ಎನ್ನುವ ಮಾತನ್ನು ಮಾನ್ಯ ಪ್ರಕಾಶ್ ಹುಕ್ಕೇರಿಯವರು ವಿರೋಧ ಪಕ್ಷದಲ್ಲಿದ್ದರೂ ಮುಕ್ತ ಕಂಠದಿಂದ ಹೊಗಳಿದ್ದಾರೆ. ಒಂದು ಸರ್ಕಾರ ಒಳ್ಳೆಯ ಕೆಲಸ ಮಾಡಿದಾಗ ವಿರೋಧ ಪಕ್ಷದಲ್ಲಿದ್ದುಕೊಂಡು ಅದನ್ನು "ಒಳ್ಳೆಯದು" ಎಂದು ಹೇಳುವುದಕ್ಕೆ ಒಂದು ಮಾನಸಿಕತೆ ಬೇಕಾಗುತ್ತದೆ. ಅದಕ್ಕಾಗಿ ಅವರಿಗೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಸರ್ಕಾರದಲ್ಲಿ ನಡೆದಿರುವ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಅವರು ಗಮನಿಸಿದ್ದಾರೆ, ಆ ಹಿನ್ನಲೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಗಮನಿಸಿದ್ದಾರೆ. ಆದರೆ, ಅವರು ಅದನ್ನು ವ್ಯಕ್ತಪಡಿಸುತ್ತಿಲ್ಲ; ಮನಸ್ಸಿನಲ್ಲಿಯೇ ಇಟ್ಟುಕೊಂಡಿದ್ದಾರೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:-** ಸನ್ಮಾನ್ಯ ಸಭಾಪತಿಯವರೇ, ಪಕ್ಷಾತೀತವಾಗಿ ಎಲ್ಲ ಸದಸ್ಯರುಗಳು ಸಹಿ ಮಾಡಿ ಮನವಿಪತ್ರವನ್ನು ಕೊಟ್ಟಿದ್ದೇವೆ.

**ಶ್ರೀ ಟಿ.ಎ.ಶರವಣ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಹುಕ್ಕೇರಿಯವರು ವಿರೋಧ ಪಕ್ಷದಲ್ಲಿದ್ದು ಅಭಿನಂದನೆಗಳನ್ನು ಸಲ್ಲಿಸಿದ್ದಾರೆಂದು ಮಾನ್ಯ ಗೃಹ ಸಚಿವರು ಹೇಳುತ್ತಿದ್ದಾರೆ. ಇನ್ನೂ ದೊಡ್ಡ ಮಟ್ಟದಲ್ಲಿ ಅಭಿನಂದನೆಗಳು ದೊರೆಯಬೇಕಾದರೆ, ಈ ಸರ್ಕಾರ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯನ್ನು ಹೆಚ್ಚು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು "ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಗಮನಿಸಿದ್ದಾರೆ. ಆದರೆ, ಅವರು ಅದನ್ನು ವ್ಯಕ್ತಪಡಿಸುತ್ತಿಲ್ಲ, ಮನಸ್ಸಿನಲ್ಲಿಯೇ ಇಟ್ಟುಕೊಂಡಿದ್ದಾರೆ" ತಾವು ಅವಕಾಶವನ್ನು ಕೊಟ್ಟರೇ ಬಹಳಷ್ಟಿದೆ ಹೇಳುವುದಕ್ಕೆ, ಮಾತನಾಡುವುದಕ್ಕೆ ನನ್ನ ಅಭ್ಯಂತರವೇನು ಇಲ್ಲ. ಅವರು ಹೇಳಿದ ರೀತಿಯಲ್ಲಿ ನಾನು ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ ಅಷ್ಟೇ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ನಿಯಮ 59ರ ಮೇಲೆ ಮಾತನಾಡಿ.

**೦4. <u>ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ</u>**

**ವಿಷಯ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.**

---

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 59ನೇ ನಿಯಮದ ಮೇರೆಗೆ ಪ್ರಸಕ್ತ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಪ್ರಸ್ತಾಪಿಸಲು ಈ ಕೆಳಕಂಡ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕೊಡುತ್ತಿದ್ದೇನೆ;

ಸನ್ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಕಾಣಿಯೂರಿನಲ್ಲಿ ನೆಲೆಸಿರುವ ಉಪವಲಯ ಅರಣ್ಯಾಧಿಕಾರಿ ಶ್ರೀ ಸಂಜೀವ ಪೂಜಾರಿ ಅವರು ಕುಟುಂಬ ಸಮೇತ ರಾತ್ರಿ ಮಲಗಿ ನಿದ್ರಿಸುತ್ತಿದ್ದ ವೇಳೆ ಮನೆಯ ಅಂಗಳದಲ್ಲಿ 15 ರಿಂದ 20 ಜನರಿದ್ದ ತಂಡವು ಕೈಬಾಂಬುಗಳನ್ನು ಸಿಡಿಸಿ ಅವಾಚ್ಯ ಶಬ್ಧಗಳಿಂದ ನಿಂದಿಸಿ ಕೊಲೆ ಬೆದರಿಕೆ ಹಾಕಿರುವ ಘಟನೆ ನಡೆದಿರುತ್ತದೆ.

ಸದರಿಯವರು ಈ ಸಂಬಂಧ ಪೋಲೀಸರಿಗೆ ದೂರು ನೀಡಿದ್ದು, ಗೃಹ ಸಚಿವರಿಗೆ ಪತ್ರವನ್ನು ಸಹ ಬರೆದಿರುತ್ತಾರೆ. ಉಪ ವಲಯ ಅರಣ್ಯಾಧಿಕಾರಿ ಸಂಜೀವ ಪೂಜಾರಿಯವರು ಭಜನೆ ಹಾಗೂ ಭಜಕರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಹಿಂದೂ ಧಾರ್ಮಿಕ ಭಾವನೆಗೆ ಧಕ್ಕೆ ತರುವ ರೀತಿಯಲ್ಲಿ ಲೇಖನಗಳನ್ನು ಪ್ರಕಟಿಸಿರುವುದಾಗಿ ಆರೋಪಿಸಿ, ಅವರ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಳ್ಳುವಂತೆ ಕೆಲವು ಹಿಂದೂ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ್ದವು. ಸರ್ಕಾರ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳದೆ ಗೂಂಡಾಗಳಿಗೆ ಸಹಕಾರ ನೀಡಿರುವುದು ವರದಿಯಾಗಿರುತ್ತದೆ.

ಹಾಗೆಯೇ, ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನ ಕೃಷ್ಣಾಪುರದಲ್ಲಿ "ಲತೀಫಾ ಸ್ಟೋರ್" ನಡೆಸುತ್ತಿದ್ದ ಜಲೀಲ್ ಎನ್ನುವ ವ್ಯಕ್ತಿಯ ಮೇಲೆ ಕೆಲವು ದುಷ್ಕರ್ಮಿಗಳು ಚೂರಿ ಇರಿದು ಸಾವಿಗೆ ಕಾರಣವಾಗಿರುವ ಪ್ರಕರಣ ಜರುಗಿದ್ದು, ಇಂತಹ ಪುನರಾವರ್ತಿತ ಶಾಂತಿ ಕದಡುವ ಘಟನೆಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು ಸರ್ಕಾರದ ನಡೆವಳಿಕೆಗಳನ್ನು ನಾವು ಖಂಡಿಸುತ್ತೇವೆ. ಈ ವಿಷಯವು ಸಾರ್ವಜನಿಕವಾಗಿ ಮಹತ್ವವಾಗಿರುವುದರಿಂದ ದಿನಾಂಕ:26.12.2022ರಂದು ಸದನದಲ್ಲಿ ಪ್ರಸ್ತಾಪಿಸಲು ನಿಯಮ 59ರಡಿಯಲ್ಲಿ ನಿಲುವಳಿ ಸೂಚನೆಯನ್ನು ನೀಡುತ್ತಿದ್ದೇವೆ.

(ಮುಂದುವರಿದಿದೆ)

(1166) 26.12.2022 1.40 ಪಿಕೆ:ಜಿಆರ್

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಯಾರಾದರೂ ಸರಿ ಧಾರ್ಮಿಕ ಭಾವನೆಗಳಿಗೆ ಸಂಬಂಧಪಟ್ಟಂತೆ ಧಕ್ಕೆ ತರುವಂತಹ ಮಾತುಗಳನ್ನಾಡಿದ್ದರೆ ಅವರ ಬಗ್ಗೆ ದೂರು ಕೊಡಲಿ, ನಂತರ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಿ; ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ.

ಆದರೆ, ಅಂಥವರ ಮನೆಯ ಹೊರಗೆ ಬಾಂಬ್ ಹಾಕಿ, ರಾತ್ರೋ-ರಾತ್ರಿ ಬೆದರಿಕೆ ಹಾಕುವುದು ತಪ್ಪು. ಅವರಿಗೆ ಅಲ್ಲಿರುವ ಪೊಲೀಸ್ ಅಧಿಕಾರಿಗಳು, ನೀವು ಕೊಟ್ಟಿರುವ ದೂರನ್ನು ವಾಪಸ್ಸು ತೆಗೆದುಕೊಳ್ಳಿ, ವಾಪಸ್ಸು ತೆಗೆದುಕೊಳ್ಳದೇ ಹೋದರೆ ನಿಮ್ಮ ಮೇಲೆಯೇ ಕೇಸ್ ಬುಕ್ ಮಾಡುತ್ತೇವೆ ಎಂದು ಹೇಳುತ್ತಾರೆ. ಇದು ಬಹಳ ಗಂಭೀರವಾದ ವಿಚಾರ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥದ್ದು ನಿರಂತರವಾಗಿ, ಸತತವಾಗಿ ನಡೆಯುತ್ತಲೇ ಇದೆ. ಕೆಲವು ಗೂಂಡಾಗಳ ಕಾರಣದಿಂದ ಧಾರ್ಮಿಕ ಹೆಸರಿನಲ್ಲಿ ಕೊಲೆಗಳು ಆಗುತ್ತಿವೆ. ಶಿವಮೊಗ್ಗದಲ್ಲಿ ಇಂತಹ ಒಂದು ಪ್ರಕರಣ ನಡೆದಾಗ ಒಬ್ಬ ಮಂತ್ರಿ, ಸೆಕ್ಷನ್ 144 ಇದ್ದಾಗಲೂ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು; ಲೂಟಿ ಆಯಿತು. ಯಾರು ಲೂಟಿ ಮಾಡಿದ್ದರೋ ಅವರ ಮೇಲೆ ಸೆಕ್ಷನ್ 107 ಹಾಕಲಾಯಿತು, ತಹಸೀಲ್ದಾರರನ್ನು ಕರೆಸುವಂತಹ ಕೆಲಸವಾಯಿತು. ಬಾಕಿಯವರ ಮೇಲೆ ಯುಎಪಿಎ (Unlawful Activities (Prevention) Act) ಆಯಿತು. ಹುಬ್ಬಳ್ಳಿಯಲ್ಲಿ ಘಟನೆಯಾದಾಗಲೂ ಯುಎಪಿಎ ಆಯಿತು. ದಕ್ಷಿಣ ಕನ್ನಡದಲ್ಲಿ ಎಷ್ಟು ಯುಎಪಿಎ ಮಾಡಿದ್ದೀರಿ? ಯಾವುದೇ ಧರ್ಮದವರು ಕೊಲೆ ಮಾಡಿರಲಿ ಇಂತಹ ಕೊಲೆಗಳನ್ನು ಮಾಡಿದಾಗ ಎಲ್ಲರ ಮೇಲೂ ಯುಎಪಿಎ ಹಾಕಬೇಕು. ಪಕ್ಷಾತೀತವಾಗಿ, ಜಾತ್ಯಾತೀತ ಸಂವಿಧಾನ ಹೊಂದಿರುವ ನಾವು ಎಲ್ಲರನ್ನೂ ಸಮಾನವಾಗಿ ಕಾಣುವ ಭಾವನೆ ಬರಬೇಕು. ಪೊಲೀಸರು ಸರ್ಕಾರದ ಒತ್ತಡದಿಂದ ಕೈಕಟ್ಟಿ ಕುಳಿತುಕೊಂಡರೆ ಇಂತಹ ಅನೇಕ ಕೊಲೆಗಳನ್ನು ನೋಡಬೇಕಾಗುತ್ತದೆ. ಹೋದ ಸಲದ ಚುನಾವಣೆ ನಡೆದಾಗ ಪರೇಶ್ ಮೇಸ್ತ ಕೇಸ್‌ನಲ್ಲಿ ದೊಡ್ಡ ಅವಾಂತರವಾಯಿತು. ಆದರೆ ಇವತ್ತು ಅದಕ್ಕೆ ಬಿ ರಿಪೋರ್ಟ್ ಮಾಡಿದ್ದಾರೆ. ಕೇವಲ ಒಂದು ಧರ್ಮಕ್ಕೆ ಸೀಮಿತವಾಗಿ ಮಾತ್ರ ಕಾನೂನು; ಇನ್ನೊಂದು ಧರ್ಮದವರಿಗೆ ಇಲ್ಲ ಎನ್ನುವುದು ಆಗಬಾರದು. ಈ ಕುರಿತು ಸ್ಪಷ್ಟವಾಗಿ ಮಾನ್ಯ ಗೃಹ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ಈ ವಿಷಯವಾಗಿ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 59ರ ಅಡಿ ತಂದಿರುವಂತಹ ವಿಷಯದ ಬಗ್ಗೆ ಚರ್ಚೆ

ಮಾಡಲು ಸರ್ಕಾರ ಮುಕ್ತವಾಗಿದೆ. ಅದರ ಬಗ್ಗೆ ಯಾವುದೇ ಅರೋಪಗಳನ್ನು ಮಾಡಿದರೂ ಸರ್ಕಾರ ಅದಕ್ಕೆ ಸೂಕ್ತ ಉತ್ತರ ಕೊಡುತ್ತದೆ; ಸರ್ಕಾರ ಪಾರದರ್ಶಕವಾಗಿದೆ. ಯಾವುದೇ ಆರೋಪಿಗಳ ಮೇಲೆ ಸರ್ಕಾರ ರಿಯಾಯಿತಿಯನ್ನು ಕೊಟ್ಟಿಲ್ಲ. ಎಲ್ಲರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಆದ್ದರಿಂದ ನಿಯಮ 59ರ ಅಡಿ ಕೊಟ್ಟಿರುವ ಈ ವಿಷಯವನ್ನು ಮಾರ್ಪಡಿಸಿ ನಿಯಮ 68ರ ಅಡಿ ತಂದರೆ ಎಲ್ಲರಿಗೂ ಮುಕ್ತವಾಗಿ ಚರ್ಚೆ ಮಾಡಲು ಅವಕಾಶ ಸಿಗುತ್ತದೆ.

**ಸಭಾಪತಿಯವರು:-** ಈಗಾಗಲೇ ನಮ್ಮೆದುರಿಗೆ ಕನ್‌ವರ್ಟ್ ಆಗಿ ನಿಯಮ 68ರ ಅಡಿ ಚರ್ಚೆಗೆ ತೆಗೆದುಕೊಳ್ಳಬೇಕಾದ 3 ವಿಷಯಗಳು ಇವೆ. ಆದಕಾರಣ ಪ್ರಸ್ತುತ ವಿಷಯವನ್ನು ನಿಯಮ 330ರ ಅಡಿಯಲ್ಲಿ ತೆಗೆದುಕೊಳ್ಳುತ್ತೇನೆ. ಆಗ ಎಲ್ಲಾ ಸದಸ್ಯರಿಗೆ ಮಾತನಾಡಲು ಅವಕಾಶವಾಗುತ್ತದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಇದನ್ನು ನಿಯಮ 72ರ ಅಡಿಯಲ್ಲಿ ತೆಗೆದುಕೊಳ್ಳಬೇಕಾಗಿತ್ತು; ಆದರೆ ಎಲ್ಲರಿಗೂ ಮಾತನಾಡಲು ಅವಕಾಶವಾಗಲಿ ಎನ್ನುವ ದೃಷ್ಟಿಯಿಂದ ನಿಯಮ 330ರ ಅಡಿ ತೆಗೆದುಕೊಳ್ಳುತ್ತಿದ್ದೇನೆ.

**05. ವಿತ್ತೀಯ ಕಾರ್ಯಕಲಾಪಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)( ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

ಅ) 2022-23ನೇ ಸಾಲಿನ ಪೂರಕ ಅಂದಾಜುಗಳ 2ನೇ ಕಂತಿನ ಬೇಡಿಕೆಗಳನ್ನು ಮಂಡಿಸುತ್ತಿದ್ದೇನೆ.

ಆ) 2022-23ನೇ ಸಾಲಿನ ಮಧ್ಯ ವಾರ್ಷಿಕ ಪರಿಶೀಲನಾ ವರದಿಯನ್ನು ಮಂಡಿಸುತ್ತಿದ್ದೇನೆ.

**೦6. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ 2021-2022ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಸಂಪುಟ I ಮತ್ತು II) ಸಭೆಯ ಮುಂದಿಡುತ್ತಿದ್ದೇನೆ.

ಸಭಾಪತಿಯವರು:- ಮಂಡಿಸಲಾಯಿತು.

**೦7. ಅರ್ಜಿಗಳನ್ನೊಪ್ಪಿಸುವುದು**

ಶ್ರೀ ಶಶಿಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ,

1. 2014-15ನೇ ಸಾಲಿನಲ್ಲಿ ಬೀದಿ ಬದಿ ವ್ಯಾಪರಿಗಳ ಸೌಲಭ್ಯಕ್ಕಾಗಿ ಕಲಬುರಗಿ ಮಹಾನಗರ ಪಾಲಿಕೆಯಿಂದ ಮೀಸಲಿಟ್ಟ 50 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡದೆ ಹಿಂದಕ್ಕೆ ಪಡೆದಿರುವುದರಿಂದ ಬೀದಿ ಬದಿ ವ್ಯಾಪಾರಿಗಳು ಸರ್ಕಾರದಿಂದ ಸಿಗುವ ಸೌಲಭ್ಯದಿಂದ ವಂಚಿತರಾಗಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

2. ಕಲಬುರಗಿ ನಗರದಲ್ಲಿ ಕಸ ವಿಲೇವಾರಿಗಾಗಿ ಸ್ವಾಧೀನ ಪಡಿಸಿಕೊಂಡಿರುವ ಜಮೀನಿನಲ್ಲಿ ಅಕ್ರಮವಾಗಿ ಫ್ಲಾಟ್‌ಗಳನ್ನು ನಿರ್ಮಿಸಿ ಅವುಗಳನ್ನು ಕಲಬುರಗಿ ಮಹಾನಗರ ಪಾಲಿಕೆಯ ಸಿಬ್ಬಂದಿಗಳಿಗೆ ಹಂಚಿಕೆ ಮಾಡಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಅರ್ಜಿಗಳನ್ನೊಪಿಸಲಾಯಿತು.

**೦೮.ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತಗೊಂಡಿರುವ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2022

2. ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2022

**ಸಭಾಪತಿಯವರು:-** ಈಗ ಸದನವನ್ನು ಮೂರು ಗಂಟೆಯವರೆಗೆ ಮುಂದೂಡುತ್ತೇನೆ.

**(ಭೋಜನ ವಿರಾಮಕ್ಕೆಂದು ಸದನವನ್ನು ಅಪರಾಹ್ನ 1 ಗಂಟೆ 45 ನಿಮಿಷದಿಂದ ಅಪರಾಹ್ನ 3.00 ಗಂಟೆಯವರೆಗೆ ಮುಂದೂಡಲಾಯಿತು)**

(1167) 26/12/2022/3:20/ಬಿಕೆಪಿ(ಎಸ್‌ಪಿಆರ್)-ಎಂಡಿ (ಸಭಾಪತಿಯವರ ಉಪಸ್ಥಿತಿ)

**(ಭೋಜನ ವಿರಾಮಕ್ಕಾಗಿ ಅಪರಾಹ್ನ 1 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪ ಸದನವು ಪುನಃ ಅಪರಾಹ್ನ 3 ಗಂಟೆ 20 ನಿಮಿಷಕ್ಕೆ ಪ್ರಾರಂಭವಾಯಿತು)**

**ಶ್ರೀ ಯು.ಬಿ.ವೆಂಕಟೇಶ್(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನದು ಒಂದು ಮನವಿ ಇದೆ. ವರ್ಷಕ್ಕೆ 10 ದಿನಗಳ ಕಾಲ ಇಲ್ಲಿ ಅಧಿವೇಶನವು ನಡೆಯುತ್ತದೆ; ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕಗಳಿಗೆ ಸಂಬಂಧಪಟ್ಟಂತೆ ಚರ್ಚಿಸಲು ಒಂದೆರೆಡು ದಿನಗಳನ್ನು ಮೀಸಲಿಡಬೇಕೆಂದು ನಾನು ತಮ್ಮಲ್ಲಿ ಕೋರಿಕೊಳ್ಳುತ್ತೇನೆ. ಈ ಭಾಗದಲ್ಲಿ ಅಧಿವೇಶನವನ್ನು ಮಾಡಿದಾಗ, ಇಲ್ಲಿಯವರ ಬಗ್ಗೆ ನಾವು ಚರ್ಚಿಸಬೇಕು.

**ಸಭಾಪತಿಯವರು:-** ತಾವು ಹೇಳುವುದು ನಿಜ ಇದೆ. ಈ ಬಗ್ಗೆ ಸದನದ ಎಲ್ಲಾ ಸದಸ್ಯರು ಸರ್ವಾನುಮತದಿಂದ ತೀರ್ಮಾನ ಮಾಡಿದರೆ, ಅದಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಭೆಯ ತೀರ್ಮಾನವೇನು, ನನ್ನ ಪ್ರಕಾರ, ಯಾರೂ ಸಹ ಇದಕ್ಕೆ ಬೇಡವೆಂದು ಹೇಳುವುದಿಲ್ಲ.

**ಸಭಾಪತಿಯವರು:-** ಇರಲಿ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದಕ್ಕಾಗಿ ಎರಡು ದಿನಗಳನ್ನು ತಾವು ಮೀಸಲು ಇಟ್ಟರೆ ಒಳ್ಳೆಯದು.

**ಸಭಾಪತಿಯವರು:-** ಉತ್ತರ ಕರ್ನಾಟಕ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕೆಂದು ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬೆಳಗಾವಿಯಲ್ಲಿ ಅಧಿವೇಶನ ನಡೆಯುವುದೇ ....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾಳೆಯ ದಿನ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆ ಇದೆ. ಅದರಲ್ಲಿ ಚರ್ಚಿಸೋಣ.

**ಸಭಾಪತಿಯವರು:-** ನಾಳಿನ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸೋಣ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾನು ಇವತ್ತಿನ ದಿವಸ ನೋಟೀಸ್‌ನ್ನು ನೀಡಿರುತ್ತೇನೆ.

**ಸಭಾಪತಿಯವರು:-** ತಾವು ನೋಟೀಸ್‌ನ್ನು ನೀಡಿ, ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸೋಣ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನ ಬೇರೆ. ಇದಕ್ಕೆ ಸದನದ ತೀರ್ಮಾನವಾಗಬೇಕು. ಬೆಳಗಾವಿಯಲ್ಲಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಉತ್ತರ ಕರ್ನಾಟಕದ ವಿಷಯಗಳ ಬಗ್ಗೆ ಚರ್ಚಿಸಲು ಎರಡು ದಿನಗಳನ್ನು ಮೀಸಲಿಡಬೇಕು ಎಂಬುದಾಗಿ ಸದಸ್ಯರು ಹೇಳುತ್ತಿದ್ದಾರೆ ಅಷ್ಟೆ. ಇದಕ್ಕೆ ತಮ್ಮ ಅಭ್ಯಂತರವೇನೂ ಇರುವುದಿಲ್ಲವಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ಇದಕ್ಕೆ ಯಾರ ಅಭ್ಯಂತರವೂ ಇರುವುದಿಲ್ಲ. ಆದರೆ ನಿಯಮದ ಪ್ರಕಾರ, ಈ ಬಗ್ಗೆ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ದಿನವನ್ನು ನಿಗದೀಕರಿಸಬೇಕಾಗಿರುವುದು. ಹೀಗಾಗಿ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಬಗ್ಗೆ ಚರ್ಚಿಸೋಣ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಈ ಬಗ್ಗೆ ನೋಟೀಸ್‌ನ್ನು ನೀಡುತ್ತೇನೆ.

**ಸಭಾಪತಿಯವರು:-** ತಾವು ನೋಟೀಸ್‌ನ್ನು ನೀಡಿ.

**೦೯. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2022**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, 2022 ರ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-**ಮಾನ್ಯ ಸಭಾಪತಿಯವರೇ, ರಾಜ್ಯದ ಜನತೆಯ ಹಿತದೃಷ್ಟಿಯಿಂದ ಪ್ರಸ್ತುತ ವಿಧೇಯಕವನ್ನು ಮಂಡಿಸಲಾಗಿದೆ. ಈಗ ಇರುವ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಯಂತೆ, ರಾಜ್ಯದಲ್ಲಿ ಹೊಸ ತಾಲ್ಲೂಕುಗಳು ರಚನೆಯಾದರೆ, ಮತ್ತೆ ಹೊಸದಾಗಿ ಅಧಿನಿಯಮಗಳನ್ನು ಜಾರಿಗೆ ತರಬೇಕಾದ ಅವಶ್ಯಕತೆಗಳಿರುತ್ತಿತ್ತು. ಆದರೆ, ಈಗ ತಂದಿರುವ ತಿದ್ದುಪಡಿ ವಿಧೇಯಕದ ಮೂಲಕ 27ನೇ ಪ್ರಕರಣಗಳನ್ನು ಸೇರ್ಪಡೆಗೊಳಿಸಲಾಗಿದೆ. ಇನ್ನು ಮುಂದೆ ಯಾವುದೇ ತಾಲ್ಲೂಕುಗಳು ರಚನೆಯಾದಲ್ಲಿ, ಈಗ ಇರುವ ಕಾಯ್ದೆಯಡಿ ತರುವುದಕ್ಕೆ ಮುಕ್ತವಾದ ಅವಕಾಶವನ್ನು ಮಾಡಿಕೊಡುವುದಕ್ಕೋಸ್ಕರ ಪ್ರಸ್ತುತ ತಿದ್ದುಪಡಿಯನ್ನು ತರಲಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಎಂದು ಹೇಳಿದರೆ, ಕರ್ನಾಟಕ ರಾಜ್ಯದ ಗಡಿ ಭಾಗದಲ್ಲಿನ ತಾಲ್ಲೂಕುಗಳು ಮಾತ್ರವಲ್ಲ; ಕರ್ನಾಟಕ ರಾಜ್ಯದಲ್ಲಿನ ತಾಲ್ಲೂಕುಗಳಲ್ಲಿಯೂ ಸಹ ಕೆಲವು ಸಂದರ್ಭಗಳಲ್ಲಿ, ಕೆಲವು ಜಿಲ್ಲೆಗಳು ವಿಭಜನೆಗೊಂಡಾಗ, ಕೆಲವು

ತಾಲ್ಲೂಕುಗಳು ಅವುಗಳಿಗೆ ಸೇರುವ ಸಂದರ್ಭದಲ್ಲಿ ಚರ್ಚೆಗಳಾಗುತ್ತವೆ. ನಮ್ಮ ರಾಜ್ಯದ ಇತಿಹಾಸವನ್ನು ನೋಡಿದಾಗ, 1956ನೇ ಇಸ್ವಿಯಲ್ಲಿ ರಾಜ್ಯದ ಏಕೀಕರಣ ಸಮಿತಿಯ ಶಿಫಾರಸ್ಸಿನಂತೆ ಕರ್ನಾಟಕ ರಾಜ್ಯ ಉದಯವಾದಾಗ, ಇದು ಒಂದು ರೀತಿಯ sandwich ನಂತಾಗಿತ್ತು. ರಾಜ್ಯದ ಒಂದು ಕಡೆ ಮಹಾರಾಷ್ಟ್ರ, ಮತ್ತೊಂದು ಕಡೆ ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ತಮ್ಮ ಗಡಿ ಭಾಗಗಳನ್ನು ಹಂಚಿಕೊಂಡಿದ್ದವು. ಕಾವೇರಿ ಅಂತರರಾಜ್ಯ ಜಲ ವಿವಾದವಾದಾಗ ನಮಗೆ ಸ್ವಲ್ಪ ಪ್ರಮಾಣದ ನದಿ ನೀರು ಸಿಗುವುದಿಲ್ಲ. ನೆರೆಯ ಕೇಂದ್ರಾಡಳಿತ ಪ್ರದೇಶವಾದ ಪಾಂಡೀಚೆರಿಯೂ ಸಹ ನಮ್ಮ ಮೇಲೆ ಒತ್ತಡವನ್ನು ಹಾಕಲಾರಂಭಿಸಿತು. ಒಂದು ಹೊಸ ರಾಜ್ಯ ಉದಯವಾದಾಗ, ಹಲವಾರು ಸಮಸ್ಯೆಗಳು ಬಂದವು. ಆಗಿನ ಸಂದರ್ಭದಲ್ಲಿ ಯಾರು ಪ್ರಬಲರಾಗಿದ್ದರೋ…., ನಮ್ಮ ರಾಜ್ಯ ಉದಯವಾದಾಗ ಎಷ್ಟು ಜಿಲ್ಲೆ ಮತ್ತು ತಾಲ್ಲೂಕುಗಳಿದ್ದವು ಹಾಗೂ ಈಗ ಎಷ್ಟು ಜಿಲ್ಲೆ ಮತ್ತು ತಾಲ್ಲೂಕುಗಳಾಗಿವೆ ಎನ್ನುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ರಾಜ್ಯ ವಿಂಗಡನೆಯಾದಾಗ, ಕೆಲವು ಬಲಾಢ್ಯರು ಇದ್ದ ಸಂದರ್ಭದಲ್ಲಿ …., ಏಕೆಂದರೆ, ಸ್ವತಂತ್ರ ಭಾರತದ ಹೋರಾಟದಲ್ಲಿ ಯಾರು ಭಾಗಿಯಾಗಿದ್ದರೋ, ಅವರ ಮಾತಿಗೆ ಬಹಳಷ್ಟು ಮಹತ್ವ ದೊರೆತು, ಕೆಲವು ಜಿಲ್ಲೆ ಮತ್ತು ತಾಲ್ಲೂಕುಗಳು ರಚನೆಗೊಂಡವು. ಆ ಸಂದರ್ಭದಲ್ಲಿ ಕೆಲವು ತಾಲ್ಲೂಕುಗಳು ನಮ್ಮ ರಾಜ್ಯಕ್ಕೊಳಪಡಲಿಲ್ಲ. ಇತ್ತೀಚೆಗೆ ಬಳ್ಳಾರಿ ಜಿಲ್ಲೆಯು ವಿಭಜನೆಗೊಂಡು ವಿಜಯನಗರ ಜಿಲ್ಲೆಯಾಯಿತು. ಆಗ ಕೆಲವು ತಾಲ್ಲೂಕುಗಳು ಬಳ್ಳಾರಿ ಜಿಲ್ಲೆಗೆ ಹಾಗೂ ಮತ್ತೂ ಕೆಲವು ವಿಜಯನಗರ ಜಿಲ್ಲೆಗಳಿಗೆ ಸೇರ್ಪಡೆಗೊಂಡವು.

ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ಸ್ವಾಗತಿಸುವುದಾಗಿ ನಾನು ಈಗಾಗಲೇ ಹೇಳಿದ್ದೇನೆ. ಗಡಿ ಪ್ರದೇಶವೆಂದರೇ, ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವೇ ಸೀಮಿತಗೊಳಿಸಬಾರದು. ಏಕೆಂದರೆ, ಕೆಲವು ಭಾಗಗಳಲ್ಲಿ ಅಂದರೆ, ಬೆಳಗಾವಿ ವಿಚಾರ ಬಂದಾಗ ಈ ಪ್ರದೇಶದಲ್ಲಿ ಕನ್ನಡ ಭಾಷೆಯನ್ನು ಮಾತನಾಡುವವರಿಗೂ ಸಹಾಯವಾಗುವ ಕೆಲಸಗಳಾಗಬೇಕು. ಗಡಿ ಪ್ರದೇಶಾಭಿವೃದ್ಧಿಯು ಕೇವಲ ಕರ್ನಾಟಕ ರಾಜ್ಯಕ್ಕೆ ಮಾತ್ರವೇ ಸೀಮಿತವಾಗದೇ, ಇದಕ್ಕೆ ಹೆಚ್ಚಿನ ಶಕ್ತಿಯನ್ನು ತುಂಬುವಂತಾಗಬೇಕು. ರಾಜ್ಯದ ಕೆಲವು ಗಡಿ ಪ್ರದೇಶಗಳಾದ ಕಾಸರಗೋಡು, ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ ಅಥವಾ ತಮಿಳುನಾಡು ರಾಜ್ಯಗಳ ಗಡಿ ಭಾಗಗಳಲ್ಲಿರುವ ಅಂದರೆ ಎಲ್ಲಾ ಗಡಿ ಭಾಗಗಳಲ್ಲಿನ ಕನ್ನಡ ಮಾತನಾಡುವ ಜನರಿಗೆ ಸಹಾಯವಾಗುವ ಕೆಲಸಗಳು ಈ ಪ್ರಾಧಿಕಾರದಿಂದಾಗಬೇಕು. ಆಗ ಮಾತ್ರವೇ ಈ ಪ್ರಾಧಿಕಾರಕ್ಕೆ ಒಂದು ರೀತಿಯ ಅರ್ಥ ಬರುತ್ತದೆ. ಏಕೆಂದರೆ ಅವರು ತಮ್ಮ ಸ್ವಂತ ಹಣ

ಖರ್ಚು ಮಾಡಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುವ ಶಕ್ತಿ ಇವರಿಗಿರುವುದಿಲ್ಲ. ಇವರುಗಳು ಕೇವಲ ಕನ್ನಡಾಂಬೆಯ ಒಂದು ಫೋಟೋವನ್ನು ಇಟ್ಟು ಕನ್ನಡ ಧ್ವಜಾರೋಹಣ ಮಾಡಿ, ಒಂದು ದಿನದ ಕಾರ್ಯಕ್ರಮಗಳನ್ನು ಮಾಡುತ್ತಾರೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, Association of *Kannada* Kootas of *America (AKKA)* ಗೆ ಕನ್ನಡ ರಾಜ್ಯೋತ್ಸವವನ್ನು ಆಚರಿಸಲು ಎಷ್ಟೋ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಗಡಿ ಪ್ರದೇಶಗಳಲ್ಲಿ ಕನ್ನಡ ಮಾತನಾಡುವ ಜನರಿಗೆ ಸರ್ಕಾರವು ಅನುಕೂಲ ಮಾಡಿಕೊಡಬೇಕು. ಅಮೇರಿಕ ಖಂಡದಲ್ಲಿರುವ ಬೇರೆ ಸಂಸ್ಥೆಗೆ ಕನ್ನಡ ರಾಜ್ಯೋತ್ಸವವನ್ನು ಆಚರಿಸಲು ಹಣ ಬಿಡುಗಡೆ ಮಾಡುವಂತಹ ಸಂದರ್ಭದಲ್ಲಿ, ನಾಳೆಯ ದಿನ ಬೇರೆ ರಾಷ್ಟ್ರಗಳಲ್ಲಿಯೂ ಸಹ ರಾಜ್ಯೋತ್ಸವವನ್ನು ಆಚರಿಸಲು ಹಣ ಬಿಡುಗಡೆ ಮಾಡಬಹುದು. ರಾಜ್ಯೋತ್ಸವದ ಆಚರಣೆಗಾಗಿ ಸರ್ಕಾರವು ಹಣ ನೀಡಲಿ; ಇದಕ್ಕೆ ನಾವು ಬೇಡವೆಂದು ಹೇಳುವುದಿಲ್ಲ. ನಮ್ಮ ಗಡಿ ಭಾಗದ ಸುತ್ತಮುತ್ತಲಿನ ಸಾಹಿತ್ಯ, ಕಲೆಗಳು ಉಳಿದುಕೊಳ್ಳಬೇಕು. ಈ ದೃಷ್ಟಿಯಿಂದ ನಾವು ಈ ಪ್ರಾಧಿಕಾರದ ಮೂಲಕ ಗಡಿ ಭಾಗದ ಜನರಿಗೆ ಸಹಾಯ ಮಾಡುವ ಕೆಲಸಗಳನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ. ಏಕೆಂದರೆ, ರಾಜ್ಯದ ಗಡಿ ಭಾಗವಾದ ಕಾಸರಗೋಡಿನಲ್ಲಿ ಕನ್ನಡ ಮತ್ತು ತುಳು ಭಾಷೆಗಳಿವೆ. ತುಳು ಮತ್ತು ಕೊಡವ ನಮ್ಮ ಭಾಷೆಗಳಾಗಿವೆ.

**ಸಭಾಪತಿಯವರು:-** ಅವರು ನಮಗಿಂತಲೂ ಚೆನ್ನಾಗಿ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರದ್ದು ಬಹಳ ಸ್ಪಷ್ಟವಾದ ಕನ್ನಡ. ಬರವಣಿಗೆಯ ಕನ್ನಡ ಭಾಷೆಯನ್ನು ಯಾರಾದರೂ ಮಾತನಾಡುವವರಿದ್ದರೆ, ಅವರು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯವರಾಗಿರುತ್ತಾರೆ. ಕುಂದಾಪುರ ಭಾಗದ ಕನ್ನಡ ಭಾಷೆಯು ನಮಗೂ, ನಿಮಗೂ ಸಹ ಅರ್ಥವಾಗುವುದಿಲ್ಲ; ಏಕೆಂದರೆ ಇದು ಬೇರೆ ರೀತಿಯ ಕನ್ನಡ ಭಾಷೆಯಾಗಿದೆ. ಕಾಸರಗೋಡಿನಲ್ಲಿರುವ ಕನ್ನಡಿಗರು ಸಭಾನಾಯಕರಿಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ ಇವರು ಅಲ್ಲಿಗೆ ಬಹಳವಾಗಿ ಹೋಗಿ ಬರುತ್ತಿರುತ್ತಾರೆ. ಈ ರೀತಿಯ ಕನ್ನಡ ಭಾಷೆಯನ್ನು ನಾವು ಉಳಿಸಿ, ಬೆಳೆಸಿಕೊಂಡು ಬರಬೇಕು. ಏಕೆಂದರೆ, ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಗಡಿ ಭಾಗದ ಜನರಿಗೆ

ಸಹಾಯವಾಗುವ ಕೆಲಸಗಳು ಈ ಪ್ರಾಧಿಕಾರದಿಂದಾದಾಗ ಮಾತ್ರವೇ ಬಹಳ ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ.

ಕೆಲವು ಸಂದರ್ಭಗಳಲ್ಲಿ, ರಾಜಕೀಯಕ್ಕೋಸ್ಕರ ಕೆಲವು ತಾಲ್ಲೂಕುಗಳನ್ನು ಬೇರೆ ಮಾಡಿದಾಗ, ಕೆಲವು ಹಳ್ಳಿಗಳು "ತ್ರಿಶಂಕು" ಪರಿಸ್ಥಿತಿಯಂತಾಗುತ್ತವೆ. ಕೆಲವು ಹಳ್ಳಿಗಳು ಯಾವ ತಾಲ್ಲೂಕಿಗೂ ಸೇರಿರುವುದಿಲ್ಲ. ಈ ಸಂದರ್ಭದಲ್ಲಿ ನಾನು ಉದಾಹರಣೆಯೊಂದನ್ನು ನೀಡಬಯಸುತ್ತೇನೆ. ಬೆಂಗಳೂರು – ಇದನ್ನು ತಾಲ್ಲೂಕು ಎಂದು ಹೇಳುವುದಕ್ಕಾಗುವುದಿಲ್ಲ. ಪ್ರಸ್ತುತ ಶ್ರೀ ಅಶೋಕ್, ಕಂದಾಯ ಸಚಿವರು ಸದನದಲ್ಲಿ ಉಪಸ್ಥಿತರಿಲ್ಲ. ಬೆಂಗಳೂರಿನ ಒಂದು ವಿಧಾನ ಸಭಾ ಕ್ಷೇತ್ರವು ಐದು ವಿಧಾನಸಭಾ ಕ್ಷೇತ್ರಗಳಾಗಿದೆ. ಒಂದು ಕಡೆ ಅದು ಗ್ರಾಮೀಣ ಭಾಗಕ್ಕೆ ಸೇರಿದರೆ, ಅಲ್ಲಿ ಗ್ರಾಮ ಪಂಚಾಯಿತಿಯು ಇರುತ್ತದೆ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಿನ ಮಹದೇವಪುರ, ಯಲಹಂಕ, ದಾಸರಹಳ್ಳಿ ಇತ್ಯಾದಿ ಪ್ರದೇಶಗಳು ಬಿ.ಬಿ.ಎಂ.ಪಿ. ಮತ್ತು ಗ್ರಾಮ ಪಂಚಾಯಿತಿ – ಎರಡರ ವ್ಯಾಪ್ತಿಗೊಳಪಡುತ್ತವೆ. ಇಂತಹ ಸಂದರ್ಭದಲ್ಲಿ ಗಡಿ ಪ್ರಾಧಿಕಾರವು ನಿಯಮಗಳನ್ನು ಮಾಡುವಾಗ, ತಾಲ್ಲೂಕುಗಳನ್ನು ಮಾಡುವಾಗ ಅಲ್ಲಿನ ವಾಸ್ತವಾಂಶಗಳನ್ನು ಮೊದಲು ಅಧ್ಯಯನ ಮಾಡಲಿ. ಯಾವ ತಾಲ್ಲೂಕುಗಳಿಗೆ ಯಾವ ಹಳ್ಳಿ, ಗ್ರಾಮಗಳು ಸೇರಬೇಕು ಎನ್ನುವುದನ್ನು ಮೊದಲು ತೀರ್ಮಾನಿಸಿದಾಗ, ಇಷ್ಟೊಂದು ಸಮಸ್ಯೆಗಳಾಗುವುದಿಲ್ಲ. ಯಾರೋ ಪ್ರಭಾವಿತರು ಬಂದಾಗ, ಸರ್ಕಾರಕ್ಕೆ "ಬಿಸಿ ತುಪ್ಪ"ದಂತಾಗುತ್ತದೆ ಪರಿಸ್ಥಿತಿ; ಅಂದರೆ, ಅವರನ್ನು ಇಟ್ಟುಕೊಳ್ಳುವಂತಿಲ್ಲ ಹಾಗೂ ಬಿಡುವಂತಿಲ್ಲ. ಒತ್ತಾಯ ಪರಿಸ್ಥಿತಿಯಲ್ಲಿ ತಾಲ್ಲೂಕುಗಳನ್ನು ರಚಿಸುತ್ತಾರೆ, ಆಗ ಅಲ್ಲಿನ ಜನರ ಕಷ್ಟ ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರವು ಈ ರೀತಿಯ ಯಾವುದೇ ಪ್ರಕರಣಗಳಿಗೆ ಆಸ್ಪದ ನೀಡಬಾರದು. ಪ್ರಸ್ತುತ ಮಂಡಿಸಿರುವ ತಿದ್ದುಪಡಿಯಲ್ಲಿ ಅನುಕೂಲಗಳಾದರೆ ಬಹಳ ಒಳ್ಳೆಯದು; ಹೀಗಾಗಿ ನಾನು ಇದನ್ನು ಸ್ವಾಗತಿಸುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಪ್ರಸ್ತುತ ಸರ್ಕಾರ ಮಂಡಿಸಿರುವ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2022ನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ, ಹೊಸ ತಾಲ್ಲೂಕುಗಳ ರಚನೆಯಾದಾಗ, ಅವುಗಳನ್ನು ಅಳವಡಿಸಿಕೊಳ್ಳುವುದಕ್ಕೆ ಅಧಿಕಾರ ಬೇಕು ಎನ್ನುವ ದೃಷ್ಟಿಯಿಂದ ಪ್ರಸ್ತುತ ತಿದ್ದುಪಡಿಯನ್ನು ಸರ್ಕಾರವು ಮಂಡಿಸಿರುವುದಾಗಿ ತಿಳಿಸಿದೆ. ಕರ್ನಾಟಕ ಗಡಿ ಪ್ರದೇಶ

ಅಭಿವೃದ್ಧಿ ಪ್ರಾಧಿಕಾರದ ವಿಧೇಯಕವನ್ನು 2010ನೇ ಇಸ್ವಿಯಲ್ಲಿ ಮಾಡಲಾಗಿದೆ. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಉದ್ದೇಶವನ್ನು ಸದರಿ ಕಾಯ್ದೆಯಲ್ಲಿ ಈಗಾಗಲೇ ತಿಳಿಸಲಾಗಿದೆ.

**(ಈ ಹಂತದಲ್ಲಿ ಉಪ ಸಭಾಪತಿಯವರಾದ ಶ್ರೀ ಎಂ.ಕೆ.ಪ್ರಾಣೇಶ್ ರವರು ಸಭಾಪತಿ ಪೀಠವನ್ನು ಅಲಂಕರಿಸಿದರು)**

ಈ ಕಾಯ್ದೆ ಏನು ಎಂದರೆ,

STATEMENT OF OBJECTS AND REASONS

Act 12 of 2010.- It is considered necessary to provide for establishment of the Karnataka Border Area Development Authority to,

(a) develop people in 52 border taluks which have been identified and covered under the "border area" in all spheres of life, like Kannada language, culture, education, irrigation, environment, industry, health and agriculture;

ನೆರೆಯ ರಾಜ್ಯದಲ್ಲಿರುವ ಕನ್ನಡಿಗರನ್ನು ಅಲ್ಲಿ ರಕ್ಷಣೆ ಮಾಡಬೇಕು. ನಮ್ಮ ಸಂಸ್ಕೃತಿಯನ್ನು ಅಲ್ಲಿ ಅಳವಡಿಸಿಕೊಳ್ಳಲು ಎಲ್ಲಾ ರೀತಿಯ ಅವಕಾಶಗಳನ್ನು ನೀಡಬೇಕು.

(ಮುಂದು)

**(1168) 26.12.2022 03.30 ಎಸ್‌ವಿ-ಎಕೆ** (ಉಪ ಸಭಾಪತಿಯವರ ಉಪಸ್ಥಿತಿ)

**Sri PRAKASH K. RATHOD (contd.):**

The Statement of Objects and Reasons of the original Act of 2010 further reads as follows: –

"(b) protect the Kannada people from the influence of the neighbouring state language, culture, so that they should not be carried away from the Kannada environment socially, culturally, educationally and financially;

(c) implement schemes to provide education in Kannada medium, text books, library and conducting lecture programme and also cultural programmes in Kannada language;

(d) encourage handicraft industries, cottage industries and other facilities required for the benefit of kannadigas;

(e) improve living conditions of the people in the border area and also the status of the Kannada speaking people in the neighbouring border areas;"

ಈ ರೀತಿಯ ಉದ್ದೇಶಗಳು ಈ ಆಕ್ಟ್‌ನಲ್ಲಿವೆ. ಹೊಸ ಹೊಸ ತಾಲ್ಲೂಕುಗಳನ್ನು ಸೇರಿಸಬೇಕೆಂದು ಈ ಬಿಲ್ ಅನ್ನು ಮಂಡನೆ ಮಾಡಿದ್ದಾರೆ. ಆದರೆ ಈ ಉದ್ದೇಶಗಳನ್ನು ಎಷ್ಟರ ಮಟ್ಟಿಗೆ ನಾವು ಈಡೇರಿಸಿದ್ದೇವೆ. ಈ ಬಿಲ್‌ನಲ್ಲಿರುವ ಉದ್ದೇಶಗಳನ್ನು ಈಡೇರಿಸುವಲ್ಲಿ ನಾವು ಬಹುಪಾಲು ವಿಫಲರಾಗಿದ್ದೇವೆಂದು ನಾನು ಭಾವಿಸಿದ್ದೇನೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು

ಹೇಳಿದರು. ನನ್ನನ್ನು ಗಡಿ ಭಾಗದ ಕಾಸರಗೋಡಿಗೆ ಕರೆಸಿದ್ದರು. ಅದು ಕೇರಳದಲ್ಲಿರುವ ಕನ್ನಡದ ಶಾಲೆ. 100 ವರ್ಷಕ್ಕಿಂತಕೂ ಹಳೆಯ ಶಾಲೆಯಾಗಿದ್ದು, ಅಲ್ಲಿಗೆ ಮಹಾತ್ಮಾ ಗಾಂಧಿಯವರು ಭೇಟಿ ನೀಡಿದ್ದರು. ಅದು ಸರ್ಕಾರಿ ಅನುದಾನಿತ ಶಾಲೆ. ಅದರ ಹೆಸರನ್ನು ತರಿಸಿ ಕೊಡುತ್ತೇನೆ. ಶಾಲಾ ಕಟ್ಟಡ ಸಂಪೂರ್ಣವಾಗಿ ಬಿದ್ದು ಹೋಗಿದೆ. ಯಾವುದೇ ತರವಾದ ಸೌಲಭ್ಯಗಳು ಇಲ್ಲ. ಮಕ್ಕಳು ಹೊರಗೆ ಕುಳಿತು ವಿದ್ಯಾಭ್ಯಾಸ ಮಾಡುತ್ತಾರೆ. ಈ ರೀತಿಯ ಪರಿಸ್ಥಿತಿ ಗಡಿ ಭಾಗದ ಕನ್ನಡ ಮಾಧ್ಯಮ ಶಾಲೆಗಳಿಗೆ ಇದೆ. ಬೇರೆ ರಾಜ್ಯಗಳಲ್ಲಿ ನಮ್ಮ ಕನ್ನಡ ಶಾಲೆಗಳಿಗೆ ನಿರ್ಬಂಧ ಮಾಡಬೇಕೆಂದು ಹೇಳಿ ಯಾವುದೇ ರೀತಿಯ ಸೌಲಭ್ಯಗಳನ್ನು ಕೊಡುವುದಿಲ್ಲ. ಅದು ಕಾಸರಗೋಡು ಇರಬಹುದು ಅಥವಾ ನನ್ನ ಜಿಲ್ಲೆಯ ಪಕ್ಕದಲ್ಲಿರುವ ಶೋಲಾಪುರ, ಪಂಢರಪುರದಲ್ಲಿರಬಹುದು ಈ ಭಾಗದಲ್ಲಿರುವ ಹೊರನಾಡ ಕನ್ನಡಿಗರಿಗೆ ಈ ಸೌಲಭ್ಯಗಳು ಸಿಗುತ್ತಿಲ್ಲ ಎನ್ನುವ ಕೂಗು ಇದೆ. ಬಹುಶಃ ನಾವು ಇದಕ್ಕೆ ಅವರಿಗೆ ಸ್ಪಂದಿಸಬೇಕು. ಹೊರರಾಜ್ಯದಲ್ಲಿರುವ ಕನ್ನಡ ಮಾಧ್ಯಮದ ಮಕ್ಕಳಿಗೆ ಕನ್ನಡದಲ್ಲಿ ಕಲಿಸುವಂತಹ ಅವಕಾಶಗಳು ಬಹಳ ವರ್ಷಗಳಿಂದ ಇದ್ದರೂ ಸಹ ಅವರಿಗೆ ಪ್ರೋತ್ಸಾಹ ಕೊಡುವುದರಲ್ಲಿ ನಾವು ವಿಫಲರಾಗಿದ್ದೇವೆ. ಶಿಕ್ಷಣ, ಪಠ್ಯಪುಸ್ತಕಗಳು, ಲೈಬ್ರರಿ ಮುಂತಾದ ಸೌಲಭ್ಯಗಳನ್ನು ಒದಗಿಸಿ ಅಲ್ಲಿ ಉಪನ್ಯಾಸ ಕಾರ್ಯಕ್ರಮ ಮಾಡಬೇಕು. ಅಲ್ಲಿ ನಮ್ಮ ಕನ್ನಡ ಭಾಷೆ ಸಂಸ್ಕೃತಿಯನ್ನು ಉಳಿಸಲು ಸರ್ಕಾರದ ವತಿಯಿಂದ ಈ ಕಾರ್ಯಕ್ರಮಗಳನ್ನು ಮಾಡಬೇಕು. ಇದನ್ನು ನಾವು ಮಾಡುತ್ತಿಲ್ಲ.

ಹೊಸ ತಾಲ್ಲೂಕುಗಳ ರಚನೆ ಆಯಿತು. ಆದರೆ ಇದಕ್ಕೆ ತಾವು ಇಷ್ಟು ಬಜೆಟ್ ಎಂದು ಮಂಡಿಸಿದಿರಿ. ಇತ್ತೀಚೆಗೆ ನಾನು ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಬಳಿ ಮಾತನಾಡಿದ್ದೇನೆ. ದುಬೈನಲ್ಲಿ ಹೊರನಾಡು ಕನ್ನಡಿಗರು ಮಾಡಿದ್ದಂತಹ ಕಾರ್ಯಕ್ರಮಕ್ಕೆ ಹೋಗಿದ್ದೆನು. ಅವತ್ತು ಈ ಗಡಿ ಪ್ರಾಧಿಕಾರದ ಅಧ್ಯಕ್ಷರು ಹೇಳುತ್ತಿದ್ದರು. ಹಿಂದಿನ ಸರ್ಕಾರವಿದ್ದಾಗ ಸಾಕಷ್ಟು ಬಜೆಟ್ ಕೊಟ್ಟಿದ್ದರು. ಈಗ ಬಹಳ ಕಡಿಮೆ ಕೊಟ್ಟಿದ್ದಾರೆ. ಹಿಂದಿನ ಸರ್ಕಾರ ಇದ್ದಾಗ ರೂ.200 ಕೋಟಿಯಷ್ಟು ಬಜೆಟ್ ಕೊಟ್ಟಿದ್ದರು. ಈಗ ಕೇವಲ ರೂ.25 ಕೋಟಿಯಷ್ಟೇ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ಕೊಡುತ್ತೇವೆಂದು ಹೇಳಿದರೂ ಕೊಟ್ಟಿಲ್ಲವೆಂದು ಅವರ ನೋವನ್ನು ಹೇಳಿಕೊಂಡಿದ್ದಾರೆ. ಸರ್ಕಾರ ಈ

ಮಸೂದೆಯನ್ನು ತಂದಿರುವ ಸಂದರ್ಭದಲ್ಲಿ ಅವರಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿದರೆ ಅವರಿಗೆ ಸಾಕಷ್ಟು ಅನುಕೂಲವಾಗುತ್ತದೆ.

ಈ ಪ್ರಾಧಿಕಾರಕ್ಕೆ ಏಳು ಜನ ಸದಸ್ಯರನ್ನು ಸರ್ಕಾರ ನಾಮನಿರ್ದೇಶನ ಮಾಡುತ್ತದೆ. Literature ಆಗಲಿ, administration ಆಗಲಿ, education ಆಗಲಿ, law ಆಗಲಿ ಅಂತಹ ಒಬ್ಬ ಗಣ್ಯ ವ್ಯಕ್ತಿಯನ್ನು ಈ ಪ್ರಾಧಿಕಾರದಲ್ಲಿ ಸದಸ್ಯರನ್ನಾಗಿ ಮಾಡಬೇಕೆಂದು ಇದೆ. ಅದು ಅರ್ಥಪೂರ್ಣವಾಗಿ ಆಗಬೇಕೆಂದರೆ ಪ್ರಾಧಿಕಾರದ ಸದಸ್ಯರಿಗೆ ಅನುಕೂಲವಾದ ಬಜೆಟ್ allocation ಮತ್ತು ಈ ಭಾಗದ ಪರಿಣಿತರನ್ನು ಸದಸ್ಯರನ್ನಾಗಿ ಮಾಡಿದರೆ ಅನುಕೂಲವಾಗುತ್ತದೆ.

ನಾನು ಆಗಲೇ ಹೇಳಿದಂತಹ ಮಾಹಿತಿ ಬಂದಿದೆ. ಪ್ರಥಮ ರಾಷ್ಟ್ರಕವಿಗಳಾದ ದಿವಂಗತ ಮಂಜೇಶ್ವರ ಗೋವಿಂದ ಪೈಯವರು ಕಾಸರಗೋಡಿನಲ್ಲಿ ಈ ಶಾಲೆಯನ್ನು ಕಟ್ಟಿದ್ದರು. ಈ ಭಾಗದಲ್ಲಿ 200 ಶಾಲೆಗಳಿವೆ. ಮಂಜೂರಾಗಿರುವ 200 ಶಾಲೆಗಳಲ್ಲಿ 100 ಶಾಲೆಗಳು ಮುಚ್ಚಿ ಹೋಗಿವೆ. ಇನ್ನೂ ನಾನು ಶೋಲಾಪುರ, ಪಂಢರಪುರ, ಬೀದರ್, ಕಲಬುರಗಿ ಗಡಿ ಭಾಗವನ್ನು ಬಿಟ್ಟು ಹೇಳುತ್ತಿದ್ದೇನೆ. ಕೇವಲ ಕಾಸರಗೋಡಿನ ಅಕ್ಕಪಕ್ಕ ಗ್ರಾಮಗಳಲ್ಲಿರುವ 100ಕ್ಕಿಂತ ಹೆಚ್ಚು ಶಾಲೆಗಳು ಮುಚ್ಚಿ ಹೋಗಿದೆ. ಕನ್ನಡಕ್ಕೆ ಪ್ರಾತಿನಿಧ್ಯವನ್ನು ಕೊಡಬೇಕು. ಕೇವಲ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ಹೊರನಾಡು ಕನ್ನಡಿಗರಿಗೆ ಅವಕಾಶ ಮಾಡಿಕೊಡುವುದು ಒಳ್ಳೆಯದೆಂದು ನಾನು ಭಾವಿಸಿದ್ದೇನೆ. ಗಡಿಭಾಗದಲ್ಲಿ ಯಾವ್ಯಾವ ಶಾಲೆಗಳು ಮುಚ್ಚುವಂತಹ ಪರಿಸ್ಥಿತಿಯಲ್ಲಿದೆ, ಅಲ್ಲಿ ಸರ್ಕಾರದಿಂದ ಶಿಕ್ಷಣವನ್ನು ಕೊಡಲು ಮಂಜೂರಾತಿಯನ್ನು ನೀಡಲಾಗಿರುವ ಕಡೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಟ್ಟರೆ ಈ ಮಸೂದೆಯಿಂದ ಅನುಕೂಲವಾಗುತ್ತದೆ. ಇದಕ್ಕೆ ಚಾಲನೆ ಕೊಡಲು ಸರ್ಕಾರ ಮುಂದೆ ಬರುತ್ತದೆ ಮತ್ತು ಹೆಚ್ಚಿನ ಹಣ ಬಿಡುಗಡೆ ಮಾಡುತ್ತದೆ ಎನ್ನುವ ವಿಶ್ವಾಸದಿಂದ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯಗಳು ಮರುವಿಂಗಡಣೆಯಾಗಿ ಈಗಾಗಲೇ 66 ವರ್ಷಗಳು ಕಳೆದಿವೆ. 20 ಜಿಲ್ಲೆಗಳಿದ್ದದ್ದು, ಈಗ 30 ಜಿಲ್ಲೆಗಳಾಗಿವೆ. 120 ಇದ್ದ ತಾಲ್ಲೂಕುಗಳು 225

ತಾಲ್ಲೂಕುಗಳಾಗಿವೆ. ಈ ಜಿಲ್ಲೆಗಳ ಮತ್ತು ತಾಲ್ಲೂಕುಗಳ ಪುನರ್ವಿಂಗಡಣೆಯಲ್ಲಿ ಗಡಿಭಾಗದಲ್ಲಿರತಕ್ಕಂತಹ ಸುಮಾರು 52 ತಾಲ್ಲೂಕುಗಳಿಗೆ ಸೇರಿರುವ ಹಲವಾರು ಹಳ್ಳಿಗಳು ಆ ಕಡೆ, ಈ ಕಡೆ ಸೇರ್ಪಡೆಯಾಗಿ ಅಭಿವೃದ್ಧಿ ಹೊಂದದೆ ಅವು ದ್ವೀಪಗಳಾಗಿ ಉಳಿದಿವೆ. ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರವು ಈ ಬಗ್ಗೆ ಮುತುವರ್ಜಿಯನ್ನು ವಹಿಸಿ ಗಡಿ ಭಾಗದಲ್ಲಿರತಕ್ಕಂತಹ ಹಳ್ಳಿಗಳ ಅಭಿವೃದ್ಧಿಗೆ ಗಮನ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅದೇ ರೀತಿಯಾಗಿ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೊಡುವ ಅನುದಾನ ಸಾಕಾಗುವುದಿಲ್ಲ. ಕೇವಲ ಗಡಿ ಭಾಗದಲ್ಲಿರತಕ್ಕಂತಹ ಹಳ್ಳಿಗಳ ಅಭಿವೃದ್ಧಿ ಒಂದೇ ಅಲ್ಲ, ಮಹಾರಾಷ್ಟ್ರ, ಆಂಧ್ರಪ್ರದೇಶ, ಕೇರಳ ರಾಜ್ಯದ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಹಲವಾರು ಹಳ್ಳಿಗಳಿಗೆ ಕೂಡ ಎಲ್ಲಾ ರೀತಿಯ ಸವಲತ್ತನ್ನು ಕೊಡಬೇಕಾಗುತ್ತದೆ. ಅಲ್ಲಿರುವಂತಹ ಶಾಲೆಗಳು, ಸಂಘ-ಸಂಸ್ಥೆಗಳಿಗೆ ಕೂಡ ಸಹಾಯ ಮಾಡಬೇಕಾಗುತ್ತದೆ. U.K. (United Kingdom), U.S.A. (United States of America), ಕೆನಡಾ, ದುಬೈ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿರತಕ್ಕಂತಹ ಕನ್ನಡ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಮಾಡಲಾಗುತ್ತದೆ. ನಮ್ಮ ಗಡಿ ಭಾಗದಲ್ಲಿರುವ ಸಂಘ ಸಂಸ್ಥೆಗಳು ಸಾಕಷ್ಟು ಹಿಂದುಳಿದಿವೆ.

ಗಡಿ ಕಾವಲು ಪಡೆಯನ್ನು ಕೂಡ ಸರ್ಕಾರ strengthen ಮಾಡಿರುವುದಿಲ್ಲ. ಕಾವಲು ಪಡೆಯ ಮುಖ್ಯಸ್ಥರ ಹುದ್ದೆಯು ಹಲವಾರು ವರ್ಷಗಳಿಂದ ಖಾಲಿ ಇದ್ದರೂ ಏನೂ ಮಾಡಿರುವುದಿಲ್ಲ. ಕೇವಲ ತಿದ್ದುಪಡಿಯಿಂದ ಏನೂ ಆಗುವುದಿಲ್ಲ. ನಮ್ಮ ರಾಜ್ಯಕ್ಕೆ ಹೊಂದಿಕೊಂಡಿದ್ದು ಬೇರೆ ರಾಜ್ಯಗಳಲ್ಲಿ ಸೇರಿರುವ ಹಳ್ಳಿಗಳ ಅಭಿವೃದ್ಧಿಯಾಗಬೇಕು. ಅಲ್ಲಿನ ಸಂಘ ಸಂಸ್ಥೆಗಳಿಗೆ, ಕನ್ನಡ ಭಾಷಿಕರಿಗೆ ಸಾಕಷ್ಟು ರೀತಿಯಲ್ಲಿ ಅನುಕೂಲವಾಗಬೇಕು. ಹೊರನಾಡು ಕನ್ನಡಿಗರಿಗೆ ವಿದ್ಯಾಭ್ಯಾಸದಲ್ಲಿ ಸಾಕಷ್ಟು ರೀತಿಯಲ್ಲಿ ನಾವು ಇನ್ನೂ ಅನುಕೂಲತೆಯನ್ನು ಮಾಡಿಕೊಡಬೇಕಾಗುತ್ತದೆ.

**(...ಮುಂದು)**

**(1169) 26-12-2022 (3.40) ಕೆಜಿ-ಎಕೆ** (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು.,):-**

ಏಕೆಂದರೆ, ಬಹುಶಃ ಮಹಾಜನ್ ಕಮಿಷನ್ ವರದಿಯ ಬಗ್ಗೆ ಮಾತನಾಡಬೇಕಾದರೆ, ನಾವೆಲ್ಲರೂ ಹೇಳಬೇಕಾಗುತ್ತದೆ. ಮಹಾರಾಷ್ಟ್ರ ಏಕೀಕರಣ ಸಮಿತಿ ಸದ್ದುಗದ್ದಲ ಇಲ್ಲದವರಿಗೂ ಸಹ ಬೆಳಗಾವಿ, ಬೀದರ್, ಕಲಬುರಗಿ ಮತ್ತು ನಿಪ್ಪಾಣಿ ಮುಂತಾದ ಕಡೆಗಳಲ್ಲಿಯೂ ಸಹ ಸಾಕಷ್ಟು ರೀತಿಯಲ್ಲಿ ಅಭಿವೃದ್ಧಿಯನ್ನು ಮಾಡುತ್ತಿದೆ. ಅಲ್ಲಿನ ಜನರಿಗೆ ಉದ್ರೇಕ ಮಾಡುವುದು, ಅಲ್ಲಿ ಯಾವ ರೀತಿಯಾಗಿ ಕರ್ನಾಟಕ ರಾಜ್ಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ ಎನ್ನುವಂತಹದ್ದರ ಬಗ್ಗೆ ಒಂದು ಕಿಚ್ಚನ್ನು ಇಡುವಂತಹ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ಹಾಗಾಗಿ, ನಾವು ಈ ದೃಷ್ಟಿಯಲ್ಲಿ ಈ ವಿಧೇಯಕವನ್ನು ಬೆಂಬಲ ಮಾಡೋಣ. ಅದೇರೀತಿಯಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಾಕಷ್ಟು ರೀತಿಯಲ್ಲಿ ಸವಲತ್ತು, ಅಧಿಕಾರ ಮತ್ತು ಅನುದಾನ ಕೊಡಬೇಕು. ಅದೇರೀತಿಯಾಗಿ ಕನ್ನಡ ಕಾವಲು ಪಡೆಯನ್ನು ಮತ್ತೊಮ್ಮೆ ಅಲ್ಲಿಗೆ reconstruct ಮಾಡಿ ಉತ್ತಮವಾದಂತಹ ಅಧಿಕಾರಿಯನ್ನು, ಯಾರಾದರೂ ರಾಜಕೀಯ ಮುಖಂಡರನ್ನು ಅಥವಾ ಕನ್ನಡ ನಾಡು, ಜಲ ಮತ್ತು ನೆಲದ ಬಗ್ಗೆ ಕಾಳಜಿ ಇರುವಂತಹವರನ್ನು ನೇಮಿಸಬೇಕು. ಈ ರೀತಿ ಮಾಡಿದರೆ ನಮ್ಮ ಭಾಷೆ, ನೆಲ, ಜಲ ಉಳಿಯುತ್ತದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ.

**ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಹಲವಾರು ಹಿರಿಯ ಸದಸ್ಯರು ಈ ವಿಧೇಯಕದ ಬಗ್ಗೆ ಮಾತನಾಡಿದ್ದಾರೆ. ಗಡಿನಾಡಿನಲ್ಲಿರುವಂತಹ ಸಮಸ್ಯೆಗಳು ವಿಶೇಷವಾಗಿರುವಂತಹ ಸಮಸ್ಯೆಗಳಾಗಿವೆ. ಗಡಿ ಭಾಗದಲ್ಲಿರುವಂತಹ ಕರ್ನಾಟಕದ ಎಲ್ಲಾ ಕಡೆ, ಬೆಂಗಳೂರಿನ ಕಡೆಗೆ ಹೋದಾಗ, ಹೊಸೂರಿನ ಕಡೆ ಇರುವಂತಹ ವಿಚಾರಗಳಿರಬಹುದು, ಬಳ್ಳಾರಿ ಕಡೆಗೆ ಹೋದಾಗ ಅಲ್ಲಿ ಇರುವಂತಹ ವಿಚಾರಗಳು ಇರಬಹುದು, ಮುಂಬೈ ಕರ್ನಾಟಕದ ಕಡೆಗೆ ಬಂದಾಗ ಗಡಿ ಭಾಗದ ಸಮಸ್ಯೆಗಳು ಇರಬಹುದು, ಎಲ್ಲಾ ಗಡಿ ಭಾಗಗಳಲ್ಲಿ ಎರಡೆರಡು ಭಾಷೆಗಳನ್ನು ಮಾತನಾಡುವಂಥದ್ದನ್ನು ಕಣ್ಣಾರೆ ಕಂಡಿದ್ದೇವೆ. ಗಡಿನಾಡು ಅಭಿವೃದ್ಧಿ ಮಾಡಬೇಕು ಎಂದಾಗ, ಕೇವಲ ಭಾಷೆ ಅಭಿವೃದ್ಧಿಯಿಂದಾಗಿ ಏನು

ಆಗಲಿಕ್ಕೆ ಸಾಧ್ಯವಾಗುವುದಿಲ್ಲ. ಗಡಿನಾಡು ಅಭಿವೃದ್ಧಿಯನ್ನು ಮಾಡುವುದಾದರೆ, ಈಗ ಕೊಟ್ಟಿರುವಂತಹ 25 ಕೋಟಿ ರೂಪಾಯಿಗಳ ಅನುದಾನವನ್ನು ಬದಲಾಯಿಸಿ, ಕನಿಷ್ಠ ಪಕ್ಷ 100 ಕೋಟಿ ರೂಪಾಯಿಗಳ ಅನುದಾನವನ್ನು ಗಡಿನಾಡು ಅಭಿವೃದ್ಧಿಗಾಗಿ ಮೀಸಲಿಡುವಂತಹ ಕೆಲಸವನ್ನು ಮಾಡಿದರೆ, ಅಲ್ಲಿರುವಂತಹ ಕನ್ನಡಿಗರಿಗೆ ಏನಾದರೂ ಸೌಲಭ್ಯವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಭಾವಿಸಿದ್ದೇನೆ. ಅದರ ಜೊತೆಗೆ, ವೈದ್ಯಕೀಯ ಶಿಕ್ಷಣ ಇಲಾಖೆ ಇರಬಹುದು, ಕಂದಾಯ ಇಲಾಖೆ ಇರಬಹುದು, ಯಾವುದೇ ಇಲಾಖೆಗಳಿದ್ದರೂ ಸಹ, ಎಲ್ಲಾ ಇಲಾಖೆಗಳಲ್ಲಿ ಅವರ ಬಜೆಟ್‌ನಲ್ಲಿ ಸುಮಾರು 5%ರಷ್ಟು ಹಣವನ್ನು ಮೀಸಲಾಗಿಟ್ಟರೆ, 100 ಕೋಟಿ ರೂಪಾಯಿಗಳನ್ನು ಬಿಟ್ಟು, ಅಲ್ಲಿರುವಂತಹ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾಗುತ್ತದೆ. ಶಿಕ್ಷಣ ಇಲಾಖೆಯಲ್ಲಿ ಅವರು ಮೀಸಲಾಗಿಟ್ಟುಕೊಂಡರೆ, ಗಡಿ ಪ್ರದೇಶದಲ್ಲಿರುವಂತಹ ಕನ್ನಡ ಶಾಲೆಗಳ ಜೊತೆಗೆ, ಶೈಕ್ಷಣಿಕ ಕ್ಷೇತ್ರ ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಆಗುತ್ತದೆ. ಆ ಗಡಿಭಾಗಗಳಲ್ಲಿ ಆಸ್ಪತ್ರೆಗಳನ್ನು ಮಾಡಿದರೆ, ಇದನ್ನು ಬೇರೆ ರಾಜ್ಯದವರು ಉಪಯೋಗಿಸಿಕೊಂಡರೂ ಸಹ, ಅವರೆಲ್ಲರೂ ಭಾರತೀಯರಾಗಿರುವುದರಿಂದ, ನಮ್ಮ ಕನ್ನಡಿಗರಿಗೆ ಒಳ್ಳೆಯ ಆಸ್ಪತ್ರೆಗಳನ್ನು ಮಾಡಿದರೆ ಯಾವುದೇ ರೀತಿಯ ಭಾಷೆಯ ಸಮಸ್ಯ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ, ಭಾಷಾ ಸಮಸ್ಯೆಯನ್ನು ಪರಿಹಾರಗೊಳಿಸಬೇಕಾದರೆ, ಗಡಿನಾಡಿಗೆ ಕೈಗಾರಿಕೆಗಳು, ಆಸ್ಪತ್ರೆಗಳು, ಶಾಲೆಗಳು ಬರಬೇಕಾಗುತ್ತದೆ. ಅಲ್ಲಿನ ರಸ್ತೆಗಳು ಅಭಿವೃದ್ಧಿಯಾಗಬೇಕಾಗುತ್ತದೆ. ವಿಶೇಷವಾಗಿ ನಮ್ಮ ಭಾರತೀಯತೆಯನ್ನು ಬೆಳೆಸಿಕೊಳ್ಳುವಂತಹ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಸದೃಡಗೊಳಿಸುವಂತಹ ಅಭಿವೃದ್ಧಿ ಕೆಲಸಗಳ ಕಡೆಗೆ ಗಮನವನ್ನು ಹರಿಸುವಂತಹ ಕೆಲಸವನ್ನು ಮಾಡಬೇಕು. ಹಾಗಾಗಿ, ಒಂದು ಕಡೆ 100 ಕೋಟಿ ರೂಪಾಯಿಗಳ ಮೀಸಲಾತಿ ಇದ್ದರೆ, ಇನ್ನೊಂದು ಕಡೆ ಎಲ್ಲಾ portfolio ಗಳಲ್ಲಿ ಇರುವಂತಹವರು ಗಡಿನಾಡು ಅಭಿವೃದ್ದಿಗಾಗಿ ಸ್ವಲ್ಪ ಹಣವನ್ನು ಮೀಸಲಾಗಿಟ್ಟರೆ ಅಲ್ಲಿನ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂಬ ಮಾತನ್ನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕದಲ್ಲಿನ ಹಲವಾರು ಭಾಗಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಕೇಂದ್ರದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಆಶೀರ್ವಾದದಿಂದ 371 (ಜೆ)

ಕಾಯಿದೆಯನ್ನು ಜಾರಿಗೆ ತಂದರು. ಗಡಿನಾಡಿನಲ್ಲಿ ಇರುವಂತಹ ಜನರಿಗೆ ಒಂದು ಮೀಸಲಾತಿ ವ್ಯವಸ್ಥೆಯನ್ನು ಶಿಕ್ಷಣದಲ್ಲಿ ಮತ್ತು ಅವರದೇ ಆದಂತಹ ಕ್ಷೇತ್ರದಲ್ಲಿ ಮೀಸಲು ಕೊಡುವಂತಹ ಕೆಲಸವನ್ನು ಮಾಡಿದರೆ, ಅವರಿಗಾಗಿ ಕೆಲವು percentage ಗಳನ್ನು ಮೀಸಲಿಟ್ಟರೆ ಖಂಡಿತವಾಗಿಯೂ ಸಹ ಅಲ್ಲಿರುವಂತಹವರಿಗೆ ಒಳ್ಳೆಯ ಶಿಕ್ಷಣ ವ್ಯವಸ್ಥೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಭಾವಿಸಿದ್ದೇನೆ. ಗಡಿನಾಡು ಭಾಗಗಳಲ್ಲಿ ಎರಡು ಭಾಷೆಗಳನ್ನು ಮಾತನಾಡುಂತಹ ಜನರು ಇದ್ದಾರೆ. ಬಳ್ಳಾರಿ ಕಡೆಗೆ ಹೋದರೆ, ತೆಲುಗು ಮತ್ತು ಕನ್ನಡ ಭಾಷೆಗಳನ್ನು ಮಾತನಾಡುತ್ತಾರೆ. ಬೆಳಗಾವಿ ಗಡಿ ಭಾಗಗಕ್ಕೆ ಬಂದರೆ, ಮರಾಠಿ ಮತ್ತು ಕನ್ನಡ ಭಾಷೆಗಳನ್ನು ಮಾತನಾಡುತ್ತಾರೆ. ಎಲ್ಲಾ ಮರಾಠಿಗರಿಗೂ ಕನ್ನಡ ಭಾಷೆ ಬರುತ್ತದೆ, ಅದೇರೀತಿ ಎಲ್ಲಾ ಕನ್ನಡಿಗರಿಗೂ ಮರಾಠಿ ಭಾಷೆ ಬರುತ್ತದೆ. ನಾವು ಭಾಷಾ ಸಾಮರಸ್ಯವನ್ನು ಕಾಪಾಡುವಂತಹ ಕೆಲಸಗಳನ್ನು ಮಾಡಬೇಕು. ನಾವು ಭಾಷಾ ಸಾಮರಸ್ಯವನ್ನು ಕಾಪಾಡುವಂತಹ ಕೆಲಸವನ್ನು ಮಾಡಿದರೆ, ಗಡಿ ಭಾಗದಲ್ಲಿರುವಂತಹ ಭಾಷಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಕನ್ನಡ ಗಡಿನಾಡು ಪ್ರಾಧಿಕಾರ ಕೆಲಸವನ್ನು ಮಾಡಬೇಕು ಎನ್ನುವಂತಹ ಮನವಿಯನ್ನು ಮಾಡುತ್ತೇನೆ. ಹಾಗಾಗಿ, ಎಲ್ಲಾ ವಿಚಾರಗಳ ಜೊತೆಗೆ ಹೇಳಬೇಕೆಂದರೆ, ಅಭಿವೃದ್ಧಿ ಎನ್ನುವುದು ಬಹಳ ಮುಖ್ಯವಾಗಿದೆ. ಅದರಲ್ಲೂ ಅಭಿವೃದ್ಧಿಯ ಜೊತೆಗೆ ಕನ್ನಡಿಗರ ಅಭಿವೃದ್ಧಿ ವಿಚಾರ. ಅಭಿವೃದ್ಧಿ ಹೆಸರಿನಲ್ಲಿ ಕೇವಲ ರಸ್ತೆಗಳನ್ನು ಮಾಡಿದರೆ, ಕಟ್ಟಡಗಳನ್ನು ಕಟ್ಟಿದರೆ ಅಭಿವೃದ್ಧಿಯನ್ನು ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ. ಮೊದಲು ಅಲ್ಲಿರುವಂತಹ ಕನ್ನಡಿಗರ ಅಭಿವೃದ್ಧಿಯಾಗಬೇಕಾಗುತ್ತದೆ. ಕನ್ನಡಿಗರ ಅಭಿವೃದ್ಧಿ ಜೊತೆಗೆ, ಪಕ್ಕದಲ್ಲಿರುವಂತಹ ಅಂದರೆ, ಹೊರನಾಡಿನಲ್ಲಿರುವಂತಹ ಕನ್ನಡಿಗರ ಅಭಿವೃದ್ಧಿಯನ್ನು ಮಾಡಿದರೆ ಕನ್ನಡಕ್ಕೆ ಮತ್ತು ಕರ್ನಾಟಕಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಬ್ಬರು ನಗುತ್ತಿದ್ದಾರೆ. ಮಾನ್ಯ ಸಚಿವರುಗಳ ನಗುವಿನಲ್ಲಿ ಅರ್ಥವಿದೆ. ಏಕೆಂದರೆ, ಅವರುಗಳ ಇಲಾಖೆಯಲ್ಲಿ ಮೀಸಲಿಡುತ್ತಾರೆಂಬ ನಂಬಿಕೆ ಇದೆ.

**ಡಾ॥ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವಂತಹ ವಿಷಯ ಸರಿ ಇದೆ. ಮಾನ್ಯ ಸದಸ್ಯರು ಮಾತನಾಡುತ್ತಿರುವ ಶೈಲಿ ಬಹಳ impressive ಆಗಿದೆ. ನಾವು ಅದಕ್ಕಾಗಿ ಅವರನ್ನು appreciate ಮಾಡುತ್ತಿದ್ದೇವೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನೇ ಹೇಳಿದರೂ ಸಹ, ನಾನು ಅದನ್ನು ಒಳ್ಳೆಯದಾಗಿ ಸ್ವೀಕಾರ ಮಾಡುತ್ತೇನೆ. ನಾನು ಮೊದಲನೆ ಬಾರಿಗೆ ಸದನಕ್ಕೆ ಆಯ್ಕೆಯಾಗಿ ಬಂದಿದ್ದೇನೆ. ಮಾನ್ಯ ಸಚಿವರು ಅವರ ಇಲಾಖೆಯಿಂದ ಹಣವನ್ನು ಮೀಸಲಿಟ್ಟು ಅವರ ಕ್ಷೇತ್ರದಲ್ಲಿ ಗಡಿನಾಡು ಅಭಿವೃದ್ಧಿಗಾಗಿ ಒಳ್ಳೆಯ ಉತ್ತಮವಾದಂತಹ ಆಸ್ಪತ್ರೆಗಳನ್ನು ಕಟ್ಟಿದರೆ, Primary Health Centres ಗಳನ್ನು ಕಟ್ಟಿದರೆ, ಮಾನ್ಯ ಕೈಗಾರಿಕಾ ಸಚಿವರು ನಿಂತುಕೊಂಡಿದ್ದಾರೆ. ಮಾನ್ಯ ಸಚಿವರು ಸಹ ನನಗೆ ಆಶೀರ್ವಾದ ಮಾಡುತ್ತಾರೆ. ಏಕೆಂದರೆ, ಕರ್ನಾಟಕದ ಅಭಿವೃದ್ಧಿ ಬಗ್ಗೆ ಮಾತನಾಡುವಾಗ ನಮ್ಮ Opposition Leader ಮಾತನಾಡುವಂತಹ ಸಂದರ್ಭದಲ್ಲಿ ಕನ್ನಡಿಗರ ಅಭಿವೃದ್ಧಿಯಾಗಬೇಕೆಂದರೆ, ಗಡಿ ಭಾಗಗಳ ಅಭಿವೃದ್ಧಿಯಾಗಬೇಕೆಂದು ಹೇಳಿದರು.,

**ಶ್ರೀ ಎನ್.ನಾಗರಾಜ (ಎಂ.ಟಿ.ಬಿ) (ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಅವರು 100 ಕೀ.ಮೀ ವೇಗದಲ್ಲಿ ಮಾತನಾಡಿದರೆ, ಏನಾದರೂ ಅರ್ಥವಾಗುತ್ತದೆಯೇ?

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಏಕೆ 100 ಕೀ.ಮೀ ವೇಗದಲ್ಲಿ ಮಾತನಾಡುತ್ತೇನೆಂದರೆ, ಮಾನ್ಯ ಸಭಾಪತಿಯವರು ಕಡಿಮೆ ಸಮಯವನ್ನು ಕೊಡುತ್ತಾರೆ. ಹಾಗಾಗಿ, ಎಲ್ಲಾ ವಿಷಯಗಳನ್ನು ಸೇರಿಸಿಕೊಂಡು ಮಾತನಾಡಬೇಕಾದರೆ ವೇಗವಾಗಿ ಮಾತನಾಡಬೇಕಾಗುತ್ತೆ. ಗಡಿಭಾಗಗಳಿಗೆ industry ಗಳನ್ನು ತರಬೇಕೆಂದು ವಿಶೇಷವಾಗಿ ಹೇಳುತ್ತೇನೆ. ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡಬೇಕಾಗುತ್ತದೆ. ಗಡಿಭಾಗಗಳಲ್ಲಿ ಕೇವಲ ಒಂದು ಕನ್ನಡ ಶಾಲೆಯನ್ನು ಪ್ರಾರಂಭ

ಮಾಡಿದರೆ, ಅಭಿವೃದ್ಧಿಯಾಗುವುದಿಲ್ಲ. ಅಲ್ಲಿ ಉನ್ನತ ಶಿಕ್ಷಣ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಅಲ್ಲಿನ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡುವುದಕ್ಕೆ ಸಾಧ್ಯವಾಗುತ್ತದೆ.

**ಶ್ರೀ ಡಿ.ಎಸ್.ಅರಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಮ್ಮ ಮೊಬೈಲ್‌ಗಳಲ್ಲಿ ಯಾವುದಾದರೂ voice ಅನ್ನು ಕಳುಹಿಸಬೇಕಾದರೆ, 'x 2' ಇರುತ್ತದೆ, ಅದು fast ಬರುತ್ತದೆ, ಎರಡು ನಿಮಿಷಗಳದ್ದು ಒಂದೇ ನಿಮಿಷದಲ್ಲಿ ಬರುತ್ತದೆ. ಆ ರೀತಿಯಾಗುತ್ತಿದೆ. ಅದಕ್ಕೆ ಮಾನ್ಯ ಸದಸ್ಯರಿಗೆ '೦.5' ಮಾಡುವುದಕ್ಕೆ ಹೇಳಿ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ಸರಿ.

**ಶ್ರೀ ಡಿ.ಎಸ್.ಅರಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ regular voice ಅನ್ನು '೦.5' ಮಾಡಿದರೆ, ಅವರು ಹೇಳಿದ್ದು ಸ್ವಲ್ಪ ಅರ್ಥವಾಗುತ್ತದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ್ದು ಕನ್ನಡ ಭಾಷೆಯಲ್ಲಿ ಅಲ್ಲವೇ; ಆಯಿತು ನಿಧಾನ ಮಾಡಿಕೊಳ್ಳುತ್ತೇನೆ. ಗಡಿಭಾಗಗಳಲ್ಲಿ ಉನ್ನತವಾದ ಶಿಕ್ಷಣವನ್ನು ಕೊಡಬೇಕಾಗುತ್ತದೆ. ಉನ್ನತವಾದ ಆರೋಗ್ಯವನ್ನು ಕೊಡಬೇಕಾಗುತ್ತದೆ. ಅಲ್ಲಿ ಉನ್ನತವಾದ ಕೈಗಾರಿಕೆಗಳನ್ನು ತರಬೇಕಾಗುತ್ತದೆ. ಅಲ್ಲಿ ಔದ್ಯೋಗಿಕ ಸಮಸ್ಯೆಗಳು ಹೆಚ್ಚಾಗಿವೆ. ಅಲ್ಲಿ ಜನರು ವಲಸೆ ಹೋಗುವಂತಹದ್ದು ಜಾಸ್ತಿಯಾಗಿರುವುದರಿಂದ, ಆ ಭಾಗದಲ್ಲಿ ಅಭಿವೃದ್ಧಿಯಾಗದಿರುವುದೇ ಕಾರಣ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಹಾಗಾಗಿ, ಗಡಿನಾಡು ಅಭಿವೃದ್ಧಿಗಾಗಿ ತಂದಿರುವಂತಹ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಈ ತಿದ್ದುಪಡಿಯೊಂದಿಗೆ ಸರ್ಕಾರದ ಆಶ್ರಯ ಏನಿದೆಯೋ, ಕರ್ನಾಟಕ ರಾಜ್ಯದ ಸಮತೋಲನಾ ಅಭಿವೃದ್ಧಿಗೋಸ್ಕರ ಮತ್ತು ಗಡಿನಾಡಿನ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುವುದಕ್ಕಾಗಿ ಈ ಗಡಿನಾಡು ಪ್ರಾಧಿಕಾರ ಕೆಲಸ ಮಾಡಬೇಕು ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಅದಕ್ಕಾಗಿ ಸರ್ಕಾರ ಕೊಡಬೇಕಾಗಿರುವಂತಹ ಮೀಸಲಾತಿಯನ್ನು ಕೊಡಬೇಕು. ಸರ್ಕಾರದ ಎಲ್ಲಾ ಇಲಾಖೆಗಳು ಗಡಿಯಲ್ಲಿ ಅಭಿವೃದ್ಧಿ ಮಾಡುವುದಕ್ಕಾಗಿ ಏನಾದರೂ ಅಲೋಚನೆ

ಮಾಡಿದರೆ, ಖಂಡಿತವಾಗಿಯೂ ಸಹ, ಕರ್ನಾಟಕದ ಸಮತೋಲನ ಅಭಿವೃದ್ಧಿಗೆ ಪೂರಕವಾಗುತ್ತದೆ ಎಂದು ಭಾವಿಸಿದ್ದೇನೆ.

ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಗಡಿ ಭಾಗದಲ್ಲಿ ಕನ್ನಡದ ಸಮಾವೇಶಗಳನ್ನು ಸಹ ಮಾಡಬೇಕಾಗುತ್ತದೆ. ಸಾಹಿತ್ಯ ಸಮ್ಮೇಳನಗಳನ್ನು ಮಾಡಬೇಕಾಗುತ್ತದೆ. ನಮ್ಮ ನಾಡಿನ ನಮ್ಮ ಭಾಷೆಯ ಪರಂಪರೆಯ ಇತಿಹಾಸವನ್ನು ಪ್ರತಿಬಿಂಬಿಸುವಂತಹ ಕಾರ್ಯಕ್ರಮಗಳು ಗಡಿಭಾಗದಲ್ಲಿ ಆಗಬೇಕು ಎನ್ನುವಂತಹ ವಿಚಾರವನ್ನು ಹೇಳಬಯಸುತ್ತೇನೆ. ಇದು ಕೇವಲ ಬೆಂಗಳೂರಿಗೂ, ವಿಜಯನಗರಕ್ಕೋ ಅಥವಾ ಬೇರೆ ಎಲ್ಲಿಗೋ ಸೀಮಿತವಾಗದಂತೆ ನಮ್ಮ ಭಾಷೆಯ ಬಗ್ಗೆ.,

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಈ bill ಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಮಾತನಾಡಿ. ಮಧ್ಯದಲ್ಲಿ ತಮ್ಮ track change ಆಯಿತು.,

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ನಮ್ಮ ಕನ್ನಡಿಗರ ಅಭಿವೃದ್ಧಿಯಾಗಬೇಕು. ಆಗ ಮಾತ್ರ ಕನ್ನಡ ಪ್ರಾಧಿಕಾರವನ್ನು ರಚನೆ ಮಾಡಿದ್ದಕ್ಕೆ ಅರ್ಥ ಬರುತ್ತದೆಂಬ ಮಾತನ್ನು ಹೇಳಬಯಸುತ್ತೇನೆ. ಗಡಿ ಭಾಗಗಳಲ್ಲಿ ಇರುವಂತಹವರು ಎರಡು ಭಾಷೆಗಳನ್ನು ಮಾತನಾಡುವಂತಹದ್ದು ಸಮಸ್ಯೆ ಕಾಣುತ್ತಿದೆ. ಇದು ಗಡಿನಾಡು ಭಾಗದಲ್ಲಿರುವಂತಹ ಸಚಿವರಿಗೆ ಅರ್ಥವಾಗುತ್ತದೆ. ಈ ಭಾಗದಲ್ಲಿ ಕನ್ನಡದ ಮತ್ತು ಮರಾಠಿ ಭಾಷೆಗಳ ವಿಚಾರಗಳು ಬರಬಹುದು, ಆಂಧ್ರ ಪ್ರದೇಶದ ಭಾಗದಲ್ಲಿ ತೆಲಗು ಮತ್ತು ಕನ್ನಡ ಭಾಷೆಗಳ ವಿಚಾರಗಳು ಬರಬಹುದು, ಕೇವಲ ಕನ್ನಡ ಭಾಷೆಯ ಅಭಿವೃದ್ಧಿ ಮಾತ್ರವಲ್ಲ, ಗಡಿನಾಡಿನಲ್ಲಿ ಇರುವಂತಹ ಕನ್ನಡಿಗರಿಗಾಗಿ ಟೊಂಕ ಕಟ್ಟಿ ನಿಲ್ಲುವಂತಹ ಕೆಲಸ ಈ ಪ್ರಾಧಿಕಾರದ ಮೂಲಕ ಆಗಬೇಕು ಎನ್ನುವಂತಹ ಆಶಯವನ್ನು ವ್ಯಕ್ತಪಡಿಸುತ್ತೇನೆ. ಹಾಗಾಗಿ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಅದರಲ್ಲೂ ವಿಶೇಷವಾಗಿ ನಮ್ಮ ರಾಜ್ಯ ಸರ್ಕಾರ ಇದರ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕು, ಅದೇರೀತಿ ಹೆಚ್ಚು ಮೀಸಲಾತಿಯನ್ನು ಕೊಡಬೇಕು. ಈ ಪ್ರಾಧಿಕಾರದ ಮೂಲಕ ಗಡಿಭಾಗದಲ್ಲಿ ಇರುವಂತಹವರಿಗೆ reservation ಕೊಡಬೇಕು ಮತ್ತು ಹೆಚ್ಚು ಅನುದಾನವನ್ನು ಕೊಡಬೇಕೆಂದು ಮನವಿಯನ್ನು ಮಾಡುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಗಡಿ ಭಾಗದ ಪ್ರಾಧಿಕಾರ ಮಾಡಿದಾಗ ಸೇರಿಸುವ, ಮಾರ್ಪಪಡಿಸುವ ಅಥವಾ ಬಿಟ್ಟುಬಿಡುವ ಈ ಪದಗಳನ್ನು ಸೇರಿಸುವುದಕ್ಕಾಗದೇ ಇಷ್ಟು ವರ್ಷಗಳ ನಂತರ ಇದನ್ನು ಸೇರ್ಪಡೆ ಮಾಡುವುದಕ್ಕೆ ಈ ವಿಧೇಯಕವನ್ನು ತಂದಿದ್ದಾರೆ. ಈ ವಿಧೇಯಕವನ್ನು ಮಾಡುವಂತಹ ಸಂದರ್ಭದಲ್ಲಿ ಸುಮಾರು 3-4 ಇಲಾಖೆಗಳ ಅಧಿಕಾರಿಗಳು ಇದನ್ನು ಗಮನಿಸುತ್ತಾರೆ. ಆದರೆ, ಇಂತಹವುಗಳನ್ನು ನೋಡದೇ ತೆಗೆದುಕೊಂಡು ಬರುತ್ತಾರೆ. ಈಗ ಎಷ್ಟೋ ವರ್ಷಗಳ ನಂತರ ಇದರ ಅಗತ್ಯ ಸೇರ್ಪಡೆ ಇದೆ, ಹಾಗಾಗಿ, ಇದನ್ನು ಮಾಡಬೇಕೆಂದು ಇವತ್ತು ಮತ್ತೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಈಗ ಬಹಳಷ್ಟು ಹಳ್ಳಿಗಳು, ತಾಲ್ಲೂಕುಗಳು ಇದರ ವ್ಯಾಪ್ತಿಗೆ ತರಬೇಕೆಂದು ತಂದಿದ್ದಾರೆ. ಇದು ಬಹಳ ಸ್ವಾಗತಾರ್ಹ. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಕ್ಕೆ ನನ್ನ ಸಹಮತ ಇದೆ. ನಾನು ಉಪ ಸಭಾಪತಿ ಆಗಿದಂತಹ ಸಂದರ್ಭದಲ್ಲಿ ಕಾಸರಗೋಡಿನ ಒಂದು ಶಾಲೆಗೆ ಹೋಗಿದ್ದೆ. ಮತ್ತೆ ಮೈಸೂರಿನ ಭಾಗದ ವೈನಾಡಿಗೆ ಒಂದು ಬಾರಿ ಹೋಗಿದ್ದೆ. ನನ್ನನ್ನು ಅಲ್ಲಿನ ಶಾಲೆಗಳ ಕಾರ್ಯಕ್ರಮಕ್ಕೆ ಕರೆದಿದ್ದರು. ನಿಜಕ್ಕೂ ಕೂಡ ಅಲ್ಲಿ ಕನ್ನಡ ಶಾಲೆಗಳು ಅಸ್ತಿತ್ತದಲ್ಲಿದ್ದರೂ ಸಹ, ನಮ್ಮ ಕರ್ನಾಟಕ ರಾಜ್ಯದಿಂದ ಅವರಿಗೆ ಸಾಕಷ್ಟು ವಿದ್ಯಾರ್ಥಿ ವೇತನ ಇರಬಹುದು, ಸಹಾಯ ಧನ ಇರಬಹುದು, ಗಡಿನಾಡಿನ ಕನ್ನಡ ಮಾಧ್ಯಮದ ಶಾಲೆಯ ಮಕ್ಕಳಿಗೆ ಏನೇನು ಸೌಲಭ್ಯಗಳನ್ನು ಕೊಡಬೇಕೆಂದು ಘೋಷಣೆ ಮಾಡಿಕೊಂಡಿದ್ದೇವೆಯೋ, ಅವು ಯಾವ ಸವಲತ್ತುಗಳು ಸಹ ಅಲ್ಲಿನ ಮಕ್ಕಳಿಗೆ ತಲುಪುತ್ತಿಲ್ಲ.

**(ಮುಂದು.,)**

**(1170) 26-12-2022 (3.50) ಎಂವಿ-ಆರ್‌ಎನ್** (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಮತ್ತೆ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ರವರು ಹೇಳಿದ ಹಾಗೆ ಎಷ್ಟೋ ಶಾಲೆಗಳನ್ನು ಮುಚ್ಚುತ್ತಿದ್ದಾರೆ. ಆ ಶಾಲೆಗಳ ಅಸ್ತಿತ್ವವನ್ನೇ ತೆಗೆಯುತ್ತಿದ್ದಾರೆ. ಇದಕ್ಕೆಲ್ಲಾ ಸ್ಥಳೀಯವಾಗಿರತಕ್ಕಂಥ ಅಧಿಕಾರಿಗಳೆ ಜವಾಬ್ದಾರರು. ದಯಮಾಡಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕೇವಲ

Infrastructure Development ಅನ್ನು ಕಲ್ಪಿಸುವುದು ಮಾತ್ರವಲ್ಲ. ಅವರು ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಆ ಭಾಗದಲ್ಲಿ ವಾಸ ಮಾಡುವಂತಹ ಜನರಿಗೆ ಅನೇಕ ಸವಲತ್ತುಗಳು ಮುಟ್ಟುವಂತೆ ಮಾಡಬೇಕು. ಈ ಪ್ರಾಧಿಕಾರಕ್ಕೆ ಅತಿ ಹೆಚ್ಚು ಹಣಕಾಸಿನ ನೆರವು ಒದಗಿಸಬೇಕು. ಆ ಭಾಗದ ಮಕ್ಕಳು ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ಬೆಳೆಯಬೇಕು. ರಾಜ್ಯದ ಗಡಿ ಭಾಗದಲ್ಲಿ ಕಲಿಯುತ್ತಿರುವಂತಹ ಕನ್ನಡಿಗರ ಮಕ್ಕಳು, ಕರ್ನಾಟಕ ರಾಜ್ಯಕ್ಕೆ ಬಂದು ಉನ್ನತ ಶಿಕ್ಷಣ ಪಡೆಯಬೇಕು ಎಂದರೆ, ಅದಕ್ಕೆ ಅನೇಕ ಷರತ್ತುಗಳಿವೆ. ಕೆಲವರು ಇಲ್ಲಿಗೆ ಬಂದು ಸೀಟ್ ಪಡೆದುಕೊಂಡು ಅಧ್ಯಯನ ಮಾಡುವುದು ಬಹಳ ಕಷ್ಟದ ಪರಿಸ್ಥಿತಿ ಇದೆ. ಅದೆಲ್ಲವನ್ನು ಕೂಡ ಪರಿಶೀಲನೆ ಮತ್ತು ಸರಳೀಕರಣ ಮಾಡಿ, ಆ ಗಡಿ ಭಾಗ ಪ್ರದೇಶದ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದಂತಹ ಮಕ್ಕಳು, ಕರ್ನಾಟಕ ರಾಜ್ಯದಲ್ಲಿ ಉನ್ನತ ಶಿಕ್ಷಣ ಪಡೆಯುವುದಕ್ಕೆ ಹೆಚ್ಚು ನೆರವು ಮಾಡುವಂಥದ್ದಕ್ಕೆ, ಇವುಗಳೆಲ್ಲವನ್ನು ಸಹ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ತೆಗೆದುಕೊಂಡು ಬಂದು, ಅವರಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತಾ, ಅವರು ಈ ನಾಡಿಗೆ ಬಂದು ಉನ್ನತ ಶಿಕ್ಷಣದಲ್ಲಿ ಅಧ್ಯಯನ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಾ, ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಡಾ|| ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೆಯಕ, 2022 ಅನ್ನು ಸ್ವಾಗತಿಸುತ್ತೇನೆ. ಈಗಾಗಲೇ 2010ರಲ್ಲಿ ಈ ವಿಧೇಯಕ ಇದೆ. ಇವತ್ತಿನ ಸಂದರ್ಭದಲ್ಲಿ ಅದಕ್ಕಿಂತ ಇನ್ನು ಹೆಚ್ಚು ಮುಕ್ತವಾದ ಅವಕಾಶ ಸರ್ಕಾರಕ್ಕೆ ಇರಬೇಕು ಎನ್ನುವ ಕಾರಣಕ್ಕೋಸ್ಕರ, ಈಗಾಗಲೇ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ಈ ಅಧಿನಿಯಮಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ನಮೂದುಗಳನ್ನು ಮತ್ತು ಯಾವ್ಯಾವ ಅನುಸೂಚಿಗಳನ್ನು ಸೇರಿಸಿದ್ದೇವೆ. ಮತ್ತೆ ಸೇರಿಸುವುದಕ್ಕೆ ಮತ್ತು ಅದನ್ನು ಮಾರ್ಪಾಡಿಸುವುದಕ್ಕೆ ಅಥವಾ ಬಿಟ್ಟು ಬಿಡುವುದಕ್ಕೆ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2010 ಅನ್ನು ಮತ್ತಷ್ಟು ತಿದ್ದುಪಡಿ ಮಾಡಿ, ಇನ್ನು ಮುಂದೆ ಈ ಒಂದು ತಿದ್ದುಪಡಿಯನ್ನು ನಾವು 2022ರ ಅಧಿನಿಯಮ ಎಂದು ಕರೆಯುವುದಕ್ಕೆ, ಇದರಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದನ್ನು ತಿದ್ದುಪಡಿ ಮಾಡುವುದಕ್ಕೆ ಬಹುಶಃ ಇಂತಹ ಸನ್ನಿವೇಶ ಏಕೆ ಉದ್ಭವಾಯಿತು ಎಂದು ಗಮನಿಸುವುದಾದರೆ, ನಾವು ಏನು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಿಂತು ಮಾತನಾಡುತ್ತಿದ್ದೇವೆ. ಬಹುಶಃ ಈ ಶಕ್ತಿಸೌಧ ಕರ್ನಾಟಕ ರಾಜ್ಯದ ಒಂದು ಪ್ರತಿಷ್ಟಿತ ಆತ್ಮಗೌರವವನ್ನು ಮತ್ತು ಗಡಿಯನ್ನು, ಪ್ರಮುಖವಾಗಿ ಬೆಳಗಾವಿ

ಗಡಿಯನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ, ಅವತ್ತಿನ ಎಲ್ಲಾ ಪ್ರತಿನಿಧಿಗಳು ಸೇರಿ ಈ ಸುವರ್ಣ ವಿಧಾನಸೌಧವನ್ನು ಬೆಳಗಾವಿಯಲ್ಲಿ ಕಟ್ಟುವ ಮೂಲಕ, ನಮ್ಮ ಒಂದು ಬದ್ಧತೆಯನ್ನು ಮತ್ತು ಕಳಕಳಿಯನ್ನು ತೋರಿಸುವಂತಹ ನಿಟ್ಟಿನಲ್ಲಿ ಈ ಸುವರ್ಣ ವಿಧಾನಸೌಧ ನಿರ್ಮಾಣವಾಗಿದೆ ಎಂದು ನಾವು ಭಾವಿಸಿದ್ದೇವೆ. ಗಡಿ ರಕ್ಷಣೆಗೆ ಇರತಕ್ಕಂಥ ಸವಾಲುಗಳು ಏನು ಎಂದು ಈ ಒಂದು ಸನ್ನಿವೇಶದಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಈಗ ಮೂಲಭೂತ ಸೌಕರ್ಯಗಳನ್ನು ಅತ್ಯುತ್ತಮವಾಗಿ ನೀಡಬೇಕು. ಒಂದು ರಾಷ್ಟ್ರಕ್ಕೆ ಗಡಿ ಮುಖ್ಯವೋ, ಒಂದು ರಾಜ್ಯಕ್ಕೆ ಗಡಿ ಮುಖ್ಯವೋ ಹಾಗೂ ಒಂದು ಜಿಲ್ಲೆಗೆ ಗಡಿ ಮುಖ್ಯವೋ ಇದು ಕೇವಲ ಭಾಷಣದಿಂದ ಸಾಧ್ಯವಾಗುವುದಿಲ್ಲ. ನಾವು ಇವತ್ತು ಕೃತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಮತ್ತೆ ಸುರಕ್ಷತಾ ಭಾವನೆ ಮೂಡುವಂತಹ, ಈಗ ಬೆಳಗಾವಿಯಲ್ಲಿ ಈ ಒಂದು ಪ್ರಕ್ಷುಬ್ಧತೆಯನ್ನು ನೋಡಿದ್ದೇವೆ. ಅವರಿಗೆ ರಕ್ಷಣೆ ಕೊಡುವಂತಹ ರಕ್ಷಣೆ ಇದೆ ಎನ್ನುವುದು ಅನ್ನಿಸದೆ ಇದ್ದರೆ, ಅವರು ಯಾವ ರೀತಿ ಕನ್ನಡ ಮತ್ತು ಕರ್ನಾಟಕದ ಹಿತವನ್ನು ಕಾಯುವುದಕ್ಕೆ ಸಾಧ್ಯ? ಇಲ್ಲಿ ಕುಳಿತು ಮತ್ತು ಬೇರೆ ಎಲ್ಲೋ ಕುಳಿತು ಮಾತನಾಡುವುದು ಸುಲಭ. ಇಲ್ಲಿರತಕ್ಕಂಥ ನಿವಾಸಿಗಳಿಗೆ; ರಾಜ್ಯ ಸರ್ಕಾರ ನನ್ನನ್ನು ಎಲ್ಲಾ ಸಂದರ್ಭದಲ್ಲೂ ರಕ್ಷಿಸುತ್ತದೆ ಎನ್ನುವಂತಹ ಮನೋಭಾವ ಮತ್ತೆ ನಾವು ಕನ್ನಡಿಗರು ಮತ್ತು ಕರ್ನಾಟಕದವರು ಎನ್ನುವಂತಹ ರೀತಿಯಲ್ಲಿ ಅವರು ಅಭಿವೃದ್ಧಿಯ ಕೆಲಸದಲ್ಲಿ ತೊಡಗಿಸಿಕೊಳ್ಳುವಂತಹ ಮನಃಸ್ಥಿತಿಯನ್ನು ಉಂಟು ಮಾಡುವುದು ಮುಖ್ಯವಾದುದು. ಈ ನಿಟ್ಟಿನಲ್ಲಿ ಶಿಕ್ಷಣ ಬಹಳ ಮುಖ್ಯವಾದುದು. ಇಲ್ಲಿ ಅನೇಕ ಮಾನ್ಯ ಸದಸ್ಯರುಗಳು ಕನ್ನಡ ಶಾಲೆಗಳ ಬಗ್ಗೆ ಮಾತನಾಡಿದ್ದಾರೆ. ಈಗ ಯಾವುದೇ ರೀತಿಯ ಶಾಲೆಗಳಾದರೂ ಸಹ ಅತ್ಯುತ್ತವಾದ ರೀತಿಯಲ್ಲಿ ಗಡಿ ಭಾಗಗಳಲ್ಲಿ ಇರಲೇಬೇಕು. ಇಲ್ಲಿ ಕುಳಿತ್ತಿರುವಂತಹ ಮಂತ್ರಿಗಳು ಅತ್ಯಂತ ಸಮರ್ಥರಿದ್ದಾರೆ. ಎಲ್ಲಾ ಇಲಾಖೆಗಳಲ್ಲೂ ಕೂಡ ಗಡಿ ಭಾಗದ ವಿಷಯ ಬಂದಾಗ, ಒಂದಷ್ಟು ಸೂಕ್ಷ್ಮತೆಯನ್ನು ವಹಿಸಿದರೆ, ಅಂದರೆ, ರಸ್ತೆ, ಕುಡಿಯುವ ನೀರಿನ ಸಮಸ್ಯೆ, ವಸತಿ ಯೋಜನೆ ಮತ್ತು ಕನ್ನಡದ ವಾತಾವರಣ ಮೂಡಿಸುವುದು ಇರಬಹುದು. ಇದು ಸಹ ಸಾಧ್ಯತೆಯಾಗುತ್ತದೆ. ನಾನು ಇನ್ನು ಎರಡು-ಮೂರು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಭಾಷೆ ಎನ್ನುವುದು ಭಾವನಾತ್ಮಕವಾದ ವಿಚಾರವಾಗಿದೆ. ಈಗ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕು ಎನ್ನುವಂತಹವರಿಗೆ, ಕರ್ನಾಟಕದ ಭಾಗದಲ್ಲಿರತಕ್ಕಂತಹ ಮರಾಠಿಗರಿಗೆ ಒಂದು ಪ್ರಕ್ಷುಬ್ಧ ಮನೋಭಾವ ಇರುತ್ತದೆ. ಅದೇರೀತಿ ಮಹಾಜನ್ ವರದಿ ಪ್ರಕಾರ ಕರ್ನಾಟಕಕ್ಕೆ ಸೇರಬೇಕೆಂದು ಅಂದುಕೊಂಡಿರುವಂತಹ ಅಲ್ಲಿರುವಂತಹ ಕನ್ನಡಿಗರಿಗೆ ಭಾವನೆ ಇದೆ. ಆದರೆ, ಅವರಿಗೆ ಆ ರೀತಿಯ ವಾತಾವರಣವಿಲ್ಲ. ಈ ನಿಟ್ಟಿನಲ್ಲಿ ಗಡಿ ಭಾಗದ ಅಭಿವೃದ್ಧಿ

ಬಹಳ ಪ್ರಮುಖವಾದ ಪಾತ್ರ ವಹಿಸುತ್ತದೆ. ಅದೇರೀತಿ ಸಂಸ್ಕೃತಿಯನ್ನು ಹೇಗೆ ರಕ್ಷಣೆ ಮಾಡುವುದು? ಈಗ ಸಿನಿಮಾಗಳ ಬಗ್ಗೆ ಹೇಳುವುದಾದರೆ, ಮಾನ್ಯ ಸಚಿವರಾದ ಕೆ.ಸುಧಾಕರ್‌ರವರು ಇಲ್ಲಿಯೇ ಕುಳಿತ್ತಿದ್ದಾರೆ. ಈಗ ಅನೇಕ ಗಡಿಭಾಗಗಳಲ್ಲಿ ಅನ್ಯ ಭಾಷಿಕರು ಯಾವ ಮಟ್ಟದ ಪ್ರಭಾವ ಬೀರುತ್ತಿದ್ದಾರೆಂದರೆ, ನಮ್ಮ ಜನಪ್ರತಿನಿಧಿಗಳು ಗೆಲ್ಲಬೇಕಾದರೆ, ಅವರಿಗೆ ಗೊತ್ತಿದೋ ಗೊತ್ತಿಲ್ಲದೆಯೋ ಅಸಹಾಯಕತೆಗೆ ದೂಡಿದ್ದಾರೆ. ಅಂದರೆ, ಆ ಭಾಷೆಯವರ ಮೇಲೆ ಪ್ರಭಾವ ಬೀರುವಂಥದ್ದು. ಈ ರೀತಿಯಲ್ಲಿ ನಮ್ಮವರೆಲ್ಲರೂ ಗೆದ್ದು ಬರಬೇಕಾದರೆ, ರಾಜಕೀಯವಾಗಿ ಅಸ್ತಿತ್ವ ಗಳಿಸಬೇಕಾದರೂ ಕೂಡ ಕರ್ನಾಟಕದ ಕನ್ನಡ ಜನತೆಯ ಎಲ್ಲ ಭಾಗಗಳಲ್ಲಿ, ಇವತ್ತು ಏನು ಕಲ್ಯಾಣ ಕರ್ನಾಟಕವೆಂದು ಕರೆಯುತ್ತೇವೆ. ಹಾಗೆಯೇ, ಕಿತ್ತೂರು ಕರ್ನಾಟಕವೆಂದು ಕರೆಯುತ್ತೇವೆ. ಮೊದಲೆಲ್ಲಾ ಹೈದ್ರಾಬಾದ್ ಕರ್ನಾಟಕ ಮತ್ತು ಬೆಳಗಾವಿ ಎಂಬ ಹೆಸರುಗಳಿಂದ ಕರೆಯುತ್ತಿದ್ದೆವು. ಆದರೆ, ಇವತ್ತು ಇದನ್ನು ನಮ್ಮದೇ ಹೆಸರಿನಿಂದ ಕರೆಯುತ್ತಿದ್ದೇವೆ. ಮುಖ್ಯವಾಗಿ ಆ ಸದುದ್ದೇಶ ಈಡೇರಬೇಕಾದರೆ, ಎಲ್ಲರೂ ಬದ್ಧತೆಯಿಂದ ಒಂದು ಒಳ್ಳೆಯ ರೀತಿಯಲ್ಲಿ ಸಹಕಾರವನ್ನು, ಕೇವಲ ಮಾತಿನಲ್ಲಿ ಮಾತ್ರ ಸಾಧ್ಯವಾಗದೆ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡಬೇಕು, ಗಡಿ ಭಾಗಕ್ಕೆ ಬರುವಂತಹ ಎಲ್ಲಾ ಯೋಜನೆಗಳನ್ನು ಆದ್ಯತೆಯ ಮೇರೆಗೆ ಮಾಡಿದಾಗ ಮಾತ್ರ, ನಾವು ಮಾತನಾಡಿದ ಮಾತಿಗೆ ಅರ್ಥ ಬರುತ್ತದೆ ಎಂದು ಹೇಳುತ್ತಾ, ನಾನು ಈ ವಿಧೇಯಕವನ್ನು ಸ್ವಾಗತಿಸುತ್ತೇನೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾತನಾಡುತ್ತೇನೆ.

**ಉಪ ಸಭಾಪತಿಯವರು:-** ಈಗ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್ ರವರ ಹೆಸರನ್ನು ಕರೆದಿದ್ದೇನೆ. ಆ ನಂತರ ನಿಮಗೆ ಅವಕಾಶ ನೀಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಸರ್ಕಾರ ಒಂದು ತಿದ್ದುಪಡಿಯನ್ನು ತಂದಿದೆ. ಅದಕ್ಕೆ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಾ, ಏನು 52 ತಾಲ್ಲೂಕುಗಳನ್ನು ಗಡಿ ತಾಲ್ಲೂಕುಗಳೆಂದು ಹೇಳಿ, ನಮ್ಮ ರಾಜ್ಯ ವಿಸ್ತಾರವಾಗಿರುವಂತಹ ಒಟ್ಟು ಐದು ರಾಜ್ಯಗಳಾದ ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶ, ಕೇರಳ ಮತ್ತು ತಮಿಳುನಾಡು ರಾಜ್ಯಗಳ ಗಡಿಯನ್ನು ಹೊಂದಿದೆ. ಇಲ್ಲಿಗೆ ವಿಶೇಷವಾದ ಒತ್ತನ್ನು ನೀಡಿ, ಈ ಭಾಗದಲ್ಲಿರುವಂತಹ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಮಾಡಬೇಕು

ಮತ್ತು ಅಲ್ಲಿರುವಂತಹ ಅನೇಕ ಮೂಲಭೂತ ಸೌಕರ್ಯಗಳನ್ನು ಗಟ್ಟಿಗೊಳಿಸಬೇಕೆಂದು ಏನು ಈ ಪ್ರಾಧಿಕಾರ ನಿರ್ವಹಣೆ ಮಾಡುತ್ತಿದೆ, ಖಂಡಿತವಾಗಿ ಇದು ಒಂದು ನಿರಂತರವಾಗಿ ಆಗಬೇಕಾಗಿರುವಂತಹ ಕೆಲಸವಾಗಿದೆ. ನಾನು ಪ್ರತಿನಿಧಿಸುವಂತಹ ಮೂರು ತಾಲ್ಲೂಕುಗಳು, ಆಂಧ್ರ ಪ್ರದೇಶದ ಗಡಿ ಭಾಗಕ್ಕೆ ಹೊಂದಿರುವಂತಹ ಜಿಲ್ಲೆಗಳಲ್ಲಿ ಅನೇಕ ಸಮಸ್ಯೆಗಳನ್ನು ಗಮನಿಸಿದ್ದೇನೆ. ವಿಶೇಷವಾಗಿ ಈಗಾಗಲೇ ಅನೇಕ ಗೌರವಾನ್ವಿತ ಸದಸ್ಯರು ಮಾತನಾಡಿದ ಹಾಗೆ, ಆ ಭಾಗದಲ್ಲಿ ಬರುವಂತಹ ಶಾಲೆಗಳಿಗೆ ಹೆಚ್ಚಿನ ಒತ್ತನ್ನು ಕೊಡುವುದರ ಮೂಲಕ, ಆ ಭಾಗದಲ್ಲಿರುವಂತಹ ವಿದ್ಯಾರ್ಥಿಗಳು, ನಮ್ಮ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಓದಬೇಕು ಮತ್ತು ಕನ್ನಡ ಭಾಷೆಯನ್ನು ಓದಿ, ಅಲ್ಲಿಂದ ಅವರಿಗೆ ನಮ್ಮ ಸರ್ಕಾರಿ ಶಾಲೆಗಳಲ್ಲಿ ಸಿಗುವಂತಹ ಸವಲತ್ತುಗಳನ್ನು ಪಡೆಯಬೇಕು ಎಂಬುದು ಒಂದು ಅಭಿಲಾಷೆಯಾದರೆ, ಕಳೆದ ಕೆಲವು ವರ್ಷಗಳ ಹಿಂದೆ, ಬಹಳ ಪ್ರಸಿದ್ಧವಾದ ಒಂದು ಚಲನಚಿತ್ರ ಬಂದಿತ್ತು. ಅಂದರೆ, "ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ" ಎಂದು ಏನು ಕರ್ನಾಟಕ ಮತ್ತು ಕೇರಳ ಗಡಿ ಭಾಗದಲ್ಲಿದ್ದಂತಹ ಕಾಸರಗೋಡು ಜಿಲ್ಲೆಯಲ್ಲಿರುವಂತಹ ಒಂದು ಶಾಲೆಯನ್ನು ಯಾವ ರೀತಿ ಅದು ಮುಚ್ಚುವಂತಹ ಪರಿಸ್ಥಿತಿಯಲ್ಲಿ ಇದ್ದುದ್ದನ್ನು, ಅಲ್ಲಿರುವಂತಹ ಕನ್ನಡಿಗರೇ ಅದನ್ನು ಪುನಃಶ್ಚೇತನ ಮಾಡುವಂತಹ ಬಹಳ ಉತ್ತಮ ಸಂದೇಶ ಇರುವಂತಹ ಚಲನಚಿತ್ರವನ್ನು ನಾವು ನೋಡಿದ್ದೇವೆ. ಮಾನ್ಯ ಗೃಹ ಸಚಿವರು ಇಲ್ಲಿಯೇ ಇದ್ದಾರೆ. ನಾನು ಅವರಿಗೆ ವಿನಂತಿ ಮಾಡುವುದೇನೆಂದರೆ, ನಮ್ಮ ಗಡಿ ಭಾಗಗಳಲ್ಲಿ ವಿಶೇಷ ಪೋಲೀಸ್ ಠಾಣೆಗಳನ್ನು ನಿರ್ಮಾಣ ಮಾಡುವಂಥದ್ದು, ಈ ಭಾಗದಲ್ಲಿ ಹೆಚ್ಚಿನದಾಗಿ ಪೋಲೀಸ್ ಇಲಾಖೆಯನ್ನು, ವಿಶೇಷವಾಗಿ ನಮ್ಮ ರಾಜ್ಯದ ಅಬಕಾರಿ ನೀತಿ ಬೇರೆ ಇರುತ್ತದೆ. ಬೇರೆ ರಾಜ್ಯದ ಅಬಕಾರಿ ನೀತಿ ಬೇರೆ ಇರುತ್ತದೆ. ಇಲ್ಲಿಂದ ಅಲ್ಲಿಗೆ ಮದ್ಯವನ್ನು ತೆಗೆದುಕೊಂಡು ಹೋಗುವಂಥದ್ದು, ಅಲ್ಲಿಂದ ಇಲ್ಲಿಗೆ ಮದ್ಯವನ್ನು ತೆಗೆದುಕೊಂಡು ಬರುವಂತಹ ಅನೇಕ ಪ್ರಕರಣಗಳು ನಡೆಯುತ್ತಿವೆ. ಅದರ ಜೊತೆಗೆ ಅನೇಕ ಜೂಜು ಮತ್ತು ಇಸ್ಪೀಟ್ ಆಡುವಂತಹವರು ಕೂಡ ಪಕ್ಕದ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಬರುವಂತಹ ಘಟನೆಗಳು ಸಹ ನಡೆಯುತ್ತವೆ. ಕೆಲವು ಮತಾಂತರ ಮಾಡುವಂತಹ ಮಿಷನರಿಗಳು ಸಹ ಪಕ್ಕದ ರಾಜ್ಯದಿಂದ ಬಂದು, ಮತಾಂತರ ಮಾಡಿ ತಕ್ಷಣ ತಮ್ಮ ರಾಜ್ಯಕ್ಕೆ ಹೋಗುವಂತಹ ಚಟುವಟಿಕೆಗಳು ಅನೇಕ ಕಡೆಗಳಲ್ಲಿ ನಡೆದಿರುವಂತಹ ಘಟನೆಗಳು ನಮ್ಮ ಗಮನಕ್ಕೆ ಬಂದಿವೆ. ಹಾಗಾಗಿ, ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ನಮ್ಮ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೇವಲ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು ಒಂದೇ ಅಲ್ಲ. ಈ ರೀತಿ ಸಮಾಜಕ್ಕೆ ಕಂಠಕ ತರುವಂತಹ ವಿಷಯಗಳ ಕಡೆಗೂ ಕೂಡ ಗಮನಹರಿಸುವಂತಹ ಕೆಲಸವನ್ನು ಮಾಡಿದರೆ, ಖಂಡಿತವಾಗಿ ನಮ್ಮ

ರಾಜ್ಯದ ಭಾಗದಲ್ಲಿರುವ ಎಲ್ಲಾ ಕನ್ನಡಿಗರಿಗೆ ಇದರಿಂದ ಸಾಕಷ್ಟು ಸಹಾಯವಾಗುತ್ತದೆ. ಆದುದರಿಂದ ಇದರ ಕಡೆಗೆ ಗಮನಹರಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಧನ್ಯವಾದಗಳು.

**(ಮುಂದು...)**

(1171) 26.12.2022 04.00 LL-RN (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇವೊತ್ತಿನ ದಿವಸ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2022ನ್ನು ಏನು ತಿದ್ದುಪಡಿಗೆ ತಂದಿದ್ದಾರೆ, ಅದರಲ್ಲಿ ಗಡಿ ಭಾಗದ ಕರ್ನಾಟಕವನ್ನು ಅಭಿವೃದ್ಧಿಪಡಿಸುವಂಥದ್ದು, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಪ್ರಮುಖವಾದಂತಹ ಜವಾಬ್ದಾರಿಯಾಗಿರುತ್ತದೆ. ಈಗ ತಿದ್ದುಪಡಿ ತಂದಿರುವಂತಹದ್ದರಲ್ಲಿ 52 ತಾಲ್ಲೂಕುಗಳು ಹಾಗೂ ಇತರೆ ಪ್ರದೇಶಗಳನ್ನು ಏನು ಸೇರಿಸಿದ್ದಾರೆ, ಅದರಲ್ಲಿ "ಸೇರಿಸುವ" ಅಂದರೆ, ಇದಕ್ಕೆ ಸೇರಿಸತಕ್ಕಂಥದ್ದು. ಅಂದರೆ, "addition" ಮಾಡುವಂಥದ್ದು; "ಮಾರ್ಪಡಿಸುವ" ಅಂದರೆ, modify ಮಾಡುವಂಥದ್ದು. "ಬಿಟ್ಟುಬಿಡುವ" ಅಂದರೆ, ಅದರಿಂದ "ಕೈಬಿಡುವುದು". ನನಗೆ "ಕೈಬಿಡುವುದು" ಎನ್ನುವುದಕ್ಕೆ ಸ್ಪಷ್ಟೀಕರಣ ಬೇಕು. "ಕೈಬಿಡುವುದು" ಎಂದರೆ, ಗಡಿ ಭಾಗದಲ್ಲಿರುವ ತಾಲ್ಲೂಕು/ಪ್ರದೇಶಗಳನ್ನು ಪ್ರಾಧಿಕಾರದಿಂದ ಕೈಬಿಡುವುದೇ ಅಥವಾ ರಾಜ್ಯದಿಂದಲೇ ಕೈಬಿಡುವುದೇ ಹಾಗೂ ಅದನ್ನು ಯಾವ ಉದ್ದೇಶದಿಂದ ಎನ್ನುವ ಬಗ್ಗೆ ಸ್ಪಷ್ಟೀಕರಣ ಬೇಕು. ಅದನ್ನು ಕೊಟ್ಟರೆ ನಾನು ಮುಂದಿನ ವಿಚಾರದ ಬಗ್ಗೆ ಮಾತನಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ಅದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗಡಿ ಅಭಿವೃದ್ಧಿ ಪ್ರಾಧಿಕಾರದಲ್ಲಿ 52 ತಾಲ್ಲೂಕುಗಳು ಬರುತ್ತವೆಂದು ಹೇಳಿದ್ದಾರೆ. ಆದರೆ, ಪ್ರಾಧಿಕಾರದಲ್ಲಿ ಹೊಸ ತಾಲ್ಲೂಕುಗಳು ಘೋಷಣೆ ಆಗಿರುತ್ತವೆ. ಅದರಲ್ಲಿ ವಿಶೇಷವಾಗಿ ನಿಪ್ಪಾಣಿ ಮತ್ತು ಕಾಗವಾಡ

ತಾಲ್ಲೂಕುಗಳು. ಈ ಎರಡೂ ತಾಲ್ಲೂಕುಗಳನ್ನು ಕೈಬಿಡಲಾಗಿರುತ್ತದೆ. ಇವು ಗಡಿ ಭಾಗದಲ್ಲಿ ಬರುತ್ತವೆ. ಈ ಬಗ್ಗೆ ತಮಗೆ ಗೊತ್ತಿದೆ. ನಿಪ್ಪಾಣಿ ತಾಲ್ಲೂಕು ಮಾನ್ಯ ಗೃಹ ಸಚಿವರಿಗೂ ಸಹ ಗೊತ್ತಿದೆ. ಏಕೆಂದರೆ, ಅವರು ಆ ತಾಲ್ಲೂಕಿಗೆ ಭೇಟಿ ನೀಡಿರುತ್ತಾರೆ. ಸದರಿ ನಿಪ್ಪಾಣಿ ತಾಲ್ಲೂಕಿನಿಂದ ಕೊಲ್ಲಾಪುರಕ್ಕೆ ಹೋಗಬೇಕಾದರೆ ಗಡಿ ಭಾಗದ ನಿಪ್ಪಾಣಿ ತಾಲ್ಲೂಕು ಮುಖಾಂತರವೇ ಹೋಗಬೇಕಾಗುತ್ತದೆ. ಮೀರಜ್, ಸಾಂಗ್ಲಿಗೆ ಹೋಗಬೇಕಾದರೆ ಕಾಗವಾಡದ ಮುಖಾಂತರವೇ ಹೋಗಬೇಕಾಗುತ್ತದೆ. ಆದುದರಿಂದ, ಈ ಎರಡೂ ತಾಲ್ಲೂಕುಗಳನ್ನು ಸೇರಿಸಬೇಕು. ಪ್ರಸ್ತುತ ಇರುವಂತಹ 52 ತಾಲ್ಲೂಕುಗಳಲ್ಲಿ ಚಿಕ್ಕೋಡಿ ಮತ್ತು ಅಥಣಿ ಇವುಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಘೋಷಣೆ ಮಾಡಿದ್ದೀರಿ. ಆದರೆ, ಹೊಸದಾಗಿ ಘೋಷಣೆ ಮಾಡಿರುವಂತಹ ತಾಲ್ಲೂಕುಗಳನ್ನು ಕೈಬಿಡಲಾಗಿರುತ್ತದೆ. ಇದಕ್ಕೆ ಕಾರಣ ಏನೆಂದು ತಿಳಿಯುತ್ತಿಲ್ಲ. ಹಾಗಾಗಿ, ಇವುಗಳನ್ನು ಸೇರಿಸಬೇಕಾಗುತ್ತದೆ. ನನ್ನ ಗಮನಕ್ಕೆ ಬಂದಿರುವುದೇನೆಂದರೆ, ಗಡಿ ಭಾಗದಲ್ಲಿ ಈ ಎರಡೂ ತಾಲ್ಲೂಕುಗಳನ್ನು ಸೇರಿಸಬೇಕು. ಇಲ್ಲವಾದರೆ, ನಾಳೆಯ ದಿವಸ ಗಲಾಟೆ ಆಗುತ್ತದೆ. ಏಕೆಂದರೆ, ಚಿಕ್ಕೋಡಿ ತಾಲ್ಲೂಕಿನವರು, "ನಾವು ನಿಪ್ಪಾಣಿಗೆ ಏತಕ್ಕೆ ಅನುದಾನದ ದುಡ್ಡು ಕೊಡಬೇಕು" ಎಂದು ಕೇಳುತ್ತಾರೆ.

**ಉಪ ಸಭಾಪತಿಯವರು:-** ತಾವು ಮುಂದುವರೆಸಿ. ಮಾನ್ಯ ಸಚಿವರು ನಂತರ ಉತ್ತರ ನೀಡುತ್ತಾರೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡುವಾಗ ಈ ಎರಡು ತಾಲ್ಲೂಕುಗಳನ್ನು ಸೇರಿಸುತ್ತೇವೆಂದು ಹೇಳಬೇಕು. ಏಕೆಂದರೆ, ಕಾಗವಾಡ ಮತ್ತು ನಿಪ್ಪಾಣಿ ಈ ಎರಡೂ ತಾಲ್ಲೂಕುಗಳು ಗಡಿ ಭಾಗದ ತಾಲ್ಲೂಕುಗಳು. ಇಲ್ಲವಾದರೆ, ನಾಳೆಯ ದಿವಸ ಸರ್ಕಾರದಿಂದ ಅನುದಾನ ಕೊಡುವಾಗ ತಾರತಮ್ಯ ಆಗುತ್ತದೆ. ಚಿಕ್ಕೋಡಿ ತಾಲ್ಲೂಕಿಗೆ ಕೊಟ್ಟರೆ, ನಿಪ್ಪಾಣಿ ತಾಲ್ಲೂಕಿನವರು ನಮಗೆ ಅನುದಾನ ಕೊಡಬೇಕೆಂದು ಕೇಳುತ್ತಾರೆ. ಈ ಕಡೆ ಅಥಣಿ ತಾಲ್ಲೂಕಿಗೆ ಅನುದಾನ ಕೊಟ್ಟರೆ, ಕಾಗವಾಡ ತಾಲ್ಲೂಕಿನವರು ನಮಗೆ ಅನುದಾನ ಕೊಡಬೇಕೆಂದು ಕೇಳುತ್ತಾರೆ. ಆಗ ಜನಪ್ರತಿನಿಧಿಗಳಾದ ನಾವು ಯಾವ ಉತ್ತರ ಕೊಡಬೇಕು? ದಯಮಾಡಿ, ಈ

ಎರಡೂ ತಾಲ್ಲೂಕುಗಳನ್ನು ಗಡಿ ಪ್ರಾಧಿಕಾರಕ್ಕೆ ಸೇರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕಳಕಳಿಯಿಂದ ವಿನಂತಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ(ತಿದ್ದುಪಡಿ) ವಿಧೇಯಕ, 2022ಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಶ್ರೀ ಬಿ.ಕೆ. ಹರಿಪ್ರಸಾದ್‌ರವರು, ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು, ಶ್ರೀ ಪಿ.ಆರ್. ರಮೇಶ್‌ರವರು, ಶ್ರೀ ಕೆ.ಎ. ತಿಪ್ಪೇಸ್ವಾಮಿಯವರು, ಶ್ರೀ ಎಂ.ನಾಗರಾಜುರವರು, ಡಾ: ತೇಜಸ್ವಿನಿಗೌಡರವರು, ಶ್ರೀ ಕೆ.ಎಸ್. ನವೀನ್‌ರವರು ಮತ್ತು ಹಿರಿಯ ಸದಸ್ಯರಾದಂತಹ ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿಯವರು ಇವರೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ನೀಡಿರುತ್ತಾರೆ. ನಾನು ಸರ್ಕಾರದ ಪರವಾಗಿ ಸ್ಪಷ್ಟಪಡಿಸುವುದೇನೆಂದರೆ, ಗಡಿ ನಾಡಿನ ಕನ್ನಡಿಗರ ರಕ್ಷಣೆಗೆ ಮತ್ತು ಕನ್ನಡ ಶಾಲೆ, ಭಾಷೆ, ಕನ್ನಡದ ಬದುಕನ್ನು ರಕ್ಷಣೆ ಮಾಡುವುದಕ್ಕೆ ಕರ್ನಾಟಕ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿರುವಂತಹ ಚರ್ಚೆ ಏನೆಂದರೆ, ಕಾಲಕಾಲಕ್ಕೆ ಯಾವುದಾದರೂ ತಾಲ್ಲೂಕನ್ನು ಸೇರ್ಪಡೆ ಮಾಡುವುದಕ್ಕೆ, ಪ್ರಕಟಿಸುವುದಕ್ಕೆ ಸಮಸ್ಯೆಗಳು ಬಂದಾಗ, ಕೆಲವು ನಿಯಮಗಳನ್ನು, ಅಧಿನಿಯಮಗಳನ್ನು ಪುನರಪಿ ತರಬೇಕಾಗುತ್ತದೆ. ಆದರೆ, ಇವೊತ್ತಿನ ದಿವಸ ತಿದ್ದುಪಡಿಗೆ ತಂದಿರುವ ವಿಧೇಯಕದಲ್ಲಿ ನಿಯಮ 77ನ್ನು ಸೇರ್ಪಡೆ ಮಾಡಿದ ಹಿನ್ನೆಲೆಯಲ್ಲಿ ಇನ್ನು ಮುಂದೆ ತಾಲ್ಲೂಕುಗಳ ರಚನೆಯೂ ಸೇರಿದಂತೆ, ಎಲ್ಲಕ್ಕೂ ಸಹ ಇದರಲ್ಲಿ ನೇರವಾಗಿ ಅವಕಾಶ ಕಲ್ಪಿಸಲಾಗಿದೆ. ಪುನಃ ತಿದ್ದುಪಡಿ ತರಬೇಕಾದಂತಹ ಅವಶ್ಯಕತೆಗಳು ಇರುವುದಿಲ್ಲ ಎನ್ನುವುದಷ್ಟೇ ನಮ್ಮ ಮುಂದಿರುವ ವಿಷಯಗಳು. ಅದಾಗಿಯೂ ಕೂಡ, ಹಿರಿಯ ಸದಸ್ಯರು ಹೇಳಿರುವಂಥದ್ದು, ನಿಪ್ಪಾಣಿ ಮತ್ತು ಕಾಗವಾಡ ತಾಲ್ಲೂಕುಗಳ ವಿಚಾರದಲ್ಲಿ ಏನಾಗಿದೆಯೆಂದರೆ, ಈಗಾಗಲೇ ರಚನೆ ಮಾಡಿರುವಂತಹದ್ದಕ್ಕೆ ಸಮಸ್ಯೆ ಇಲ್ಲ. ಇನ್ನು ಮುಂದೆ ರಚನೆ ಮಾಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಗಡಿನಾಡು ಸಮಸ್ಯೆಗೆ ಸಂಬಂಧಪಟ್ಟಂತೆ, ಎಲ್ಲಾ ವಿಚಾರಗಳನ್ನು ಸಹ ಸರ್ಕಾರ ಆದ್ಯತೆ ಮೇಲೆ ಕೈಗೆತ್ತಿಕೊಳ್ಳುತ್ತದೆ. ಜೊತೆಗೆ, ಈ ವಿಚಾರದಲ್ಲಿ ಯಾವುದೇ ಸಮಸ್ಯೆಗಳಿದ್ದರೂ

ಸಹ, ಅದನ್ನು ಪರಿಹಾರ ಮಾಡುತ್ತೇವೆ ಎನ್ನುವಂತಹ ಮಾತುಗಳನ್ನು ತಮ್ಮ ಗಮನಕ್ಕೆ ತಂದು, ಹೊಸದಾಗಿ ಸೇರ್ಪಡೆಯಾಗಿರುವಂತಹ ಗಡಿ ತಾಲ್ಲೂಕುಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಅದರಂತೆ, ನಿಪ್ಪಾಣಿ, ಹೊನ್ನೂರ, ಚಿಟಗುಪ್ಪ, ಹಲಸೂರು, ಕಮಲಾನಗರ, ಒಡೆಯಗಾರ, ಗುರಮಿಟ್‌ಕಲ್, ತಿಕ್ಕೋಟ, ಚಡಚಣ, ಸರಗೂರು ಮತ್ತು ಕೆ.ಜಿ.ಎಫ್. ಈ ಎಲ್ಲಾ ತಾಲ್ಲೂಕುಗಳು ಇವೆ. ಇದರ ಜೊತೆಗೆ,...

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:-** ಮಾನ್ಯ ಸಭಾಪತಿಯವರೇ, ಕಾಗವಾಡ ತಾಲ್ಲೂಕು ಹೇಳಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ನಿಪ್ಪಾಣಿ ಮತ್ತು ಕಾಗವಾಡ ತಾಲ್ಲೂಕುಗಳನ್ನು ಸೇರ್ಪಡೆ ಮಾಡಬೇಕೆಂದು ಹೇಳಿದ್ದಾರೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:-** ಮಾನ್ಯ ಸಭಾಪತಿಯವರೇ, ಕಾಗವಾಡ ತಾಲ್ಲೂಕನ್ನು ಸಹ ಹೇಳಬೇಕು.

**ಉಪ ಸಭಾಪತಿಯವರು:-** ಆಯಿತು. ಕಾಗವಾಡ ತಾಲ್ಲೂಕನ್ನು ಸೇರಿಸಿಕೊಳ್ಳಿ. ಅದನ್ನು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಕಾಗವಾಡ ತಾಲ್ಲೂಕನ್ನು ಸಹ ಹೇಳಿರುತ್ತೇನೆ. ಅದು ದಾಖಲೆಗೆ ಹೋಗಿರುತ್ತದೆ. ಇದನ್ನು ಸರಿಪಡಿಸುತ್ತೇವೆಂದು ತಮ್ಮ ಮೂಲಕ ಹೇಳಿ ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಉಪ ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ಮಾನ್ಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಗಡಿನಾಡು ಕನ್ನಡಿಗರ ಕಾಯುವಂತಹ ಎಲ್ಲಾ ಜವಾಬ್ದಾರಿ ನಮ್ಮದು ಎನ್ನುವಂತಹ ಮಾತನ್ನು ಹೇಳಿದ್ದಾರೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ "ಸೇರಿಸುವ", "ಮಾರ್ಪಡಿಸುವ" ಮತ್ತು "ಬಿಟ್ಟುಬಿಡುವ" ಎಂದು ಮೂರು ಪದಗಳನ್ನು ಉಲ್ಲೇಖ ಮಾಡಿದ್ದಾರೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇದರಲ್ಲಿ "deletion" ಎಂಬ ಪದ ಅವಶ್ಯಕತೆ ಇದೆಯೇ?

**ಉಪ ಸಭಾಪತಿಯವರು:-** ಮಾನ್ಯ ಸಚಿವರು ಒಂದೇ ವಾಕ್ಯದಲ್ಲಿ ಹೇಳಿದ್ದಾರಲ್ಲವೇ?

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಆ ಪದ ಅವಶ್ಯಕತೆ ಇದೆಯೇ? ಆ ಪದ ಏತಕ್ಕೆ ಬಂತು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೆಲವು ಶಬ್ದಗಳು ಕಡತದಲ್ಲಿ ಮೊದಲಿನಿಂದಲೂ ಬಂದಿರುತ್ತದೆ. ಅದರರ್ಥ ಅದನ್ನು ಬಿಟ್ಟುಬಿಡುವ ಪ್ರಶ್ನೆ ಇರುವುದಿಲ್ಲ. ಸೇರ್ಪಡೆಗೊಳಿಸುವ, ಖಚಿತಗೊಳಿಸುವ ಮತ್ತು ರಚಿಸುವ ...

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಇದು hidden agenda ಆಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಯಾವುದೇ ಒಂದು ಕಾಯಿದೆಗೆ ತಿದ್ದುಪಡಿ ತರುವಾಗ, "ಕೈಬಿಡತಕ್ಕ", "ಸೇರ್ಪಡೆ ಮಾಡತಕ್ಕ" ಅಧಿಕಾರವನ್ನು ಹೊಂದಿದ್ದೇವೆ ಎಂದು ಹೇಳಿದರೆ, ಅದರರ್ಥ "ಕೈಬಿಡುತ್ತೇವೆ" ಎಂದು ಅಲ್ಲ. ಅದಕ್ಕೆ ಯಾವುದೇ ಮಾನ್ಯತೆ ಬೇಕಾಗಿಲ್ಲ. ಇಲ್ಲಿ ರಚನೆ ಇರುವಂಥದ್ದೇನೆಂದರೆ, 27ನೇ ಕಲಂನಲ್ಲಿ ತಿದ್ದುಪಡಿ ತಂದಿರುವಂಥದ್ದು, ಇನ್ನು ಹೊಸದಾಗಿ ರಚನೆ ಮಾಡುವಂತಹ ತಾಲ್ಲೂಕುಗಳಿಗೆ ಕಾಯಿದೆ ಅವಶ್ಯಕತೆ ಇರುವುದಿಲ್ಲವೆನ್ನುವುದಾಗಿದೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರು ಹೇಳಿರುವಂಥದ್ದನ್ನು ಪಾಸಿಟಿವ್ ಆಗಿ ಯೋಚನೆ ಮಾಡಿ. "ಕೈಬಿಡಲಾಗಿದೆ" ಎನ್ನುವುದನ್ನು ಏತಕ್ಕೆ ಬೇರೆ ರೀತಿ ಯೋಚನೆ ಮಾಡುತ್ತೀರಿ? ಅವರು ಹೇಳುತ್ತಿರುವುದು ಸೇರ್ಪಡೆಗೊಳ್ಳುವ ಎನ್ನುವುದನ್ನು positive ಆಗಿ ಯೋಚನೆ ಮಾಡಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, "ಕೈಬಿಡುವ" ಎಂದು ಹೇಳಿದರೆ, ಅವುಗಳನ್ನು ನಮ್ಮ ರಾಜ್ಯದಿಂದಲೇ ಕೈಬಿಡಲಾಗಿದೆಯೇ ಅಥವಾ ಪ್ರಾಧಿಕಾರದಿಂದ ಕೈಬಿಡಲಾಗಿದೆಯೇ ಎಂಬ ಬಗ್ಗೆ ಸ್ಪಷ್ಟೀಕರಣ ಬೇಕು.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದನ್ನು ಷೆಡ್ಯೂಲ್‌ನಲ್ಲಿ ಹೇಳುತ್ತಿರುವುದು. ಆಕ್ಟ್‌ನಲ್ಲಿ ಅಲ್ಲ. ಆಕ್ಟ್‌ನಲ್ಲಿ omission and deletion for making rules. ಅವಕಾಶ ಇದೆ. ಆದರೆ, ಷೆಡ್ಯೂಲ್‌ನಲ್ಲಿ ಕೈಬಿಡುವುದಕ್ಕೆ omission or deletion ಎಂಬ ಪದ ಏತಕ್ಕೆ ಬಂತು ಎಂಬುದು ನಮ್ಮ ಪ್ರಶ್ನೆಯಾಗಿದೆ. ಅದಕ್ಕೆ ಸ್ಪಷ್ಟೀಕರಣ ನೀಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದನ್ನು ಪರಿಶೀಲನೆ ಮಾಡಿ ಸರಿಪಡಿಸುತ್ತೇವೆ.

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## ಆ) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2022

## ಪರ್ಯಾಲೋಚನಾ ಪ್ರಸ್ತಾಪ

**ಶ್ರೀ ಆರ್. ಅಶೋಕ್ (ಕಂದಾಯ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

## ಪ್ರಸ್ತಾವವನ್ನು ಮಂಡಿಸಲಾಯಿತು

(ಮುಂದು...)

(1172) 26.12.2022 4.10 YL-VK (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ 1964 ಕಲಂ 95 ರಲ್ಲಿ ಕೃಷಿ ಜಮೀನಿನ ಕೃಷಿಯೇತರ ಪರಿವರ್ತನೆಯನ್ನು ಮತ್ತಷ್ಟು ಸರಳೀಕರಣ ಮಾಡುವಂಥ ವಿಧೇಯಕವಾಗಿದೆ. ಈಗ ಏನಿದೆ ಅದನ್ನು ಮತ್ತಷ್ಟು ಸರಳೀಕರಣ ಮಾಡಿ ಜನರಿಗೆ ಅದರಿಂದ ಉಪಯುಕ್ತವಾಗಬೇಕು. ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿಗೆ ಜನರು ತಿರುಗುವಂಥ ಸ್ಥಿತಿ ಏನಿದೆ, ಅದನ್ನು ತಪ್ಪಿಸಬೇಕೆಂದು ತಂದಿರುವಂಥ ತಿದ್ದುಪಡಿ ವಿಧೇಯಕವಾಗಿದೆ. ಇದರ ಪ್ರಕಾರ master plan areas ಅಂದರೆ, ನಗರ ಪ್ರದೇಶಗಳೇನಿವೆ, ಅದಕ್ಕೆ 07 ದಿವಸಗಳೊಳಗೆ ಭೂ ಪರಿವರ್ತನೆಯನ್ನು ಮಾಡಿಕೊಡಬೇಕು. Master plan ಗೆ ಈಗಾಗಲೇ notify ಆಗಿದ್ದು, master plan ನಲ್ಲಿ green belt ಇರುವುದರೊಂದಿಗೆ ಈಗಾಗಲೇ yellow zone, industries zone ಇವೆಲ್ಲವೂ ಇದೆ. ಹಾಗಾಗಿ, ಅವೆಲ್ಲವೂ ಇದ್ದರೂ ಕೂಡಾ ರೆವಿನ್ಯೂ ಇನ್ಸ್‌ಪೆಕ್ಟರ್, ತಹಸೀಲ್ದಾರ್, ಡಿ.ಸಿ, ಇವರುಗಳು "ಅಲ್ಲಿ ಅನುಮತಿ ತೆಗೆದುಕೊಂಡು ಬಾ, ಇಲ್ಲಿ ಅನುಮತಿ ತೆಗೆದುಕೊಂಡು ಬಾ" ಎಂದು ನೋಟಿಸ್ ನೀಡಿ, ತಿಂಗಳಾನುಗಟ್ಟಲೆ ತಿರುಗಾಡಿಸುವಂಥ ಪರಿಸ್ಥಿತಿ ಇದೆ.

ಈ ಹಿಂದೆ ಸಹ ಮಾಜಿ ಸಚಿವರಾದ ಶ್ರೀ ಆರ್.ವಿ.ದೇಶಪಾಂಡೆಯವರು "ಆನ್‌ಲೈನ್ ಸಿಸ್ಟಂ, 30 ದಿವಸಗಳೊಳಗೆ ಎಂದೆಲ್ಲಾ" ಸ್ವಲ್ಪ ಸರಳೀಕರಣ ಮಾಡುವಂಥ ಪ್ರಯತ್ನ ಮಾಡಿದ್ದರು. ಅದಕ್ಕೆ ಮತ್ತಷ್ಟು ಬದಲಾವಣೆ ತಂದು 07 ದಿವಸಗಳೊಳಗೆ ನೀಡಬೇಕು. ಡಿ.ಸಿ. ಯವರು ಬೇಕು, ಬೇಡ ಎಂದು ಹೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಒಂದು ವೇಳೆ 07 ದಿವಸಗಳೊಳಗೆ ನೀಡಲಿಲ್ಲವೆಂದರೆ, ಕ್ರಮೇಣವಾಗಿ ಜನರೇಟ್ ಆಗಿ 15 ದಿವಸಗಳೊಳಗೆ ಹೊರಗೆ ಬರುವಂಥ ಸಾಫ್ಟ್‌ವೇರ್ ಬದಲಾವಣೆ ಮಾಡಿದ್ದೇವೆ. ಏಕೆಂದರೆ, ಒಂದು ಸಲ Planning Authrority ಯವರು areas, zones ಗಳನ್ನು ಜೋನ್ ಮಾಡಿದ ಮೇಲೆ ಭೂ ಪರಿವರ್ತನೆ ಮಾಡುವಂಥ ಅಧಿಕಾರವೇ ಇರುವುದಿಲ್ಲ. ಜೊತೆಗೆ "ಇದು ಯಾವ ಜೋನ್ ಬರುತ್ತದೆ, ಬಿ.ಡಿ.ಎ. ರವರ ಅನುಮತಿ ತೆಗೆದುಕೊಂಡು ಬನ್ನಿ" ಎನ್ನುವಂಥ ಪ್ರಶ್ನೆ ಬರುವುದಿಲ್ಲ. ಕಂದಾಯ ಇಲಾಖೆಯ ಅಧಿಕಾರಿಗಳ ಹತ್ತಿರ ಏನೇ acquisition, PTCL (Prohibition of Transfer of Certain Lands) ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಯವರ ಹತ್ತಿರವೇ ಇರುವುದರಿಂದ ಅವರೇ ಮಾಡುವುದು. ಇದನ್ನು ಗಮನದಲ್ಲಿಟ್ಟುಕೊಂಡು 07 ದಿವಸಗಳೊಳಗೆ ಜಿಲ್ಲಾಧಿಕಾರಿಗಳು ನೀಡಬೇಕೆಂದು ಮಾಡಲಾಗಿದೆ.

ಎರಡನೇಯದಾಗಿ, ನಗರ ಪ್ರದೇಶ ಹೊರತುಪಡಿಸಿ ಗ್ರಾಮೀಣ ಪ್ರದೇಶಗಳೇನಿವೆ, ಅಲ್ಲಿ 15 ದಿವಸಗಳ ಕಾಲ ಸಮಯವನ್ನು ನೀಡಲಾಗಿದೆ. ಏಕೆಂದರೆ, ಹಳ್ಳಿಗಳ ಕಡೆ Planning Authority ಇರುವುದಿಲ್ಲ. ಹಾಗಾಗಿ 15 ದಿವಸಗಳೊಳಗೆ ಏನೇ ಇದ್ದರೂ ಸಹ ಅಲ್ಲಿನ ಪ್ರಾಧಿಕಾರದವರು ಅದನ್ನು ಮಾಡಬಹುದೇ, ಮಾಡಬಾರದೇ ಎಂಬುದಕ್ಕೆ ಅನುಮತಿ ನೀಡಬೇಕು. ಒಂದು ವೇಳೆ ಅನುಮತಿ ನೀಡಲಿಲ್ಲವೆಂದರೆ, automatically confirm ಆಗಿದಂಥಾಗುತ್ತದೆ. ಅದನ್ನು ಪಡೆದುಕೊಂಡು 30 ದಿವಸಗಳೊಳಗೆ ಜಿಲ್ಲಾಧಿಕಾರಿಯವರು ಭೂ ಪರಿವರ್ತನೆ ಆದೇಶವನ್ನು ನೀಡಬೇಕು. ಇದಕ್ಕೆ ಅನುಮತಿ ನೀಡುವ ಮೊದಲು "ನಾವು ಸರ್ಕಾರಿ ಜಮೀನು ಒತ್ತುವರಿ ಮಾಡಿಲ್ಲ, PTCL Act violation ಆಗಿಲ್ಲ, ಯಾವುದೇ ಭೂ ಸ್ವಾಧೀನವಾಗಿಲ್ಲ" ಎಂದು affidavit ತೆಗೆದುಕೊಳ್ಳಲಾಗುತ್ತದೆ. Affidavit ನಲ್ಲಿ ಏನಾದರೂ ತಪ್ಪಾದರೆ ಅವರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಬೇಕು. ಜೊತೆಗೆ ಅವರು ಭೂ ಪರಿವರ್ತನೆಗೆ ಕಟ್ಟಿದಂಥ ಹಣ ಏನಿದೆ, ಅದು forfeit ಆಗಬೇಕು ಮತ್ತು

conversion ಆದೇಶ ಸಹ ರದ್ದುಪಡಿಸಲಾಗುತ್ತದೆ. ಇಷ್ಟೆಲ್ಲಾ ನಿಬಂಧನೆಗಳನ್ನು ಮಾಡುವುದರಿಂದ ಎಲ್ಲಿಯೂ ಸಹ ಮೋಸವಾಗುವುದಿಲ್ಲ. ತಮಗೂ ಗೊತ್ತಿರುವ ಹಾಗೆ "ಕಾವೇರಿ 2" ನಲ್ಲಿ ಇವೆಲ್ಲವನ್ನೂ ತರಲಾಗಿದೆ. ಈಗ ಎಲ್ಲಾ ಸರ್ಕಾರಿ ಜಮೀನು flag ಆಗಿದೆ. ಅಂದರೆ, ಕ್ರಮೇಣವಾಗಿ ಸರ್ಕಾರಿ ಜಮೀನಿನಲ್ಲಿ, automatically flag ಬರುತ್ತದೆ, PTCL ದು flag ಬರುತ್ತದೆ. ಅದರಿಂದ ಎಲ್ಲಿಯೂ ಮೋಸ ಮಾಡುವಂಥ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆ ದೃಷ್ಟಿಯಿಂದ ಭೂ ಪರಿವರ್ತನೆ ಏನಿದೆ, ಅದನ್ನು ಸರಳೀಕರಣ ಮಾಡುವಂಥ ವಿಧೇಯಕವನ್ನು ಮಂಡಿಸುತ್ತಿದ್ದೇನೆ. ಆದ್ದರಿಂದ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಬೇಕೆಂಬ ಸದ್ದುದೇಶದಿಂದ ಈ ವಿಧೇಯಕವನ್ನು ತಂದಿದ್ದು, ಅದಕ್ಕೆ ಅನುಮೋದನೆ ನೀಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2022ರ ಬಗ್ಗೆ ಮಾನ್ಯ ಸಚಿವರು ಮಾತನಾಡುವ ಸಂದರ್ಭದಲ್ಲಿ ಕಾನೂನು ಅನ್ನು ಸರಳೀಕರಣಗೊಳಸುವುದಕ್ಕಾಗಿ ಈ ತಿದ್ದುಪಡಿ ವಿಧೆಯಕ ತಂದಿದ್ದೇವೆ ಎಂದು ಹೇಳಿದರು. ನಾನು ತಾಂತ್ರಿಕವಾಗಿ, ವೈಯಕ್ತಿಕವಾಗಿ ಈ ವಿಧೇಯಕಕ್ಕೆ ವಿರೋಧವಾಗಿದ್ದೇನೆ. ಆದರೆ, ಅವರಲ್ಲಿ ಸಂಖ್ಯಾಬಲ ಇರುವುದರಿಂದ ನಾವು ಈ ವಿಧೇಯಕಕ್ಕೆ ಅಡ್ಡ ಬರುವುದಿಲ್ಲ, ಅವರು ಪಾಸ್ ಮಾಡಿಕೊಂಡು ಹೋಗಲಿ. ಆದರೆ, ಈಗ ತಂದಿರುವಂಥ ವಿಧೇಯಕವು ಬಡವರ ಪರವಾಗಿ ಇರುವಂತಹ ವಿಧೇಯಕವಲ್ಲ. 15 ದಿವಸಗಳೊಳಗೆ ವರ್ಗಾವಣೆಯಾಗುತ್ತದೆ. ಒಂದು ವರ್ಷದಲ್ಲಿ ಲೂಟಿ ಹೊಡೆಯುತ್ತಿದ್ದವನು 15 ದಿವಸಗಳೊಳಗೆ ಲೂಟಿ ಹೊಡೆದುಕೊಂಡು ಹೋಗಬಹುದು. Land use conversion ಬೆಂಗಳೂರು ಬಿಟ್ಟು, ಹಳ್ಳಿಗಳ ಕಡೆ,... ಏಕೆಂದರೆ, ಬೆಂಗಳೂರಿನಿಂದ ಹೋದಾಗ ದಾಬಸ್ ಪೇಟೆಯವರೆಗೂ ಬಡಾವಣೆ ಆಗಿದೆ. ಅದಕೋಸ್ಕರ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಡಿ ದೇವರಾಜ್ ಅರಸು ಹಾಗೂ ಮಾಜಿ ಪ್ರಧಾನಮಂತ್ರಿಗಳಾದ ದಿವಂಗತ ಇಂದಿರಾಗಾಂಧಿಯವರ ಕಾಲದಲ್ಲಿ ಕೆಲವೊಂದಕ್ಕೆ ನಿಬಂಧನೆಗಳು ಇತ್ತು. ರೈತರಿಗೆ, ಬಡವರಿಗೆ ಯಾರು ಮೋಸ ಮಾಡಬಾರದೆಂದು restrictions ಇತ್ತು, ಅದು PTCL ಇರಬಹುದು ಅಥವಾ ಸರ್ಕಾರದವರು

ಜಮೀನನ್ನು ಯಾರಿಗೆ ಕೊಡುತ್ತಾರೆ ಎಂಬುದನ್ನು ಯಾರು ಕೇಳುವುದಿಲ್ಲ. ಆ ದಾಖಲೆಯನ್ನು ತೆಗೆದು ನೋಡಿದರೆ ಯಾರಿಗೆಲ್ಲಾ ಜಮೀನು ಹಂಚಿಕೆಯಾಗಿದೆ ಎಂಬುದು ಗೊತ್ತಾಗುತ್ತದೆ.

ಅದರಿಂದ ಕೆಲವು ಸಂದರ್ಭದಲ್ಲಿ land bank ಮಾಡುವುದಕ್ಕಾಗಿ ಈ ರೀತಿ ನಡೆಯುತ್ತದೆ. ಯಾವ ಸರ್ಕಾರ ಅಧಿಕಾರದಲ್ಲಿರುತ್ತದೆ, ಆ ಸರ್ಕಾರವು ಯಾರಿಗೆ ಅನುಕೂಲ ಮಾಡಿಕೊಡಲು ಸಾಧ್ಯ, ಅಂಥವರಿಗೆ ಅನುಕೂಲ ಮಾಡಿಕೊಡುತ್ತದೆ. ಏಕೆಂದರೆ, ನಮ್ಮ ಮುಂದೆ ಬಹಳಷ್ಟು ಉದಾಹರಣೆಗಳಿವೆ. KIADB (Karnataka Industrial Areas Development Board) ನಲ್ಲಿ ಭೂ ಸ್ವಾಧೀನವಾಗಿದ್ದು, ನಂತರ ಸಾರ್ವಜನಿಕರ ಉದ್ದೇಶದಿಂದಾಗಿ ಭೂ ಸ್ವಾಧೀನವಾಗಿದೆ ಎಂಬುದನ್ನು ನಾವೆಲ್ಲರೂ ಸಹ ನೋಡಿದ್ದೇವೆ. ಒಳ್ಳೆಯ ಸಂದರ್ಭದಲ್ಲಿ ಅದನ್ನು denotification ಮಾಡಿ, ಖಾಸಗಿ ಜನರಿಗೆ ನೀಡಿರುವುದನ್ನು ಸಹ ನೋಡಿದ್ದೇವೆ. ಈ ಮೊದಲು ಬೆಂಗಳೂರು ನಗರದಲ್ಲಿ 12 ಕ್ಷೇತ್ರ ಇದ್ದಾಗ ಒಂದು ರೀತಿ ಇತ್ತು. ಈಗ 28 ಕ್ಷೇತ್ರವಾದ ಮೇಲೆ ಇತಿಮಿತಿ ಇಲ್ಲದಂತಾಗಿದೆ. ಆದ್ದರಿಂದ ಎಷ್ಟು ಕಾನೂನು ಜಾರಿಗೆ ತರುತ್ತಾರೆ, ಅಷ್ಟು ಭ್ರಷ್ಟಚಾರ ಜಾಸ್ತಿಯಾಗುತ್ತದೆ ಎಂಬುದು ಪ್ರಜಾಪ್ರಭುತ್ವದಲ್ಲಿ ಸಾಬೀತಾಗಿದೆ. ಸ್ವತಂತ್ರ ದೇಶದಲ್ಲಿ ನಾವು ಯಾವಾಗಲೂ ಸಹ ಬಡವರಿಗೆ ಸಹಾಯ ಮಾಡುವಂಥ ಕೆಲಸ ಆಗಲಿಲ್ಲವೆಂದರೆ, ಸರ್ಕಾರಗಳು ಶ್ರೀಮಂತರಿಗೂ ಸಹ ರಕ್ಷಣೆ ನೀಡಲು ಆಗುವುದಿಲ್ಲ. ಸಮತೋಲನವಾಗಿ ಅಭಿವೃದ್ಧಿಯಾದಾಗ ಕಾನೂನು ಎಲ್ಲರಿಗೂ ಸಹ ಅನುಕೂಲವಾಗುವ ರೀತಿ ಮಾಡಿದಾಗ ಮಾತ್ರ ಸಮಾಜ ಮತ್ತು ರಾಷ್ಟ್ರ ಎಂಬುದು ಮುಂದುವರೆಯಲು ಸಾಧ್ಯ. ಆದ್ದರಿಂದ ಮಾನ್ಯ ಕಂದಾಯ ಸಚಿವರು ಈಗಾಗಲೇ ಏನು ಹೇಳಿದ್ದಾರೆ ಅದಕ್ಕೆ ಸಂಬಂಧಿಸಿದಂತೆ 15 ದಿವಸಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಇರುವಂಥದು,... ಕೆಲವು ಕಡೆ ಜಾಗ ನೀಡಿದ್ದು, ಆ ಸಂಬಂಧ ನಾನು ಕಳೆದ ಅಧಿವೇಶನದಲ್ಲಿಯೂ ಸಹ ಪ್ರಸ್ತಾಪ ಮಾಡಿದ್ದೇನೆ. ಶ್ರೀ ಜಗ್ಗಿ ವಾಸುದೇವ್ ಎಂಬುವವರಿಗೂ ಜಮೀನು ನೀಡುವ ಕೆಲಸವೂ ತಕ್ಷಣವೇ ಎಲ್ಲವೂ ಆಗಿ ಹೋಗಿದೆ. ನಾವು ಯಾವುದೋ ಶಾಲಾ-ಕಾಲೇಜುಗಳ ನಿರ್ಮಾಣಕ್ಕೆ ಜಾಗವನ್ನು ಕೇಳಿದರೆ ಸಿಗುವುದಿಲ್ಲ. ಶ್ರೀ ಜಗ್ಗಿ ವಾಸುದೇವ್‌ರವರು ಕರ್ನಾಟಕಕ್ಕೆ ಏನು ಕೊಡುಗೆ ನೀಡಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿದೆ. ಅವರು ಬೆಂಗಳೂರಿನ Hospital Road ನಲ್ಲಿಯೇ ವಾಸವಾಗಿದ್ದರು. ಏನಾದರೂ ಕೊಡುಗೆ ನೀಡಿದ್ದರೆ

ಜಾಗವನ್ನು ನೀಡಲಿ. ಆದರೆ, ಯಾವ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡುತ್ತಾರೆ ಎಂಬುದು ಬಹಳ ಮುಖ್ಯವಾಗುತ್ತದೆ. ಶಾಲಾ-ಕಾಲೇಜು, ಆಸ್ಪತ್ರೆಗಳ ನಿರ್ಮಾಣ ಮಾಡುವುದಾದರೆ ಮಾಡಲಿ. ಅದನ್ನು ಬಿಟ್ಟು land mafia ಗಳಿಗೆ ಭೂ ಪರಿವರ್ತನೆ ಮಾಡಲು ಜಾಗಗಳನ್ನು ನೀಡಿದರೆ ಬಡವರು ಎಲ್ಲಿಗೆ ಹೋಗುತ್ತಾರೆ? ಜೊತೆಗೆ ಪ್ರಾಧಿಕಾರವನ್ನು ಏತಕ್ಕೆ ನಿರ್ಮಿಸಿದ್ದಾರೆ.

ಆದ್ದರಿಂದ ಹಳ್ಳಿಗಳಲ್ಲಿ ಭೂ ಪರಿವರ್ತನೆ ಮಾಡುವ ಸಂದರ್ಭದಲ್ಲಿ ಬಡವರ ಹಿತರಕ್ಷಣೆ ಕಾಪಾಡುವಂಥ ಕೆಲಸ ಈ ವಿಧೇಯಕದಿಂದ ಆಗುವುದಿಲ್ಲ ಎಂಬುದು ನನ್ನ ಭಾವನೆ. ದಯವಿಟ್ಟು ನಾವು ಕಳೆದ ಬಾರಿ ಸಹ Land Reforms Bill ಗೆ ತಿದ್ದುಪಡಿ ವಿಧೇಯಕವನ್ನು ತಂದಾಗ ನಾವೆಲ್ಲರೂ ವಿರೋಧ ಮಾಡಿದ್ದು, ಈ ಕಾರಣದಿಂದಾಗಿಯೇ ಮಾಡಿದ್ದು. ಆ ಕಾನೂನನ್ನು ಕೇಂದ್ರ ಸರ್ಕಾರದವರು ಹಿಂಪಡೆದುಕೊಂಡರೂ, ಕರ್ನಾಟಕ ಸರ್ಕಾರದವರು ಹಿಂಪಡೆದುಕೊಳ್ಳಲಿಲ್ಲ. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಬೇಕು. ಇವತ್ತಿನ ದಿವಸ ಅವರು ಆಡಳಿತ ಪಕ್ಷದ ಜಾಗದಲ್ಲಿದ್ದು, ನಾಳೆ ಎಲ್ಲಿರುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ಹಾಗೆಯೇ ನಾವು ಸಹ ಇವತ್ತು ವಿರೋಧ ಪಕ್ಷದಲ್ಲಿದ್ದೇವೆ. ಹಾಗೆಯೇ ನಾವು ನಾಳೆ ಹೊರಗೆ ಹೋಗಬಹುದು ಅಥವಾ ಬೇರೆ ಕಡೆ ಹೋಗಬಹುದು. ಕರ್ನಾಟಕ ರಾಜ್ಯವು ಪ್ರಗತಿಪರ ರಾಜ್ಯವಾಗಿದ್ದು, ಇಡೀ ರಾಷ್ಟ್ರವನ್ನು ನೋಡಿದಾಗ ದಕ್ಷಿಣ ಭಾರತವು ಪ್ರಗತಿಪರ ಪ್ರಾಂತ್ಯವಾಗಿದೆ. ಅದರಲ್ಲಿಯೂ ಕರ್ನಾಟಕ ರಾಜ್ಯದಲ್ಲಿ ಇಂತಹ ಕಾನೂನಿಗೆ ಅವಕಾಶ ನೀಡಬಾರದು. ಏಕೆಂದರೆ, ಪ್ರಮುಖವಾಗಿ ಪ್ರಜಾಪ್ರಭುತ್ವ ಸಮಾಜದಲ್ಲಿರುವಂಥ ಕಟ್ಟಕಡೆಯ ವ್ಯಕ್ತಿಗೆ ಅನುಕೂಲವಾಗುವಂಥ ಕಾನೂನು ತರಬೇಕು. ಒಂದು ನೋಟಿಸ್ ನೀಡಿದರೆ ಸಾಕು ಭಯ ಬೀಳುತ್ತಾರೆ. ಕೆಲವು ಸಮುದಾಯದವರು, ಜಾಗೃತಿ ಇರುವವರಾದರೆ ಉಳಿಸಿಕೊಳ್ಳುತ್ತಾರೆ. ಜಾಗೃತಿ ಇಲ್ಲದವರು ಭೂಮಿಯನ್ನು ಮಾರಿ, ಏನೇನೋ ಆಗಿ ಹೋಗಿದ್ದಾರೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಎರಡು ಸಲ ಯೋಚನೆ ಮಾಡಬೇಕಾಗಿದೆ.

(ಮುಂದು)

(1173) 26.12.2022/4.20/ಎಸ್‌ಕೆ-ವಿಕೆ **(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು):-**

ಈ ವಿಧೇಯಕಕ್ಕೆ ತಿದ್ದುಪಡಿ ತಂದರೆ, ಬಡವರಿಗೆ ಏನು ಅನುಕೂಲವಾಗುತ್ತದೆ ಎಂಬುದರ ಬಗ್ಗೆ ಮಾನ್ಯ ಸಚಿವರು ಯೋಚನೆ ಮಾಡಬೇಕು. ಮಾನ್ಯ ಸಚಿವರು ತಂದಿರುವಂತಹ ವಿಧೇಯಕಕ್ಕೆ ತಿದ್ದುಪಡಿ ತಂದಿರುವ ಬಗ್ಗೆ ನನಗೆ ಅನಿಸುವುದೇನೆಂದರೆ, ಕೇವಲ ಭೂಮಾಫಿಯಾಗಳಿಗೆ ಮಾತ್ರ ಸಹಾಯಕವಾಗಿರುವಂತಹ ವಿಧೇಯಕವಾಗಿದೆ. ಆದ್ದರಿಂದ ನಾನು ಮೊದಲೇ ಹೇಳಿದಂತೆ, ತಾಂತ್ರಿಕವಾಗಿ ನಾವು ಬೆಂಬಲವನ್ನು ಕೊಡಬೇಕಾಗುತ್ತದೆ. ಆದರೆ ಜನಸಾಮಾನ್ಯರ ದೃಷ್ಟಿಯಲ್ಲಿ ನಾವು ಬೆಂಬಲವನ್ನು ಕೊಡುವುದಕ್ಕಾಗುವುದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಕೆ.ಎ. ತಿಪ್ಪೇಸ್ವಾಮಿಯವರೇ, ತಾವು ಮಾತನಾಡಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಹಿಂದಿನ Act ನಲ್ಲಿ deemed conversion, ಅದನ್ನು ಈಗ approved, ಅನುಮೋದನೆ ನೀಡಲಾಗಿದೆ ಎಂಬುದೊಂದು ಒಳ್ಳೆಯ ಶಬ್ಧ. ಆ ಪದವನ್ನು ಬಳಕೆ ಮಾಡುವುದು ಒಳ್ಳೆಯದೆಂದು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಸಚಿವರು ಹೇಳಿದಂತೆ, ಏಳು ದಿವಸಗಳೊಳಗಾಗಿ ಅನುಮೋದನೆ ದೊರೆಯದಿದ್ದರೆ, ಅದನ್ನು ತದನಂತರ software ನಲ್ಲಿ ಆದೇಶ generate ಆಗಿ ಬರುತ್ತದೆ. ಆದರೆ ಯಾವುದೇ ಒಂದು ಆದೇಶಕ್ಕೆ ರುಜುವಿದ್ದರೆ ಒಳ್ಳೆಯದು. ಹದಿನೈದು ದಿವಸಗಳೊಳಗಾಗಿ ಜಿಲ್ಲಾಧಿಕಾರಿಯವರಾಗಲೀ, ಜಿಲ್ಲಾಧಿಕಾರಿಯವರ ಪರವಾಗಿ ಯಾರಾದರೊಬ್ಬ ಅಧಿಕಾರಿ ಸಹಿ ಹಾಕಿ ಕಳುಹಿಸುವಂತೆ ಒಂದು ವ್ಯವಸ್ಥೆಯನ್ನು ದಯವಿಟ್ಟು, ಮಾನ್ಯ ಸಚಿವರು rule ನಲ್ಲಿ provide ಮಾಡಿ. ಸೆಕ್ಷನ್ 95 (2) III ನಲ್ಲಿ ಸುಳ್ಳು ಅಥವಾ ತಪ್ಪು ಘೋಷಣೆ ಕೊಟ್ಟರೆ, ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ರೈತರಿಗೆ ಗೊತ್ತಾಗುವುದಿಲ್ಲ. ಇದರಲ್ಲಿ ಏನು ಮಾಡಿರುತ್ತಾರೆ? ಯಾರನ್ನೋ ಕೇಳಿ ಸಹಿ ಹಾಕಿರುತ್ತಾರೆ. ಇದು ತುಂಬಾ harsh

ಆಗುವುದಿಲ್ಲವೇ? ಇದರ ಬಗ್ಗೆ ಸರ್ಕಾರ ಯೋಚನೆ ಮಾಡಿದ್ದೀರಾ. ಆಮೇಲೆ ಅಫಿಡಾವಿಟ್‌ನಲ್ಲಿ ಅಥವಾ ಪರಿವರ್ತನೆ ಶುಲ್ಕ ಕಟ್ಟಲಿಲ್ಲವೆಂದು ಹೇಳಿದರೆ, ಭೂ ಕಂದಾಯ ರೀತಿಯಲ್ಲಿ ವಸೂಲಿ ಮಾಡಬಹುದು. ಜಮೀನನ್ನು forbid ಮಾಡಿಕೊಂಡರೆ, ರೈತ ಎಲ್ಲಿಗೆ ಹೋಗಬೇಕು? ಇದರ ಬಗ್ಗೆ ಸರ್ಕಾರ ಪುನಃ ಯೋಚನೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

ಎರಡನೆಯದಾಗಿ, extent ಎಷ್ಟು ಎಂದು ಮಾನ್ಯ ಸಚಿವರು ಹೇಳಿಲ್ಲ. ವಿಸ್ತೀರ್ಣ ಎಲ್ಲಿಯವರೆಗೆ ಇದೆ. ವಿಸ್ತೀರ್ಣದಲ್ಲಿ ಎರಡು ಎಕರೆ ಅಥವಾ ಐದು ಎಕರೆ, ಹತ್ತು ಎಕರೆ ಎಂದು ಲಿಮಿಟ್ ಇದೆಯಾ ಎಂದು ಅದರಲ್ಲಿ ಹೇಳಿಲ್ಲ. Extent ಇಲ್ಲದಿದ್ದರೆ ಏನಾಗುತ್ತದೆ ಎಂದು ಹೇಳಿದರೆ, real estate agents ಗಳು, land developers ರೈತರ ಹತ್ತಿರ ಹೋಗಿ ಸಹಿ ಹಾಕಿಸಿಬಿಡುತ್ತಾರೆ. ಅದ್ಯಾವುದೂ ಗೊತ್ತಾಗುವುದಿಲ್ಲ. ಅದನ್ನು rule ನಲ್ಲಿ ಮಾಡಬಹುದೇನೋ ನೋಡಿ. ಏಕೆಂದರೆ ultra vires ಆಗುತ್ತದೆ. ಅದು ಗೊತ್ತಾಗುವುದಿಲ್ಲ. ದಯವಿಟ್ಟು, ಅದರ ಬಗ್ಗೆ ವಿಚಾರ ಮಾಡಿ. ಇನ್ನು master plan ಎಲ್ಲೆಲ್ಲಿ ಇದೆ. ಸ್ಥಳೀಯ ನಗರ ಯೋಜನಾ ಪ್ರಾಧಿಕಾರಗಳಿವೆ. ಅಲ್ಲೆಲ್ಲವೂ ಕೂಡ ರಾಷ್ಟ್ರೀಯ ಹೆದ್ದಾರಿ ಕಡೆ ಎಷ್ಟು ಕಿಲೋ ಮೀಟರ್ ಬಿಡಬೇಕು. Highway ಇದ್ದರೆ ಎಷ್ಟು ಕಿಲೋ ಮೀಟರ್ ಬಿಡಬೇಕು. MDR (Major District Road) ಆದರೆ ಬಿಡಬೇಕು ಎನ್ನುವಂತಹದ್ದು ಇದೆ. ಎಲ್ಲಿ ಯೋಜನೆ ಇಲ್ಲವೋ, ಅಲ್ಲಿ ಗೊತ್ತಾಗುವುದಿಲ್ಲ. ರೈತರು ಮನೆಯನ್ನು ರಸ್ತೆಯ ಬದಿಯಲ್ಲಿ ಕಟ್ಟಿಕೊಂಡರೆ, ನಾಳೆ ಅವರಿಗೆ ತುಂಬಾ ತೊಂದರೆಯಾಗುತ್ತದೆ. ಇದರ ಬಗ್ಗೆಯೂ ಕೂಡ ತಾವು ಆಲೋಚನೆ ಮಾಡಬೇಕೆಂದು ನನ್ನ ಅಭಿಪ್ರಾಯವನ್ನು ಹೇಳಬಯಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಕೆ. ಪ್ರತಾಪಸಿಂಹ ನಾಯಕ್‌ರವರೇ, ತಾವು ಮಾತನಾಡಿ.

**ಶ್ರೀ ಕೆ. ಪ್ರತಾಪ್‌ಸಿಂಹ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿಗೆ ನಾನು ಸ್ವಾಗತ ಮಾಡುತ್ತಾ, ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಈ ತಿದ್ದುಪಡಿ ನೇರವಾಗಿ ಜನಸಾಮಾನ್ಯರ ಬದುಕಿಗೆ ಸಂಬಂಧಪಟ್ಟಂತಹ ತಿದ್ದುಪಡಿ ಎಂದು ಹೇಳುವಂತಹ ಭಾವನೆ ನನ್ನದು. ಗ್ರಾಮೀಣ ಮಟ್ಟದಲ್ಲಿ ವಿಶೇಷವಾಗಿ ಕೃಷಿಕನನ್ನೊಳಗೊಂಡಂತೆ ಅಥವಾ ಮತ್ತೆ ಯಾರಾದರನ್ನೊಳಗೊಂಡಂತೆ ಮನೆ ಕಟ್ಟಿಕೊಳ್ಳುವುದಾದರೆ,

ನೇರವಾಗಿ ಭೂ ಪರಿವರ್ತನೆಯನ್ನು ನಿರೀಕ್ಷೆ ಮಾಡುತ್ತಾರೆ. ಅದ್ಯಾವುದೇ authority ಇರಬಹುದು. ಪಂಚಾಯಿತಿಯಿಂದ ಪರವಾನಿಗೆ ಪಡೆಯುವುದಕ್ಕೂ ಮತ್ತು ಇದಕ್ಕೂ ನೇರವಾದ ಸಂಬಂಧ ಇದೆ. ಈ ಹಿನ್ನೆಲೆಯಲ್ಲಿ ವರ್ಷಾನುಗಟ್ಟಲೆಯಲ್ಲಿ ಒಂದು ಸಣ್ಣ ಮನೆ ಕಟ್ಟಿಕೊಳ್ಳುವುದಕ್ಕಾಗಿ ಭೂ ಪರಿವರ್ತನೆಗೋಸ್ಕರ  ಕಛೇರಿಗೆ ಓಡಾಟ ಮಾಡುವಂತಹ ತುಂಬಾ ಜನರನ್ನು ನಾವು ದಿನನಿತ್ಯ ನೋಡಿದ್ದೇವೆ. ಅಂತಹದ್ದರಲ್ಲಿ ಈ ಹದಿನೈದು ದಿನಗಳೊಳಗೆ, ಏಳು ದಿನಗಳೊಳಗೆ ಅವರು ಪ್ರತಿಕ್ರಿಯೆ ಕೊಡಲಿಲ್ಲವೆಂದಾದರೆ, ಅದು approved conversion ಎಂದು ಹೇಳುವ ರೀತಿಯಲ್ಲಿ ಆಗುತ್ತಿರುವಂತಹದ್ದು ಅತ್ಯಂತ ಸ್ವಾಗತಾರ್ಹ ಎಂದು ಹೇಳುವುದು ನನ್ನ ಭಾವನೆಯಾಗಿದೆ. ಇದರ ಬಗ್ಗೆ ಮಾನ್ಯ ಹಿರಿಯರು ವಿಶೇಷವಾಗಿ ಹೇಳಿರುವ ರೀತಿಯಲ್ಲಿ ಈ ತಿದ್ದುಪಡಿ ತಂದ ನಂತರ ಇದಕ್ಕೆ ನಿಯಮಾವಳಿಗಳನ್ನು ತರುವ ದಿಕ್ಕಿನಲ್ಲಿ ಸರ್ಕಾರ ಖಂಡಿತವಾಗಿಯೂ ಯೋಚನೆ ಮಾಡುತ್ತದೆ. ಆದರೆ ವಿಶೇಷವಾಗಿ ಮನೆಯನ್ನು ಕಟ್ಟಿಕೊಳ್ಳಲು ಭೂ ಪರಿವರ್ತನೆಯಾದಾಗ, ಸಾಮಾನ್ಯವಾಗಿ ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುವ  ಸಂದರ್ಭದಲ್ಲಿ ಭೂ ಪರಿವರ್ತನೆಯ ನಕ್ಷೆಯಲ್ಲಿ ಮಾರ್ಗಗಳನ್ನು ಸೂಚಿಸದಿದ್ದರೆ, ಬರೀ ನಕ್ಷೆ ಕೊಡುವಾಗ, ನಾನು ದಕ್ಷಿಣ ಕನ್ನಡ ಜಿಲ್ಲೆಯ  ಅನುಭವದ ಬಗ್ಗೆ ಮಾತುಗಳನ್ನು ಹೇಳುತ್ತಿದ್ದೇನೆ.  ತಿದ್ದುಪಡಿ ವಿಧೇಯಕದಲ್ಲಿ ಬರೆದಿರುವ ಬಗ್ಗೆ ಓದುತ್ತೇನೆ. ಅದೇನೆಂದರೆ, "ಪರಂತು, ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯು ಅರ್ಜಿದಾರನು ನಕ್ಷೆಗಾಗಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಪರಿವರ್ತನಾ ಪೂರ್ವ ನಕ್ಷೆಯನ್ನು  ಅನುಮೋದಿಸಲು" ಎಂದು ಹೇಳಿದ್ದಾರೆ. ಆದರೆ ಬಹಳಷ್ಟು ಸಮಸ್ಯೆಗಳು ಇರುವಂತಹದ್ದು, ಈ ನಕ್ಷೆಗಳ  ವಿಷಯದಲ್ಲಿ ಸಾಕಷ್ಟು ಭೂಮಿಗಳನ್ನು ಅಕ್ರಮ-ಸಕ್ರಮದಡಿಯಲ್ಲಿ ಅಥವಾ ಆಗಿನ ಭೂನ್ಯಾಯ ಮಂಡಳಿಯ ತೀರ್ಪಿನ ಸಂದರ್ಭದಲ್ಲಿ ಕೊಟ್ಟಿದ್ದೇವೆ. ಅದರೆ ಇವತ್ತಿಗೂ ಪೂರ್ಣ ಪ್ರಮಾಣದಲ್ಲಿ ಕರಾವಳಿ ಭಾಗದಲ್ಲಿ ಸಣ್ಣ ಸಣ್ಣ ಹಿಡುವಳಿದಾರರು ಇರುವ ಹಿನ್ನೆಲೆಯಲ್ಲಿ  ಗಡಿಗಳು ಇನ್ನು ನಿಶ್ಚಿತವಾಗಿ ನಿರ್ಧಾರಗಳಾಗಿಲ್ಲ.  ಅವರಿಗೆ ತೀರ್ಪಾದ ಭೂಮಿಗೂ ಮತ್ತು ಅಲ್ಲಿನ ಅವರ ಸ್ವಾಧೀನತೆಗೂ, ಅಕಾರಬಂಧಿಗಳಿಗೂ ತುಂಬಾ ವ್ಯತ್ಯಾಸಗಳು ಇದ್ದಾವೆ. ಆ ಕಾರಣಕ್ಕಾಗಿ ಇವತ್ತಿಗೂ ಅಣ್ಣ-ತಮ್ಮಂದಿರಿಗೂ ಪಾಲುಪಟ್ಟಿ ಅಥವಾ partition deed ಮಾಡುವುದಕ್ಕಾಗಲೀ ಅಥವಾ ತನ್ನ ಭೂಮಿಯನ್ನು ಇನ್ನೊಬ್ಬರಿಗೆ ಕೊಡುವುದಕ್ಕೆ ನಮೂನೆ-11 ಇ ನಕ್ಷೆ ಇವತ್ತು ಕಡ್ಡಾಯವಾಗಿದೆ. ಆ

ಹಿನ್ನೆಲೆಯಲ್ಲಿ ನಕ್ಷೆಯೂ ಲಭ್ಯವಾಗುವುದಕ್ಕೆ ಸಮಸ್ಯೆ ಇರುವಂತಹ ಸಂದರ್ಭದಲ್ಲಿ ಈ ನಕ್ಷೆಯನ್ನು ಅವರು ಅರ್ಜಿ ಸಲ್ಲಿಸಿದಾಗ, ಹದಿನೈದು ದಿವಸ ಅಥವಾ ಏಳು ದಿವಸಗಳೊಳಗೆ ಆ ನಕ್ಷೆಯನ್ನು ಪೂರೈಕೆ ಮಾಡುವುದಕ್ಕೆ ಕಂದಾಯ ಇಲಾಖೆ ಇದರ ಬಗ್ಗೆ ಏನು ಮುಂದಾಲೋಚನೆ ಅಥವಾ ವ್ಯವಸ್ಥೆಯನ್ನು ಮಾಡುತ್ತದೆ ಎಂದು ಹೇಳುವಂತಹದ್ದು ಕೂಡ ಒಂದು ಪ್ರಮುಖ ಭಾಗವಾಗುತ್ತದೆ ಎಂಬ ಭಾವನೆಯನ್ನು ವ್ಯಕ್ತ ಪಡಿಸುತ್ತೇನೆ. ಇಲ್ಲವಾದಲ್ಲಿ ಬಹುಶಃ ಜನಸಾಮಾನ್ಯರು ನಿತ್ಯ ಮಾತನಾಡುವಂತಹ ಮಧ್ಯವರ್ತಿಗಳ ಏನೊಂದು ಸಮಸ್ಯೆಗಳಿವೆ, ಏಕೆಂದು ಹೇಳಿದರೆ, ತಾಲ್ಲೂಕು ಕಛೇರಿಗೆ ಹೋಗಿ ಹೋಗಿ, ಅವನಿಗೆ ಉತ್ತರ ಸಿಗುವುದಿಲ್ಲವೆಂಬ ಪ್ರಶ್ನೆ ಬಂದಂತಹ ಸಂದರ್ಭದಲ್ಲಿ ಅವನು ಸಹಜವಾಗಿ ಮಧ್ಯವರ್ತಿಗಳನ್ನು ಅವಲಂಬಿಸುತ್ತಾನೆ. ಇವತ್ತು ವಿಧೇಯಕಕ್ಕೆ ತಂದಿರುವ ತಿದ್ದುಪಡಿ ಏನಿದೆ, ಆ ಮಧ್ಯವರ್ತಿಗಳ ವ್ಯವಸ್ಥೆಯಿಂದ ಹೊರ ಬರುವಂತಹ ರೀತಿಯಲ್ಲಿ ಮತ್ತು ನೇರವಾಗಿ ಜನಸಾಮಾನ್ಯರಿಗೆ ಸಮಾಜದ ಕೆಳಮಟ್ಟದ ಜನರು ಯಾರು ಮನೆ ಕಟ್ಟುವುದಕ್ಕೋಸ್ಕರವಾಗಿ ಭೂ ಪರಿವರ್ತನೆಗೋಸ್ಕರ ತಾಲ್ಲೂಕು ಕಛೇರಿಗೆ ಓಡಾಡುವಂತಹದ್ದನ್ನು ನಿಲ್ಲಿಸುವಂತಹ ಒಂದು ಕ್ರಾಂತಿಕಾರಕವಾದ ತಿದ್ದುಪಡಿ ಎಂದು ನಾನು ಭಾವಿಸುತ್ತೇನೆ. ನಾನು ಈ ತಿದ್ದುಪಡಿಯನ್ನು ಸ್ವಾಗತ ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಪಿ.ಆರ್. ರಮೇಶ್‌ರವರೇ, ತಾವು ಮಾತನಾಡಿ.

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, , ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. The Karnataka Land Revenue (Second Amendment) Bill, 2022 ತಂದಿದ್ದೀರಿ. ಈ alienation ಎಂದರೆ land conversion, especially agriculture land, non-agriculture purpose ಗೆ ತೆಗೆದುಕೊಂಡಿದ್ದೀರಿ. ಈ ವಿಧೇಯಕದಲ್ಲಿ ಬಹಳ ಮುಖ್ಯವಾದಂತಹ ಅಂಶವೇನೆಂದರೆ, master plan ಬಗ್ಗೆ ಸಾಕಷ್ಟು ಬಾರಿ ಹೇಳಿದ್ದೀರಿ. ಈ master plan ಎಲ್ಲಿ ಯಾವ ಒಂದು ಪ್ರಾಧಿಕಾರದಲ್ಲಿ ಬರುತ್ತದೆ. ಅಲ್ಲಿ ಮಾತ್ರ ಮಾಸ್ಟರ್ ಪ್ಲ್ಯಾನ್ ಸಿಗುತ್ತದೆ. ಕರ್ನಾಟಕದಲ್ಲಿ ಇಲ್ಲದೇ ಇರುವ ಕಡೆ ಅವರು ವರದಿ ಕೊಡಬೇಕೆಂದು ಹೇಳಿದ್ದಾರೆ. ಇವತ್ತು conversion ತೆಗೆದುಕೊಳ್ಳುವಂತಹದ್ದು, survey department ನವರು ವರದಿಯನ್ನು ಏನು ಕೊಡುತ್ತಾರೋ,

ಅದರ ವರದಿಯ ಮೇಲೆ ವರದಿಯನ್ನು ಕೊಡುತ್ತೀರಿ. ಇವತ್ತು ಬೆಂಗಳೂರಿನಲ್ಲಿ flood ಆಗಿರುವ ಬಗ್ಗೆ ತಮಗೆಲ್ಲಾ ಚೆನ್ನಾಗಿ ಗೊತ್ತಿದೆ. ಸಾಕಷ್ಟು conversion ಆಗಿತ್ತು. Plan ಅನ್ನು BDA, Corporation ಕೊಟ್ಟಿದ್ದರು. ಆದರೂ ಕೂಡ very recently 2 or 3 months back ಮನೆಯನ್ನು ಒಡೆದಿರಿ. ಇದಕ್ಕೆ ಕಾರಣವೇನೆಂದರೆ, sanction ಕೊಡುವಾಗ, drain ಸೇರಿಸಿಕೊಂಡು ಕೊಟ್ಟುಬಿಟ್ಟಿದ್ದೀರಿ. Drains and buffer zone ಬಗ್ಗೆ specifications ಇಲ್ಲ. ಮತ್ತೆ mistake ಮಾಡುವುದಕ್ಕೆ ಹೊರಟಿದ್ದೀರಿ. ಯಾವುದೇ drain ಬರಬೇಕಾದರೆ, ಅದು primary drain ಅಥವಾ secondary drain ಎಂದು assess ಮಾಡುವಂತಹದ್ದು, ಇದರಲ್ಲಿ ಇಲ್ಲ. ಇವತ್ತು ಆ drain ಸಮೇತ ಸೇರಿಸಿ ನೀವು ಕೊಡುತ್ತೀರಿ. ಆದರೆ ಇಲ್ಲಿ ಹಾಕಿದ್ದೀರಿ. "Lies in the line of natural drains or course of valley;" ಆದರೆ buffer zone ನಲ್ಲಿ ಎಷ್ಟು ಬರುತ್ತದೆ? ಇದನ್ನು ಮತ್ತೆ survey department ಕಡೆಯಿಂದ ತೆಗೆದುಕೊಳ್ಳುವಂತಹ ವರದಿಯನ್ನು ಯಾವ ಆಧಾರದ ಮೇಲೆ ತೆಗೆದುಕೊಳ್ಳುತ್ತೀರಿ. Village map ನಲ್ಲಿ ಅಲ್ಲಿ ಇರುವಂತಹದ್ದು ಮಾತ್ರ ಇರುತ್ತದೆ. ಆ village map ನಲ್ಲಿ ಇರುವಂಥದ್ದನ್ನು ನೀವು specific ಆಗಿ ಕೊಡುವಂತಹ drain lines ಇದರಲ್ಲಿ specific provisions ಕೊಟ್ಟಿಲ್ಲ. ಇದರ ಬಗ್ಗೆ ಬಹಳ blind ಆಗಿ ಹೇಳಿದ್ದೀರಿ. ಇವತ್ತು buffer zone ಎಂದರೆ ಒಂದು ಕಡೆ 50 ಮೀಟರ್ ಇರುತ್ತದೆ. ಇನ್ನೊಂದು ಕಡೆ 25 ಮೀಟರ್ ಇರುತ್ತದೆ. ಮತ್ತೊಂದು ಕಡೆ 100 ಮೀಟರ್ ಇರುತ್ತದೆ. Depending on the width of drains. Primary or secondary ಮೇಲೆ ಹೋಗುತ್ತದೆ. ಇಂತಹ ಒಂದು ಸಂದರ್ಭ ಬಂದಾಗ, ಬಹಳ ಕಷ್ಟವಾಗುತ್ತದೆ.

(ಮುಂದು)

(1174) 26.12.2022, 430,TCH-BNS **( ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್(ಮುಂದು):-**

ಇವತ್ತಿನ ದಿವಸ ಬೆಂಗಳೂರು ಸುತ್ತಮುತ್ತಲೂ ಹೊಸದಾಗಿ ಲ್ಯಾಂಡ್ ಕನ್ವರ್ಷನ್‌ಗೆ ಕೊಡುತ್ತಿದ್ದೀರಿ. ನಾನು specific ಆಗಿ ಬೆಂಗಳೂರಿನ ಬಗ್ಗೆ ಮಾತನಾಡುತ್ತೇನೆ. ನಾನು ಇಡೀ ರಾಜ್ಯದ್ದು ಹೇಳುವುದಕ್ಕೆ ಆಗುವುದಿಲ್ಲ. ಇವತ್ತಿನ ದಿವಸ ಮಾಗಡಿ ಪ್ಲಾನಿಂಗ್ ಅಥಾರಿಟಿ ಇದೆ, ಕನಕಪುರ ಪ್ಲಾನಿಂಗ್ ಅಥಾರಿಟಿ ಇದೆ, ನೆಲಮಂಗಲ ಪ್ಲಾನಿಂಗ್ ಅಥಾರಿಟಿ ಇದೆ, ಹೊಸಕೋಟೆ ಪ್ಲಾನಿಂಗ್ ಅಥಾರಿಟಿ ಇದೆ, ರಾಮನಗರ ಪ್ಲಾನಿಂಗ್ ಅಥಾರಿಟಿ ಇದೆ, ಚನ್ನಪಟ್ಟಣ ಪ್ಲಾನಿಂಗ್ ಅಥಾರಿಟಿ ಇದೆ. ಹೀಗೆ ಬೆಂಗಳೂರು ಸುತ್ತಮುತ್ತಲೂ ಸಾಕಷ್ಟು ಟೌನ್ ಪ್ಲಾನಿಂಗ್ ಅಥಾರಿಟಿಗಳಿವೆ. ಅವರು ಅವರದೇ ಆದಂತಹ ಮಾಸ್ಟರ್ ಪ್ಲಾನ್‌ಗಳನ್ನು ಮಾಡಿದ್ದಾರೆ. ಆ ಮಾಸ್ಟರ್ ಪ್ಲಾನ್‌ನಲ್ಲಿ land use ನ್ನು ಅದರಲ್ಲಿ ತೋರಿಸಿದ್ದಾರೆ. ಆ ರೀತಿ ತೋರಿಸಿರುವುದರಲ್ಲಿ drains ನ್ನು ಎಲ್ಲೂ ತೋರಿಸಿಲ್ಲ. approval ಮತ್ತು conversion ತೆಗೆದುಕೊಳ್ಳುವಂತಹ ಲ್ಯಾಂಡ್ಸ್ ಏನಿರುತ್ತದೆಯೋ ಅವರು ಆಗಿಂದಾಗ್ಗೆ ಲೇಔಟ್ ಅಪ್ರೂವ್ ಮಾಡಿಕೊಡುತ್ತಾರೆ. ಆ ಲೇಔಟ್ ಅಪ್ರೂವ್ ಮಾಡುವಾಗ ಡ್ರೈನ್‌ನಲ್ಲಿ ರಸ್ತೆ ಕೂಡ ಹೋಗಬಹುದು, ಸೈಟ್ ಕೂಡ ಮಾಡಬಹುದು ಮತ್ತು ಇನ್ನೇನಾದರೂ ಕೂಡ ಮಾಡಿಕೊಳ್ಳಬಹುದು. ಇವತ್ತಿನ ದಿವಸ ಈ ರೀತಿ conversion ಕೊಡತಕ್ಕಂಥ Bengaluru urban district ಗೆ revenue department ಒಂದೇ ಅಲ್ಲ. ಬಹಳ ಮುಖ್ಯವಾಗಿ ಇದರ ಬಗ್ಗೆ ಮುಂದಾಲೋಚನೆ ಇಟ್ಟುಕೊಂಡು ಮಾತನಾಡುವುದಾದರೆ; ನಿಮಗೆ ರೆವಿನ್ಯೂ ಅಥಾರಿಟಿ ಇದು ಒಂದೇ solve ಆಗುವುದಿಲ್ಲ. RDPR ಬೇಕಾಗುತ್ತದೆ. Urban development department ಬೇಕಾಗುತ್ತದೆ. ಇವತ್ತಿನ ದಿವಸ ಸಾಕಷ್ಟು sanctions ಕೊಟ್ಟಿದ್ದೀರಿ. ಇವತ್ತಿನ ದಿವಸ ಆ sanction ತೆಗೆದುಕೊಂಡಿರುವಂತಹ ಲ್ಯಾಂಡ್‌ಗಳು ಮತ್ತು ಲೇಔಟ್‌ಗಳು ಏನು formation ಆಗಿದೆ, ಇದನ್ನು relinquish ಮಾಡಿಕೊಟ್ಟಿದ್ದೀರಿ. ಆ relinquish ಮಾಡಿಕೊಟ್ಟಿರತಕ್ಕಂಥ ಲ್ಯಾಂಡ್‌ಗಳು RDPR ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಗ್ರಾಮ ಪಂಚಾಯಿತಿಯಲ್ಲಿ ಆ ಲ್ಯಾಂಡ್‌ಗಳನ್ನು ರೆಕಾರ್ಡ್ ಇಟ್ಟುಕೊಂಡು ಯಾವ ರೀತಿ ಮೈನ್‌ಟೈನ್ ಮಾಡಬೇಕೆಂದು ಗೊತ್ತಾಗುತ್ತಿಲ್ಲ. ಏಕೆಂದರೆ ಅವರಿಗೆ ಸಿಬ್ಬಂದಿ ವರ್ಗದವರು ಇಲ್ಲ.

ಯಾವುದೇ ರೀತಿಯಾದ ಕ್ರಮಬದ್ಧವಾದಂತಹ ಅವರಿಗೆ ಕೊಟ್ಟಿರತಕ್ಕಂಥ ಅಧಿಕಾರದಲ್ಲಿ ಬರುವುದಿಲ್ಲ. ಬೆಂಗಳೂರಿನ ಸುತ್ತಮುತ್ತಲೂ ಸಾವಿರಾರು ಲೇಔಟ್‌ಗಳಾಗಿವೆ. ಸಾವಿರಾರು ಸೈಟ್‌ಗಳನ್ನು ಮಾಡಿದ್ದಾರೆ. ಇವತ್ತಿನ ದಿವಸ ಅಂತಹ ಸೈಟ್‌ಗಳನ್ನು conversion ಮಾಡಿ ಹಣ ತೆಗೆದುಕೊಳ್ಳುವುದು ಬಿಟ್ಟರೆ, ಟೌನ್ ಪ್ಲಾನಿಂಗ್‌ನಿಂದ sanction ಕೊಟ್ಟು ಯಾವ ಲ್ಯಾಂಡ್‌ಗಳನ್ನು ನೀವು ಗ್ರಾಮ ಪಂಚಾಯಿತಿಗೆ relinquish ಮಾಡಿಕೊಡುತ್ತೀರಿ, ಅದು ರಸ್ತೆ ಇರಬಹುದು, ಪಾರ್ಕ್ ಇರಬಹದು ಅಥವಾ ಮತ್ತೊಂದು ಇರಬಹುದು. ಅದನ್ನು maintain ಮಾಡುವುದು ಯಾರು? ಇದನ್ನು ದಯವಿಟ್ಟು ಹೇಳಿ. ಇವತ್ತಿನ ದಿವಸ ನೀವು ರೆವಿನ್ಯೂ ಇಲಾಖೆಯಡಿ ತರುತ್ತಿರುವ ಈ ಬಿಲ್‌ನ್ನು ಬಹಳ ಬೇಗ ಮಾಡಬೇಕು, deemed sanction ಕೊಡಬೇಕು ಎನ್ನುವ ಉದ್ದೇಶ ಇದೆ. ಇದು ಒಳ್ಳೆಯ ಉದ್ದೇಶ ಅಂದುಕೊಳ್ಳೋಣ. ಆದರೆ ಇದರ repercussion ಏನು? What are the effects? ಏನೆಲ್ಲಾ ಆಗಬಹುದು? ಇದರಲ್ಲಿ ನೀವು deemed sanction ಕೊಡುತ್ತಿದ್ದೀರೀ. ಇದರಲ್ಲಿ ಯಾವುದೇ ರೈತ ಬರುವುದಿಲ್ಲ. ಒಬ್ಬ ರೈತ ಬಂದು ಸ್ವಾಮಿ, ನನಗೆ ಎರಡು ಎಕರೆ ಜಮೀನು ಇದೆ, ಕನ್ವರ್ಷನ್ ಮಾಡಿಕೊಡಿ ಎಂದು ಯಾರೂ ಬರುವುದಿಲ್ಲ. ಆ ರೀತಿ ಬರತಕ್ಕಂಥವರು ಯಾರು ಎಂದರೆ, ಯಾರೋ ಒಬ್ಬ ರಾಜಕೀಯ ವ್ಯಕ್ತಿಗಳು ಅಥವಾ ಇನ್ನೊಬ್ಬ ದುಡ್ಡು ಇರತಕ್ಕಂಥವರು ಅಥವಾ promoter ಅಥವಾ ರಿಯಲ್ ಎಸ್ಟೇಟ್ ಮಾಡತಕ್ಕಂಥ ಮಾನ್ಯ ಸಣ್ಣ ಕೈಗಾರಿಕೆ ಸಚಿವರಾದ ಶ್ರೀ ಎಂ.ಟಿ.ಬಿ.ನಾಗರಾಜ್‌ನಂತಹವರಷ್ಟೇ ಬರುತ್ತಾರೆ.

**ಶ್ರೀ ಎನ್.ನಾಗರಾಜ (ಎಂ.ಟಿ.ಬಿ) (ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದೇ ಒಂದು ವಿಚಾರ ಹೇಳಿಬಿಡುತ್ತೇನೆ. ಮಾನ್ಯ ಪಿ.ಆರ್.ರಮೇಶ್ ರವರು ಮಾತನಾಡುವಾಗ ಒಂದು ಮಾತು ಹೇಳಿದರು. ಇವತ್ತಿನ ದಿವಸ ಬಹಳ ಜನ ಕೃಷಿ ಭೂಮಿಯಲ್ಲಿ, ರೆವಿನ್ಯೂ ಲ್ಯಾಂಡ್‌ಗಳಲ್ಲಿ ರೈತರೇ ಮನೆ ಕಟ್ಟಿಕೊಳ್ಳಬೇಕೆಂದು ಹೋದಾಗ ಗ್ರಾಮ ಪಂಚಾಯಿತಿಯವರು ಲೈಸೆನ್ಸ್ ಮತ್ತು ಅಪ್ರೂವಲ್ ಕೊಡುತ್ತಿಲ್ಲ. ಮನೆ ಕಟ್ಟತಕ್ಕಂಥವರು ಬ್ಯಾಂಕ್‌ಗಳಲ್ಲಿ ಲೋನ್ ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ 'ಎ' ಖಾತೆ ಆಗಿರಬೇಕು ಅಥವಾ ಫಾರಂ-3 ಇಶ್ಯೂ ಆಗಿರಬೇಕು. ಅದು ಆಗಿದ್ದರೆ ಮಾತ್ರ ಯಾವುದೇ ಬ್ಯಾಂಕ್‌ಗಳಲ್ಲಿ ಅವರಿಗೆ ಲೋನ್

ಕೊಡುತ್ತಾರೆ. ಇವತ್ತಿನ ದಿವಸ ರಿಯಲ್ ಎಸ್ಟೇಟ್‌ನವರು ಇರಬಹುದು, ರೈತರು ಇರಬಹುದು ಮತ್ತು ಕೃಷಿ ಕಾರ್ಮಿಕರೆಲ್ಲರೂ ಕೂಡ ಒಂದು ಮನೆ ಕಟ್ಟಿಕೊಳ್ಳುವುದಕ್ಕೆ, ಬ್ಯಾಂಕ್ ಲೋನ್ ತೆಗೆದುಕೊಳ್ಳುವುದಕ್ಕೆ, ಕನ್ವರ್ಷನ್ ಮಾಡಿಸಿಕೊಳ್ಳಲು ಕಡ್ಡಾಯವಾಗಿ ಹೋಗುತ್ತಾರೆ. ಇದು ತಮ್ಮ ಗಮನಕ್ಕೆ ಮಾನ್ಯ ಸಭಾಪತಿಯವರ ಮೂಲಕ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ನಾಗರಾಜ (ಎಂಟಿಬಿ) ಯವರು ಹೇಳಿದ್ದು ಶೇ.10ರಷ್ಟು ಇದೆ. ನಾನು ಪೂರ್ತಿ ಒಪ್ಪುವುದಿಲ್ಲ. ಅದು ಅವರು ಹೇಳಿದಂತೆ ಕೂಡ ಇರುವುದಿಲ್ಲ. ಆ ರೀತಿಯವರು ಶೇ.10 ಇದ್ದಾರೆ. ಆದರೆ ಶೇ.90 ರಷ್ಟು ಜನ ಯಾರೂ ಹೋಗುವುದಿಲ್ಲ.

**ಶ್ರೀ ಎನ್.ನಾಗರಾಜ (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ನಾವು ಈ ಹಿಂದಿನಿಂದ ರಿಯಲ್ ಎಸ್ಟೇಟ್ ಮಾಡಿಲ್ಲ. ನಾವು land bankers ಅಷ್ಟೆ. ಈಗ ರೈತರೇ real estate business ಮಾಡುತ್ತಾರೆ. ರೈತರೇ ಎರಡೆರಡು ಎಕರೆ ಜಮೀನನ್ನು conversion ಮಾಡಿಕೊಂಡು, ಅವರೇ planning authority approval ತೆಗೆದುಕೊಂಡು ಅವರೇ ಲೇಔಟ್‌ಗಳನ್ನು ಮಾಡಿ ಮಾರಾಟ ಮಾಡುತ್ತಿದ್ದಾರೆ. ಅದಕ್ಕೆ ಸಂತೋಷ. ಇದರಿಂದ ರೈತರಿಗೂ ಅನುಕೂಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ರೈತರು ಆ ರೀತಿ ಮಾಡುತ್ತಿಲ್ಲ, ಮಾನ್ಯ ಸಚಿವರು ಏಕೆ ಆ ರೀತಿ ಹೇಳುತ್ತಿದ್ದಾರೆ?

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, land development ನಲ್ಲಿ ರೈತರನ್ನು partners ಆಗಿ ಮಾಡಿಕೊಳ್ಳಲಿ.

**ಶ್ರೀ ಎನ್.ನಾಗರಾಜ (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ಈಗ ಈ ಹಿಂದೆ land development ಯಾರು ಮಾಡುತ್ತಿದ್ದರೋ, ಆ developer ಗಳೆಲ್ಲಾ ಮನೆಗಳಿಗೆ ಹೋಗಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್ :-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ರೈತರು ಮತ್ತು ದೊಡ್ಡ ಡೆವಲಪರ್. ಆ ರೀತಿ ಎಲ್ಲರೂ ಆಗಬೇಕೆಂದು ನಾನು ಭಾವಿಸುತ್ತೇನೆ ಅಷ್ಟೇ.

**ಶ್ರೀ ಎನ್.ನಾಗರಾಜ (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ರೈತರೇ ಆ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಹೇಳಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು ಏನಾದರೂ ಸಲಹೆ ಕೊಟ್ಟುಬಿಡಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಸಲಹೆಯನ್ನು ನಾನು ಕೊಡುವುದಕ್ಕೆ ಆಗುವುದಿಲ್ಲ. ಅವರು think ಮಾಡಬೇಕು.

**ಉಪ ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಆ ಬಿಲ್‌ನಲ್ಲಿ ಏನಾದರೂ corrections ಇದ್ದರೆ ಹೇಳಿ ಎಂದು ಹೇಳುತ್ತಿದ್ದೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಈ ಬಿಲ್‌ನಲ್ಲಿ buffer zone ಬರಬೇಕಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಬಹಳಷ್ಟು NGT (National Green Tribunal) order ಗಳಿವೆ, ಸಾಕಷ್ಟು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಆದೇಶಗಳಿವೆ. ಇವೆಲ್ಲವನ್ನೂ ಯೋಚನೆ ಮಾಡಿದಾಗ, ಎಲ್ಲೆಲ್ಲಿ ಕೆರೆಗಳು ಮತ್ತು ಕುಂಟೆಗಳಿವೆ, ಅಂತಹ ಕಡೆ ಬರುವುದಕ್ಕೆ ಇದರಲ್ಲಿ ಅವಕಾಶಗಳು ಇಲ್ಲ. ಹಾಗಾಗಿ, ಇದರ ಜೊತೆಗೆ ನೀವು conversion ಆದನಂತರ, ಮುಂದಿನ ಕ್ರಮಗಳು ಯಾವ ರೀತಿ ಆಗುತ್ತದೆ? ಟೌನ್ ಪ್ಲಾನಿಂಗ್ ಆಧಾರದ ಮೇಲೆ ನೀವು ಏನು ಮಾಡಬೇಕಿದೆ, ಅದನ್ನು ಯಾವ ರೀತಿ coordinate ಮಾಡಿಕೊಳ್ಳುತ್ತೀರಿ? ಇದರಲ್ಲಿ ಮೂರು ಇಲಾಖೆಗಳು ಬರುತ್ತದೆ. ಈ ಮೂರು ಇಲಾಖೆಗೆ ಬರುವುದನ್ನು ನೀವು ಯಾವ ರೀತಿ ಅದನ್ನು ಸರಿದೂಗಿಸತಕ್ಕಂಥ ರೀತಿಯಲ್ಲಿ ಕಾಯ್ದೆಗಳನ್ನು ರೂಪಿಸುವುದು ಬಹಳ ಮುಖ್ಯವಾಗಿದೆ. ಇದರ ಜೊತೆಗೆ ಕಲಂ 96 ರಲ್ಲಿ penalty ಮಾಡಿದ್ದೀರಿ. ಇದು retrospective ಅಥವಾ prospective? ಇವತ್ತಿನ ದಿವಸ ಕಟ್ಟಿರತಕ್ಕಂಥ ಹಲವಾರು ಬಿಲ್ಡಿಂಗ್‌ಗಳಿವೆ. ಅಂತಹದಕ್ಕೂ ಕೂಡ ನೀವು ಇದರಲ್ಲಿ ಅವಕಾಶ ಮಾಡಿಕೊಟ್ಟರೆ, ನಾಳೆ ದಿವಸ ನಮ್ಮ ಅಧಿಕಾರಿಗಳು ಇದನ್ನು ಸಾಕಷ್ಟು ದುರುಪಯೋಗಪಡಿಸಿಕೊಳ್ಳುವ ಅವಕಾಶವಿದೆ. ಆ ದುರುಪಯೋಗಪಡಿಸಿಕೊಳ್ಳುವ ಅವಕಾಶಕ್ಕಾಗಿ

ತಾವು ಇದಕ್ಕೆ ಏನಾದರೂ ಒಂದು ನಾಂದಿ ಹಾಡಬೇಕು. ಕಾರಣವೇನೆಂದರೆ, ಇಲ್ಲಿ ನೀವು ಪೆನಾಲ್ಟಿ ಹಾಕುವುದನ್ನು ಬಹಳ ಪ್ಲೇನ್ ಆಗಿ ಕೊಟ್ಟಿದ್ದೀರಿ. "96. Penalty for using agricultural land for other purpose without permission." ಆದ್ದರಿಂದ ಪರ್ಮಿಷನ್ ಇಲ್ಲದೇ ಯಾವುದೇ ಮಾಡಿದರೂ ಕೂಡ ನಮ್ಮ ರೈತರು ಕಟ್ಟತಕಂಥ ಮನೆ ಮೇಲೆ ದಾಳಿ ಆಗುವ ಅವಕಾಶಗಳಿವೆ. ಇಂತಹವುಗಳನ್ನೆಲ್ಲಾ ಸರಿಪಡಿಸತಕ್ಕಂಥ ರೀತಿಯಲ್ಲಿ ಈ ಬಿಲ್‌ನಲ್ಲಿ ತೋರಿಸುವುದು ಬಹಳ ಮುಖ್ಯ ಇದೆ. ಹಾಗಾಗಿ, ಸರಿಯಾದ ರೀತಿಯಲ್ಲಿ ಇದನ್ನು ನೋಡಿ, ಯಾವ ರೀತಿ ಸಾರ್ವಜನಿಕರಿಗೆ ಮತ್ತು ರೈತರಿಗೆ ಉಪಯೋಗ ಆಗುತ್ತದೆ. ದೀರ್ಘ ಕಾಲದಲ್ಲಿ ಇದು ಆಗುವಂತಹ ರೀತಿಯಲ್ಲಿ ತರಲು ಪರಾಮರ್ಶೆ ಮಾಡುವುದು ಬಹಳ ಮುಖ್ಯ ಇದೆ ಎಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಮುನಿರಾಜುಗೌಡ.ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2022ನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಆರ್.ಅಶೋಕ್ ರವರು ಕಂದಾಯ ಸಚಿವರಾದ ನಂತರ ಒಂದಲ್ಲಾ ಒಂದು ರೀತಿಯಲ್ಲಿ ವಿಶೇಷವಾಗಿ ರಾಜ್ಯಾದ್ಯಂತ ಪ್ರವಾಸವನ್ನು ಮಾಡುತ್ತಾ, ಗ್ರಾಮ ವಾಸ್ತವ್ಯವನ್ನು ಮಾಡುತ್ತಾ, ರೈತರಲ್ಲಿ ಒಂದು ಹೊಸ ಆಲೋಚನೆಗಳನ್ನು ಹುಟ್ಟುಹಾಕುವಂತಹ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತಿನ ದಿವಸ ಈ ವಿಧೇಯಕವನ್ನು ತರುವ ಮುಖಾಂತರ ಕಂದಾಯ ಇಲಾಖೆಯಲ್ಲಿ ಏನು ಭ್ರಷ್ಟಾಚಾರ ನಡೆಯುತ್ತಿತ್ತು, ಅದಕ್ಕೆ ಒಂದು ಪೂರ್ಣ ವಿರಾಮವನ್ನು ಕೊಡಬೇಕೆಂದು ಅವರು ಹೊರಟಿರುವುದು ಕೂಡ ಒಂದು ಒಳ್ಳೆಯ ಬೆಳವಣಿಗೆ ಎಂದರೆ ತಪ್ಪಾಗಲಾರದು. ಇವತ್ತಿನ ದಿವಸ ಮಾನ್ಯ ಪಿ.ಆರ್.ರಮೇಶ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ರೈತಾಪಿ ಜನರೆಲ್ಲಾ joint venture ಮಾಡುತ್ತಿದ್ದಾರೆ. ಮೊದಲೆಲ್ಲಾ ಬಿಲ್ಡರ್‌ಗಳು ಮತ್ತು ರಿಯಲ್ ಎಸ್ಟೇಟ್ ಮಾಡುವಂಥವರು ರೈತರಿಗೆ ಸಂಪೂರ್ಣವಾಗಿ ಹಣವನ್ನು ಕೊಟ್ಟು, ರಿಜಿಸ್ಟರ್ ಮಾಡಿಕೊಂಡು ನಂತರ ಡೆವಲಪ್‌ಮೆಂಟ್ ಮಾಡುವುದಕ್ಕೆ ಹೋಗುತ್ತಿದ್ದರು. ಆದರೆ ಇವತ್ತಿನ ದಿವಸ ಬದಲಾದ ಸನ್ನಿವೇಶದಲ್ಲಿ, ರೈತರುಗಳನ್ನೇ

ಕೆಲವು ಭಾಗಗಳಲ್ಲಿ ನನಗೆ ಗೊತ್ತಿಲ್ಲ, ಮಾನ್ಯ ಸದಸ್ಯರಾದ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಇದನ್ನು ವಿರೋಧ ಮಾಡಬಹುದು. ಆದರೆ ಕೆಲವೊಂದು ಕಡೆ ರೈತರನ್ನು joint venture ಗೆ ಇಟ್ಟುಕೊಂಡು, ರೈತರಿಗೆ ಸಂಪೂರ್ಣವಾದಂತಹ ದಾಖಲೆಗಳು ಸರಿದಾರಿಗೆ ಬರುವವರೆಗೂ ಕೂಡ ಅದನ್ನು ಯಾವುದೇ ರೀತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗದಿರುವಂತಹ ಕಂಡಿಷನ್‌ಗಳನ್ನು ಬಿಲ್ಡರ್‌ಗಳು ಹಾಕಿ, development ಮಾಡುವುದಕ್ಕೆ ಹೊರಟಿದ್ದಾರೆ. ಅವರಿಗೆ ಯಾವ ರೀತಿಯ ಸಹಕಾರ ಸಿಗುತ್ತದೆ? ಏಕೆಂದರೆ ಎಷ್ಟೋ ಜನ ರೈತರು ಓದಿರುವುದಿಲ್ಲ, ಅದರ ಬಗ್ಗೆ ತಿಳಿದಿರುವುದಿಲ್ಲ. ಈ ರೀತಿಯಾಗಿ ಅಗ್ರಿಮೆಂಟ್‌ಗಳಿಗೆ ಸಹಿ ಮಾಡಿಸಿಕೊಂಡು ಮುಂದೊಂದು ದಿನ 5 ರಿಂದ 10 ವರ್ಷಗಳ ನಂತರ, ಅಭಿವೃದ್ಧಿ ಮಾಡಲು ಹೋಗುತ್ತಾರೆ. ಒಂದು ಕಡೆ ಅವರು ವ್ಯವಸಾಯ ಮಾಡುವುದಕ್ಕೂ ಆಗುವುದಿಲ್ಲ. ಈ ಕಡೆ ಹಣ ಬಂದಿದೆ, ಈ ಹಣವನ್ನು ಉಪಯೋಗಿಸಿಕೊಂಡು ಬೇರೆ ಏನಾದರೂ ವ್ಯವಹಾರ ಮಾಡಲು ಹೋಗುವುದಕ್ಕೂ ಕೂಡ ಸಹಕಾರ ಸಿಗುವುದಿಲ್ಲ. ಅದಕ್ಕೆ ಏನಾದರೂ ಒಂದು ಪೂರ್ಣ ವಿರಾಮವನ್ನು ಕೊಡಬೇಕು. 2011ರಲ್ಲೇ 'ಸಕಾಲ' ಯೋಜನೆಯನ್ನು ಸನ್ಮಾನ್ಯ ಡಿ.ವಿ.ಸದಾನಂದಗೌಡರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಜಾರಿಗೆ ತಂದರು. ಆದರೆ ನನಗೆ ಸಿಕ್ಕಿದಂತಹ ಮಾಹಿತಿ ಪ್ರಕಾರ, ಶನಿವಾರದವರೆಗೂ ಕೂಡ 2.49 ಲಕ್ಷಕ್ಕಿಂತ ಹೆಚ್ಚು ಅರ್ಜಿಗಳು ಸಕಾಲದ ಪೋರ್ಟಲ್‌ನಲ್ಲಿ ಇಷ್ಟೊಂದು ವಿಲೇವಾರಿಯಾಗದೇ ಇರುವ ಅರ್ಜಿಗಳಿವೆ ಎಂದು ಕಾಣಿಸುತ್ತಿದೆ. ಆದರೆ ಇನ್ನೊಂದು ಸಕಾಲ ರೀತಿಯಲ್ಲಿ ಅದು ಹೇಳಿತು. **"ಇಂದು ನಾಳೆ ಇನ್ನಿಲ್ಲ, ಹೇಳಿದ ದಿನ ತಪ್ಪಲ್ಲ"** ಎನ್ನುವಂತಹ ಒಂದು ಘೋಷ ವಾಕ್ಯದೊಂದಿಗೆ ಆ ಸಕಾಲ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಆದರೆ ಅಲ್ಲಿ ಸುಮಾರು 2.50 ಲಕ್ಷಕ್ಕಿಂತಲೂ ಹೆಚ್ಚು ಅರ್ಜಿಗಳು ಸಕಾಲದಲ್ಲಿ ವಿಲೇವಾರಿಯಾಗದೇ ಇಟ್ಟುಕೊಂಡಿದ್ದೇವೆಂದರೆ, ಇದರ ಹಿಂದೆ ಯಾವುದೇ ಸಚಿವರು ಮಾಡುವಂತಹ ಕೆಲಸ ಅಲ್ಲ. ಇಲ್ಲಿರುವಂತಹ ಅಧಿಕಾರಿಗಳು ಏಕೆ ಈ ರೀತಿಯಾದಂತಹ ಕೆಲಸವನ್ನು ಮಾಡುತ್ತಿದ್ದಾರೆ? ಇವತ್ತಿನ ದಿವಸ 7 ದಿವಸಗಳು ಅಥವಾ 15 ದಿವಸಗಳಲ್ಲಿ ಈ ಒಂದು ಯೋಜನೆಯನ್ನು ಕೊಡಬೇಕೆಂದು ಮಾನ್ಯ ಸಚಿವರು ಜಾರಿಗೆ ತಂದಿದ್ದಾರೆ, ಎಲ್ಲೋ ಒಂದು ಕಡೆ ಅಧಿಕಾರಿಗಳು ಇದನ್ನು ಅಡ್ಡ ಹಾಕಿಕೊಂಡು ಕೂರುವುದಕ್ಕೆ ಸಹಕಾರ ಸಿಗಬಾರದು ಎನ್ನುವಂತಹ ಒಂದು ಮನವಿಯನ್ನು ಕೂಡ ನಾನು ಮಾಡಿಕೊಳ್ಳುತ್ತಿದ್ದೇನೆ.

(1175)26.12.2022/4.40/ಎಂ.ಎಂ-ಬಿ.ಎನ್.ಎಸ್ (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಮುನಿರಾಜುಗೌಡ. ಪಿ.ಎಂ (ಮುಂದು):-**

ಬೆಂಗಳೂರಿನ ಸುತ್ತ-ಮುತ್ತ ಏನಾದರೂ ಯೋಜನೆಗಳನ್ನು ಮಾಡುವುದಕ್ಕೆ ಹೋದರೆ ಹಲವಾರು ಯೋಜನಾ ಪ್ರಾಧಿಕಾರಗಳಿವೆ. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ಯೋಚನೆ ಮಾಡಬೇಕೆಂದು ಅನಿಸುತ್ತದೆ. ಜಿಲ್ಲೆಗೆ ಒಂದು ಯೋಜನಾ ಪ್ರಾಧಿಕಾರವನ್ನು ತಂದು ಆ ಜಿಲ್ಲೆಗೆ ಸೀಮಿತ ಮಾಡಿದರೆ ಅಭಿವೃದ್ಧಿ ಮಾಡುವುದಕ್ಕೆ ಒಂದು ಉತ್ತಮವಾದ ಕೆಲಸವಾಗುತ್ತದೆ ಎನ್ನುವುದು ನನ್ನ ಉದ್ದೇಶ. ಇದಾದ ನಂತರ 15 ದಿನಗಳಲ್ಲಿ ಅನುಮೋದಿಸಲು ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯು ವಿಫಲವಾದರೆ ಅಥವಾ ತಿರಸ್ಕರಿಸಿದರೆ ಅರ್ಜಿದಾರನು ಸಿದ್ಧಪಡಿಸಿದಂತೆ ಅದನ್ನು ಅನುಮೋದಿಸಿದೆ ಎಂದು ಭಾವಿಸತಕ್ಕದ್ದು ಎಂದು ಹೇಳಿದ್ದಾರೆ. ಆದರೆ ನನ್ನ ಉದ್ದೇಶವೇನೆಂದರೆ, ಇವತ್ತು ತಿಳಿದೋ, ತಿಳಿಯದೆಯೋ ಆ ಜಮೀನಿನ ಮಾಲೀಕ ಅಥವಾ ಅದನ್ನು ಯಾರು ಅರ್ಜಿ ಹಾಕಿದ್ದಾರೆ ಅಂತಹವರು, buffer zone ಜಾಗದಲ್ಲಿರಬಹುದು ಅಥವಾ ರಸ್ತೆಯಿರುವಂತಹ ಜಾಗವನ್ನು ಮರೆಮಾಚಿ ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟು ಲೇಔಟ್ ಏನಾದರೂ ಅಭಿವೃದ್ಧಿ ಮಾಡಿದರೆ ಅದಕ್ಕೆ ಆಗುವಂತಹ ಅನರ್ಥಗಳಿಗೆ ಯಾರು ಹೊಣೆ ಎನ್ನುವುದನ್ನು ಸಹ ಸಚಿವರು ತಿಳಿಸಿಕೊಡಬೇಕೆಂದು ಕೇಳುತ್ತೇನೆ. ಇದಾದ ನಂತರ ಅರ್ಜಿದಾರನು ಸುಳ್ಳು ಅಥವಾ ತಪ್ಪು ಘೋಷಣೆ ಮಾಡುವ ಮೂಲಕ ಭೂ ಪರಿವರ್ತನೆ ಮಾಡಿಕೊಂಡಲ್ಲಿ ಅವನ ಮೇಲೆ ಕ್ರಿಮಿನಲ್ ಹೊಣೆಗಾರಿಕೆ, ಪರಿವರ್ತನಾ ಶುಲ್ಕ ಮುಟ್ಟುಗೋಲು ಮತ್ತು ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಶಿಕ್ಷೆ ನೀಡಲಾಗುತ್ತದೆ ಎಂದು ಒಂದು ಅಂಶವಿದೆ. ಇವತ್ತು ಭೂ ಪರಿವರ್ತನೆಯಾಗಿದೆ ಅಥವಾ ಇನ್ನೇನೋ ಆಗಿದೆ ಎಂದರೆ ನೀವು ಮುಟ್ಟುಗೋಲು ಹಾಕಿಕೊಳ್ಳುತ್ತೀರಿ. ಆದರೆ ನಾಳೆ ದಿನ ಅಲ್ಲಿ ಲೇಔಟ್ ಅಭಿವೃದ್ಧಿ ಮಾಡಿದ ನಂತರ ಅದನ್ನು ಯಾರೋ ಒಬ್ಬ ಸರ್ಕಾರಿ ನೌಕರನೋ ಅಥವಾ ನಿವೃತ್ತ ನೌಕರನೋ ಅಥವಾ ಕೂಲಿಕಾರ್ಮಿಕರ್ಯಾರಾದರೂ ಸೈಟುಗಳನ್ನು ಪಡೆದಿದ್ದರೆ ತಮ್ಮ ದುಡಿಮೆಯ ಹಣವನ್ನೆಲ್ಲಾ ವ್ಯಯ ಮಾಡಿ ಆ ಸೈಟುಗಳನ್ನು ಪಡೆದುಕೊಂಡು ಆ ಆಸ್ತಿ ತನ್ನದು ಎಂದು ಹೋದಾಗ ಕೆಲವು ವರ್ಷಗಳ ನಂತರ ಅಕಸ್ಮಾತ್ ಏನಾದರೂ ಆ ಒಂದು ಆಸ್ತಿ ಈ ರೀತಿಯಾಗಿ

ತೊಂದರೆಗೊಳಪಟ್ಟಿದೆ ಎಂದಾದರೆ ಅದಕ್ಕೆ ಹೊಣೆಗಾರರನ್ನಾಗಿ ಯಾರನ್ನು ಮಾಡುವುದು? ಅದಕ್ಕೂ ಸಹ ಅಧಿಕಾರಿಗಳನ್ನೇನಾದರೂ ಮಾಡಬೇಕು ಎನ್ನುವುದು ನನ್ನ ಮನವಿಯಾಗಿದೆ. ಇದರ ಜೊತೆಗೆ ಆನ್‌ಲೈನ್‌ನಲ್ಲಿಯೇ ಅರ್ಜಿಯನ್ನು ಸಲ್ಲಿಸುವ ವ್ಯವಸ್ಥೆ ಆಗಬೇಕು. ಜಿಲ್ಲಾಧಿಕಾರಿಗಳವರೆಗೂ ಸಹ ಕಡತ ಎಲ್ಲಿದೆ, ಯಾವ ಹಂತದಲ್ಲಿದೆ ಎನ್ನುವುದನ್ನು ಸಹ ಆನ್‌ಲೈನ್‌ನಲ್ಲಿ ಗಮನಿಸುವ ಕೆಲಸ ಆಗಬೇಕು. ಅಧಿಕಾರಿಗಳಿಂದ ನನಗೆ ಆಗಿರುವಂತಹ ಕೆಟ್ಟ ಅನುಭವವೊಂದನ್ನು ನಾನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದಿಲ್ಲ. ಆದರೆ ಇವತ್ತು ಇಲ್ಲಿಯೇ ತರಬಯಸುತ್ತೇನೆ. ಏಕೆಂದರೆ ಚಿಕ್ಕಬಳ್ಳಾಪುರ ಜಿಲ್ಲೆಯ ಉಸ್ತುವಾರಿ ಸಚಿವರು ಇಲ್ಲಿಯೇ ಇದ್ದಾರೆ. ಚಿಕ್ಕಬಳ್ಳಾಪುರದ ನಮ್ಮ ಅಭಿವೃದ್ಧಿಯ ಹರಿಕಾರರಾಗಿರುವಂತಹ ಮಾನ್ಯ ಸಚಿವರಾದ ಡಾ: ಸುಧಾಕರ್‌ರವರು ಸಹ ಇಲ್ಲಿಯೇ ಇದ್ದಾರೆ. ಇವತ್ತು ಜಮೀನು ಪರಿವರ್ತನೆಯಾಗಿದೆ. ಕೈಗಾರಿಕೆ ಉದ್ದೇಶಕ್ಕೋಸ್ಕರವಾಗಿ ಒಂದು ಜಮೀನನ್ನು ಪರಿವರ್ತನೆ ಮಾಡಿಸಿದ್ದೇನೆ. ಪರಿವರ್ತನೆಯಾಗಿರುವಂತಹ ಜಮೀನು ಗಣಿಗಾರಿಕೆಗೆ ಅರ್ಜಿಯನ್ನು ಹಾಕಿಸಿಕೊಂಡಂತಹ ಸಂದರ್ಭದಲ್ಲಿ ಅಲ್ಲಿರುವಂತಹ ಒಬ್ಬ ಅಸಿಸ್ಟೆಂಟ್ ಕಮಿಷನರ್ ಆಗಿರುವಂತಹವರು ಯಾರು ಅರ್ಜಿಯನ್ನು ಹಾಕಿರುತ್ತಾರೆ ಆ ಜನರು ಹೋದರೆ, without appointment ಬಂದಿದ್ದಾರೆಂದು ಸಂಜೆಯವರೆಗೂ ಅವರನ್ನು ಭೇಟಿ ಮಾಡುವುದಕ್ಕೆ ಹೋಗಿಲ್ಲ. ತದನಂತರ ಜಿಲ್ಲಾಧಿಕಾರಿಯವರು ಕೈಗಾರಿಕೆ ಉದ್ದೇಶಕ್ಕೋಸ್ಕರ ಎಂದು conversion ಮಾಡಿಕೊಟ್ಟಿದ್ದಾರೆ. ಆದರೆ ಇಲ್ಲಿಯವರೆಗೂ ಸಹ ಕಳೆದ 8 ತಿಂಗಳಿನಿಂದ ಆ ಅಧಿಕಾರಿಗಳು ಈ ರೀತಿಯಾಗಿ ಅರ್ಜಿಯನ್ನಿಟ್ಟುಕೊಂಡಿದ್ದಾರೆ ಮತ್ತು ಅವರು ಕೋರ್ಟ್‌ಗೆ ಹೋಗುತ್ತೇವೆಂದರೆ, ಈ ರೀತಿಯಾಗಿ ಹಲವಾರು contempt of court ಕೇಸ್‌ಗಳಾಗಿರುವಂತಹದ್ದನ್ನು ಸಹ ನಾವು ಗಮನಿಸಿದ್ದೇವೆ, ನೀವು ಏನೂ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎಂಬ ದರ್ಪವನ್ನು ಕಂದಾಯ ಇಲಾಖೆಯ ಅಧಿಕಾರಿಗಳು ತೋರಿಸುತ್ತಿದ್ದಾರೆ. ಮಾನ್ಯ ಸಚಿವರು ಮುಂದಿನ ದಿನಗಳಲ್ಲಿ ಈ ರೀತಿಯಾಗಿ ಏನಾದರೂ ಈ ಒಂದು ಯೋಜನೆಗೂ ಸಹ ಅಧಿಕಾರಿಗಳು ಸಹಕಾರ ಕೊಡಲಿಲ್ಲವೆಂದರೆ ಅವರಿಗೆ ಶಿಕ್ಷೆಯ ಪ್ರಮಾಣವನ್ನು ಗುರುತಿಸಿದರೆ ಮಾತ್ರ ಈ ವಿಧೇಯಕ ಮುಂದುವರೆಯುತ್ತದೆ ಎಂಬ ಮಾತನ್ನು ಹೇಳುತ್ತಾ ಸದರಿ ಕಾಯಿದೆಯಲ್ಲಿ ಕೃಷಿ ಭೂಮಿಯಲ್ಲಿ ಹತ್ತಾರು ವರ್ಷಗಳಿಂದ ಯಾರು

ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ; ಹಳ್ಳಿಗಾಡಿನಲ್ಲಿ, ಕಾಡುಪ್ರದೇಶಗಳಲ್ಲಿದ್ದಾರೆ ಅಂತಹವರಿಗೆ ನಿಗದಿತ ಪ್ರಮಾಣದಲ್ಲಿ ಏನಾದರೂ ಶುಲ್ಕವನ್ನು ಕಟ್ಟಿಸಿಕೊಳ್ಳುವ ಮುಖಾಂತರ ಮನೆಯನ್ನು ಕಟ್ಟಿಕೊಂಡಿರುವುದನ್ನು ಸಕ್ರಮಗೊಳಿಸಬೇಕು ಎನ್ನುವುದನ್ನು ಸಹ ಮಾನ್ಯ ಸಚಿವರು ಈ ವಿಧೇಯಕದಲ್ಲಿ ಸೇರ್ಪಡೆ ಮಾಡಬೇಕೆಂದು ಕೇಳಿಕೊಂಡು ಈ ವಿಧೇಯಕವನ್ನು ನಾನು ಅತ್ಯಂತ ಸಂತೋಷದಿಂದ ಸ್ವಾಗತವನ್ನು ಮಾಡುತ್ತೇನೆ. ನಾನು ತುಂಬಾ ಚಿಕ್ಕವನಿದ್ದೇನೆ, ಆದರೂ ಸಹ ನಾನು ಕೊಟ್ಟಿರುವಂತಹ ಸಲಹೆಗಳು ಸೂಕ್ತವಾಗಿದ್ದರೆ ಅದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರತಿ ಅಧಿವೇಶನದಲ್ಲಿಯೂ ಒಂದಲ್ಲ ಒಂದು ರೀತಿಯ ಭೂ ಕಂದಾಯ ತಿದ್ದುಪಡಿಯ ಕಾಯಿದೆ ಬರುತ್ತಿದೆ. ಭೂ ಸುಧಾರಣೆ ಕಾಯಿದೆ ಪ್ರಪಂಚಕ್ಕೆ ಮಾದರಿಯಾಗುವಂತೆ ನಮ್ಮ ರಾಜ್ಯದಲ್ಲಿದೆ. ರೈತರ ಹಿಡುವಳಿಯ ಭೂಮಿಗಳು ಯಾವುದೋ ಕಂಪನಿಗಳಿಗೋ ಅಥವಾ ಹಣವಂತರ ವಶ ಆಗಬಾರದು ಎನ್ನುವ ಕಾರಣಕ್ಕಾಗಿ ಹಲವಾರು ನಿಬಂಧನೆಗಳಿದ್ದವು. ರೂ. 02 ಲಕ್ಷಕ್ಕಿಂತ ಇತರ ಆದಾಯಗಳಿದ್ದರೆ ಜಮೀನನ್ನು ಖರೀದಿ ಮಾಡುವ ಹಾಗೆ ಇರಲಿಲ್ಲ. ಹಾಗಾಗಿ ಕೃಷಿಯೇತರರು ಯಾರಾದರೂ ತಮ್ಮ ಹತ್ತಿರ ಹಣವಿದ್ದರೂ ಸಹ ಭೂಮಿಯನ್ನು ಆಕ್ರಮಿಸಿಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲ. ಅದನ್ನು ಈಗ 25 ಲಕ್ಷ ರೂಪಾಯಿಗಳಿಗೆ ಮಾಡಿದ್ದಾರೆ. 25 ಲಕ್ಷವಾದ ನಂತರ ಯಾರು ಕೃಷಿಕರಲ್ಲವೋ ಅವರು ಮೊದಲು ಕೃಷಿಕರು ಎಂದು ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿತ್ತು, ಆರ್.ಟಿ.ಸಿ., ಪಹಣಿ ಇರಬೇಕಾಗಿತ್ತು. ಹಾಗಿದ್ದರೆ ಮಾತ್ರ ಜಮೀನನ್ನು ಖರೀದಿ ಮಾಡುವುದಕ್ಕೆ ಅವಕಾಶವಿತ್ತು. ಇವತ್ತು 25 ಲಕ್ಷ ರೂಪಾಯಿಗಳಿಗೆ ಮಿತಿಗೊಳಿಸಿದ ಮೇಲೆ ಬಹಳಷ್ಟು ಜನರು ಭೂಮಿಯನ್ನು ಖರೀದಿ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಕಳೆದ ಬಾರಿ ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 79ಎ ಮತ್ತು ಬಿ ಅನ್ನು ರದ್ದು ಮಾಡಿದರು. 79ಎ ಮತ್ತು ಬಿ ರದ್ದಾದ ನಂತರ ಇವತ್ತು ಯಾರೂ 5-10 ಎಕರೆ ಜಮೀನನ್ನು ಖರೀದಿ ಮಾಡುತ್ತಿಲ್ಲ. ನೂರಾರು ಎಕರೆಗಳನ್ನು ಖರೀದಿ ಮಾಡುವಂತಹ ಪ್ರಕರಣಗಳು ನಡೆಯುತ್ತಿವೆ. ಅಂದರೆ ಒಂದು ರೀತಿಯಲ್ಲಿ ರೈತರ ಕೈಯಿಂದ ಭೂಮಿ ಹಣವಂತರ

ಕೈಗೆ ವರ್ಗಾವಣೆಯಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಶ್ರೀ ಜಗ್ಗಿ ವಾಸುದೇವ್‌ರವರ ಬಗ್ಗೆ ಹೇಳಿದರು. ನಾನು ಸಹ ಅಲ್ಲಿಗೆ ಹೋಗಿ ನೋಡಿದೆ. ಯಾವ ಕಾರಣಕ್ಕಾಗಿ ನೂರಾರು ಎಕರೆ ಜಮೀನು ಹಾಗೆ ಹಸ್ತಾಂತರಗೊಳ್ಳಬೇಕು? ಯಾವ ಪ್ರತಿಫಲವನ್ನು ನಮ್ಮ ಬದುಕಿಗಾಗಿ ಆಹಾರ ಕೊಡುತ್ತದೋ, ಉದ್ಯೋಗ ಕೊಡುತ್ತದೋ, ಏನನ್ನು ಕೊಡುತ್ತದೆ ಎನ್ನುವ ಕಾರಣಕ್ಕಾಗಿ ಪ್ರಶ್ನೆಯನ್ನು ಕಣ್ಣ ಮುಂದಿಟ್ಟುಕೊಂಡರೆ ಉತ್ತರ 'nil'. ಇವತ್ತು ನಮ್ಮ ಪಹಣಿಗಳಲ್ಲಿ ಸಣ್ಣ ದೋಷವಾದರೆ ತಿದ್ದಿಕೊಡುವಂತಹ ಶಕ್ತಿ ನಮ್ಮ ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗಳಿಗಿಲ್ಲ. ನಮ್ಮ ಪಹಣಿಗಳಲ್ಲಿ ಬೆಳೆಯನ್ನು ನಮೂದು ಮಾಡುವ ಶಕ್ತಿ ನಮ್ಮ ಜಿಲ್ಲೆಗಳಲ್ಲಿಲ್ಲ. Crop loan ತೆಗೆದುಕೊಳ್ಳುವುದಕ್ಕೆ ಬ್ಯಾಂಕುಗಳಿಗೆ ನಮ್ಮ ಆರ್.ಟಿ.ಸಿ., ತೆಗೆದುಕೊಂಡು ಹೋಗಿ ಕೊಟ್ಟರೆ ಅದರಲ್ಲಿ crop entry ಇಲ್ಲ. ಇಷ್ಟೊಂದು ಅವ್ಯವಸ್ಥೆ ತುಂಬಿರುವಂತಹ ಕಂದಾಯ ಇಲಾಖೆ ಏಳು ದಿನದೊಳಗೆ ಹೇಗೆ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿಕೊಡುತ್ತದೆ? ಇದು ಯಾವ ಯಾವ ನಿಯಮಗಳ ಉಲ್ಲಂಘನೆಯಾಗಿದೆ ಎಂದು ಹೇಗೆ ನೋಡುತ್ತದೆ? ಒಂದು ಕನ್ವರ್ಷನ್ ಆಗುವಾಗ, not only revenue department, ಹತ್ತಾರು ಇಲಾಖೆಗಳ ಎನ್.ಓ.ಸಿ., ಬೇಕು. ಎಲ್ಲವನ್ನೂ ಹೇಗೆ ಒಂದು ವಾರ ಅಥವಾ 15 ದಿವಸಗಳಲ್ಲಿ ತೆಗೆದುಕೊಳ್ಳುತ್ತದೆ? ನಮ್ಮ ಮಿಷನರಿ ಅಷ್ಟೊಂದು ಸಕ್ರಿಯವಾಗಿದ್ದರೆ ಅತ್ಯಂತ ಸಂತೋಷದಿಂದ ಸ್ವಾಗತ ಮಾಡುತ್ತೇವೆ. ಅಷ್ಟೊಂದು active ಇದೆ ಎಂದಾದರೆ ತಡವಾಗುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಆ ರೀತಿ 7 ರಿಂದ 15 ದಿನದೊಳಗೆ ನೀವು ಮಾಡಿಕೊಟ್ಟ ನಂತರ ಗೊತ್ತಾಗುತ್ತದೆ, ಗೊತ್ತಾದ ನಂತರ ಮುಟ್ಟುಗೋಲು ಹಾಕಿಕೊಳ್ಳುತ್ತೀರಿ. ಏತಕ್ಕೆ ತರಾತುರಿಯಲ್ಲಿ ತಪ್ಪು ಮಾಡುವುದಕ್ಕೆ ಅವಕಾಶ ಕೊಟ್ಟು ಮುಟ್ಟುಗೋಲು ಹಾಕಿಕೊಳ್ಳುತ್ತೀರಿ? ಯಾವ ತರಾತುರಿಯಿದೆ? ಬೇಕಾದರೆ ಒಂದು ತಿಂಗಳ ಕಾಲ ತೆಗೆದುಕೊಳ್ಳಿ. ಸಮಾಧಾನವಾಗಿ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ. ನಾನು 11ಇ ಸ್ಕೆಚ್ ಎಂಟ್ರಿ ಮಾಡಿಕೊಡುವುದಕ್ಕೆ ಅರ್ಜಿ ಕೊಡುತ್ತೇನೆ. ಅದನ್ನು ಒಂದು ತಿಂಗಳಿನಲ್ಲಿ ಎಂಟ್ರಿ ಮಾಡಿಕೊಡುತ್ತೀರಾ? ನನ್ನದೇ ಜಮೀನು 11ಇ ಸ್ಕೆಚ್‌ನಲ್ಲಿ ಎಂಟ್ರಿಯಾಗಿಲ್ಲವೆಂದರೆ, ಆ ಬಗ್ಗೆ ಕೇಳಿದರೆ computer problem ಇದೆ ಎನ್ನುತ್ತಾರೆ. ಆರು ತಿಂಗಳಿನಿಂದ ವರ್ಷಗಟ್ಟಲೆ ನಮಗೆ 11ಇ ಸ್ಕೆಚ್ ತೆಗೆದುಕೊಳ್ಳುವುದಕ್ಕಾಗಿಲ್ಲ. ಸರ್ವರ್ ಡೌನ್ ಆಗಿದೆ ಎನ್ನುತ್ತಾರೆ. ಸರ್ವರ್ ಡೌನ್

ಎಂದರೆ, ಗ್ರಾಮಾಂತರ ಪ್ರದೇಶದಲ್ಲಿ ನಮ್ಮ ಜೀವನವೇ ಡೌನ್ ಆಗುತ್ತದೆ. ಒಂದು ಹೆಜ್ಜೆ ಮುಂದೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. 11ಇ ಸ್ಕೆಚ್ ಕೊಡುವುದಕ್ಕೆ updation ಮಾಡುವುದಕ್ಕೆ ಶಕ್ತಿ ಇಲ್ಲದಿರುವಂತಹ ಒಂದು ಇಲಾಖೆ ತನ್ನ ದೋಷವನ್ನು ಸರಿಪಡಿಸಿಕೊಳ್ಳುವುದರ ಕಡೆಗೆ ಗಮನ ಕೊಡಬೇಕು. ನಾವು ನಮ್ಮ ಆರ್.ಟಿ.ಸಿ., mutation ನಲ್ಲಿ ಬರುವಂತಹ ತಪ್ಪನ್ನು ತಿದ್ದುಪಡಿ ಮಾಡುವುದಕ್ಕೆ ಕೊಟ್ಟರೆ; ಒಮ್ಮೆ ನಮ್ಮ ಚಿಕ್ಕಪ್ಪನಿಗೂ ನನಗೂ ಒಂದು ಸಣ್ಣ ವ್ಯತ್ಯಾಸವನ್ನು ಆರ್.ಟಿ.ಸಿ.,ಯಲ್ಲಿ ತಿದ್ದುಪಡಿ ಮಾಡಬೇಕೆಂದರೆ ತಹಶೀಲ್ದಾರರು, ಎ.ಸಿ. ಕೋರ್ಟ್, ಡಿ.ಸಿ. ಕೋರ್ಟ್ ಮಾಡಬೇಕಾದರೆ 2-3 ವರ್ಷಗಳ ಕಾಲ ತೆಗೆದುಕೊಳ್ಳುತ್ತಿದೆ. ಅದು ನನ್ನದೇ ಕುಟುಂಬದ ಆಸ್ತಿ. ನನ್ನದೇ ಆರ್.ಟಿ.ಸಿ., ಮುಟೇಷನ್. ಅದನ್ನು ಮಾಡಿಕೊಡಬೇಕಾದರೆ ಏತಕ್ಕೆ ನಮ್ಮ ಹತ್ತಿರ updated ದಾಖಲೆಗಳಿರುವುದಿಲ್ಲ? ಏತಕ್ಕೆ ಅಲ್ಲಿ ರೈತನು ವಕೀಲರನ್ನಿಟ್ಟು ವಕೀಲರಿಗೆ ಸಂಬಳ ಕೊಟ್ಟುಕೊಂಡು ಕ್ಲರ್ಕ್‌ಗೆ ಕೇಸ್ ಕೊಡುವುದಕ್ಕೆ ಇಟ್ಟುಕೊಂಡು ಏತಕ್ಕೆ ಒದ್ದಾಡಬೇಕು? ಆ ಭಾಗದಲ್ಲಿಯೂ ಸುಧಾರಣೆಯಾಗಬೇಕಲ್ಲವೇ? ಈಗ RERA (Real Estate (Regulation and Development) Act) ಬಂದಿದೆ. ಅದು ಈ ರಾಜ್ಯದಲ್ಲಿ ಎಷ್ಟು ಪರಿಣಾಮಕಾರಿಯಾಗಿದೆ? ರಿಯಲ್ ಎಸ್ಟೇಟ್ ಮೇಲೆ ರಿಯಲ್ ಎಸ್ಟೇಟ್ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಗಗನಚುಂಬಿ ಕಟ್ಟಡಗಳ ನಿರ್ಮಾಣ ಇವೆಲ್ಲಾ ನಡೆಯುತ್ತಿವೆಯಲ್ಲವೇ. ಈ ರಾಜ್ಯದೊಳಗೆ ಎಷ್ಟು ಜಾಗಗಳು ಎನ್.ಓ.ಸಿ. ತೆಗೆದುಕೊಂಡಿವೆ? ಎಷ್ಟು ಜಾಗಗಳು ರೇರಾದಲ್ಲಿ ರಿಜಿಸ್ಟರ್ ಆಗಿವೆ? ರೇರಾ ಉಲ್ಲಂಘನೆ ಮಾಡಿರುವಂತಹ ಎಷ್ಟು ಕೇಸುಗಳು ದಾಖಲಾಗಿವೆ? ಎಷ್ಟು ಬಿಡುಗಡೆಯಾಗಿವೆ? ಇಲ್ಲಿ ರಾಜ್ಯಕ್ಕೆ ಬಂದರೆ ರೇರಾ update ಆಗಿ ನಮಗೆ ಎಷ್ಟು ದಿನದೊಳಗೆ ಅನುಮತಿ ಸಿಗುತ್ತಿದೆ ಎಂಬುದನ್ನು ತಾವು ವೆರಿಫೈ ಮಾಡಿ. ಇಲ್ಲಿಂದ ಕಳುಹಿಸಿಕೊಟ್ಟರೆ ತಿಂಗಳಾದರೂ ಬಂದಿಲ್ಲ. ಎರಡು ತಿಂಗಳಾದರೂ ರೇರಾದಿಂದ ಬಂದಿಲ್ಲ. ಅದರಲ್ಲಿಯೂ ಸರ್ಕಾರಿ valuation ಒಂದಿದ್ದರೆ ರೇರಾ ಶಿಫಾರಸ್ಸು ಮಾಡುವುದಕ್ಕಿಂತ ಮುಂಚೆ Sub Registrar ಅದನ್ನು ನೋಡುವುದಕ್ಕೆ ಬರುತ್ತಾನೆ. ಅವನು ಬಂದು S.R. rate ಮೇಲೆ ಅವನಿಗೆ ತೋಚಿದ ಒಂದು ರೇಟ್ ಹಾಕುತ್ತಾನೆ. ಅದಾದ ಮೇಲೆ ಡಿ.ಆರ್. ಹತ್ತಿರ ಹೋದರೆ ಅವರೊಂದು ಹಾಕುತ್ತಾರೆ. ಇಲ್ಲಿಗೆ ಬಂದರೆ ಕಮಿಷನರ್ ಒಂದು ರೇಟ್ ಹಾಕುತ್ತಾರೆ. ನೀವು

ಎಲ್ಲಿಯೋ ಕುಳಿತುಕೊಂಡು ಎಸ್.ಆರ್. ರೇಟ್ ಅನ್ನು ನಿಗದಿ ಮಾಡುತ್ತೀರಿ. ಅದಕ್ಕೆ ವೈಜ್ಞಾನಿಕ ತಳಹದಿಯೇ ಇಲ್ಲ.

(ಮುಂದು)

(1176) 26-12-2022 4-50 KH/GR (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಆಯನೂರು ಮಂಜುನಾಥ್ (ಮುಂದು):-**

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಈ ಕಾಯಿದೆ ಯಾರು ಸೈಟುಗಳನ್ನು ಹೊಂದುವುದಕ್ಕೆ ಬಯಸುತ್ತಾರೆ ಮತ್ತು ಯಾರು ಮನೆಯನ್ನು ತೆಗೆದುಕೊಳ್ಳುವುದಕ್ಕೆ ಬಯಸುತ್ತಾರೆ. ಅವರನ್ನು ರಕ್ಷಣೆ ಮಾಡುವುದಕ್ಕೆ ಈ ಕ್ಷಣದವರೆಗೆ ವಿಫಲವಾಗಿದೆ. ಈ ರಾಜ್ಯದಲ್ಲಿ RERA (The Real Estate Regulation and Development Act) ಉಲ್ಲಂಘನೆಯಾಗಲಿಲ್ಲವೇ? ಎಷ್ಟೊಂದು ಹೌಸಿಂಗ್ ಸೊಸೈಟಿಗಳು ಇವೆ, RERA ಅಡಿಯಲ್ಲಿ registration ಮಾಡಿದ್ದಾರೆಯೇ, ಆಗಿದ್ದರೆ, ಈ ಇಲಾಖೆ ಏನನ್ನು ಮಾಡುತ್ತಿದೆ? ಎನ್ನುವ ಪ್ರಶ್ನೆಗೆ ಉತ್ತರವನ್ನು ಇಲ್ಲ ಬಿಟ್ಟು ಎಲ್ಲಿ ಕಂಡುಕೊಳ್ಳುವುದಕ್ಕೆ ಸಾಧ್ಯ ಇದೆ. ಈಗಿರುವಾಗ ನಾನು ಬಹಳಷ್ಟು ವಿವರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವರು ತಂದಿರುವಂತಹದ್ದು ಒಂದು ಒಳ್ಳೆಯ ಉದ್ದೇಶ ಇದೆ. ಆಯನೂರಿನಲ್ಲಿ ನನ್ನ ಮನೆ ಊರಿನಲ್ಲಿ ಇಲ್ಲ. ತೋಟದಲ್ಲಿಯೇ ಮನೆ ಇರುವುದು. ಆ ರೀತಿ ಜಮೀನಿನಲ್ಲಿಯೇ ಮನೆ ಕಟ್ಟಿಕೊಂಡು ಇದ್ದಿದಕ್ಕೆ, ಅಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ತಾವು ಏನು ಬೇಕಾದರೂ ಸರಳ ಮಾಡಿಕೊಡಿ. ನಾವು ಬದುಕುವುದೇ ಆ ಗದ್ದೆಯೊಳಗೆ ಮತ್ತು ತೋಟದೊಳಗೆ ಬೆಳಗ್ಗೆ ಎದ್ದರೆ ಆ ಬೆಳೆ ಕಾಣುತ್ತದೆ. ತಾವು ಅಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೋಸ್ಕರ ಹೇಳಿದರೆ ಸರಿ. ತಾವು ಕಾರ್ಖಾನೆಗೋಸ್ಕರ, ಉದ್ಯೋಗಗೋಸ್ಕರ ಕೊಡಿ. ಎಷ್ಟು ಜನರಿಗೆ ಉದ್ಯೋಗ ಕೊಡುತ್ತೇವೆ ಎನ್ನುವ proper plan ಇದೆ. ಅದರ ಆಧಾರದ ಮೇಲೆ individual conversion ಮಾಡಿಕೊಡಿ. ಬೆಳೆಯುತ್ತಿರುವಂತಹ ಭೂಮಿಯನ್ನು ಬರಡು ಮಾಡಿ, ನಾಳೆ ದಿವಸ ನಗರೀಕರಣ ಮಾಡಿ ಕೂತರೆ ರೈತನ ಬದುಕು ಏನಾಗುತ್ತದೆ. ನಮ್ಮ ಹೊಟ್ಟೆ ಪಾಡು ಏನಾಗುತ್ತದೆ, ನಮಗೆ ಆಹಾರ ಯಾರು ಕೊಡುತ್ತಾರೆ. ಇರುವಂತಹ ಕಾನೂನುಗಳಲ್ಲಿಯೇ ತಾಲ್ಲೂಕು

ಆಫೀಸ್, ಎ.ಸಿ., ಆಫೀಸ್‌ಗಳಿಂದ ತಪ್ಪಿಸಿಕೊಂಡು ಬಂದರೆ ಸಾಕಾಗಿದೆ. Sections 79 A and B of the Karnataka Land Reforms Act ಒಂದು ರೀತಿಯಲ್ಲಿ ನಮಗೆ ಅನುಕೂಲವಾಗಿದೆ. ಅಲ್ಲಿ ಬಹಳ ಜನ್ಮ ತಿನ್ನುತ್ತಿದ್ದರು. ಅಲ್ಲಿ ನಮ್ಮನ್ನು ಉಳಿಸಿದ್ದೀರಿ. Sections 79 A and B ಆದ ಮೇಲೆ ದೊಡ್ಡ ದೊಡ್ಡ ಕಂಪನಿಯವರು, Retired officers, politicians, ಬೇರೆ ಬೇರೆ ಅಧಿಕಾರಿಗಳು ಬಂದು ನಮ್ಮ ಜಮೀನುಗಳನ್ನು ಸಾರಾಸಾಗಾಟಾಗಿ ಖರೀದಿ ಮಾಡುತ್ತಿದ್ದಾರೆ. ನಮ್ಮ ಭೂಮಿ ನಮ್ಮ ಕೈಯಲ್ಲಿ ಉಳಿಯುತ್ತಿಲ್ಲ. ಮುಂದೊಂದಿನದ ಭವಿಷ್ಯ ಏನಾಗಬೇಕು. ಆ ಕಾರಣಕ್ಕೋಸ್ಕರ ನಮ್ಮ ರಾಜ್ಯದಲ್ಲಿ ಭೂ ಕಂದಾಯ ತಿದ್ದುಪಡಿ ಕಾಯಿದೆ ತಂದಾಗ ಎಲ್ಲರ ಬದುಕನ್ನು ಕಣ್ಣ ಮುಂದೆ ಇಟ್ಟುಕೊಂಡು ಹಣವಂತರ ಪಾಲಾಗಬಾರದು ಎಂದು ಮಾಡಿತ್ತು. ಇದರೊಳಗೆ ಇಷ್ಟು ಸರಳವಾಗಿ 15 ದಿವಸದೊಳಗೆ ಮಾಡಿಕೊಟ್ಟರೆ ಎಷ್ಟು conversion ಆಗುತ್ತದೆ. ಹಾಗಾದರೆ, ಎಲ್ಲಾ ಮಾಡಿಕೊಟ್ಟರೂ ನಮ್ಮ ಎಸ್.ಆರ್., ದರ ಕಡಿಮೆಯಾಗುತ್ತದೆಯೇ? ಬೆಂಗಳೂರಿನ ದರ ಕೇಳಿದರೆ ನಮ್ಮ ಎದೆ ಒಡೆದು ಹೋಗುತ್ತದೆ. ಈಗ ಶಿವಮೊಗ್ಗಕ್ಕೆ ಬಂದು ಬಿಟ್ಟಿದೆ. ಒಂದು ಚದರ ಅಡಿಗೆ 25 ಸಾವಿರ, 40 ಸಾವಿರ ಇದೆ. ಶಿವಮೊಗ್ಗ ಜಿಲ್ಲೆಯಲ್ಲಿ 12 ರಿಂದ 15 ಕ್ಕೆ ಬಂದು ಬಿಟ್ಟಿದೆ. ನಾವು 30X40 ಸೈಟು ಖರೀದಿ ಮಾಡುವ ಸ್ಥಿತಿಯಲ್ಲಿಲ್ಲ. ಈ ರೀತಿ ಬಂಡವಾಳದಾರರ ಕೈಗೆ ಹೋಗಿ ಭೂಮಿ ಬೆಲೆ ಗಗನಕ್ಕೆ ಏರುತ್ತಿದೆ. ಈ ಸಂದರ್ಭದಲ್ಲಿ ನಾನು ಇದನ್ನು ವಿರೋಧ ಮಾಡುತ್ತಿಲ್ಲ. ಸನ್ಮಾನ್ಯ ಆರ್.ಅಶೋಕ್‌ರವರಿಗೆ ವಿನಂತಿ ಮಾಡುತ್ತಿದ್ದೇನೆ. ಈ ಎಲ್ಲಾ ದೋಷಗಳನ್ನು ಮತ್ತೊಂದು ಸಾರಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಎಂದು ಅವರಿಗೆ ಸಲಹೆ ಕೊಡುತ್ತಾ ಅವರ ಈ ಪ್ರಯತ್ನವನ್ನು ಸ್ವಾಗತ ಮಾಡುತ್ತೇನೆ. ಧನ್ಯವಾದಗಳು.

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕಕ್ಕೆ ಸ್ವಾಗತವನ್ನು ಬಯಸುತ್ತಾ, ಮಾನ್ಯ ಕಂದಾಯ ಮಂತ್ರಿಯಾದ ಆರ್.ಅಶೋಕ್‌ರವರು ಇಡೀ ರಾಜ್ಯ ಪ್ರವಾಸ ಮಾಡಿ, ವಿಶೇಷವಾಗಿ ಕೊಡಗು ಜಿಲ್ಲೆಗೆ ಎರಡು-ಮೂರು ಬಾರಿ ಪ್ರವಾಸ ಮಾಡಿ, conversion ಬಗ್ಗೆ ಕಳೆದ ಎರಡು-ಮೂರು ವರ್ಷಗಳಿಂದ ಯಾವುದೇ ಸಣ್ಣ ಮನೆ ಕಟ್ಟಬೇಕಾದರೂ conversion ಗೆ ಕೊಡುತ್ತಿರಲಿಲ್ಲ. ಅಲ್ಲಿ ತಹಶೀಲ್ದಾರ್ ಕಛೇರಿಗೆ ಹೋದರೆ ಮಧ್ಯವರ್ತಿಗಳ ತೊಂದರೆ. ಇದಕ್ಕೆ ನಾವು ವರ್ಷಾನುಗಟ್ಟಲೆ

ಕಾಯಬೇಕಾಗಿತ್ತು. ಇದಕ್ಕೆ ಸರಳೀಕರಣ ಮಾಡಿದ್ದರಿಂದ ನಮ್ಮ ಮಲೆನಾಡು ಭಾಗದಲ್ಲಿ ವಿಶೇಷವಾಗಿ ಕೊಡಗು ಜಿಲ್ಲೆಯಲ್ಲಿ conversion ಅನ್ನು 15 ದಿವಸದೊಳಗೆ ಕೊಡುವಂತಹದ್ದು ಬಹಳ ಒಳ್ಳೆಯ ತಿದ್ದುಪಡಿಯಾಗಿದ್ದು, ಇದಕ್ಕೆ ಸ್ವಾಗತ ಮಾಡುತ್ತೇನೆ. ಇವತ್ತು ನಮ್ಮ ಕಡೆಯಲ್ಲಿ ಫಾರಂ ಹೌಸ್‌ಗಳು ಇವೆ. ಇವತ್ತು ಕೂಡ ಫಾರಂ ಹೌಸ್‌ಗೆ conversion procedure ಎಂದು ಹೇಳಿ ನಮಗೆ electricity ಸಿಗುತ್ತಿಲ್ಲ. ಆದ್ದರಿಂದ ಈ ತಿದ್ದುಪಡಿ ತಂದಿರುವುದಕ್ಕೆ ವಿಶೇಷವಾಗಿ ನಮ್ಮ ಕಂದಾಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸಿ ಸ್ವಾಗತ ಬಯಸುತ್ತೇನೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕದ ಬಗ್ಗೆ ಈಗಾಗಲೇ ಬಹಳಷ್ಟು ಜನ ಮಾತನಾಡಿದ್ದಾರೆ. ಅವರು ಮಾತನಾಡಿರುವ ವಿಚಾರವನ್ನೇ ನಾನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ತಾವು total land ನಲ್ಲಿ ಶೇಕಡಾ 10 ರಷ್ಟು land ಅನ್ನು ಕೃಷಿ ದಾಸ್ತಾನು ಚಟುವಟಿಕೆಗಳನ್ನು ಮಾಡಿಕೊಳ್ಳುವುದಕ್ಕೆ, ಅಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದರಲ್ಲಿ ಇನ್ನಷ್ಟು ವಿಸ್ತಾರ ಮಾಡಬೇಕು. ಇನ್ನೊಂದಷ್ಟು ಅಂಶಗಳನ್ನು ಸೇರಿಸಬೇಕೆಂಬುದು ನನ್ನ ಮನವಿ. ಈಗ ಮಂಡ್ಯ ಭಾಗಕ್ಕೆ ತಾವೇನಾದರೂ ಬಂದರೆ ಕೃಷಿ ಚಟುವಟಿಕೆಗಾಗಿ ಮತ್ತು ಬೆಲ್ಲದ ಉತ್ಪಾದನೆಗಾಗಿ ಆಲೆಮನೆಗಳನ್ನು ಸ್ಥಾಪನೆ ಮಾಡುತ್ತಾರೆ. ನಮ್ಮ ಜಿಲ್ಲೆಗಳಿಗೆ ಬಂದಾಗ ರೇಷ್ಮೆ ಸಾಕಾಣಿಕೆ ಮನೆಗಳು ಬರುತ್ತಿದೆ. ಮೊದಲೆಲ್ಲಾ ಊರುಗಳಲ್ಲಿ ಮತ್ತು ಮನೆಗಳಲ್ಲಿ ಮಾಡುತ್ತಿದ್ದೆವು. ಈಗ Bivoltine ಬೆಳೆಯುವುದರಲ್ಲಿ ರೋಗ ಜಾಸ್ತಿಯಾಗಿರುವುದರಿಂದ, ಇದನ್ನು ಆಧುನಿಕ ತಂತ್ರಜ್ಞಾನದಲ್ಲಿಯೇ ಮಾಡಬೇಕು. ಇದಕ್ಕೆ ಬಂಡವಾಳ ಜಾಸ್ತಿ ಹಾಕಬೇಕು. ಇದನ್ನು temperature maintain ಮಾಡುವುದಕ್ಕೆ A/c Cooler, A/c ಇಂತಹ ಸಾಮಗ್ರಿಗಳನ್ನು ಅಳವಡಿಸಿ, ಇವತ್ತು ರೇಷ್ಮೆ ಹುಳು ಸಾಕಾಣಿಕೆಯನ್ನು ಮಾಡಬೇಕು. ಉದಾಹರಣೆಗೆ ಕೋಲಾರ ಜಿಲ್ಲೆಗೆ ಹೋದರೆ ಟಮೋಟ ಒಂದು ದಿನ ಕೆ.ಜಿ.ಗೆ 50 ಪೈಸೆ ಇರುತ್ತದೆ. ಇನ್ನೊಂದು ದಿನ ಕೆ.ಜಿ.ಗೆ 50 ರೂಪಾಯಿ ಇರುತ್ತದೆ. 50 ಪೈಸೆ ಇದ್ದಾಗ cold storage ನಿರ್ಮಾಣ ಮಾಡಿಕೊಳ್ಳಬೇಕಾಗುತ್ತದೆ. ಅವನು ಜಮೀನಿನಲ್ಲಿಯೇ cold storage ಮಾಡಿಕೊಳ್ಳುವ ಬಗ್ಗೆಯೂ ತಾವು ಪ್ರಸ್ತಾಪ ಮಾಡಬೇಕು. ಜಿಲ್ಲಾವಾರು ಕಾಫಿ

ಒಣಗಿಸುವುದಕ್ಕೂ cold storage ಬೇಕಾಗುತ್ತದೆ. ಆದ್ದರಿಂದ, ತಾವು ಆಯಾಯ ಭಾಗಗಳಲ್ಲಿ ಕೃಷಿ ಚಟುವಟಿಕೆಗಳ ಬಗ್ಗೆ ಒಂದಷ್ಟು ಅಧ್ಯಯನ ಮಾಡಿ, ಆ ಭಾಗಗಳನ್ನು ಸಹ ಸೇರಿಸಬೇಕಾಗುತ್ತದೆ. ಇದಕ್ಕೂ ವಿಶೇಷವಾಗಿ ನಮ್ಮ ಸಚಿವರಾದ ಎಂ.ಟಿ.ಬಿ. ನಾಗರಾಜುರವರು ಮಾತನಾಡುತ್ತಾ ರೈತರು ಸಾಲಕ್ಕೆ ಹೋಗುತ್ತಾರೆ ಎಂದು ಹೇಳಿದರು. ಇದು ನಿಜ. ಯಾರೂ ಕೂಡ ಹಣ ಇಟ್ಟುಕೊಂಡು cold storage ಕಟ್ಟುವುದಕ್ಕೆ ಹೋಗುವುದಿಲ್ಲ. ಹುಳು ಸಾಕಾಣಿಕೆ ಮನೆ ಇರಬೇಕಾದರೂ ಸಾಲಕ್ಕೆ ಹೋಗಲೇಬೇಕು. ಸಾಲಕ್ಕೆ ಹೋಗಬೇಕಾದರೆ ಬ್ಯಾಂಕುಗಳು ಸುಮ್ಮನೆ ಸಾಲ ಕೊಡುವುದಿಲ್ಲ. ಪಹಣಿ ತೆಗೆದುಕೊಂಡು ಹೋಗಿ ಸಾಲ ಕೊಡಿ ಎಂದರೆ ಕೊಡುವುದಿಲ್ಲ. ಇದಕ್ಕೆ ಎನ್.ಓ.ಸಿ.,ಕೊಡುವವರು ಯಾರು? ಆಯಿತು. ತಾವು ಇದರಲ್ಲಿ ಶೇಕಡಾ 10 ರಷ್ಟನ್ನು ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು. ಇದಕ್ಕೆ exemption ಇದೆ ಎನ್ನುವ ಮಾತನ್ನು ಹೇಳಿದ್ದೀರಿ. ಇದಕ್ಕೆ ಎನ್.ಓ.ಸಿ., ಯಾರು ಕೊಡುತ್ತಾರೆ. ಅವನು ವಿದ್ಯುತ್ ಸಂಪರ್ಕ ತೆಗೆದುಕೊಳ್ಳುವುದಕ್ಕೆ ಪಂಚಾಯಿತಿಯವರು ಕೊಡುತ್ತಾರೆಯೇ ಅಥವಾ ಕಂದಾಯ ಇಲಾಖೆಯಲ್ಲಿ ವಿ.ಎ., ಕೊಡುತ್ತಾನೆಯೇ, ಇದಕ್ಕೆ ಯಾರು ಎನ್.ಓ.ಸಿ., ಕೊಡುತ್ತಾರೆ. ಇದರ ಬಗ್ಗೆ ತಾವು ಸ್ಪಷ್ಟಪಡಿಸಿ. ದಯಮಾಡಿ authorisation document ಅನ್ನು ಮಾಡಿಕೊಡಿ. ಅವನಿಗೆ ಎನ್.ಓ.ಸಿ., ಕೊಡುವುದರ ಬಗ್ಗೆ ಸ್ಪಷ್ಟತೆ ಇಲ್ಲ. ಆ ಸ್ಪಷ್ಟತೆಯನ್ನುಂಟು ಮಾಡಿದರೆ ಈ ವಿಧೇಯಕ ಇನ್ನಷ್ಟು ಅರ್ಥಪೂರ್ಣವಾಗಿರುತ್ತದೆ, ತರುತ್ತಿರುವಂತಹ ಉದ್ದೇಶ ಸಫಲವಾಗುತ್ತದೆ ಮತ್ತು ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನೊಂದು major ಆಗಿ ಸರ್ವೇ ಇಲಾಖೆಯವರು 15 ದಿವಸಗಳಲ್ಲಿ conversion ಮಾಡಿಕೊಡುತ್ತೇವೆ. ಯಾವುದೂ plan ಆಗಿರುತ್ತದೆ. ಈಗಾಗಲೇ ವಸತಿ ಪ್ರದೇಶ already plan ನಲ್ಲಿ ಸೇರಿರುತ್ತದೆ. commercial ಮತ್ತು industrial ಯಾವುದು ಎಂದು ಸೇರಿರುತ್ತದೆ. ಅದನ್ನು ಅಪ್ಲಿಕೇಷನ್‌ನಲ್ಲಿ ಹಾಕಿದ ಕೂಡಲೇ ಅದನ್ನು ಭಾವಿಸಿಕೊಳ್ಳತಕ್ಕದ್ದು ಎಂದು ಹೇಳಿದ್ದೀರಿ. Rejection ಮಾಡುವುದಕ್ಕೆ 128 ಕಾರಣಗಳು ಇವೆ. ನಾವು online application ಹಾಕುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಎಷ್ಟು ಶೇಕಡಾವಾರು online application ನಲ್ಲಿ ಡಿ.ಸಿ., ತಮ್ಮ ಅಧಿಕಾರಿಗಳು conversion ಮಾಡಿ ಕಳುಹಿಸಿದ್ದಾರೆ. ಇದರ ಶೇಕಡಾವಾರು ಅನ್ನು ತರಿಸಿಕೊಂಡು ನೋಡಿ. Rejection ಗೆ ಏನು matter ಹಾಕಿ ಕಳುಹಿಸುತ್ತಾರೆ. ಇದನ್ನು refuse ಮಾಡುವುದಕ್ಕೆ ಅವರು

ಏನು ಕಾರಣಗಳನ್ನು ಹಾಕುತ್ತಿದ್ದಾರೆ. ತಮ್ಮ ಡಿ.ಸಿ., ಗಳಿಗೆ 128 ಕೆಲಸಗಳು ಇವೆ. ಎ.ಸಿ., ತಹಶೀಲ್ದಾರ್, ಡಿ.ಸಿ., ಗಳನ್ನು ನೋಡಿದರೆ ಇವರುಗಳು ಯಾವಾಗಲೂ ವಿಡಿಯೋ ಕಾನ್ಫರೆನ್ಸ್ ನಲ್ಲಿ ಇರುತ್ತಾರೆ. ಈಗಾಗಲೇ ಇನ್ನೇನು ಚುನಾವಣೆ ಬರುತ್ತಿದೆ. ವೋಟರ್ ಲಿಸ್ಟ್ ಸಿದ್ಧಪಡಿಸಿಕೊಂಡು ಹೆಬ್ಬೆಟ್ಟು ಕೊಡುವುದಕ್ಕೆ, ಆದ್ಯಾವುದೋ ಪಹಣಿ ತಿದ್ದುಪಡಿಗೆ ತಹಶೀಲ್ದಾರ್ ಹೆಬ್ಬೆಟ್ಟು ಕೊಡಬೇಕು. ಎ.ಸಿ., ಹೆಬ್ಬೆಟ್ಟು ಕೊಡಬೇಕೆಂದರೆ ತಿಂಗಳು ಗಟ್ಟಲೆ ಕಾಯಬೇಕು. ಅವರಿಗೆ 128 ಕೆಲಸಗಳು ಇರುತ್ತವೆ. 128 ಕೆಲಸಗಳ ಜೊತೆಗೆ ಒಂದು ವಾರದಲ್ಲಿ ಯಾವ ರೀತಿಯಲ್ಲಿ ಮಾಡಿಸುತ್ತೀರೋ, ಅದು ಆ ಭಗವಂತನಿಗೆ ಗೊತ್ತು. ತಾವು ಏನು ಪವಾಡ ಮಾಡಿ ಮಾಡುತ್ತೀರೆಂದು ಹೇಳಬೇಕು. ಬೇರೆಯವರಿಗಾದರೂ ಕೆಲಸವನ್ನು divert ಮಾಡಿ. ಜಿಲ್ಲಾ ಮಟ್ಟದ ಇನ್ಯಾವುದೋ ಅಧಿಕಾರಿಗಳಿಗೆ conversion ಗೆ ಸಂಬಂಧಪಟ್ಟ ಹಾಗೆ ಎ.ಡಿ.ಸಿ., ಇದ್ದಾರೆ. Special Land Acquisition Officer ಇದ್ದಾರೆ. ಅವರನ್ನು involve ಮಾಡಿ. ಎಲ್ಲದಕ್ಕೂ ಮಿಗಿಲಾಗಿ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ತಾವು ಕಂದಾಯ ಸಚಿವರಾದ ಮೇಲೆ ಬಹಳಷ್ಟು ವಿಧೇಯಕಗಳನ್ನು ತಂದಿದ್ದೀರಿ. ಇದರ ಬಗ್ಗೆ ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡಿದರು. ಸರ್ವೇ ಇಲಾಖೆಯ ಎ.ಡಿ.ಎಲ್.ಆರ್., ಮತ್ತು ಡಿ.ಡಿ.ಎಲ್.ಆರ್., ರವರನ್ನು ಒಂದು ಹದ್ದುಬಸ್ತಿಗೆ ತೆಗೆದುಕೊಂಡು ಬನ್ನಿ. ಇದಕ್ಕೆ ಒಂದು ಕಾಲ ಇತ್ತು. ತನುವಾಗಿರುವ ಜಾಗ, ಬಹಳ ಫಲವತ್ತಾದ ಜಾಗ ಯಾವುದೆಂದರೆ ಸಬ್-ರಿಜಿಸ್ಟ್ರಾರ್, ಬಿ.ಡಿ.ಎ., Excise Department ಎನ್ನುವಂತಹ ಮಾತು ಜನರಲ್ಲಿ ಬರುತ್ತಿತ್ತು. ಆದರೆ ಇವತ್ತು ನಾನು ನೋಡಿರುವಂಥದ್ದು ಸರ್ವೇ ಇಲಾಖೆ ಅತ್ಯಂತ ಫಲವತ್ತಾಗಿರುವಂತಹ ಜಾಗ. ಈ ಎ.ಡಿ.ಎಲ್.ಆರ್., ಮತ್ತು ಡಿ.ಡಿ.ಎಲ್.ಆರ್., ರವರನ್ನು ನಮ್ಮಲ್ಲಂತೂ ಹಿಡಿಯುವುದಕ್ಕೆ ಆಗುವುದಿಲ್ಲ. ಅವರು ತಮಗಿಂತ top ಆಗಿ ಇದ್ದಾರೆ. ತಮ್ಮ ಮಾತು ಕೇಳುತ್ತಾರೋ, ಇಲ್ಲವೋ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿರುವ ಡಿ.ಡಿ.ಎಲ್.ಆರ್.,ತಾವು ಹೇಳಿರುವಂತಹ ಕೆಲಸ ಮಾಡಲಿಲ್ಲ ಎಂದು ಹೇಳುತ್ತಾರೆ. ಅದು ನಿಜವೋ, ಸುಳ್ಳೋ ಗೊತ್ತಿಲ್ಲ. ಏಕೆಂದರೆ, ಅವರು ಯಾರ ಮಾತನ್ನು ಕೇಳುತ್ತಿಲ್ಲ. ರೈತರು ಎಂದರೆ ಅವರಿಗೆ ಕಾಲು ಕಸ. ಅವರಿಗೆ ಕಣ್ಣಿಗೆ ಕಾಣುವುದೇ ಬೆಂಗಳೂರು. ರಿಯಲ್ ಎಸ್ಟೇಟ್ ಅಂತಹವರೇ ಬರುತ್ತಾರೆ. ನೈಸ್ ರೋಡ್‌ನಲ್ಲಿ Audi ಕಾರು, Benz ಕಾರನ್ನು ನಿಲ್ಲಿಸಿ, ಇವರು ರೆಗ್ಯೂಲರ್ ಕಾರಿನಲ್ಲಿ ಬರುತ್ತಾರೆ. ಇವರನ್ನು ಮಟ್ಟ ಹಾಕುವುದಕ್ಕೆ ಆಗಲಿಲ್ಲವೆಂದರೆ ಬಹಳ ಅನ್ಯಾಯವಾಗುತ್ತದೆ. ಹೋಟೆಲ್

ಬೋರ್ಡ್‌ನಲ್ಲಿ ಒಂದು ಪ್ಲೇಟ್ ಇಡ್ಲಿಗೆ ಇಷ್ಟು, ಮಸಾಲೆ ದೋಸೆಗೆ ಇಷ್ಟು, ಕಾಫಿಗೆ ಇಷ್ಟು ಎಂದು ನಿಗದಿ ಮಾಡಿರುತ್ತಾರೆಯಲ್ಲವೇ, ಅದೇ ರೀತಿ ಇವತ್ತು ಡಿ.ಡಿ.ಎಲ್.ಆರ್., ಮತ್ತು ಎ.ಡಿ.ಎಲ್.ಆರ್., ಕಛೇರಿಯಲ್ಲಿ ಎಕರೆಗೆ ಇಷ್ಟು ದರ ಎಂದು ಬೋರ್ಡ್ ಫಿಕ್ಸ್ ಮಾಡಿದ್ದಾರೆ. ಹೋಬಳಿವಾರು ಮತ್ತು ಪಂಚಾಯಿತಿವಾರು ಅದು ಕೂಡ ಸರ್ವೇ ನಂಬರ್‌ಗಳು 3 ರಿಂದ 5 ಲಕ್ಷ ಅದರ ಪೈಕಿ ನಂಬರ್ ನಮ್ಮ ಕರ್ಮ. ಪಿ ನಂಬರ್ ನಮ್ಮದೋ ಇಲ್ಲ, ಎ.ಡಿ.ಎಲ್.ಆರ್., ಡಿ.ಡಿ.ಎಲ್.ಆರ್., ಅಥವಾ ಸರ್ಕಾರದ್ದೋ ಎಂದು ತೀರ್ಮಾನ ಮಾಡಿಬಿಡಬೇಕು. ಅಲ್ಲಿ ಆ ರೀತಿಯಾದಂತಹ conversion, ಪಹಣಿ ತಿದ್ದುಪಡಿಗೆ ಇವತ್ತು ಎ.ಡಿ.ಎಲ್.ಆರ್., ಮತ್ತು ಡಿ.ಡಿ.ಎಲ್.ಆರ್. ರವರನ್ನು ನಿಯಂತ್ರಣ ಮಾಡಲಿಲ್ಲವೆಂದರೆ ಬಹಳ ತೊಂದರೆಯಾಗುತ್ತದೆ. ಇವರು ಬಹಳ ಅನ್ಯಾಯ ಮಾಡುತ್ತಿದ್ದಾರೆ. ಬಹಳ ಲೂಟಿ ಮಾಡುತ್ತಿದ್ದಾರೆ. ಅವರ ಮಕ್ಕಳು ಮರಿಗಂತೂ ಒಳ್ಳೆಯದಾಗುವುದಿಲ್ಲ.

(ಮುಂದು)

(1177)26-12-2022(05-00)bsd-gr

**ಶ್ರೀ ಎಸ್. ರವಿ (ಮುಂದು)**

ಅದನ್ನು ನೋಡಿಕೊಂಡು ಅವರು ಸುಮ್ಮನಿರಬಾರದು, ಅದು ಎಲ್ಲೋ ಒಂದು ಕಡೆ ಶಾಪ ತಟ್ಟುತ್ತದೆ ಎಂದು ನಾನು ನೇರವಾಗಿ ಹೇಳುತ್ತಿದ್ದೇನೆ. ಅವರಿಗೆ ನಿಯಂತ್ರಣ ಹಾಕಲೇಬೇಕು.

ಇನ್ನು ಅಕ್ರಮ-ಸಕ್ರಮಗಳ ಬಗ್ಗೆ ಹೇಳಬೇಕೆಂದರೆ, ಮನೆಗಳನ್ನು ಕಟ್ಟಿಬಿಟ್ಟಿದ್ದಾರೆ, ಮೊದಲು ನಗರ ಪ್ರದೇಶವಾದ ಬೆಂಗಳೂರಿನಂತಹ ನಗರಗಳಲ್ಲಿ ಕಟ್ಟುತ್ತಿದ್ದು, ನಂತರ ಜಿಲ್ಲಾ ಕೇಂದ್ರಗಳು, ಪಟ್ಟಣ ಪ್ರದೇಶಗಳಲ್ಲಿ ಕಟ್ಟುವುದು ರೂಢಿಯಲ್ಲಿ ಬಂತು. ಈಗ ಹೋಬಳಿ ಮತ್ತು ಗ್ರಾಮ ಠಾಣಾ ಮಟ್ಟದಲ್ಲಿ ಕಟ್ಟುತ್ತಿದ್ದಾರೆ. ಯಾವುದೋ ಓಬಿರಾಯನ ಕಾಲದ್ದು ಇದ್ದು, ಈಗ ಅದರಿಂದ extension ಬಂದು, ಹೊರಗೆ ಕಟ್ಟುತ್ತಿದ್ದಾರೆ. ಇದರ ಬಗ್ಗೆ ನಿರ್ದಿಷ್ಟವಾದ ನಿಲುವು ತೆಗೆದುಕೊಳ್ಳಬೇಕು. ಅಕ್ರಮ-ಸಕ್ರಮದ ಅಡಿಯಲ್ಲಿ Revenue land ಗಳಿಗೆ ಟಾರು, ಒಳಚರಂಡಿ ವ್ಯವಸ್ಥೆ ಎಲ್ಲವನ್ನು ಮಾಡಿ, ಅಧಿಕೃತ ಬಡಾವಣೆಗಳಿಗಿಂತ ಸೌಲಭ್ಯಗಳನ್ನು ಕೊಟ್ಟು, ಅದರ ಬಗ್ಗೆ ರೂಪುರೇಷೆ ರೂಪಿಸಿ ನಿರ್ಧಾರ

ತೆಗೆದುಕೊಳ್ಳಬೇಕಲ್ಲವೇ? High Court, Supreme Court ಗಳಲ್ಲಿ ಬಾಕಿ ಇದೆ ಎಂದು ಎಷ್ಟು ದಿವಸ ಎಂದು ತಳ್ಳುತ್ತಾರೆ? ಇದಕ್ಕೆ ಒಂದು ದಾರಿ ಮಾಡಬೇಕಲ್ಲವೇ? Local bodies ಗಳಲ್ಲಿಯೂ ಹಣ ಇಲ್ಲ, ಮನೆ ಕಟ್ಟಿರುವವರಿಗೂ ನೆಮ್ಮದಿ ಇಲ್ಲ. ಇದರ ಬಗ್ಗೆ ಸೂಕ್ತವಾದ ನಿರ್ಧಾರ ತೆಗೆದುಕೊಳ್ಳಬೇಕು. ಕೃಷಿ ಆಧಾರಿತ ಚಟುವಟಿಕೆಗಳಿಗೆ ಅನುಕೂಲವಾಗುವ cold storage, ಹುಳು ಸಾಕುಮನೆ, ಆಲೆಮನೆ ಇಂತಹವುಗಳ ಬಗ್ಗೆ ಅಧ್ಯಯನ ಮಾಡಿಕೊಂಡು, ಇವುಗಳನ್ನು ವಿಧೇಯಕದಲ್ಲಿ ಹೆಸರಿಸಬೇಕು. ಇದರ ಜೊತೆ ಈ ವಿಧೇಯಕದಲ್ಲಿ N.o.C., ಬಗ್ಗೆ ಒಂದು ಸ್ಪಷ್ಟತೆ ಬರಬೇಕು ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2022ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. 2021-22ರ ಆಯವ್ಯಯ ಭಾಷಣದಲ್ಲಿ ಈ ಪ್ರಸ್ತಾವಗಳನ್ನು ಮಾಡಿದ್ದು, ಇದನ್ನು ಜಾರಿಗೆ ತರಲು ಕೃಷಿಯೇತರ ಉದ್ದೇಶಗಳಿಗಾಗಿ ಭೂಪರಿವರ್ತನೆಯನ್ನು ಸರಳಗೊಳಿಸಲು 1964ರ ಕರ್ನಾಟಕ ಅಧಿನಿಯಮ 12ರ 95 ಮತ್ತು 96ನೇ ಪ್ರಕರಣಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಈ ವಿಧೇಯಕ ಅವಶ್ಯಕ ಎಂದು ತರಲಾಗಿದೆ. ಪ್ರಸ್ತಾಪಿತ ಶಾಸನ ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ ಹಾಗೂ ಉದ್ದೇಶ ಒಳ್ಳೆಯದ್ದಾಗಿದೆ. ಇದರಲ್ಲಿನ 96ನೇ ತಿದ್ದುಪಡಿಯಲ್ಲಿ ವಿಶೇಷವಾಗಿ ಕೃಷಿ ಭೂಮಿಯನ್ನು ಅನುಮತಿ ಇಲ್ಲದೇ ಇತರ ಉದ್ದೇಶಕ್ಕಾಗಿ ಬಳಸಿದರೆ ದಂಡದ ವಿವರಣೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ಒಂದೆರಡು ಸಂಕೀರ್ಣವಾದ ವಿಚಾರ ಇದ್ದು, ಕಳೆದ 80-90 ವರ್ಷಗಳಿಂದ ಸರ್ವೆ ನಂಬರ್‌ಗಳಲ್ಲಿ ಮನೆ ಕಟ್ಟಿಕೊಂಡಿದ್ದು, ಇವತ್ತಿಗೂ ಅನೇಕ ಗ್ರಾಮಗಳ ಅರ್ಧ ಮನೆಗಳು ಸರ್ವೆ ನಂಬರ್‌ಗಳಲ್ಲಿವೆ. ಆದರೆ ಅದೇ ಸಂದರ್ಭದಲ್ಲಿ ಪಂಚಾಯಿತಿಗಳಿಂದ ಕಂದಾಯ ವಸೂಲಿ ಮಾಡುತ್ತಿದ್ದಾರೆ. ಬೆಂಗಳೂರಿನ ಗ್ರಾಮಾಂತರ ಭಾಗದಲ್ಲಿ ನನ್ನ ಗ್ರಾಮ ಬರುತ್ತಿದ್ದು, ಅಲ್ಲಿ ಹೊಸ ಸಮಸ್ಯೆಯೇನೆಂದರೆ ಭೂಮಿಯ ಬೆಲೆ ಹೆಚ್ಚಾದ ತಕ್ಷಣ ಮುತ್ತಾತನ ಕಾಲದಲ್ಲಿ ಮಾರಾಟವಾಗಿ ಬೇರೆಯವರಿಗೆ ಪರಭಾರೆಯಾಗಿದ್ದರೂ ನಿವೇಶನ ಮೂಲ ಮಾಲೀಕರದ್ದು ಎಂದು ದಾವೆಗಳನ್ನು

ಹಾಕಿಕೊಂಡು ಊರಿನಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ. ಇದಕ್ಕೆ ಕಾರಣವೇನೆಂದರೆ, ನಿವೇಶನ ಸರ್ವೆ ನಂಬರ್‌ನಲ್ಲಿಯೇ ಇರುವುದಾಗಿದೆ. ಕೆಲವು ಜಮೀನುಗಳಲ್ಲಿ High Tension wire ಹೋಗಿರುತ್ತದೆ. ದಂಡಾಧಿಕಾರಿಗಳಗೆ ಅನೇಕ ಅಧಿಕಾರಗಳನ್ನು ನೀಡಿದ್ದು, ಕಾನೂನಿನಡಿಯಲ್ಲಿ ಉದ್ದೇಶ ಒಳ್ಳೆಯದಾಗಿದೆ. ಏಕೆಂದರೆ ದುರುಪಯೋಗವಾಗಬಾರದು ಮತ್ತು ಮಳೆ ನೀರಿನ ಕಾಲುವೆಗಳು ಮುಚ್ಚಿ ಹೋಗಬಾರದು ಎಂಬ ಒಳ್ಳೆಯ ಉದ್ದೇಶಗಳವೆ. ರೈತರು ಭೂಮಿಯಲ್ಲಿ ನಿರ್ಮಾಣ ಮಾಡಲು sketch ಯಾವುದೆಂದು ಗೊತ್ತಿರುವುದಿಲ್ಲ. ನಮ್ಮ ಭೂಮಿಯಲ್ಲಿ ನಾವು ಏನು ಬೇಕಾದರೂ ಮಾಡಿಕೊಳ್ಳುತ್ತೇವೆ ಎನ್ನುವ ರೀತಿಯಲ್ಲಿ ಇರುತ್ತಾರೆ. ಅನೇಕ ಸದಸ್ಯರು ಹೇಳದಂತೆ poultry, ಆಲೆಮನೆ, ಕುರಿ ಸಾಕಾಣಿಕೆ, ಮನೆ ಮತ್ತು shedಗಳನ್ನು ಕಟ್ಟಿರುತ್ತಾರೆ, ಅನೇಕ ಯೋಜನೆಗಳಗೆ ಅನುಕೂಲಕರವಾದ ರೀತಿಯಲ್ಲಿ ಅವರ ಕೃಷಿ ಭೂಮಿಯಲ್ಲಿಯೇ ಇದೆಲ್ಲವನ್ನು ಮಾಡಿಕೊಂಡು ಲಾಭವನ್ನು ಪಡೆದುಕೊಳ್ಳುತ್ತಿರುತ್ತಾರೆ. ಅವರಿಗೆ ಕಾನೂನಿನ ಅರಿವಿಲ್ಲದೇ ಇದೆಲ್ಲವೂ ಆಗಿರುವುದರಿಂದ, ಈ ಕಾನೂನನ್ನು ಚಾಲೂ ಮಾಡುವಾಗ ಅಧಿಕಾರಿಗಳು ಭೂಮಿ ಇರುವ ಸ್ಥಳಕ್ಕೆ visit ಕೊಟ್ಟು, ಪ್ರಾಮಾಣಿಕವಾಗಿ ಮಾಡಿದರೆ ಮಾತ್ರ ಸಚಿವರ ಒಳ್ಳೆಯ ಉದ್ದೇಶ ಈಡೇರಿದಂತಾಗುತ್ತದೆ. ಇಲ್ಲದಿದ್ದರೆ ಇನ್ನಷ್ಟು ಸಮಸ್ಯೆಗಳಗೆ ಕಾರಣವಾಗುತ್ತದೆ. ಹಾಗಾಗಿ ಕಾಲಮಿತಿಯನ್ನು ಇನ್ನಷ್ಟು ಲಂಬಿಸುವುದು ಒಳ್ಳೆಯದ್ದೆಂದು ಕಾಣುತ್ತದೆ. ಅನೇಕ ಸಮಸ್ಯೆಗಳು ಕಂದಾಯ ಇಲಾಖೆಯಲ್ಲಿ ಇವೆ. ಹಿಂದೆ ಇಲಾಖೆಯಲ್ಲಿ staff shortage ಇತ್ಯಾದಿ ಕೊರತೆಗಳ ಬಗ್ಗೆ ಹೇಳದ್ದಾರೆ. ಇನ್ನಷ್ಟು ಕಾಲಮಿತಿ ಬೇಕಾಗಬಹುದು ಹಾಗೂ ಅಧಿಕಾರಿಗಳು ಬಹಳ ಪ್ರಾಮಾಣಿಕವಾಗಿ ಈ ಕೆಲಸ ಮಾಡಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಭೂ ಉಪಯೋಗ ಬದಲಾವಣೆ ಬಗ್ಗೆ ಮಾನ್ಯ ಸಚಿವರು ಸರಳೀಕರಣ ಮಾಡುತ್ತೇನೆ ಎಂದು ಈ ವಿಧೇಯಕವನ್ನು ತಂದಿದ್ದು, ಭೂ ಉಪಯೋಗ ಬದಲಾವಣೆಗೆ ಈಗಾಗಲೇ ನಮ್ಮ ರಾಜ್ಯದಲ್ಲಿ ಬಹಳ ದೀರ್ಘಕಾಲದಿಂದ ಕಾಯ್ದೆ ಇದೆ. ಆದರೆ ಸರಳೀಕರಣ ಮಾಡುವಾಗ ಯಾವುದೇ ಒಬ್ಬ ಅಧಿಕಾರಿ ಒಂದು ವಾರ ಅಥವಾ ಎರಡು ವಾರ ಅಥವಾ ಒಂದು ತಿಂಗಳೊಳಗಾಗಿ ಯಾವುದೇ ದಾಖಲೆಗಳ ಬಗ್ಗೆ ಅವರ ಅನುಮೋದನೆಯನ್ನು ಮತ್ತು ಅವರ ಅಭಿಪ್ರಾಯವನ್ನು ತಿಳಸುವುದನ್ನು ನಿಲ್ಲಿಸದೇ ಬೇಗ ಮಾಡಬೇಕು

ಎಂದು ಹೇಳಿದ್ದಾರೆ. ಇದನ್ನು ತ್ವರಿತಗೊಳಿಸಬೇಕು ಮತ್ತು ಮಾಡಬೇಕು ಎಂಬ ಉದ್ದೇಶ ಮಾನ್ಯ ಸಚಿವರಿಗೆ ಮತ್ತು ಸರ್ಕಾರಕ್ಕೆ ಏಕೆ ಹುಟ್ಟಿತೆಂದು ನನಗೆ ಗೊತ್ತಿಲ್ಲ. ಉದಾಹರಣೆಗೆ ಮಾನ್ಯ ಆಯನೂರು ಮಂಜುನಾಥ್ ರವರು ಹೇಳಿದಂತೆ ನಮ್ಮ ತಂದೆಯವರ ಹೆಸರು ಶ್ರೀ ಹನುಮೇಗೌಡ ಎಂದಿದ್ದು, R.R.T., Section ನಲ್ಲಿ ಹನುಮೇಗೌಡ್ ಎಂದಾಗಿಬಿಟ್ಟಿದೆ. "ಗೌಡ್" ಅಲ್ಲ "ಗೌಡ" ಎಂದು ಬದಲಾವಣೆ ಮಾಡಿಕೊಡಲು ಎರಡು ವರ್ಷಗಳಿಂದ ಅರ್ಜಿ ಮೇಲೆ ಅರ್ಜಿ ಕೊಟ್ಟರೂ ಆಗುತ್ತಿಲ್ಲ. ಮರಿತಿಬ್ಬೇಗೌಡ ಎಂಬುದು ಮರಿತಿಬ್ಬಯ್ಯ ಎಂದಾಗಿದ್ದು, "ತಿಬ್ಬೇಗೌಡ" ಎಂದು ಸೇರಿಸಲು ವಂಶವೃಕ್ಷದಲ್ಲಿ ಈ ರೀತಿ ಇದೆ ಎಂದು ಸಲ್ಲಿಸಿ ಒಂದು ವರ್ಷವಾಗಿದೆ. R.R.T., Section ನಲ್ಲಿ ಲಕ್ಷಾಂತರ ಅರ್ಜಿಗಳು pending ಇವೆ. ಈ ರೀತಿ ಕಾಗುಣಿತ, ಒಕ್ಕಳುಸುಳಿ, ಕೊಂಬು, ದೀರ್ಘ ಬಿಟ್ಟು ಹೋಗಿರುವವರು ಲಕ್ಷಾಂತರ ಇವೆ. ಸುಧಾರಣೆ ತರಲು ಸರ್ಕಾರಗಳಿಂದ ಆಗುತ್ತಿಲ್ಲ. ತಹಶೀಲ್ದಾರ್ ಕಛೇರಿಗೆ ಲಂಚ ಕೊಟ್ಟು ಅಲೆದರೂ ಆಗುತ್ತಿಲ್ಲ, ಆದರೆ ದುಬಾರಿ ಲಂಚ ಕೊಟ್ಟವರ ಕೆಲಸಗಳು ಒಂದು ವಾರದಲ್ಲಿಯೇ ಆಗಿ ಹೋಗುತ್ತವೆ. ಯಾರೂ ಲಂಚ ಕೊಡದಿದ್ದರೆ 2-3 ವರ್ಷಗಳಾದರೂ ಕೆಲಸ ಆಗುವುದಿಲ್ಲ. ನನಗೆ ಉತ್ತರದಲ್ಲಿ ನೀಡಿರುವಂತೆ R.R.T., Section ನಲ್ಲಿ ಲಕ್ಷಾಂತರ ಬಾಕಿ ಇವೆ. ಅಂತಹದ್ದರ ಬಗ್ಗೆ ಸುಧಾರಣೆ ತರಲು ಸರ್ಕಾರ ಚಿಂತನೆ ಮಾಡುತ್ತಿಲ್ಲ. ಮಾನ್ಯ ಸದಸ್ಯರುಗಳು ಹೇಳಿದಂತೆ ಭೂ ಉಪಯೋಗ ಬದಲಾವಣೆ ಮಾಡುವುದರಿಂದ ದೊಡ್ಡ ದೊಡ್ಡ ಕಂಪನಿಗಳು, real estate ನಂತಹವರಿಗೆ ಅನುಕೂಲವಾಗುತ್ತದೆ. ಮಾನ್ಯ ರವಿ ರವರು ಹೇಳಿದಂತೆ ಒಂದು ಪುಟ್ಟ ಮನೆಯನ್ನು revenue site ನಲ್ಲಿ ಕಟ್ಟಿಕೊಂಡಿರುವ ಸಣ್ಣ ಮತ್ತು ಬಡ ಕುಟುಂಬದವರಿಗೆ ಪರಿಹಾರ ಇಲ್ಲ. ತೋಟದ ಮನೆಯಲ್ಲಿ ಒಂದು ಗುಡಿಸಲೋ ಅಥವಾ shed ಹಾಕಿಕೊಂಡಿರುವವರಿಗೆ ಪರಿಹಾರ ಇಲ್ಲ. ಇಂತಹದ್ದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿಲ್ಲ. ನೂರು ರೂಪಾಯಿ ಬಂಡವಾಳ ಹಾಕಿ ಹತ್ತು ಕೋಟಿ ರೂಪಾಯಿ ಮಾಡುವವರಿಗೆ ಬಹಳ ಸರಳೀಕರಣ ಮಾಡಿಕೊಂಡು ಒಂದು ವಾರದಲ್ಲಿಯೇ ಕೊಟ್ಟು ಬಿಡಬೇಕು. ಅಧಿಕಾರಿಗಳು ಈಗ ಇರುವ ಕಾನೂನಿನ ಪ್ರಕಾರ ಒಂದು ಅಥವಾ ಎರಡು ವರ್ಷಗಳಲ್ಲಿ ಭೂ ಪರಿವರ್ತನೆ ಮಾಡಿಕೊಟ್ಟು ಹಣ ತೆಗೆದುಕೊಳ್ಳುತ್ತಿದ್ದಾರೆ. ಈಗ ಒಂದು ವಾರದಲ್ಲಿ ಮಾಡಿಕೊಡಬೇಕೆಂದರೆ ಈಗ ಕೊಡುತ್ತಿರುವ ಲಂಚದ ಹತ್ತು ಪಟ್ಟು ಹೆಚ್ಚು ಹಣವನ್ನು ಕೊಡಬೇಕು. ನಾಳೆ ಸಂಜೆಯೊಳಗೆ records ಕೊಡಬೇಕಾಗಿದೆ ಎಂದರೆ

ಅದಕ್ಕೆ ಒಂದು objection ಹಾಕಿಬಿಡುತ್ತೇನೆ ಎಂದು ಹೇಳುತ್ತಾನೆ. ಆಗ ಏನೂ objection ಹಾಕಬೇಡ, ಹೆಚ್ಚಿನ ಪಟ್ಟಿನ ಇಷ್ಟು ಹಣ ತಲುಪಿಸುತ್ತೇನೆ ಎಂದಾಗ ಏಳು ದಿನದೊಳಗೆ ಸರಿಹೋಗಿ ಬಿಡುತ್ತದೆ. ಹೀಗೆ ನಡೆಯುತ್ತದೆ. ಮಾನ್ಯ ರಮೇಶ್‌ರವರು Buffer Zone ಬಗ್ಗೆ ಹೇಳಿದ್ದು, ಈ ಸಮಸ್ಯೆ ನಗರಗಳಲ್ಲಿ ಹೆಚ್ಚಾಗಿ ಬರುತ್ತಿದೆ. ಆ Buffer Zone ಮಾಡಲು Planning Section ನಲ್ಲಿ ಸರಿಯಾದ ನಿರ್ದೇಶನ ಮತ್ತು ತೀರ್ಮಾನಗಳನ್ನು ಮಾಡಲು ಆಗುತ್ತಿಲ್ಲ. ಈಗ ನನ್ನ 2 ಎಕರೆ ಭೂಮಿಯನ್ನು ಅನ್ಯ ಉದ್ದೇಶಕ್ಕೆ ಮಾಡಿಸಿಕೊಂಡಿರುತ್ತೇನೆ. ಸರ್ಕಾರ ಯಾವುದೋ ಯೋಜನೆಗೆ ನನ್ನ ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುತ್ತದೆ. ನನ್ನದು change of land use ಆಗಿರುವುದಕ್ಕೆ ಸರ್ಕಾರ ಭೂಸ್ವಾಧೀನಕ್ಕೆ ಕೊಡುವ ಹಣ ಎಷ್ಟು ಕೊಡಬೇಕು ಎಂದು ಗೊತ್ತೇ? Change of land use ಆಗದ ಭೂಮಿಗೆ ಬೇರೆ ದರ ಇರುತ್ತದೆ. ಸರ್ಕಾರ ಯಾವುದಾದರೂ ಸಾರ್ವಜನಿಕ ಉದ್ದೇಶಕ್ಕೆ ಭೂಸ್ವಾಧೀನ ಮಾಡಿಕೊಂಡಾಗ Change of land use ಆಗಿರುವಂತಹ ಭೂಮಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಡಬೇಕಾಗಿದೆ. ಉದಾಹರಣೆಗೆ ಬೆಂಗಳೂರು-ಮೈಸೂರಿನ ದಶಪಥ ರಸ್ತೆ ಉದ್ದೇಶಕ್ಕೆ ಸ್ವಾಧೀನಪಡಿಸಿಕೊಂಡ ಭೂಮಿಗಳಲ್ಲಿ ಬದಲಾವಣೆ ಮಾಡಿಕೊಂಡ ಭೂಮಿಯ ಮಾಲೀಕರಿಗೆ ಕೋಟ್ಯಾಂತರ ರೂಪಾಯಿ ಸಿಕ್ಕಿದೆ. ಮೆಟ್ರೋ ಮಾಡಲು ಕೇವಲ 10,000 Sq.ft., ಭೂಮಿಗೆ ರೂ.18 ಕೋಟಿ ಪರಿಹಾರ ನೀಡಲಾಗಿದೆ. ನಾವು ಯಾವ ಜಗತ್ತಿನಲ್ಲಿ ಇದ್ದೇವೆ. ಯಾವುದೋ World Bank ಅಥವಾ ಇನ್ಯಾವುದೋ ಸಾಲ ಬರುತ್ತದೆ ಎಂದು 10,000 Sq.ft., ಜಾಗಕ್ಕೆ ರೂ.18 ಕೋಟಿ ರೂಪಾಯಿಗಳ ಪರಿಹಾರ ಕೊಡಲಾಗಿದೆ.

(ಮುಂದು)

**(1178) 26.12.2022/5.10/ಹೆಚ್‌ವಿ:ಎಂಡಿ**

**ಶ್ರೀ ಮರಿತಿಬ್ಬೇಗೌಡ (ಮುಂದುವರಿದದ್ದು)**

ಸನ್ಮಾನ್ಯ ಸಭಾಪತಿಯವರೇ, ಇವತ್ತು ರಿಯಲ್ ಎಸ್ಟೇಟ್ ಉದ್ದಿಮೆದಾರರಿಗೆ ಮತ್ತು ದೊಡ್ಡದೊಡ್ಡ ಕಾರ್ಖಾನೆಗಳನ್ನು ಹಾಕುವಂತಹವರಿಗೆ ಶೀಘ್ರವಾಗಿ ಭೂ ಪರಿವರ್ತನೆ ಆಗಬೇಕಾಗಿದೆ. ಸರ್ಕಾರ ಏತಕ್ಕೋಸ್ಕರ ಇಷ್ಟೊಂದು ತರಾತುರಿಯಲ್ಲಿ ಈ ವಿಧೇಯಕವನ್ನು ತಂದಿದೆ ಎನ್ನುವುದು ನನಗೆ

ಅರ್ಥವಾಗುತ್ತಿಲ್ಲ. ಕೇಂದ್ರ ಸರ್ಕಾರ ಭೂ ಸುಧಾರಣಾ ಕಾಯಿದೆಯನ್ನು ಜಾರಿಗೊಳಿಸಿ ಸುಮಾರು ಒಂದು ವರ್ಷಗಳ ಕಾಲಾವಧಿಯಲ್ಲಿ ಸುಮಾರು ೮೦೦ ಜನ ರೈತರು ಮರಣ ಹೊಂದಿದ ಹಿನ್ನೆಲೆಯಲ್ಲಿ ಆ ಕಾಯಿದೆಯನ್ನು ವಾಪಸ್ಸು ಪಡೆದುಕೊಂಡಿದೆ. ಆದರೆ, ಡಬ್ಬಲ್ ಎಂಜಿನ್ ಸರ್ಕಾರವೆಂದು ಹೇಳಿಕೊಳ್ಳುವ ರಾಜ್ಯ ಸರ್ಕಾರ ಮಾತ್ರ ಆ ಕಾಯಿದೆಯನ್ನು ವಾಪಸ್ಸು ತೆಗೆದುಕೊಂಡಿಲ್ಲ. ಡಬ್ಬಲ್ ಇಂಜಿನ್ ಸರ್ಕಾರಕ್ಕೆ ಡಬ್ಬಲ್ ರೀತಿಯ ಆಲೋಚನೆಗಳು. ಬಡವರಿಗೆ ಮತ್ತು ಭೂ ಮಾಲೀಕರಿಗೆ ಅನುಕೂಲವಾಗುವಂತಹ ಯಾವುದೇ ಅಂಶಗಳು ಈ ವಿಧೇಯಕದಲ್ಲಿ ಇಲ್ಲ. ಭೂ ಪರಿವರ್ತನೆ ಮಾಡಿಕೊಳ್ಳುವವರು ಹಣವಂತರು. "ಬಂಡವಾಳವನ್ನು ಹಾಕಿ ಹಣವನ್ನು ಹಿಂದಕ್ಕೆ ಪಡೆದುಕೊಳ್ಳುವವರಿಗೆ 7 ದಿನದೊಳಗೆ ಅಥವಾ ಒಂದು ತಿಂಗಳೊಳಗೆ ಮುದ್ರೆ ಒತ್ತಿ ಕೊಡಿ, ಅಧಿಕಾರಿಗಳು ಏನು ಅವರಿಂದ ಪಡೆದುಕೊಳ್ಳಬಹುದು ಅದನ್ನು ಪಡೆದುಕೊಳ್ಳಿ" ಎನ್ನುವುದಕ್ಕೆ ಅನುವು ಮಾಡಿಕೊಡುವ ರೀತಿಯಲ್ಲಿ ಈ ವಿಧೇಯಕವಿದೆ.

ಸನ್ಮಾನ್ಯ ಸಭಾಪತಿಯವರೇ, ತಹಸೀಲ್ದಾರ್ ಕಛೇರಿಗಳಿಗೆ ಆರ್.ಆರ್.ಟಿ. ಶಾಖೆಗೆ ಸಣ್ಣಪುಟ್ಟ ತಿದ್ದುಪಡಿಗಳಿಗಾಗಿ ರೈತರು ಅಲೆದಾಡುತ್ತಿದ್ದಾರೆ. ಇದು ಎಂತಹ ದುರಂತ? ಅವರ ಗೋಳು ಸರ್ಕಾರಕ್ಕೆ ಕೇಳುತ್ತಿಲ್ಲ. ಮಾನ್ಯ ಕಂದಾಯ ಸಚಿವರು ಹತ್ತಾರು ಕಡೆಗಳಲ್ಲಿ ಗ್ರಾಮ ವಾಸ್ತವ್ಯವನ್ನು ಹೂಡಿದ್ದಾರೆ. ಆ ಗ್ರಾಮ ವಾಸ್ತವ್ಯದಲ್ಲಿ ಅವರೇ ಪ್ರತ್ಯೇಕ್ಷವಾಗಿ ರೈತರ ಸಮಸ್ಯೆಗಳನ್ನು ನೋಡಿದ್ದಾರೆ ಮತ್ತು ಆಲಿಸಿದ್ದಾರೆ. ಆರ್.ಆರ್.ಟಿ. ಶಾಖೆಯ ಮತ್ತು ಕಂದಾಯ ಇಲಾಖೆಯ ಸಮಸ್ಯೆಗಳು ಬಹಳಷ್ಟಿವೆ. ಇವರಿಂದ ಹತ್ತು ವರ್ಷಗಳಾದರೂ ಸಹ ಸರ್ವೆ ಮಾಡಿ ಪಹಣಿ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಹದ್ದುಬಸ್ತನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇಂತಹ ಹಲವಾರು ಜ್ವಲಂತ ಸಮಸ್ಯೆಗಳು ಕಂದಾಯ ಇಲಾಖೆಯಲ್ಲಿದೆ. ರೈತರು ಬಹಳ ಸಂಕಷ್ಟದಲ್ಲಿದ್ದಾರೆ, ಅವರುಗಳು ದಿನೇದಿನೇ ರೊಚ್ಚಿಗೇಳುತ್ತಿದ್ದಾರೆ. ರೈತರು ಯಾರೂ ಸಹ ಶ್ರೀಮಂತರಲ್ಲ. ಪರಿಸ್ಥಿತಿ ಹೇಗಿದೆಯೆಂದರೆ, ಐವತ್ತು ಎಕರೆ ಜಮೀನುದಾರನು ಸಹ ಇವತ್ತು ಬಡವನಾಗಿದ್ದಾನೆ. ಐವತ್ತು ಎಕರೆ ಜಮೀನು ಇದ್ದು, ಒಬ್ಬನೇ ಮಗ ಇದ್ದರೂ ಸಹ ಆ ಮಗನಿಗೆ ಹೆಣ್ಣು ಕೊಡಲು ಯಾರೂ ಮುಂದೆ ಬರುತ್ತಿಲ್ಲ. "ನಮ್ಮ ಹುಡುಗಿ ಒಪ್ಪುತ್ತಿಲ್ಲ" ಎಂದು ಹೆಣ್ಣಿನ ಕಡೆಯವರು ಹೇಳುತ್ತಾರೆ. ಅದೇ ಖಾಯಂ ಆಗಿರದ ಅಟೆಂಡರ್ ಕೆಲಸವಿದ್ದರೂ, "ನನ್ನ ಮಗನಿಗೆ ಖಾಯಂ ಅಟೆಂಡರ್ ಕೆಲಸವಿದೆ" ಎಂದು ಸುಳ್ಳು ಹೇಳಿದರೆ ಅಂತಹವರಿಗೆ ಹೆಣ್ಣು ಕೊಡುತ್ತಾರೆ. ಆದರೆ,

ರೈತನ ಮಗನಿಗೆ ಹೆಣ್ಣು ಕೊಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ನಾಡಿನ, ಈ ದೇಶದ ರೈತ ಇದ್ದಾನೆ. ಆತನ ದುಃಖ ದುಮ್ಮಾನಗಳನ್ನು ಪರಿಹರಿಸುವಂತಹ ಕೆಲಸವನ್ನು ರೈತನ ಮಗನಾಗಿರುವ ನಮ್ಮ ಕಂದಾಯ ಸಚಿವರು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ, ಆದರೆ, ಅದು ಸುಳ್ಳಾಯಿತು. ಮಾನ್ಯ ಆಯನೂರು ಮಂಜುನಾಥ್‌ನವರು ಮಾತನಾಡುತ್ತಾ, ರೇರಾ ಬಗ್ಗೆ ಪ್ರಸ್ತಾಪ ಮಾಡಿದ್ದರು. ಕೇಂದ್ರ ಸರ್ಕಾರ ರೇರಾ ಕಾಯಿದೆಯನ್ನು ಜಾರಿಗೆ ತಂದಿದೆ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ವಿಧೆಯಕದಲ್ಲಿರುವ ಅಂಶಗಳ ಮೇಲೆ ಮಾತನಾಡಿ. ಬೇರೆ ಸದಸ್ಯರು ಮಾತನಾಡಿರುವುದನ್ನೇ ಪುನಃ ಉಲ್ಲೇಖ ಮಾಡುವಂತಹ ಅವಶ್ಯಕತೆಯಿಲ್ಲ. ವಿಧೇಯಕಕ್ಕೆ ಸಂಬಂಧಪಟ್ಟ ಬೇರೆ ಅಂಶಗಳಿದ್ದರೆ ಮಾತನಾಡಿ. ಅದನ್ನು ಬಿಟ್ಟು ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡಿರುವುದನ್ನು, ಮಾನ್ಯ ತಿಪ್ಪೇಸ್ವಾಮಿಯವರು ಮಾತನಾಡಿರುವುದನ್ನು ಉಲ್ಲೇಖ ಮಾಡುತ್ತಾ, ಸಮಯವನ್ನು ಹಾಳು ಮಾಡುವುದು ಬೇಡ. ಪಾಯಿಂಟ್‌ಗೆ ಬನ್ನಿ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ರೈತರ ಸಂಕಷ್ಟಗಳ ಬಗ್ಗೆ ಮಾತನಾಡುತ್ತಿದ್ದೇನೆ. ಕಂದಾಯ ಇಲಾಖೆ ಎನ್ನುವುದು ಸಾಮಾನ್ಯ ಬಡ ರೈತನ ಇಲಾಖೆಯಾಗಿದೆ. ಈ ವಿಧೇಯಕ ಬಡ ರೈತನಿಗೆ ಸಂಬಂಧಪಟ್ಟಿದೆ. ಈ ವಿಧೇಯಕದಲ್ಲಿರುವ ಅಂಶಗಳನ್ನು ಜಾರಿಗೆ ತಂದರೆ, ಬಡ ರೈತರು ಭೂಮಿಯನ್ನು ಕಳೆದುಕೊಂಡು ಭಿಕಾರಿಗಳಾಗುತ್ತಾರೆ ಎನ್ನುವ ಅಂಶವನ್ನು ನಾನು ಸರ್ಕಾರಕ್ಕೆ ಮನದಟ್ಟು ಮಾಡುತ್ತಿದ್ದೇನೆ. ಈ ಕಾಯಿದೆ ಶ್ರೀಮಂತರ ಪರವಾಗಿದೆ ಮತ್ತು ಅಧಿಕಾರಿಗಳನ್ನು ಇನ್ನಷ್ಟು ಭ್ರಷ್ಟರನ್ನಾಗಿ ಮಾಡುತ್ತಿದೆ. ಉದಾಹರಣೆಗೆ ಹೇಳಬೇಕಾದರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಒಂದು ಸುತ್ತೋಲೆಯನ್ನು ಹೊರಡಿಸಿದ್ದರು."ಯಾವುದೇ ಅರ್ಜಿ ಬಂದರೂ ಒಂದು ವಾರದೊಳಗಾಗಿ ಅದರ ಸಾಧಕಬಾಧಕಗಳ ಬಗ್ಗೆ ಮಾಹಿತಿಯನ್ನು ಕೊಡದೇ ಹೋದರೇ ನಿಮ್ಮನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ" ಎಂದು ಹೇಳಿದ್ದರು. ಈ ನಾಡಿನಲ್ಲಿ ಇಂತಹದ್ದು ಯಾವುದಾದರು ನಡೆದಿದೆಯೇ? ಇತ್ತೀಚಿನ ಸರ್ಕಾರಗಳು "ಸಕಾಲ" ಎನ್ನುವುದನ್ನು ಜಾರಿಗೆ ತಂದಿವೆ. "ಸಕಾಲ"ದಲ್ಲಿ ಇಷ್ಟು ದಿನದೊಳಗೆ ಆ ಕೆಲಸವಾಗಬೇಕು ಎಂದು ಇದೆ. "ಸಕಾಲ" ಜಾರಿಗೆ ಬಂದ ಮೇಲೆಯೂ ರೈತರಿಗಾಗಲೀ ಅಥವಾ

ಬಡವರಿಗಾಗಲೀ ನಿರ್ದಿಷ್ಟ ಅವಧಿಯೊಳಗೆ ಅವರ ಅರ್ಜಿಗಳಿಗೆ ಪರಿಹಾರ ಸಿಗುತ್ತಿಲ್ಲ. ಕಂದಾಯ ಇಲಾಖೆಯಲ್ಲಿ ನಾವು ಬ್ರಿಟೀಷರ ಕಾಲದ ದಾಖಲೆಗಳನ್ನು ಇಟ್ಟುಕೊಂಡಿದ್ದೇವೆ. ಅವುಗಳನ್ನು ಹುಡುಕಿ ತೆಗೆದು ಸರಿಪಡಿಸುವುದಕ್ಕೆ ಬಹಳಷ್ಟು ಸಮಯ ಬೇಕಾಗುತ್ತದೆ. ಸರ್ಕಾರ ಇಂತಹ ಆತುರದ ನಿರ್ಧಾರಗಳನ್ನು ಮಾಡಿದರೆ, ದಗ್ಗಾಕೋರರಿಗೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ಈ ವಿಧೇಯಕ ಬಡ ರೈತರನ್ನು ಕಿತ್ತು ತಿನ್ನುವಂತಹ ವಿಧೇಯಕವಾಗಿದೆ; ಹಣವಂತರನ್ನು ಇನ್ನೂ ಕುಬೇರರನ್ನಾಗಿ ಮಾಡುವಂತಹ ವಿಧೇಯಕವಾಗಿದೆ. ಅಧಿಕಾರಿಗಳನ್ನು ಇನ್ನಷ್ಟು ಭ್ರಷ್ಟರನ್ನಾಗಿ ಮಾಡುವಂತಹ ವಿಧೇಯಕವಾಗಿದೆ. ಆದ್ದರಿಂದ ಈ ವಿಧೇಯಕಕ್ಕೆ ನನ್ನ ಒಪ್ಪಿಗೆ ಇಲ್ಲವೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಸುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರ ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕವನ್ನು ತಂದಿದೆ. ಮಾನ್ಯ ಮರಿತಿಬ್ಬೇಗೌಡರು ಹೇಳರುವುದನ್ನೇ ನಾನು ಹೇಳಬೇಕೆಂದು ಇದ್ದೆ.

**ಉಪ ಸಭಾಪತಿಯವರು:-** ಬೇರೆಯವರು ಮಾತನಾಡಿರುವುದನ್ನೇ ಪುನಾರಾವರ್ತನೆ ಮಾಡುವುದು ಬೇಡ.

**ಶ್ರೀ ಟಿ.ಎ.ಶರವಣ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಅಶೋಕ್‌ರವರು ಕಂದಾಯ ಸಚಿವರಾದ ಮೇಲೆ, ಕಂದಾಯ ಇಲಾಖೆಯಲ್ಲಿ ಬಹಳಷ್ಟು ಸುಧಾರಣೆಗಳನ್ನು ತಂದಿದ್ದಾರೆ. ಅದರ ಬಗ್ಗೆ ಎರಡು ಮಾತಿಲ್ಲ. ಗ್ರಾಮ ವಾಸ್ತವ್ಯ ಮತ್ತು ಬೇರೆಬೇರೆ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಇಲ್ಲಿರುವಂತಹ ಪ್ರಶ್ನೆ ಏನೆಂದರೆ, ಉದಾಹರಣೆಗೆ ಸರ್ವೆ ನಂಬರ್ 15ರಲ್ಲಿ 5 ಎಕರೆ ಜಮೀನು ಇದ್ದರೆ, ನನ್ನ ಭಾಗಕ್ಕೆ 2 ಎಕರೆ ಜಮೀನು ಬಂದಿರುತ್ತದೆ. ನಾನು ಅದನ್ನು ಭೂ ಪರಿವರ್ತನೆ ಮಾಡಿಸಿಕೊಳ್ಳುತ್ತೇನೆ. ಈ ಭೂ ಪರಿವರ್ತನೆ ಎನ್ನುವುದು ಏಳು ದಿನಗಳೊಳಗಾಗಿ ಅಥವಾ ಒಂದು ತಿಂಗಳೊಳಗಾಗಿ ತನ್ನಿಂದ ತಾನೇ ಜಿಲ್ಲಾಧಿಕಾರಿಗಳ ಬಳಿ ಹೋಗದೇ, ಆನ್‌ಲೈನ್‌ನಲ್ಲಿ ಇ-ಸಹಿ ಮೂಲಕ ಆಗುತ್ತದೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಅದರ ಮುಂದುವರೆದ ಭಾಗವಾಗಿ ಸರ್ವೆ ಇಲಾಖೆಯವರಿಗೆ ಸೆಕ್ಷನ್ 11(ಎ) ಪ್ರಕಾರ ಸ್ಕೆಚ್‌ಗೆ ಬರುತ್ತದೆ. ಎಷ್ಟು ದಿನಗಳಲ್ಲಿ ಅವರು ಸ್ಕೆಚ್ ಮಾಡಿಕೊಡುತ್ತಾರೆ? ಕಂದಾಯ ಇಲಾಖೆಯವರು ಭೂ ಪರಿವರ್ತನೆಯನ್ನು

ಮಾಡಿಕೊಟ್ಟರೂ ಸಹ ಕೆಲಸವಾಗುವುದಿಲ್ಲ. ಜಾಯಿಂಟ್ ಲ್ಯಾಂಡ್‌ಗೆ ರೆವಿನ್ಯೂ ಸ್ಕೆಚ್ ಬೇಕೇ ಬೇಕಾಗುತ್ತದೆ. ಸ್ಕೆಚ್ ಆಗದೇ ಹೋದರೆ ರಿಜಿಸ್ಟ್ರೇಷನ್ ಆಗುವುದಿಲ್ಲ. ಇದರ ಬಗ್ಗೆ ಏನು ಸುಧಾರಣೆಗಳನ್ನು ತರಲಾಗುತ್ತದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ವಿಧೇಯಕದ ಪುಟ ಸಂಖ್ಯೆ:೦3ರಲ್ಲಿ "......ಒಂದು ಸಾವಿರ ರೂಪಾಯಿಗಳಿಗೆ ಬದಲಾಗಿ ಒಂದು ಲಕ್ಷ ರೂಪಾಯಿಗಳು ಎನ್ನುವ ಪದಗಳನ್ನು ಪ್ರತಿರೂಪಿಸುವುದು" ಎಂದು ಇದೆ.

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ಒಂದು ಸಾವಿರ ರೂಪಾಯಿಗಳ ದಂಡಕ್ಕೆ ಬದಲಾಗಿ ಒಂದು ಲಕ್ಷ ರೂಪಾಯಿಗಳ ದಂಡವನ್ನು ವಿಧಿಸಲಾಗಿದೆ.

**ಶ್ರೀ ಟಿ.ಎ.ಶರವಣ:-** ಸನ್ಮಾನ್ಯ ಸಭಾಪತಿಯವರೇ, ಒಂದು ಸಾವಿರಕ್ಕೆ ಬದಲಾಗಿ ಒಂದು ಲಕ್ಷ ರೂಪಾಯಿಗಳ ದಂಡ ವಿಧಿಸಿರುವುದು ಎಷ್ಟರ ಮಟ್ಟಿಗೆ ಸರಿ? ಅಂದರೆ, 25 ರೂಪಾಯಿಗಳಿಗೆ 2500 ರೂಪಾಯಿಗಳೆಂದು ಹೇಳಿದ್ದಾರೆ. ಬಫರ್ ಝೋನ್‌ಗೆ ಸರ್ಕಾರ ಅನುಮತಿಯನ್ನು ನೀಡಬಾರದು ಎನ್ನುವುದು ನನ್ನ ಸಲಹೆಯಾಗಿದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ಇಲ್ಲಿ ಬಫರ್ ಝೋನ್ ಎನ್ನುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ.

**ಶ್ರೀ ಟಿ.ಎ.ಶರವಣ:-** ಸನ್ಮಾನ್ಯ ಸಭಾಪತಿಯವರೇ, ಭೂ ಪರಿವರ್ತನೆಯಾದ ಮೇಲೆ ಇದು ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಹೋಗುತ್ತದೆ. ಅಲ್ಲಿ ಯಾವುದೇ ರೀತಿಯ ಸಂಪನ್ಮೂಲಗಳೇ ಇರುವುದಿಲ್ಲ. ಯಾವ ಜಾಗ ಟಿ.ಎಂ.ಸಿ., ಸಿ.ಎಂ.ಸಿ., ನಗರಪಾಲಿಕೆಯ ವ್ಯಾಪ್ತಿಗೆ ಬರುವುದಿಲ್ಲ, ಇಂತಹವುಗಳನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಟ್ಟರೆ, ಅಲ್ಲಿ ಪ್ಲಾನ್‌ಗೆ ಅನುಮೋದನೆ ಪಡೆದುಕೊಳ್ಳುವುದು ಮತ್ತೊಂದು ಮಗದೊಂದು ಮಾಡಿಕೊಡುವುದಕ್ಕೆ ಅವರಲ್ಲಿ ಸಂಪನ್ಮೂಲಗಳ ಕೊರತೆ ಇದೆ. ಏನಾದರು ಕೇಳಿದರೆ, ಸರ್ವರ್ ಡೌನ್ ಅಥವಾ ಸಿಸ್ಟಂ ವರ್ಕ್ ಆಗುತ್ತಿಲ್ಲವೆಂದು ಹೇಳಿ ತಿಂಗಳಾನುಗಟ್ಟಲೆ ಅಲ್ಲ, ವರ್ಷಾನುಗಟ್ಟಲೆ ಅಲೆದಾಡಿಸುತ್ತಾರೆ. ಆದರೂ ಏನು ಕೆಲಸವಾಗುವುದಿಲ್ಲ.

ಇದರ ಬಗ್ಗೆಯೂ ಮಾನ್ಯ ಕಂದಾಯ ಸಚಿವರು ಗಮನಹರಿಸಬೇಕಾಗಿದೆ ಎನ್ನುವ ಸಲಹೆಗಳನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಕೇಶವ ಪ್ರಸಾದ್ ಎಸ್(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂಕಂದಾಯ ಎರಡನೆಯ ತಿದ್ದುಪಡಿ ವಿಧೇಯಕ 2022 ಅನ್ನು ನಾನು ಅನುಮೋದಿಸುತ್ತಿದ್ದೇನೆ. ಈ ವಿಧೇಯಕದಲ್ಲಿ ತಂದಿರುವಂತಹ ಅಂಶಗಳನ್ನು ಹೆಚ್ಚು ಪ್ರಚಾರ ಮಾಡಬೇಕೆನ್ನುವುದು ನನ್ನ ಸಲಹೆಯಾಗಿದೆ. ಏನೇನು ನಿಯಮಗಳನ್ನು ಸರಳೀಕರಣಗೊಳಿಸಲಾಗಿದೆ ಎನ್ನುವುದು ಸಾರ್ವಜನಿಕರಿಗೆ ತಿಳಿಯಬೇಕಾಗಿದೆ. ಅವರಿಗೇನಾದರು ಕಾನೂನಿನ ಬೆಂಬಲ ಬೇಕಾದರೆ, ಅದನ್ನು ಸರ್ಕಾರದಿಂದ ಉಚಿತವಾಗಿ ದೊರಕಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಎಷ್ಟು ಅರ್ಜಿಗಳು ಬಂದಿವೆ; ಎಷ್ಟು ವಿಲೇವಾರಿಯಾಗಿವೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಒಂದು ಪೋರ್ಟಲ್ ಬೇಕಾಗುತ್ತದೆ. ಅದು ಪಬ್ಲಿಕ್ ಡೊಮೈನ್‌ನಲ್ಲಿ ಇದ್ದು ಎಲ್ಲರೂ ತಿಳಿದುಕೊಳ್ಳುವಂತಾಗಬೇಕು ಎನ್ನುವ ಸಲಹೆಗಳನ್ನು ನೀಡುತ್ತಾ, ಸದರಿ ವಿಧೇಯಕಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದೇನೆ.

(ಮುಂದುವರಿದಿದೆ)

(1179) 26.12.2022 5.20 ಪಿಕೆ:ಎಂಡಿ

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ; ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ನನಗೆ ಈಗ ತಲೆ ಕೆರೆದುಕೊಳ್ಳಬೇಕು ಎನ್ನುವ ಹಾಗೆ ಆಗಿಬಿಟ್ಟಿದೆ. ವಿಧಾನಸಭೆಯಲ್ಲಿ ಮಾತನಾಡಿದವರು 8 ಜನ. ಆ 8 ಜನರೂ ಕಾಂಗ್ರೆಸ್ ಪಕ್ಷದವರು. ಅವರೆಲ್ಲರೂ ಈ ವಿಧೇಯಕವನ್ನು ಸ್ವಾಗತ ಮಾಡಿದರು. ಹಿಂದೆಯೂ ಈ ವಿಧೇಯಕವನ್ನು ತರಲಾಗಿತ್ತು; ಬಹುಶಃ ಮಾನ್ಯ ಹರಿಪ್ರಸಾದ್‌ರವರಿಗೆ ಗೊತ್ತಿಲ್ಲ ಎಂದು ಭಾವಿಸುತ್ತೇನೆ. Deemed ಎನ್ನುವ ಪದವನ್ನು ತಂದವರೇ ಕಾಂಗ್ರೆಸ್‌ನವರು. ಒಂದು ಜಾಗವನ್ನು ಪರಿವರ್ತನೆ ಮಾಡುವುದಕ್ಕೆ ಹಿಂದೆ ವರ್ಷಾನುಗಟ್ಟಲೆ ಆಗುತ್ತಿತ್ತು. ಅದನ್ನು 120 ದಿನಕ್ಕೆ ಇಳಿಸಿದವರೂ ಇವರೇ; online conversion

ತಂದವರೂ ಇವರೇ. ಆದರೆ ಈಗ ಇದು ಸರಿಯಿಲ್ಲ ಎಂದು ಹೇಳುತ್ತಿದ್ದಾರೆ. ಆ ವಿಷಯವನ್ನು ಅಮೇಲೆ ಮಾತನಾಡೋಣ. ನಮ್ಮ ಇತರ ಸದಸ್ಯರು ಮಾತನಾಡುತ್ತಾ ವಿಧೇಯಕಕ್ಕೆ ಸಂಬಂಧಪಡದೇ ಇರುವಂತಹ ವಿಚಾರಗಳನ್ನೂ ಸಹ ಹೇಳಿದರು. RERA (Real Estate Regulatory Authority) ಗೂ ಈ ವಿಧೇಯಕಕ್ಕೂ ಸಂಬಂಧ ಇಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹಿಂದೆ ಈ ಅಂಶಗಳಿಗೆ ಕಾಂಗ್ರೆಸ್ ಪಕ್ಷದವರು ಬೆಂಬಲ ಕೊಟ್ಟರು ಎನ್ನುವ ಮಾತನ್ನು ಹೇಳಿದರು. ರೆವಿನ್ಯೂ ಡಿಪಾರ್ಟ್‌ಮೆಂಟ್ ಸೇರಿದಂತೆ ಕೆಲವು ಡಿಪಾರ್ಟ್‌ಮೆಂಟ್‌ಗಳಿಗೆ ಎಲ್ಲಾ ಪಕ್ಷದ ಸರ್ಕಾರಗಳು ಬೆಂಬಲ ಕೊಡುತ್ತಿರುತ್ತವೆ. ನಾನು ನನ್ನ ಅನಿಸಿಕೆಗಳನ್ನು ಹೇಳಿದೆ. ಹಿಂದೆ ತಂದಿದ್ದ ಅಂಶಗಳ ಬಗ್ಗೆ ಏನು ಹೇಳಿದ್ದರೋ ಅದನ್ನೇ ನಾನು ಇಲ್ಲಿ ಹೇಳಬೇಕು ಎಂದಿಲ್ಲ. ನಾನು ಭಿನ್ನವಾಗಿ ಹೇಳಬೇಕಾದುದನ್ನು ಹೇಳಿದ್ದೇನೆ.

**ಶ್ರೀ ಆರ್.ಅಶೋಕ್:-** ನಾನು ಅದನ್ನು ಸ್ವಾಗತ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದೆ. ಯಾವಾಗಲೂ ಭಿನ್ನಾಭಿಪ್ರಾಯಗಳು ಇರಬೇಕು, ಅಭಿಪ್ರಾಯ ಭೇದ ಇದ್ದಾಗಲೇ ಒಳ್ಳೆಯ ವಿಚಾರಗಳು ಬರುತ್ತವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ನಾನು ತಾಂತ್ರಿಕವಾಗಿ ಇದಕ್ಕೆ ಬೆಂಬಲ ಕೊಡುತ್ತೇನೆ; ಜನಸಾಮಾನ್ಯರ ವಿಚಾರ ಬಂದಾಗ ಇದಕ್ಕೆ ವಿರೋಧ ಮಾಡಬೇಕಾಗುತ್ತದೆ ಎಂದು ಹೇಳಿದ್ದೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ರಾಜಕಾಲುವೆ, ಸರ್ಕಾರಿ ಜಮೀನು, ಕೆರೆಗಳು, ರಸ್ತೆಗಳು, ಬಫರ್ ಜೋನ್ ಇವುಗಳಿಗೆ ಇದು ಅನ್ವಯವಾಗುವುದೇ ಇಲ್ಲ. ಬಫರ್ ಜೋನ್‌ಗೆ ಸಂಬಂಧಪಟ್ಟಂತೆ NGT (National Green Tribunal) order ಆಗಿದೆ. ಹಿಂದಿನ ಸರ್ಕಾರಗಳು, ಬಫರ್ ಜೋನ್ ಕೆರೆಗೆ ಎಷ್ಟಿರಬೇಕು, ರಾಜಕಾಲುವೆಗೆ ಎಷ್ಟಿರಬೇಕು ಎಂಬುದನ್ನು ಫಿಕ್ಸ್ ಮಾಡಿತ್ತು. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದೇನೆಂದರೆ, ಇದನ್ನು ಒಂದೇ ದೃಷ್ಟಿಕೋನದಲ್ಲಿ ನೋಡುವುದಕ್ಕೆ ಹೋಗಬೇಡಿ. ಇನ್ನೊಂದು ದೃಷ್ಟಿಯಿಂದಲೂ ನೋಡಬೇಕು. ಕೆಲವು ರೈತರು ತಮ್ಮ ಜಮೀನುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅವರಿಗೆ ಲೋನ್

ಸಿಗುವುದಿಲ್ಲ, ಕರೆಂಟ್ ಪಡೆದುಕೊಳ್ಳಬೇಕಾದರೂ ಅಲೆಯಬೇಕಾಗುತ್ತದೆ. ನಾವು ದಾರಿಯುದ್ದಕ್ಕೂ ಹೋಗುತ್ತಿದ್ದರೆ ಎಷ್ಟು ಲಕ್ಷ ರೆವಿನ್ಯೂ ಸೈಟ್‌ಗಳು ಇವೆ ಎನ್ನುವುದು ಗೊತ್ತಾಗುತ್ತದೆ, ಅದನ್ನು ಲೆಕ್ಕ ಹಾಕುವುದಕ್ಕೂ ಆಗುವುದಿಲ್ಲ. 10-15 ಅಡಿ ರಸ್ತೆಗಳು ಇದ್ದು ಅಲ್ಲಿ ಒಂದು ಲಾರಿ ಹೋಗುವುದಕ್ಕೆ ಆಗುವುದಿಲ್ಲ. ಹಿಂದೆ conversion ಗೋಸ್ಕರ 6 ತಿಂಗಳು ಅಲೆಯಬೇಕಾಗುತ್ತಿತ್ತು. 6 ತಿಂಗಳು ಏಕೆ ಅಲೆಯಬೇಕು? ಹಿಂದೆ ರೈತ ಜಮೀನು ತೆಗೆದುಕೊಳ್ಳುತ್ತಿದ್ದ, ರಸ್ತೆ ಮಾಡುತ್ತಿದ್ದ, ನಂತರ ಮಾರಾಟ ಮಾಡಿಬಿಡುತ್ತಿದ್ದ. ಇದರಿಂದ ಸರ್ಕಾರಕ್ಕೆ ನಯಾ ಪೈಸಾ ಬರುತ್ತಿರಲಿಲ್ಲ. ಆದರೆ ನಾವು ರಸ್ತೆ, ನೀರು ಈ ರೀತಿ ಎಲ್ಲಾ ಸೌಲಭ್ಯಗಳನ್ನು ಕೊಟ್ಟಿದ್ದೇವೆ. ಆದರೆ ಸರ್ಕಾರಕ್ಕೆ ಒಂದು ನಯಾ ಪೈಸೆ ಕಟ್ಟುತ್ತಿಲ್ಲ. ಕನಿಷ್ಠ ಭೂಪರಿವರ್ತನೆಯಾದರೆ, conversion order ನಲ್ಲೇ ನಾವು, ಇಂತಿಷ್ಟು ಜಾಗವನ್ನು ರಸ್ತೆಗೆ ಬಿಡಲೇಬೇಕು; ಪಾರ್ಕ್‌ಗೆ ಜಾಗ ಬಿಡಬೇಕು, ಇವೆಲ್ಲವನ್ನು ಸರ್ಕಾರದ ವಶಕ್ಕೆ ಕೊಡಬೇಕು ಎಂದು ಹೇಳುತ್ತೇವೆ. ಇವತ್ತು ಲಕ್ಷಾಂತರ ಕೇಸ್‌ಗಳು ಕೋರ್ಟ್‌ನಲ್ಲಿವೆ. ರೆವಿನ್ಯೂ ಸೈಟ್ ಮಾಡಿ ಮಾರಾಟ ಮಾಡಿರುತ್ತಾರೆ. ಒಬ್ಬ ಹಳೆಯ ಓನರ್ ರಸ್ತೆಯ ಮಧ್ಯೆ ಕಾಂಪೌಂಡ್ ಹಾಕುತ್ತಾನೆ; ಮನೆ ಕಟ್ಟಿರುತ್ತಾನೆ; ಇದು ನನ್ನದು ಎಂದು ಹೇಳುತ್ತಾನೆ. ಏಕೆ? ಏಕೆಂದರೆ ಇವತ್ತಿಗೂ ಆ ಜಾಗ ಪಹಣಿಯಲ್ಲಿ ರೆವಿನ್ಯೂ ಎಂದೇ ಇದೆ. ಭೂಪರಿವರ್ತನೆ ಆಗಿದ್ದರೆ, ಅದರ ಆದೇಶದ ರೀತ್ಯಾ ರಸ್ತೆಗಳೆಲ್ಲವೂ ಸರ್ಕಾರದ ವಶಕ್ಕೆ ಬಂದುಬಿಡುತ್ತದೆ. ಆದರೆ ಈಗಿನ ಸಂದರ್ಭದಲ್ಲಿ ನಮಗೆ ರೈಟ್ಸ್ ಇಲ್ಲ. ನಾವು ಕೋರ್ಟ್‌ಗಳಿಗೆ ಹೋಗಿ ಉತ್ತರ ಕೊಡುವುದಕ್ಕೆ ಆಗುತ್ತಿಲ್ಲ. ರೆವಿನ್ಯೂ ಜಾಗಗಳೆಲ್ಲ ಆತನ ಹೆಸರಿನಲ್ಲಿಯೇ ಇರುತ್ತದೆ. ಮಾನ್ಯ ಸಭಾಪತಿಯವರೇ, ಎಷ್ಟು ಕೈಗಾರಿಕೆಗಳು ಬರುವುದಕ್ಕೆ ಸಾಧ್ಯವಿದೆ? ವರ್ಷಕ್ಕೆ 10-20 ಕೈಗಾರಿಕೆಗಳು ಬರಬಹುದೇ?

ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿ ವಿಧೇಯಕದಿಂದ ಬಡವರಿಗೂ ಸಹಾಯವಾಗುತ್ತದೆ. ಹಿಂದೆ ಕೋಳಿ ಸಾಕಾಣಿಕೆಗೆ ಭೂಪರಿರ್ತನೆ ಮಾಡಬೇಕು ಎನ್ನುವ ನಿಯಮ ಇತ್ತು. ಈಗ ನಾನು ಅದನ್ನು ತೆಗೆದುಹಾಕಿದ್ದೇನೆ. ದಲಿತರಿಗೆ ನಾವು ಜಮೀನು ಕೊಟ್ಟಾಗ ಅದಕ್ಕೆ PTCL (Prohibition of Transfer of Certain Lands) ಬರುತ್ತದೆ. ಆ ದಲಿತ ತನ್ನ ಜನ್ಮದಲ್ಲಿ ಮನೆ ಕಟ್ಟುವುದಕ್ಕಾಗುವುದಿಲ್ಲ. ಮನೆ ಕಟ್ಟಬೇಕು ಎಂದರೆ, ಕಂದಾಯ ಸಚಿವರಿಗೆ ಅರ್ಜಿ

ಬರಬೇಕು, ಆ ಅರ್ಜಿ ಬರಬೇಕಾದರೆ 2 ವರ್ಷಬೇಕಾಗುತ್ತದೆ. ಅದಕ್ಕೆ ಕಂದಾಯ ಸಚಿವರು ಅನುಮತಿ ಕೊಡಬೇಕಾಗುತ್ತದೆ. ಒಬ್ಬ ದಲಿತ ತನ್ನ 10-20 ಅಡಿ ಮನೆಯನ್ನು ಕಟ್ಟಲು ಲೋನ್ ತೆಗೆಯಬೇಕು ಎಂದರೆ, ಅದರ ಪರಿವರ್ತನೆಗೆ ಕಂದಾಯ ಸಚಿವರ ಅನುಮತಿ ಪಡೆಯಬೇಕಾಗುತ್ತದೆ. ಈಗ ಅದನ್ನು ತೆಗೆದು ಹಾಕಿದ್ದೇನೆ. ಆದರೆ ಆತ ಮಾರುವ ಹಾಗಿಲ್ಲ. ಆತ ಮನೆ ಕಟ್ಟಿಕೊಂಡ ಮೇಲೆ ಅದನ್ನು ಮಾರಾಟ ಮಾಡುವ ಅಧಿಕಾರ ಆತನಿಗೆ ಕೊಟ್ಟಿಲ್ಲ. ಅಲ್ಲೂ PTCL Act ಪ್ರಕಾರ restrict ಮಾಡಿದ್ದೇವೆ. ಮನೆಗೋಸ್ಕರ ಲೋನ್ ತೆಗೆದುಕೊಳ್ಳಬಹುದು; ಸಾಲ ತೆಗೆದುಕೊಳ್ಳಬಹುದು. ಮನೆ ಕಟ್ಟಿಕೊಂಡು ಅವರ ಕುಟುಂಬ ವಾಸವಾಗಿರಬಹುದು; ಆದರೆ ಅದನ್ನು ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ಆ ರೀತಿಯ ಪರಿವರ್ತನೆಯನ್ನು ನಾನು ತಂದಿದ್ದೇನೆ. "ನಮೂನೆ 57"ಕ್ಕೆ ಇನ್ನೊಂದು ವರ್ಷ ಅವಕಾಶ ಮಾಡಿಕೊಟ್ಟಿದ್ದೇನೆ. ಹಿಂದೆ ರಾಜ-ಮಹಾರಾಜರು ಇನಾಮ್ ಆಗಿ ಕೊಟ್ಟಿದ್ದ ಜಾಗವನ್ನು ಯಾರು ಉಳುಮೆ ಮಾಡುತ್ತಿದ್ದಾರೋ ಅದಕ್ಕೆ ಅರ್ಜಿ ಸಲ್ಲಿಸಲು 1 ವರ್ಷ ಅವಕಾಶ ಕೊಟ್ಟಿದ್ದೇನೆ. ಇಂತಹ ಬದಲಾವಣೆಗಳನ್ನು ನಾವು ತಂದಿದ್ದೇವೆ. ಕೆಲವು ಸದಸ್ಯರು ಮಾತನಾಡುತ್ತಾ, ಕಂದಾಯ ಇಲಾಖೆಯಲ್ಲಿ ಲೂಟಿ ನಡೆಯುತ್ತಿದೆ ಎಂದು ಹೇಳಿದರು. ನಾನು ಕಂದಾಯ ಸಚಿವನಾಗಿ 3 ವರ್ಷವಾಗಿದೆ. ಮುಂಚೆ ಇದ್ದ ಕಂದಾಯ ಸಚಿವರ ಬಗ್ಗೆ ಯಾರೂ ಈ ರೀತಿ ಮಾತನಾಡಲಿಲ್ಲ ಹಾಗೂ ಪರಿವರ್ತನೆಯನ್ನೂ ಮಾಡಲಿಲ್ಲ. ನಾನು ಸ್ವಲ್ಪ ಬದಲಾವಣೆ ಮಾಡುತ್ತಿದ್ದೇನೆ; ಅಂದರೆ ನಾನು ಮಾಡುತ್ತಿರುವುದೆಲ್ಲಾ ಸರಿ ಎಂದು ಹೇಳುತ್ತಿಲ್ಲ. ಅಭಿಪ್ರಾಯಗಳಲ್ಲಿ ಭೇದ ಇರಬೇಕು; ಹಾಗಿದ್ದರೆ ಮಾತ್ರ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದು ಪ್ರಜಾಪ್ರಭುತ್ವ. ಅದರ ಪ್ರಕಾರವೇ ನಡೆಯಬೇಕು. ಇಲ್ಲಿ ಯಾರೂ ಶಾಶ್ವತ ಅಲ್ಲ. ಹಿಂದೆ ಈಕಡೆ ಇದ್ದವರು ಎಲ್ಲವೂ ನಾನೇ, ನಾನೇ ಎಂದು ಹೇಳುತ್ತಿದ್ದರು. ಯಾರೂ ಶಾಶ್ವತವಾಗಿರುವುದಕ್ಕೆ ಆಗುವುದಿಲ್ಲ. ಹೋಗುವುದು; ಬರುವುದು ಇದ್ದೇ ಇರುತ್ತದೆ. ಆದರೆ, ಬದಲಾವಣೆಗಳನ್ನು ತರುವಂತಹ ಪ್ರಯತ್ನಗಳನ್ನು ಮಾಡಬೇಕು. ಆ ದೃಷ್ಟಿಯಿಂದ ಮಾಡಿದ್ದೇನೆಯೇ ಹೊರತು ಯಾರಿಗೋ ಸಾಹುಕಾರರಿಗೋಸ್ಕರ ಮಾಡಿಲ್ಲ. ಯಾರು ಕಳ್ಳರಿದ್ದಾರೋ, ಅನಧಿಕೃತ ಲೇಔಟ್ ಮಾಡಿ, 10-20 ಲಕ್ಷ ಸೈಟುಗಳನ್ನು ಮಾಡಿ ಲೂಟಿ ಹೊಡೆದುಬಿಟ್ಟಿದ್ದಾರೆ. ಅವರಿಗೆ ಕಡಿವಾಣ ಹೇಗೆ ಹಾಕಬೇಕು?

**ಡಾ॥ ಕೆ. ಗೋವಿಂದರಾಜ್:-** ಆಗ Planning Authority ಯವರು ಇಂಥದ್ದರ ಕಡೆ ಗಮನಗರಿಸಬೇಕಾಗುತ್ತದೆ.

**ಶ್ರೀ ಆರ್.ಅಶೋಕ:-** ಯಾರು ಮಾರುತ್ತಾರೋ ಆತ ಸಿಕ್ಕಿಹಾಕಿಕೊಳ್ಳುವುದಿಲ್ಲ. ಆತ ಲೇಔಟ್ ಮಾಡಿ, ರೈತನ ಕೈಯಲ್ಲೇ ಸಹಿ ಹಾಕಿಸುತ್ತೇನೆ. ಸಬ್‌ರಿಜಿಸ್ಟರ್ ಕಚೇರಿಯಲ್ಲೂ ರೈತನ ಕೈಯಿಂದಲೇ ಸಹಿ ಹಾಕಿಸುತ್ತಾನೆ. ರಿಯಲ್ ಎಸ್ಟೇಟ್ ಏಜೆಂಟ್ ಎಲ್ಲೂ ಬರುವುದಿಲ್ಲ. ಯಾವುದೇ ಕೋರ್ಟ್‌ಗೆ ಹೋದರು ಕೊನೆಗೆ ರೈತನೇ ಸಿಕ್ಕಿಹಾಕಿಕೊಳ್ಳುತ್ತಾನೆ. ಈ ತರಹದ್ದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಭೂಪರಿವರ್ತನೆ ಮಾಡಿದಾಗ ಅದರಲ್ಲಿ ಕೆಲವು restrictions ಹಾಕಿರುತ್ತೇವೆ. ನೀವು ಏನೇ ಮಾಡಿದರೂ ಅವರು ಬಿಡುವುದಿಲ್ಲ, ಫೈಲ್ ಇಟ್ಟುಕೊಂಡು ಕಾಸು ಕೇಳುತ್ತಾರೆ ಎನ್ನುವ ಮಾತನ್ನು ಮಾನ್ಯ ಸದಸ್ಯರೊಬ್ಬರು ಹೇಳಿದರು. ಆದರೆ ನಾನು ಅಂಥದ್ದೆಲ್ಲವನ್ನೂ ತೆಗೆದುಹಾಕಿದ್ದೇನೆ. ಅವರು ಕೇವಲ ಆರ್.ಟಿಸಿ. ಕೊಡಬೇಕು, ಮ್ಯೂಟೇಷನ್ ಕೊಡಬೇಕು, 11(e) sketch and affidavit ಕೊಡಬೇಕು. Affidavit ನಲ್ಲಿ, ಏನಾದರೂ ಮೋಸ ಮಾಡಿದರೆ ಅದಕ್ಕೆ ಏನು ಶಿಕ್ಷೆ ಎನ್ನುವುದು ಅದರಲ್ಲಿ ನಮೂದು ಆಗಿರುತ್ತದೆ. 11(e) sketch ಅವರು ಮೊದಲೇ ಮಾಡಿಕೊಡಬೇಕಾಗುತ್ತದೆ; ನಂತರ ಮಾಡುವುದಿಲ್ಲ. ಸಬ್‌ಮಿಟ್ ಮಾಡುವುದಕ್ಕೆ ಮುಂಚೆಯೇ ಕೊಡಬೇಕು. ಈ ರೀತಿಯ ಬದಲಾವಣೆಗಳನ್ನು ನಾವು ತಂದಿದ್ದೇವೆ. ಹಲವಾರು ಸದಸ್ಯರುಗಳು ಏನು ಸಲಹೆಗಳನ್ನು ಕೊಟ್ಟಿದ್ದಾರೋ ಅದನ್ನು rules frame ಮಾಡುವಂತಹ ಸಂದರ್ಭದಲ್ಲಿ ಪರಿಶೀಲಿಸಿ ಅಳವಡಿಸುವ ಕೆಲಸ ಮಾಡುತ್ತೇವೆ. ಅಲ್ಲೇ 11(e) sketch ಮಾಡಿಕೊಟ್ಟರೆ ಭೂಪರಿವರ್ತನೆಯ ಆಗುತ್ತದೆ. ಆಮೇಲೆ ಕೊಡುವ ಹಾಗಿಲ್ಲ.

**ಶ್ರೀ ಟಿ.ಎ.ಶರವಣ:-** ಆ ರೀತಿ ಕೊಡುವುದು ತುಂಬಾ ವಿಳಂಬವಾಗುತ್ತಿದೆ. ಇದಕ್ಕೂ ಒಂದು ತಿದ್ದುಪಡಿ ತಂದರೆ ಒಳ್ಳೆಯದು.

**ಶ್ರೀ ಆರ್.ಅಶೋಕ:-** ಅದಕ್ಕೆ ಕಾನೂನನ್ನೇ ಮಾಡಿದ್ದೇವೆ. ಅಲ್ಲದೇ "ಸ್ವಾವಲಂಬಿ" ಎನ್ನುವ ಒಂದು App ಮಾಡಿದ್ದೇವೆ. ಅದು ಇನ್ನೂ ಪ್ರಚಾರಕ್ಕೆ ಬಂದಿಲ್ಲ. ಅದು ಬಂದು 3 ತಿಂಗಳಾಗಿದೆ. ಮೊದಲು ಅಣ್ಣತಮ್ಮಂದಿರು ತಮ್ಮ ಜಮೀನನ್ನು ಭಾಗ ಮಾಡಿಕೊಳ್ಳಬೇಕಾದರೆ ಮೊದಲು sketch

ಮಾಡಿಸಿ, ಸರ್ವೇ ಮಾಡಿಸಿ ನಂತರ ದೀರ್ಘ ಪ್ರಕ್ರಿಯೆಗೆ ಒಳಪಡಬೇಕಾಗುತ್ತಿತ್ತು. ಇದಕ್ಕೆ ವರ್ಷಾನುಗಟ್ಟಲೆ ಆಗುತ್ತಿತ್ತು. ಆದರೆ ಈಗ ರೈತ ನಮ್ಮ ಹತ್ತಿರ sketch ಗೆ apply ಮಾಡಿದರೆ ಆತನಿಗೆ ಸ್ಕೆಚ್ ಕೊಡಲಾಗುತ್ತದೆ. ಅವನು ಲೋಕಲ್ ಇಂಜಿನಿಯರನ್ನು ಇಟ್ಟುಕೊಂಡು ಅಥವಾ ಅವರಿಗೆ ಗೊತ್ತಿದ್ದರೆ ಅವರೇ ತಮ್ಮ ಜಮೀನನ್ನು ಭಾಗ ಮಾಡಿಕೊಂಡು ನಮಗೆ ಸಬ್‌ಮಿಟ್ ಮಾಡಿದರೆ ಅದನ್ನು ನಾವು ಸಬ್‌ರಿಜಿಸ್ಟರ್ ಆಫೀಸಿಗೆ ಕಳುಹಿಸಿ ಕೊಡುತ್ತೇವೆ. ಅದಕ್ಕೋಸ್ಕರವೇ "ಸ್ವಾವಲಂಬಿ" ಎನ್ನುವ App ಮಾಡಿದ್ದೇವೆ. ಆ ಕುರಿತು ಪ್ರಚಾರ ಮಾಡಬೇಕಿದೆ. ರೈತನೇ ತನ್ನ ಜಮೀನನ್ನು ಭಾಗ ಮಾಡಿಕೊಳ್ಳಬಹುದು. ಇದು ರೈತನಿಗೆ ಸಹಾಯವಾಗುತ್ತದೆ. ಸರಳೀಕರಣ ಆಗಬೇಕು, ಭ್ರಷ್ಟಾಚಾರ ಕಡಿಮೆ ಆಗಬೇಕು ಎನ್ನುವುದು ನನ್ನ ಉದ್ದೇಶವಾಗಿದೆ. ಮೊದಲು Village Accountant, Revenue Inspector, Tahasildar, DC ಇಷ್ಟರವರೆಗೆ ಬರಬೇಕಾಗಿತ್ತು. ಈಗ ಎಲ್ಲೂ ಹೋಗುವ ಹಾಗಿಲ್ಲ. ಎಲ್ಲಾ ದಾಖಲೆಗಳು ಡಿಸಿ ಹತ್ತಿರವೇ ಇರುತ್ತದೆ. ಜಮೀನು ಸರ್ಕಾರದ್ದೋ ಅಲ್ಲವೋ, PTCL ಇದು acquire ಆಗಿದೆಯೇ ಅಥವಾ ಇದು ರಾಜಕಾಲುವೆಯಾಗಿದೆಯೇ ಎನ್ನುವ ಎಲ್ಲಾ ವಿವರಗಳು ಅವರ ಹತ್ತಿರ ಇರುತ್ತದೆ. ಅನವಶ್ಯಕವಾಗಿ ರೈತನನ್ನ ಅಲೆಸುವುದು ಸರಿಯಲ್ಲ. ಅದಕ್ಕೋಸ್ಕರ ವ್ಯವಸ್ಥೆಗಳು ಸರಿಹೋಗಬೇಕು ಎನ್ನುವ ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದು, ಇದಕ್ಕೆ ಅನುಮೋದನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು . . .)

(1180)26-12-2022 5.30 ಡಿಎಸ್-ಎಕೆ

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾನು ಏಕೆ ವಿರೋಧ ಮಾಡುತ್ತಿದ್ದೇನೆಂದು ಮಾನ್ಯ ಸಚಿವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದರು. ಕಾನೂನನ್ನು ವಿರೋಧ ಮಾಡುವ ಪ್ರಶ್ನೆ ಬರುವುದಿಲ್ಲ. ಇಲ್ಲಿ ಪ್ರಶ್ನೆ ಇರುವುದೇನೆಂದರೆ, ನಾವು ಕಾನೂನು ಮಾಡಿದಾಗ ಅದು ಯಾರಿಗೆ ಸಹಾಯಕವಾಗಿರುತ್ತದೆ ಎನ್ನುವಂಥದ್ದು. ಕೆಲವು ಕಾನೂನುಗಳನ್ನು ಮೀರಿರುವಂತಹ ಜನಗಳನ್ನು ನಾವು ನೋಡಿರುತ್ತೇವೆ. ಸದ್ಗುರು ಜಗ್ಗಿ ವಾಸುದೇವ ರವರಿಗೆ ಎಷ್ಟೋ ಎಕರೆ ಜಮೀನನನ್ನು ಸರ್ಕಾರ ಕೊಟ್ಟಿದೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ಜಮೀನನ್ನು ನಾವು ಕೊಟ್ಟಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಅದು ಯಾರೇ ಕೊಟ್ಟಿರಲಿ. ಸೆಕ್ಷನ್ 109 ರಲ್ಲಿ ಅವರಿಗೆ ಅಪ್ರೂವ್ ಮಾಡಿದಾಗ ಅಲ್ಲಿ ರಸ್ತೆ ಇದ್ದರೆ ಮಾತ್ರ ಕೊಡುವುದಕ್ಕೆ ಬರುತ್ತದೆ. ಈಗ ಅಲ್ಲಿ ರಸ್ತೆ ಇದೇಯೇ, ಅಲ್ಲಿ ರಸ್ತೆ ಇಲ್ಲ. N.G.T. (National Green Tribunal) clearance ಬೇಕು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಒಬ್ಬರು ನದಿ ದಂಡೆಯಲ್ಲಿ ದೊಡ್ಡ World Culture Festival ಮಾಡಿದ್ದರು. ಅವರಿಗೆ N.G.T. ಐದು ಕೋಟಿ ರೂಪಾಯಿಗಳನ್ನು ದಂಡ ಹಾಕಿದರು. ಇವತ್ತಿಗೂ ಅವರು ದಂಡವನ್ನು ಕಟ್ಟಿಲ್ಲ. ಬಲಾಢ್ಯರು ಎಲ್ಲಾ ಕಾನೂನನ್ನು ಮೀರಿ ನಡೆದುಕೊಳ್ಳುತ್ತಾರೆ. ಆದ್ದರಿಂದ ಬಡವರನ್ನು ಯಾವ ರೀತಿ ರಕ್ಷಣೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಅದಕ್ಕೋಸ್ಕರ ಸರ್ಕಾರ ಮಾಡಿರುವುದು ತಪ್ಪು ಸರಿ ಎನ್ನುವುದು ಆಮೇಲೆ. ಆದರೆ ಈ ವಿಚಾರವನ್ನು ಮಾನ್ಯ ಸಚಿವರು ಆಳವಾಗಿ ಗಮನದಲ್ಲಿಟ್ಟುಕೊಂಡು ಮಾಡಬೇಕೆನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ.

**ಶ್ರೀ ಕೆ.ಪ್ರತಾಪಸಿಂಹ ನಾಯಕ್:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸದ್ಗುರು ಜಗ್ಗಿ ವಾಸುದೇವ ರವರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಸದ್ಗುರು ಜಗ್ಗಿ ವಾಸುದೇವ ರವರ ಬಗ್ಗೆ ಹೇಳುವಾಗ ಅದಕ್ಕೆ ಅವರು ಆಧಾರವನ್ನು ಕೊಡಬೇಕಲ್ಲವೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಆಧಾರ ಸ್ಪಷ್ಟವಾಗಿದೆ. ಸೆಕ್ಷನ್ 109 ಅನ್ನು ಉಲ್ಲಂಘನೆ ಮಾಡಿ ಜಾಗ ಕೊಟ್ಟಿದ್ದಾರೆ. ಆ ರೀತಿ ಜಾಗವನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಕೆ.ಪ್ರತಾಪಸಿಂಹ ನಾಯಕ್:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಸದ್ಗುರು ಜಗ್ಗಿ ವಾಸುದೇವರವರಿಗೆ ಸರ್ಕಾರ ಜಮೀನು ಕೊಟ್ಟಿಲ್ಲ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 3 ರವರೆಗೆ**

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**10. ಗಮನ ಸೆಳೆಯುವ ಸೂಚನೆಗಳು**

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡ, ಶ್ರೀ ಟಿ.ಎ.ಶರವಣ ಮತ್ತು ಶ್ರೀ ಕೆ.ಎ.ತಿಪ್ಪೇಸ್ವಾಮಿ ಅವರುಗಳು ಪ್ರಸ್ತಾಪಿಸ ಬಯಸಿರುವ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿನ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಇನ್ನು ಉತ್ತರ ಬಂದಿಲ್ಲದ ಕಾರಣ ಅದನ್ನು ನಂತರ ತೆಗೆದುಕೊಳ್ಳಲಾಗುವುದು.

ಅ) **ವಿಷಯ: 1975ನೇ ಇಸವಿಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸೆರೆಮನೆವಾಸ ಅನುಭವಿಸಿದವರಿಗೆ ವಿವಿಧ ರಾಜ್ಯಗಳಲ್ಲಿ ನೀಡುತ್ತಿರುವಂತೆ ಪಿಂಚಣಿ ಅಥವಾ ಗೌರವಧನವನ್ನು ನೀಡುವ ಕುರಿತು.**

--------

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 1975ನೇ ಇಸವಿಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸೆರೆಮನೆವಾಸ ಅನುಭವಿಸಿದವರಿಗೆ

ವಿವಿಧ ರಾಜ್ಯಗಳಲ್ಲಿ ನೀಡುತ್ತಿರುವಂತೆ ಪಿಂಚಣಿ ಅಥವಾ ಗೌರವಧನವನ್ನು ನೀಡುವ ಕುರಿತು ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸ್ವಲ್ಪ ಸಮಸ್ಯೆ ಇದೆ. ಬಂದಿರುವಂತಹ ಉತ್ತರದಲ್ಲಿ ಮತ್ತೆ ಚರ್ಚೆ ಇದೆ. ಅದಕ್ಕೋಸ್ಕರ ಇದಕ್ಕೆ ನಾಳೆ ಉತ್ತರವನ್ನು ಕೊಡಿಸುತ್ತೇನೆ.

**ಆ) ವಿಷಯ: ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಪ್ರಕಾರ ಕೊಪ್ಪಳ ನಗರ ವ್ಯಾಪ್ತಿಯಲ್ಲಿರುವ ಲೇಔಟ್‌ಗಳಿಗೆ ಫಾರಂ ನಂ.3 ಅನ್ನು ಸಾರ್ವಜನಿಕರಿಗೆ ವಿತರಿಸದೆ ಇರುವ ಕುರಿತು.**

------

**ಶ್ರೀಮತಿ ಹೇಮಲತಾ ನಾಯಕ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಪ್ರಕಾರ ಕೊಪ್ಪಳ ನಗರ ವ್ಯಾಪ್ತಿಯಲ್ಲಿರುವ ಲೇಔಟ್‌ಗಳಿಗೆ ಫಾರಂ ನಂ.3 ಅನ್ನು ಸಾರ್ವಜನಿಕರಿಗೆ ವಿತರಿಸದೆ ಇರುವ ಕುರಿತು ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯದ ಉದ್ಯಮಗಳ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ)(ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು):-** ಮಾನ್ಯ ಸಭಾಪತಿಯವರೆ,

**(ಸಚಿವರ ಹೇಳಿಕೆ ಪ್ರತಿಯನ್ನು ಲಗತ್ತಿಸಲಾಗಿದೆ)**

(ಮುಂದು)

(1181) 26/12/2022/ಎಸ್‌ಪಿಆರ್-ಎಕೆ/5:40 (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಹೇಮಲತಾ ನಾಯಕ್(ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಮೂನೆ-3 ಸಿಗದೇ ಇರುವ ಅಲ್ಲಿನ ಜನರಿಗೆ, ವ್ಯಾಪಾರ ವಹಿವಾಟು ಮಾಡುವವರಿಗೆ ಕಷ್ಟವಾಗುತ್ತದೆ. ನಿವೇಶನಗಳನ್ನು ಪಡೆದುಕೊಂಡು ಈಗಾಗಲೇ ಮನೆ ನಿರ್ಮಿಸಿದ ಸರ್ಕಾರಿ ನೌಕರರಿಗೂ ಸಹ ತೊಂದರೆಗೊಳಗಾಗಿದ್ದಾರೆ. ಅಲ್ಲಿನ ಎಲ್ಲಾ ಜಾಗಗಳನ್ನು ಮಾರುವ ಹಾಗೂ ಕೊಂಡುಕೊಳ್ಳುವವರ ಪರಿಸ್ಥಿತಿಯು ನಿಜವಾಗಿಯೂ ಸಹ ಶೋಚನೀಯವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ, ಇವತ್ತಿನ ದಿವಸ ವೃದ್ಧ ತಂದೆ – ತಾಯಿಗಳನ್ನು ನೋಡಿಕೊಳ್ಳಬೇಕಾದರೆ, ಒಬ್ಬ ವ್ಯಕ್ತಿಯು ಒಂದು ಮನೆಯನ್ನು ಮಾರಬೇಕಾಗುತ್ತದೆ. ಹೀಗಾಗಿ ಮಾರುವವನಿಗೂ ಹಾಗೂ ಕೊಂಡುಕೊಳ್ಳುವವನಿಗೂ ಸಹ ನಮೂನೆ – 3 ಅವಶ್ಯಕವಾಗಿದೆ. ಈ ಎಲ್ಲಾ ಕಾರಣಗಳನ್ನು ನೀಡಿ, ನಮೂನೆ-3 ಕೊಡದೇ ಇರುವುದು ಎಷ್ಟರ ಮಟ್ಟಿಗೆ ಸಮಂಜಸವಾದುದು. ಇದಲ್ಲದೇ, ಇತ್ತೀಚೆಗೆ ನಮ್ಮ ಕೊಪ್ಪಳ ನಗರದಲ್ಲಿ 2017 ನೇ ಸಾಲಿನಿಂದ ನಮೂನೆ-3 ಸಿಗದೇ ಇದ್ದ ಕಾರಣದಿಂದಾಗಿ, ಈಗಾಗಲೇ ಸಂಘ ಸಂಸ್ಥೆಗಳು ಹುಟ್ಟಿಕೊಂಡಿವೆ. ಅವರೂ ಸಹ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಮುಂದೆ ಅವುಗಳು ಮೂಲ ಸಂಸ್ಥೆಗಳಾಗುತ್ತವೆ. ಇದೆಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವ ಪರಿಸ್ಥಿತಿಯು ಪ್ರಾರಂಭವಾಗಿದೆ. ಹೀಗಾಗಿ ದಯಮಾಡಿ ಸರ್ಕಾರವು ಇನ್ನು ಮುಂದಾದರೂ ನಮೂನೆ-3 ನ್ನು ನೀಡಿದರೆ ಚೆನ್ನಾಗಿರುತ್ತದೆ. ನಮೂನೆ-3 ನೀಡದೇ ಇರುವುದರಿಂದ ಬಹಳಷ್ಟು ತೊಂದರೆಗಳಾಗಿವೆ. ಗ್ರಾಮಾಂತರ ಭಾಗದಲ್ಲಿನದ್ದನ್ನು ಬಿಟ್ಟು ನಗರ ಪ್ರದೇಶಗಳಲ್ಲಿರುವ ಅಂದರೆ ಭಾಗ್ಯ ನಗರದಲ್ಲಿರುವ ಬಡಾವಣೆಗಳು... ಕೆಲವೊಂದು ಅಕ್ರಮಗಳಾಗಿದ್ದರೂ ಸಹ ಅವುಗಳು ಸರ್ಕಾರದ ಗಮನಕ್ಕೆ ಬಂದರೆ, ಅಲ್ಲಿ ಆ ರೀತಿಯಾಗಿ ಯೋಚನೆ ಮಾಡಿ, ಅವುಗಳ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಲಿ. ಆದರೆ, ಸ್ವತ್ತನ್ನು ಮಾರುವ ಮತ್ತು ಕೊಳ್ಳುವವರಿಗೆ, ಮಧ್ಯಮ ಕುಟುಂಬಸ್ಥರಿಗೆ ಬಹಳಷ್ಟು ಅನಾನುಕೂಲಗಳಾಗಿವೆ. ಹೀಗಾಗಿ ಸರ್ಕಾರವು ದಯಮಾಡಿ ಇದನ್ನು ಪರಿಗಣಿಸಿ, ನಮೂನೆ-3 ನ್ನು ಆದಷ್ಟು ಬೇಗನೇ ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ.)(ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು):-** ಮಾನ್ಯ ಸಭಾಪತಿಯವರೇ, 1998 ನೇ ಸಾಲಿನಿಂದ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದ ನಂತರ, ಅಲ್ಲಿ ಒಟ್ಟಾರೆ 275 ಬಡಾವಣೆಗಳು ನಿರ್ಮಾಣಗೊಂಡಿವೆ. ಆ 275 ಬಡಾವಣೆಗಳ ಪೈಕಿ ನಗರಾಭಿವೃದ್ಧಿ ಪ್ರಾಧಿಕಾರ ಅಥವಾ ಯೋಜನಾ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆದುಕೊಂಡು ಬಡಾವಣೆ ನಿರ್ಮಿಸಿ, ನಿವೇಶನ ಮಾರಾಟ ಮಾಡಿರುವ ಒಟ್ಟು 208 ಬಡಾವಣೆಗಳಿವೆ. ಈ ಪೈಕಿ ಅನಧಿಕೃತವಾಗಿ ಯಾವುದೇ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ, ಪರವಾನಿಗೆ ಇಲ್ಲದೇ ಹಸಿರು ಪ್ರದೇಶ ಅಥವಾ ಕೈಗಾರಿಕೆ ವಲಯ, ಸಾರ್ವಜನಿಕ ಅಥವಾ ಅರೆ ಸಾರ್ವಜನಿಕ ವಲಯ ಅಥವಾ ಕೃಷಿ ಭೂಮಿಗಳಾಗಿರಬಹುದು; ಇಂತಹ ಪ್ರದೇಶಗಳಲ್ಲಿ ಅನಧಿಕೃತವಾಗಿ ಬಡಾವಣೆಗಳನ್ನು ನಿರ್ಮಿಸಿ, ನಿವೇಶನಗಳನ್ನು ಮಾರಾಟ ಮಾಡಿದ್ದಾರೆ. ಇಂತಹವರಿಗೆ ನಾವು ನಮೂನೆ-3 ಅಥವಾ ಇ-ಖಾತೆ ಮಾಡಿ ಕೊಡಲು ಕಾನೂನುಗಳಲ್ಲಿ ಅವಕಾಶವಿಲ್ಲ. ಅಕ್ರಮ-ಸಕ್ರಮ ಕುರಿತಾದ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನೂ ಸಹ ನೀಡಿದೆ. ಹೀಗಾಗಿ ನಾವು 378 ಕಾಯ್ದೆಯನ್ನು ರದ್ದುಗೊಳಿಸಿದ್ದೇವೆ. ಇಂತಹ ಬಡಾವಣೆಗಳಿಗೆ ನಾವು ಹೊಸದಾಗಿ ಜಮೀನು ಜಿಲ್ಲಾಧಿಕಾರಿಗಳಿಂದ ಪರಿವರ್ತಿನೆಗೊಂಡಿರಬೇಕು ಎಂದು ತಿಳಿಸಿದ್ದೇವೆ. 2017-18 ನೇ ಸಾಲಿನ cut-off date ನೊಳಗೆ ಆಗಿರುವವರಿಗೆ ಹೊಸದಾಗಿ ನಮೂನೆ-3 ನೀಡುವ ಬಗ್ಗೆ ನಿನ್ನೆಯ ದಿನದ ಸಚಿವ ಸಂಪುಟದಲ್ಲಿ ಆದೇಶಿಸಲಾಗಿದ್ದು, ಈ ಬಗ್ಗೆ ಅಧಿಸೂಚನೆಯನ್ನು ಹೊರಡಿಸಬೇಕಾಗಿದೆ. ಆಗ ಮಾತ್ರವೇ ಅನಧಿಕೃತ ಬಡಾವಣೆಗಳಿಗೆ ಸಹಾಯವಾಗುತ್ತದೆ. ಅಲ್ಲಿಯವರೆಗೆ ಕಾಯಬೇಕಾಗುತ್ತದೆ ಎಂದು ನಾನು ತಮ್ಮ ಮೂಲಕ ಸದಸ್ಯರಿಗೆ ತಿಳಿಸಬಯಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಕಾಲಾವಕಾಶವನ್ನು ತಿಳಿಸಬೇಕೆಂದು ನಾನು ಸಚಿವರಲ್ಲಿ ಕೋರುತ್ತೇನೆ. ಈ ವಿಚಾರದಲ್ಲಿ ಬಹಳ ದಿನಗಳಾಗಿವೆ. ಏಕೆಂದರೆ, 2017 ನೇ ಸಾಲಿನಿಂದ ತುಂಬಾ ತೊಂದರೆಯಾಗಿದೆ. ಆದಷ್ಟು ಬೇಗನೇ ಸಚಿವರು ಈ ವಿಚಾರದಲ್ಲಿ ನಿರ್ಣಯವನ್ನು ತೆಗೆದುಕೊಂಡರೆ ಒಳ್ಳೆಯದಾಗುತ್ತದೆ. ಏಕೆಂದರೆ,

ಮುಂಬರುವ ದಿನಗಳು ಬಹಳ ಸೂಕ್ಷ್ಮವಾಗಿವೆ. ಅಲ್ಲೆಲ್ಲಾ ಪ್ರತಿಭಟನೆಗಳು ಪ್ರಾರಂಭವಾಗಿವೆ. ಹಾಗಿದ್ದರೂ ಸಹ ನಾನು ಅವರಿಂದ ಮನವಿ ಪತ್ರಗಳನ್ನು ಪಡೆದುಕೊಂಡು, ಅವರ ಮೂಲಕ.... ಅಲ್ಲಿನ ಜನರು ಬಹಳಷ್ಟು ಮಟ್ಟಿಗೆ ಬೇಜಾರಾಗಿದ್ದಾರೆ. ಯಾರೋ ಮಾಡಿದ ಕೆಲಸಕ್ಕೆ ಇನ್ಯಾರೋ ಅನುಭವಿಸುತ್ತಿದ್ದಾರೆ. ನಮೂನೆ-3 ವಿತರಣೆ ಮಾಡದೇ ಇರುವುದರಿಂದ ಸರ್ಕಾರಿ ನೌಕರಸ್ಥರಿಗೂ ಸಹ ತೊಂದರೆಯಾಗುತ್ತಿದೆ. ತಾವು ಈಗಾಗಲೇ ಮಾಡಿರುವ ಕೆಲಸಗಳನ್ನು ನಾವು ಮುಂದುವರೆಸಿಕೊಂಡು ಹೋಗಬೇಕೇ ಅಥವಾ ನಮೂನೆ-3 ನ್ನು ತಾವು ಆದಷ್ಟು ಬೇಗನೇ ವಿತರಣೆ ಮಾಡುತ್ತಿರಾ ಎನ್ನುವ ಬಗ್ಗೆ ಸಚಿವರು ನಿರ್ಣಯ ತೆಗೆದುಕೊಂಡರೆ ಉತ್ತಮವಾಗುತ್ತದೆ ಎಂದು ನಾನು ತಮ್ಮ ಮೂಲಕ ಹೇಳಬಯಸುತ್ತೇನೆ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ನಿನ್ನೆಯ ಮತ್ತು ಇವತ್ತಿನ ದಿನ ನಡೆದ ಸಚಿವ ಸಂಪುಟದ ಸಭೆಯಲ್ಲಿ ಪ್ರಸ್ತಾವನೆಯು ಬಂದಿದೆ. 378 ನ್ನು ರದ್ದುಗೊಳಿಸಿ, ಇಂತಹವರಿಗೆ ಮಾತ್ರವೇ ನಮೂನೆ-3 ರನ್ನು ವಿತರಣೆ ಮಾಡಬೇಕೆಂದು ಈಗಾಗಲೇ ಸಚಿವ ಸಂಪುಟದಲ್ಲಿ ಆದೇಶಿಸಲಾಗಿದೆ. ಈ ಬಗ್ಗೆ 30 ದಿನಗಳಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗುವುದು. ಹೀಗಾಗಿ ಇದನ್ನು ಆದಷ್ಟು ಬೇಗನೇ ಮಾಡುವ ಪ್ರಯತ್ನ ಮಾಡುತ್ತೇವೆ.

**ಇ) ವಿಷಯ:- ಬೆಂಗಳೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಂಬಂಧಿಸಿದ ಪ್ರಧಾನ ವ್ಯವಸ್ಥಾಪಕರು ಅಕ್ರಮ ಎಸಗಿರುವ ಬಗ್ಗೆ**

* * *

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):-**ಮಾನ್ಯ ಸಭಾಪತಿಯವರೇ, ಬೆಂಗಳೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ

ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಂಬಂಧಿಸಿದ ಪ್ರಧಾನ ವ್ಯವಸ್ಥಾಪಕರು ಅಕ್ರಮ ಎಸಗಿರುವ ಬಗ್ಗೆ ಪಶುಸಂಗೋಪನೆ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಲಿಖಿತ ಉತ್ತರವನ್ನು ಒದಗಿಸಲಾಗಿದೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

ಮಾನ್ಯ ಸಭಾಪತಿಯವರೇ, ಬೆಂಗಳೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ – ಮೂರು ಜಿಲ್ಲೆಗಳಿಗೆ ಸೇರಿ ಬೆಂಗಳೂರು ಹಾಲಿನ ಡೈರಿಯನ್ನು ಸ್ಥಾಪಿಸಲಾಗಿದೆ. ಸದಸ್ಯರಿಗೆ ಅವಶ್ಯಕವಾದ ಅಂಶಗಳನ್ನು ನಾನು ಹೇಳುತ್ತೇನೆ. ಅದನ್ನು ಹೊರತುಪಡಿಸಿ, ಅವರಿಗೆ ಬೇಕಾದ ಅಂಶಗಳ ಬಗ್ಗೆ ಅವರು ಕೇಳಲಿ. ಹಾಲಿನ ಮುಖ್ಯ ಡೈರಿಯ ಕಾಮಗಾರಿಯ ಬಗ್ಗೆ ಯಾವುದು ಅಗತ್ಯವಿದೆಯೋ, ಅದನ್ನು ಲೋಕೋಪಯೋಗಿ ಇಲಾಖೆಯ ನಿಯಮದಂತೆ, ಟೆಂಡರ್ ಪ್ರಕ್ರಿಯೆ ಆದ ನಂತರ ಕಾಮಗಾರಿಯು ನಡೆದಿದೆ. ಶೀಥಲೀಕರಣ ಕೇಂದ್ರಗಳ ಕಾಮಗಾರಿಯು ವ್ಯವಸ್ಥಿತವಾಗಿ ಲೋಕೋಪಯೋಗಿ ಇಲಾಖೆಯ ನಿಯಮದಂತೆ, ಟೆಂಡರ್ ಪ್ರಕ್ರಿಯೆ ಆದ ನಂತರ ನಡೆದಿದೆ. ಈ ಎರಡೂ ಕಾಮಗಾರಿಗಳಲ್ಲಿ ಇದುವರೆವಿಗೆ ಯಾವುದೇ ಒಂದು ಕಾಮಗಾರಿಯಲ್ಲಿಯೂ ಕೂಡ ಯಾವುದೇ ರೀತಿಯ ಆಕ್ಷೇಪಣೆಗಳು ಲಿಖಿತವಾಗಿ ಅಥವಾ ಇನ್ಯಾವುದೇ ರೀತಿಯಲ್ಲಾಗಲೀ ಅವ್ಯವಹಾರ ಅಥವಾ ಕಳಪೆ ಕಾಮಗಾರಿಯ ಬಗ್ಗೆ ಯಾವುದೂ ಸಹ ನಮ್ಮ ಗಮನಕ್ಕೆ ಬಂದಿಲ್ಲ. ಕಾನೂನು ವ್ಯಾಪ್ತಿಯೊಳಗೆ ಬೆಂಗಳೂರು ಡೈರಿಗೆ ಅವಶ್ಯಕವಾದ ಎರಡು ಕಾಮಗಾರಿಗಳು ಅತ್ಯಂತ ಯಶಸ್ವಿಯಾಗಿ ನಡೆದಿವೆ. ಇತ್ತೀಚೆಗೆ, ಬೆಂಗಳೂರು ಡೈರಿಯಲ್ಲಿ ಸುಮಾರು ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದೆ. ನೇಮಕಾತಿಯಲ್ಲಿ ಅವ್ಯವಹಾರ ಅಥವಾ ಮತ್ತೊಂದು ಆಗಿದೆ ಎನ್ನುವುದರ ಬಗ್ಗೆ ಸದಸ್ಯರುಗಳು ಪ್ರಸ್ತಾಪಿಸಿದ್ದಾರೆ. 1,177 ವಿವಿಧ ವೃಂದದ ಹುದ್ದೆಗಳಿಗೆ ಸರ್ಕಾರವು ಅನುಮೋದನೆ ನೀಡಿದೆ. ಸಹಕಾರ ಇಲಾಖೆಯಲ್ಲಿ ನಿರ್ದಿಷ್ಟ ಹುದ್ದೆಗಳಲ್ಲಿ ನಿರ್ದಿಷ್ಟ ಪರೀಕ್ಷೆಗಳನ್ನು ಮಾಡಬೇಕೆಂದು ನಿಯಮವಿದೆ. ಆ ನಿಯಮದ ಪ್ರಕಾರವೇ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಿರುತ್ತದೆ. ಇಂತಹ ಕ್ರಮಕ್ಕೆ ನಾವು ಚಾಲನೆ ನೀಡಿದ್ದೇವೆ. ಇದು ಕಾನೂನುಬಾಹಿರವಾಗಿದ್ದು, ಇಲ್ಲಿ ದುರುಪಯೋಗವಾಗಿದೆ ಎನ್ನುವ ಬಗ್ಗೆ ಲೋಕಸಭಾ ಸದಸ್ಯರೊಬ್ಬರು ಲಿಖಿತವಾಗಿ ದೂರು ಸಲ್ಲಿಸುತ್ತಾರೆ. ದೂರು ಸ್ವೀಕೃತವಾದ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಪಟ್ಟಣ ಬ್ಯಾಂಕುಗಳ ವಿಭಾಗ, ಸಹಕಾರ ಸಂಘಗಳ ಇಲಾಖೆ, ಬೆಂಗಳೂರು ಇವರಿಂದಲೇ ದೂರಿನಲ್ಲಿ ಯಾವ್ಯಾವ ಅಂಶಗಳನ್ನು ತಿಳಿಸಿದ್ದರೋ, ಆಯಾ ಅಂಶಗಳ ಬಗ್ಗೆ ತನಿಖೆಯನ್ನು ನಡೆಸಲಾಯಿತು. ತನಿಖೆಯಲ್ಲಿ ಈಗ ಮಾಡಿರುವ ಆರೋಪಗಳ ಬಗ್ಗೆ ಯಾವುದೇ ರೀತಿಯಾದ ಹುರುಳು ಇಲ್ಲ, ಕಾನೂನು ಬದ್ಧವಾಗಿಯೇ ನೇಮಕಾತಿ ಮಾಡಲಾಗಿದೆ.

ನಿಯಮಾನುಸಾರವೇ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗಿರುತ್ತದೆ ಎಂದು ಸದರಿ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ವರದಿಯನ್ನು ನೀಡಿರುತ್ತಾರೆ. ಇದಾದ ನಂತರದ ಎಲ್ಲಾ ಅಭ್ಯರ್ಥಿಗಳನ್ನು ಅವರ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಲಾಗಿದೆ. ಬಹುತೇಕವಾಗಿ ಈ ತಿಂಗಳ 31 ನೇ ತಾರೀಖಿನೊಳಗೆ ಡೈರಿಗೆ ನೇಮಕಾತಿ ಮಾಡಬೇಕು ಎನ್ನುವ ಉದ್ದೇಶದಿಂದ ಮಾಡಿದ್ದಾರೆ. ಇದನ್ನು ಹೊರತುಪಡಿಸಿ, ಬೇರೆ ಯಾವುದೇ ವಿಧವಾದ ಲಿಖಿತವಾಗಿ ಅಥವಾ ಇನ್ಯಾವುದೇ ರೀತಿಯಲ್ಲಿ ಯಾವುದೇ ದೂರುಗಳು ಇದುವರೆವಿಗೆ ಸ್ವೀಕೃತಗೊಂಡಿಲ್ಲ. ಮೂರು ಜಿಲ್ಲೆಗಳಿಗೆ ಬಹಳ ವೇಗವಾಗಿ ಬೆಂಗಳೂರು ಡೈರಿಯು ಬೆಳೆಯುತ್ತಿದೆ. ಈ ಸಂಸ್ಥೆಗೆ ಕಳಂಕ ತರುವುದು ಬೇಡ. ಎರಡೂ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ, ನಿರ್ದಿಷ್ಟವಾಗಿ ಯಾವುದೇ ದೂರು ಲಿಖಿತವಾಗಿ ಇದುವರೆವಿಗೆ ಬಂದಿರುವುದಿಲ್ಲ. ಲೋಕಸಭಾ ಸದಸ್ಯರು ನೀಡಿದ ದೂರಿಗೆ ಸಂಬಂಧಪಟ್ಟಂತೆ, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಅಂಶೇವಾರು ತನಿಖೆ ಮಾಡಿ, ಇದರಲ್ಲಿ ಯಾವುದೇ ವಿಧವಾದ ಲೋಪಗಳಿಲ್ಲ ಎಂಬುದಾಗಿ ವರದಿಯನ್ನು ನೀಡಿದ್ದಾರೆ. ಇದರ ಆಧಾರದ ಮೇಲೆ, ಪ್ರತಿಯೊಂದು ಅರ್ಹ ಅಭ್ಯರ್ಥಿಯನ್ನು ಸಂದರ್ಶನ ನಡೆಸಿ, ನೇಮಕಾತಿ ಆದೇಶ ನೀಡಲಾಗಿರುತ್ತದೆ. ಬಹುತೇಕವಾಗಿ ಶೇಕಡಾ ೯೦ ರಷ್ಟು ಅಭ್ಯರ್ಥಿಗಳು ಡೈರಿಗೆ ನೇಮಕಾತಿಗೊಂಡಿದ್ದಾರೆ. ಈ ತಿಂಗಳ 31 ನೇ ತಾರೀಖಿನವರೆಗೆ ಅವರಿಗೆ ಅಂತಿಮ ಗಡುವು ನೀಡಲಾಗಿದೆ. ಇಷ್ಟರಮಟ್ಟಿಗೆ ನೇಮಕಾತಿಯು ಕಾನೂನುಬದ್ಧವಾಗಿ ಮಾಡಲಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಸದಸ್ಯರಿಗೆ ತಿಳಿಸಬಯಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸಚಿವರು ಬಹಳ ಸುದೀರ್ಘವಾದ ಉತ್ತರವನ್ನು ನೀಡಿದ್ದಾರೆ. ಆದರೆ ಕೆಲವು ಅಂಶಗಳ ಬಗ್ಗೆ ಉತ್ತರದಲ್ಲಿ ತಿಳಿಸಿಲ್ಲ. ಬೆಂಗಳೂರು ಹಾಲು ಒಕ್ಕೂಟದಲ್ಲಿ ಮಂಡಳಿಯ ಸಭೆಗಳನ್ನು ಮಾಡಲಾಗುತ್ತದೆ. ಅದರಲ್ಲಿ ದಯಮಾಡಿ ಮೈಸೂರು ಮುಕ್ತ ವಿಶ್ವವಿದ್ಯಾನಿಲಯಕ್ಕೆ ನೇಮಕಾತಿ ಸಂಬಂಧ ಯಾವುದನ್ನೂ ಸಹ ನೀಡಬೇಡಿ, ಏಕೆಂದರೆ ಈ ಹಿಂದಿನ ಪರೀಕ್ಷೆಗಳ ಓ.ಎಂ.ಆರ್.ಶೀಟ್‌ಗಳ ತಿದ್ದುಪಡಿ ಮಾಡಲಾಗಿದೆ ಎಂಬುದಾಗಿ ತಿಳಿಸಲಾಗಿರುತ್ತದೆ. ಅದನ್ನು ಬಿಟ್ಟು, ಬೆಂಗಳೂರು ನಗರದಲ್ಲಿರುವ Regional

Institute of Management ಅಥವಾ ಆನಂದ ನಗರದಲ್ಲಿರುವ Institute of Rural Management ಇವರುಗಳಿಗೆ ವಹಿಸಿ ಎಂಬುದಾಗಿ ಮಂಡಳಿಯ ಕೆಲವು ಸದಸ್ಯರುಗಳು ತಿಳಿಸುತ್ತಾರೆ. ಈ ಸಲಹೆಯನ್ನು ತಳ್ಳಿಹಾಕಿ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ. ಆ ನಂತರದಲ್ಲಿ ನೇಮಕಾತಿ ಸಂಬಂಧಿತ ಪ್ರಕ್ರಿಯೆಯನ್ನು ಮೈಸೂರು ಮುಕ್ತ ವಿಶ್ವವಿದ್ಯಾನಿಲಯಕ್ಕೆ ವಹಿಸುತ್ತಾರೆ. ಆ ನಂತರದಲ್ಲಿ, 2020 ನೇ ಸಾಲಿನಲ್ಲಿ 247 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ನಡೆದು, ಒಂದು ವರ್ಷಗಳ ತರುವಾಯ ಈ ಬಗ್ಗೆ ಪರೀಕ್ಷೆಯನ್ನು ನಡೆಸುತ್ತಾರೆ. ತದ ನಂತರದಲ್ಲಿ ಒಂದು ವರ್ಷದ ನಂತರ ನೇಮಕಾತಿ ಪ್ರಕ್ರಿಯೆಯನ್ನು ನಡೆಸುತ್ತಾರೆ. ಈ ರೀತಿಯ ನಿರ್ಣಯವನ್ನು ತೆಗೆದುಕೊಂಡ ನಂತರ ಆಡಳಿತ ಮಂಡಳಿಯ 4-5 ಸದಸ್ಯರುಗಳು ನೇಮಕಾತಿ ಮಾಡುವ ವ್ಯವಸ್ಥೆಯು ಸರಿಯಾಗಿಲ್ಲ ಎಂಬುದರ ಬಗ್ಗೆ ಲಿಖಿತವಾಗಿ ತಿಳಿಸುತ್ತಾರೆ. ಆಡಳಿತ ಮಂಡಳಿಯ ನಿರ್ದೇಶಕರಾಗಿರುವ ಹೊಸಕೋಟೆಯ ಶ್ರೀ ಮಂಜುನಾಥ, ನೆಲಮಂಗಲದ ಶ್ರೀ ಭಾಸ್ಕರ, ಕನಕಪುರದ ಶ್ರೀ ರಾಜಕುಮಾರ ಮತ್ತು ಬೆಂಗಳೂರು ನಗರ ಪಶ್ಚಿಮದ ಶ್ರೀ ಮಂಜುನಾಥ್ ಮತ್ತು ಅಂಜನಪ್ಪ ರವರುಗಳು ಆಡಳಿತ ಮಂಡಳಿಯು ತೀರ್ಮಾನಿಸಿರುವುದು ಒಂದು ಹಾಗೂ ಅಂತಿಮ ಆಯ್ಕೆ ಪಟ್ಟಿಯಲ್ಲಿರುವುದು ಮತ್ತೊಂದು ಎಂಬುದಾಗಿ ತಿಳಿಸಿ, ತಕರಾರನ್ನು ಸಲ್ಲಿಸಿ, ದಯಮಾಡಿ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಿ ಎಂಬುದಾಗಿ ತಿಳಿಸುತ್ತಾರೆ.

(ಮುಂದು)

1182/26-12-2022/5-50/bkp-

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ಮುಂದು..)**

ದಯಮಾಡಿ, ಈ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಿ ಎಂದು ಹೇಳುತ್ತಾರೆ. ಆದರೆ, ಅಂದಿನ ನಿರ್ದೇಶಕರಾಗಿದ್ದಂತದಹ ಸ್ವಾಮಿಯವರು ಅಲ್ಲಿ ಇದ್ದಂತಹ ಜನರಲ್ ಮ್ಯಾನೇಜರ್‌ರವರನ್ನು ರಜೆ ಮೇಲೆ ಕಳುಹಿಸಿ, ಒಂದು ದೊಡ್ಡ ಹಗರಣವನ್ನು ಮಾಡುತ್ತಾರೆ. ತಮಗೆ ಬೇಕಾದವರ OMR (Optical Mark Recognition) Sheet ಗಳನ್ನು ತಿದ್ದುಪಡಿ ಮಾಡಿ, ಅಂಕಗಳನ್ನು ಕೊಟ್ಟಿರುತ್ತಾರೆ. ಮತ್ತೆ, ಅವರುಗಳನ್ನು ಸಂದರ್ಶನಕ್ಕೆ ಕರೆಯುತ್ತಾರೆ. ಸಂದರ್ಶನಕ್ಕೆ ಬಂದವರಲ್ಲಿ

ಸುಮಾರು 21600 ಜನರಿಗೆ ಲಿಖಿತ ಮೂಲಕ ನೋಟೀಸ್ ಕೊಡಲಾಗಿತ್ತು. ಅದರಲ್ಲಿ 14900 ಜನರು ಲಿಖಿತ ಪರೀಕ್ಷೆಯನ್ನು ಬರೆಯುತ್ತಾರೆ. 1:5 ಅನುಪಾತದಲ್ಲಿ 1184 ಜನರಿಗೆ ಸಂದರ್ಶನ ಕರೆಯುತ್ತಾರೆ. ಅದರಲ್ಲಿ 115 ಜನರು ಸಂದರ್ಶನಕ್ಕೆ ಹಾಜರಾಗುವುದಿಲ್ಲ. ಅಂತಿಮವಾಗಿ 180 ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ಇದರ ಬಗ್ಗೆ ನಮ್ಮ ಲೋಕ ಸಭಾ ಸದಸ್ಯರು ಇದರಲ್ಲಿ ಹಗರಣವಾಗಿದೆ ಎಂದು ಹೇಳಿ, ಪದೇ ಪದೇ ಪತ್ರ ಬರೆಯುತ್ತಾರೆ ಮತ್ತು ಪತ್ರಿಕಾಗೋಷ್ಠಿಯಲ್ಲಿ ಹೇಳುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ನಿಸ್ಪಕ್ಷಪಾತವಾದ ತನಿಖೆಯಾಗಬೇಕು, ಇದರಲ್ಲಿ ಏನು ಅವ್ಯವಹಾರ ಆಗಿದೆ, ಅದರ ಬಗ್ಗೆ ತನಿಖೆ ನಡೆಯಬೇಕೆಂದು ಹೇಳುತ್ತಾರೆ. ಮತ್ತೆ ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಒಂದು ಪತ್ರವನ್ನು ಸರ್ಕಾರಕ್ಕೆ ಮತ್ತು ಆಡಳಿತ ಮಂಡಳಿಯವರಿಗೂ ಬರೆಯುತ್ತಾರೆ. ಈಗ ನಡೆದಿರುವಂತಹ ಸಂದರ್ಶನ ಏನಿದೆ, ಇದು ಸರಿಯಾಗಿಲ್ಲ, ಇದನ್ನು ಸರಿಪಡಿಸಬೇಕಾದರೆ, ಮತ್ತೆ ಸಂದರ್ಶನಗಳನ್ನು ಮತ್ತು ಮರು ಪರೀಕ್ಷೆಗಳನ್ನು ಮಾಡಬೇಕಾಗುತ್ತದೆ. ಹಾಗೆಯೇ ಇದಕ್ಕೆ ಯಾವ ಒಂದು ಏಜೆನ್ಸಿಯನ್ನು ಮಾಡಿದ್ದೀರಿ, ಅದು ಸರಿಯಿಲ್ಲವೆಂದು ಹೇಳುತ್ತಾರೆ. ಆದರೂ ಸಹ ಇವರನ್ನೆಲ್ಲಾ ಹೊರತುಪಡಿಸಿ ತರಾತುರಿಯಲ್ಲಿ ಈ ಒಂದು ಕೆಲಸವನ್ನು ಮಾಡುತ್ತಾರೆ. ಮತ್ತೆ, ಇದರ ಬಗ್ಗೆ ತನಿಖೆಯನ್ನು ಮಾಡಲಾಗಿದೆ ಎಂದು ಹೇಳುತ್ತಾರೆ, ಆದರೆ, ಆ ಒಂದು ತನಿಖಾ ವರದಿ ಪ್ರತಿಯನ್ನು ಕೊಟ್ಟರೆ ಒಳ್ಳೆಯದು. ನನಗೆ ತಿಳಿದಮಟ್ಟಿಗೆ ಇದುವರೆಗೂ ಸಹ ತನಿಖಾ ವರದಿ ಮಂಡನೆಯಾಗಿಲ್ಲ ಮತ್ತು ಸರ್ಕಾರಕ್ಕೆ ಆಗಲಿ, ಲೋಕಸಭಾ ಸದಸ್ಯರಿಗೆ ಆಗಲಿ ನೀಡಿರುವುದಿಲ್ಲ. ತನಿಖಾ ವರದಿಯಾಗಿದ್ದರೆ, ಯಾರು ರಿಜಿಸ್ಟ್ರಾರ್, ಕೋ-ಅಪರೇಟಿವ್ ಸೊಸೈಟೀಸ್‌ರವರನ್ನು ತನಿಖೆ ಮಾಡುವ ಸಲುವಾಗಿ ನೇಮಕ ಮಾಡಿದ್ದೀರಿ, ಅವರು ತನಿಖೆ ಮಾಡಿದ್ದರೆ, ಆ ತನಿಖಾ ವರದಿಯ ಪ್ರತಿಯನ್ನು ಕೊಡಿ. ಏನು ಲಿಖಿತ OMR Sheets ತಿದ್ದುಪಡಿಯಾಗಿದೆ, ಇದರ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕು. ಇದೇ ರೀತಿಯಲ್ಲಿ ಅಲ್ಲಿ ಏನಾಗಿದೆ ಎಂದರೆ, ಬೆಂಗಳೂರು ಮಹಾ ಮಂಡಲ ಬಹಳ ನಷ್ಟದಲ್ಲಿದೆ. ಲಾಭದಲ್ಲಿ ಇರುವುದಿಲ್ಲ. ಇಲ್ಲಿಗೆ ಸರ್ಕಾರ ಕೊಡತಕ್ಕಂತಹ ಪ್ರೋತ್ಸಾಹಧನ ಇರಬಹುದು, ಅಥವಾ ಹಾಲಿನ ಶೇಖರಣೆಗೆ ಸಂಬಂಧಪಟ್ಟಂತೆ 2 ರೂಪಾಯಿಗಳನ್ನು ಹೆಚ್ಚಳ ಮಾಡಿರುವಂತಹದ್ದು

ಇರಬಹುದು. ಆದರೆ, ಸಾಕಷ್ಟು ರೀತಿಯಲ್ಲಿ ಬೇರೆ ಹಾಲು ಒಕ್ಕೂಟಗಳಿಗೆ ಹೋಲಿಸಿದಾಗ ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ ಅಂದರೆ ಬೆಂಗಳೂರು, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಸಾಕಷ್ಟು ರೀತಿಯಲ್ಲಿ ನಷ್ಟದಲ್ಲಿದೆ. ಈ ದೃಷ್ಟಿಯಲ್ಲಿ ಇಷ್ಟು ಜನರನ್ನು ಒಂದೇ ಬಾರಿಗೆ ನೇಮಕ ಮಾಡುವುದು ಸರಿಯಲ್ಲವೆಂದು ಲೋಕ ಸಭಾ ಸದಸ್ಯರು ತಮ್ಮ ಪತ್ರದಲ್ಲಿ ಪದೇ ಪದೇ ಉಲ್ಲೇಖ ಮಾಡುತ್ತಾರೆ. ಇದು ಅಲ್ಲದೆ, ಕೆ.ಎಂ.ಎಫ್. ನಲ್ಲಿಯೂ ಕೂಡ ಇದೇ ರೀತಿಯಲ್ಲಿ ಅವ್ಯವಹಾರ ಆಗಿದೆ, ಅದರ ಬಗ್ಗೆ ಮುಖ್ಯಮಂತ್ರಿಯವರು ಸಹ ಈ ಬಗ್ಗೆ "stop Recruitment" ಎಂದು ಹೇಳಿ ಪತ್ರ ಬರೆಯುತ್ತಾರೆ. ಅದರೂ ಕೂಡ ಅದರ ಬಗ್ಗೆ ಏನೂ ಸಹ ಕ್ರಮ ಆಗಲಿಲ್ಲ. ಆದ್ದರಿಂದ, ತಾವು ದಯಮಾಡಿ, ರಿಜಿಸ್ಟ್ರಾರ್ ಕೋ-ಆಪರೇಟಿವ್ ಸೊಸೈಟಿರವರಿಂದ ತನಿಖೆ ಆಗಿದ್ದರೆ, ಏನು ತನಿಖೆ ಮಾಡಿದ್ದಾರೆ, ಆ ತನಿಖಾ ವರದಿಯ ಪ್ರತಿಯನ್ನು ದಯಮಾಡಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಟಿ.ಎ. ಶರವಣ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರವನ್ನು ನೋಡುತ್ತಿದ್ದೆ. ಇದರಲ್ಲಿ ಯಾವುದೇ ಅಕ್ರಮಗಳು ನಡೆದಿಲ್ಲ. ಯಾವುದೇ ಟೆಂಡರ್ ಪ್ರಕಟಣೆ ಮಾಡಿ ಕಾಮಗಾರಿಗಳನ್ನು ನಡೆಸಲು ನಿಯಮಾನುಸಾರ ಕ್ರಮ ವಿಧಿಸಲಾಗುತ್ತಿದೆ. ಈ ರೀತಿಯ ಹಲವಾರು ಉತ್ತರಗಳನ್ನು ಕೊಟ್ಟಿದ್ದಾರೆ. ಆದರೆ, ಅಲ್ಲಿ ಇರುವಂತಹ ವಾಸ್ತವಾಂಶವೇ ಬೇರೆ ಇದೆ. ಅಲ್ಲಿ ಲಿಖಿತ ಪರೀಕ್ಷೆ ಬರೆಯುತ್ತಾರೆ, ಒಂದು ವರ್ಷ ಕಾಲ ಆಗುತ್ತದೆ.

**ಸಭಾಪತಿಯವರು:-** ಈ ಬಗ್ಗೆ ಶ್ರೀಯುತ ಕೆ.ಎ. ತಿಪ್ಪೇಸ್ವಾಮಿಯವರು ಎಲ್ಲವನ್ನು ಹೇಳಿದ್ದಾರೆ. ಅವರು ಹೇಳಿದ್ದನ್ನೇ ಹೇಳದೇ ಬೇರೆ ಏನಾದರೂ ಇದ್ದರೆ ಹೇಳಿ.

**ಶ್ರೀ ಕೆ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಒಂದು ವರ್ಷವಾದರೂ ಸಹಿತ ಅವರುಗಳಿಗೆ ನೋಟೀಸ್ ಹೋಗುವುದಿಲ್ಲ.

**ಸಭಾಪತಿಯವರು:-** ಆ ವಿಚಾರವನ್ನು ಅವರು ಹೇಳಿದ್ದಾರೆ.

**ಶ್ರೀ ಕೆ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಆದಾದ ಮೇಲೆ ದಿನಾಂಕ:7-11-2022 ಮತ್ತು 24-11-2022 ರವರೆಗೂ ಈ ಸಂದರ್ಶನ ನಡೆಯುತ್ತದೆ. ದಿನಾಂಕ 29-11-2022 ರಂದು ಆಡಳಿತ ಮಂಡಳಿಯವರು ಸಭೆಯನ್ನು ನಡೆಸಿ, ಮತ್ತೆ ದಿನಾಂಕ 1-12-2022 ರಂದು ಅಂತಿಮ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ಆಯ್ಕೆ ಪಟ್ಟಿಯನ್ನು ಪ್ರಕಟನೆ ಕೂಡ ಮಾಡುತ್ತಾರೆ. ಇಲ್ಲಿ ತರಾತುರಿಯಲ್ಲಿ OMR Sheets ಮತ್ತು ಪರೀಕ್ಷೆ ವಿಚಾರ ಇರಬಹುದು. ಇಲ್ಲಿ 296 ಹುದ್ದೆಗಳು ಏನು ಇರುತ್ತದೆ. ಅದನ್ನು ಬೇರೆ ಬೇರೆ ರೀತಿಯಲ್ಲಿ ನೇಮಕ ಮಾಡುತ್ತಾರೆ.

**ಸಭಾಪತಿಯವರು:-** ಶ್ರೀಯುತ ಶರವಣ ರವರೆ, ಏನು ಮಾಡಬೇಕೆಂದು ಹೇಳಿ.

**ಶ್ರೀ ಕೆ.ಎ. ಶರವಣ:-** ಮಾನ್ಯ ಸಭಾಪತಿಯವರೆ, ನನ್ನ ಆರೋಪ ಇಷ್ಟೆ. ದೊಡ್ಡ ಮಟ್ಟದಲ್ಲಿ ಹಗರಣ ನಡೆದಿದೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಏನೂ ನಡೆದಿಲ್ಲವೆಂದು ಹೇಳಿದ್ದಾರೆ. ಇದನ್ನು ಯಾರು ತನಿಖೆ ಮಾಡಿದ್ದಾರೆ, ಯಾವ ಹಂತದಲ್ಲಿ ತನಿಖೆ ಮಾಡಿದ್ದಾರೆ, ಆ ಒಂದು ತನಿಖಾ ವರದಿಯನ್ನು ದಯಮಾಡಿ ನಮಗೆ ಅವರು ಕೊಡಬೇಕೆಂದು ತಮ್ಮ ಮೂಲಕ ನಾನು ಕೇಳಿ ಕೊಳ್ಳುತ್ತಿದ್ದೇನೆ. ಈ ವಿಚಾರದಲ್ಲಿ ಮಾತ್ರ ದೊಡ್ಡ ಹಗರಣವಾಗಿದೆ ಎಂದು ನಾನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್(ಸಹಕಾರ ಸಚಿವರು):-**ಮಾನ್ಯ ಸಭಾಪತಿಯವರೆ, ಬೆಂಗಳೂರು ಡೈರಿ ಬಹಳ ದೊಡ್ಡ ಡೈರಿಯಾಗಿದ್ದು, ಇದು 3 ಜಿಲ್ಲೆಗೆ ಸಂಬಂಧಪಟ್ಟದ್ದಾಗಿದೆ. ಸುಮಾರು ಒಂಬತ್ತುವರೆ-ಹತ್ತು ಲಕ್ಷ ಲೀಟರ್ ಪ್ರತಿದಿನ ಬರತಕ್ಕದ್ದು. 1,21,000 ಲೀಟರ್ ಮೇಲೆ ಮೊಸರು ವ್ಯಾಪಾರ ಆಗುವಂತಹದ್ದು. ಮುಖ್ಯ ಡೈರಿ ಕಾಮಗಾರಿ ಮತ್ತು ಶಿಥಿಲೀಕರಣಕ್ಕೆ ಸಂಬಂಧಪಟ್ಟಂತೆ ಕಾಮಗಾರಿಗಳು ಕಾನೂನುಬದ್ಧವಾಗಿ ನಡೆದಿವೆ. ಒಬ್ಬರು ಸಹ ಈ ಕಾಮಗಾರಿ ಬಗ್ಗೆ ಪ್ರಶ್ನೆ ಮಾಡುವಂತಹದ್ದಾಗಲಿ, allegation ಮಾಡುವಂತಹದ್ದು ಇದುವರೆಗೂ ಇಲ್ಲ. ಏನಾದರೂ allegations ಇದ್ದರೆ ಅದನ್ನು ತನಿಖೆ ಮಾಡುವಂತಹದ್ದು, ವಿಚಾರಣೆ ಮಾಡುವಂತಹದ್ದು ಆಗುತ್ತದೆ. ಶಿಕ್ಷೆ ಕೂಡ ಆಗುತ್ತದೆ. ಆ ರೀತಿಯ ದೂರುಗಳು ಇದುವರೆಗೂ ಇಲ್ಲ. ಮಾನ್ಯ ಸಭಾಪತಿಯವರೆ, ಹತ್ತಾರು

ಯುನಿವರ್ಸಿಟಿಗಳು ಇವೆ. ಆಯ್ಕೆ ಮಾಡುವಂತಹ ಪರಮ ಅಧಿಕಾರ ಅ ಬೋರ್ಡಿಗೆ ಇರುತ್ತದೆ. ಅದು ಮೈಸೂರು ಯುನಿವರ್ಸಿಟಿ ಇರಬಹುದು, ಬೆಂಗಳೂರು ಯುನಿವರ್ಸಿಟಿ ಇರಬಹುದು. ಪದ್ಮನಾಭನಗರ ಇರಬಹುದು, ಬೇರೆ ಬೇರೆ ಇರಬಹುದು. ಲಿಖಿತ ಪರೀಕ್ಷೆ ಮಾಡಬೇಕೆಂಬ ಅಧಿಕಾರ ಆ ಆಡಳಿತ ಮಂಡಳಿಗೆ ಇರುತ್ತದೆ. ಅವರೇ ನಿರ್ಧಾರ ಮಾಡುತ್ತಾರೆ. ಅದರಲ್ಲಿ 20-21 ಜನ ನಿರ್ದೇಶಕರು ಇರುತ್ತಾರೆ, ಅದರಲ್ಲಿ 4-5 ಜನ ನಿರ್ದೇಶಕರು ಈ ಮುಕ್ತ ವಿಶ್ವ ವಿದ್ಯಾನಿಲಯ ಬೇಡವೆಂದು ಹೇಳಬಹುದು. ಉಳಿದವರೆಲ್ಲರೂ ಯಾವುದೇ ಕೆಲಸವಾಗಲಿ, ಇದು ಕಾನೂನು ಬದ್ಧವಾಗಿ ಆಗಲಿ ಎಂದು ಹೇಳುತ್ತಾರೆ. ಅಕಸ್ಮಾತ್ ಯಾರಾದರೂ 4-5 ಜನ ನಿರ್ದೇಶಕರು ವಿರೋಧ ಮಾಡಿದರೆ ಈ ಸಂದರ್ಶನ ಮಾಡಿ 297 ಅಭ್ಯರ್ಥಿಗಳಿಗೆ ನೇಮಕಾತಿ ಮಾಡುವಾಗ ಅದೇ ಆಡಳಿತ ಮಂಡಳಿಯವರು ಸರ್ವಾನುಮತದಿಂದ ಒಪ್ಪಿಕೊಂಡರೆ 297 ಅಭ್ಯರ್ಥಿಗಳನ್ನು ಏನು ನೇಮಕ ಮಾಡಿದ್ದಾರೆ, ಅದು ಕಾನೂನುಬದ್ಧವಾಗಿದೆ, ಈ ಸಂದರ್ಶನ ಮಾಡಿರುವುದು ಸರಿ ಇದೆ, ಎನ್ನುವಂತಹದ್ದನ್ನು ಆ ಒಂದು ಬೋರ್ಡ್‌ನಲ್ಲಿ ಸರ್ವಾನುಮತದಿಂದ ಒಪ್ಪಿಕೊಂಡಿದ್ದಾರೆ. ಅಕಸ್ಮಾತ್ ಅವರು ಏನಾದರೂ ವಿರೋಧ ಮಾಡಿದ್ದರೆ, ಕಾನೂನುಬಾಹೀರವಾಗಿದೆ ಎಂದು ಹೇಳಿದ್ದರೆ 297 ಅಭ್ಯರ್ಥಿಗಳಿಗೆ ಸಂದರ್ಶನ ಮಾಡಿ, ಬೋರ್ಡ್‌ಗೆ ಈ ವಿಷಯ ಬಂದಂತಹ ಸಮಯದಲ್ಲಿ ಏತಕ್ಕೆ ಈ ನಿರ್ದೇಶಕರುಗಳು ವಿರೋಧ ಮಾಡಲಿಲ್ಲ? ಈ ಯುನಿರ್ವಸಿಟಿ ಮಾಡಬಾರದು ಎಂದು ಹೇಳಿ ನಾನು ಆಗಲೇ ಬೋರ್ಡ್‌ನಲ್ಲಿ ಕೊಟ್ಟಿದ್ದೆ. ಅವ್ಯವಹಾರ ಆಗುತ್ತದೆ ಎಂದು ಹೇಳಿದ್ದೆ. ಅದರೂ ಮಾಡಿದ್ದೀರಿ. ಈ ಆಡಳಿತ ಮಂಡಳಿಯಲ್ಲಿ ನಾವು ಒಪ್ಪುತ್ತಿಲ್ಲವೆಂದು ಏತಕ್ಕೆ ಅವರು ಹೇಳಲಿಲ್ಲ? 297 ಜನರಿಗೆ ಕಾನೂನು ವ್ಯಾಪ್ತಿಯೊಳಗೆ ನೇಮಕಾತಿ ಮಾಡಿದ್ದೇವೆ. ಅದು ಲಿಖಿತ ಪರೀಕ್ಷೆ ಇರಬಹುದು, ಮೌಖಿಕ ಸಂದರ್ಶನ ಇರಬಹುದು, ಮತ್ತೆ ಉಳಿದದ್ದು ಇರಬಹುದು. ಅದೆಲ್ಲವನ್ನು ಕಾನೂನುಬದ್ಧವಾಗಿ ಮಾಡಿದ್ದೇವೆ. ಈ ಬಗ್ಗೆ ಲೋಕಸಭಾ ಸದಸ್ಯರು ದೂರು ಕೊಟ್ಟದ್ದು ನಿಜ. ಅದರ ಬಗ್ಗೆ ವಿವರವಾಗಿ ನಮ್ಮ ಅಡಿಷನಲ್ ರಿಜಿಸ್ಟ್ರಾರ್ ರವರು ತನಿಖೆ ಮಾಡಿದ್ದಾರೆ. ಅದರ ಪ್ರತಿಯನ್ನು ನಾನು ಒದಗಿಸುತ್ತೇನೆ. ಆ ಒಂದು ವರದಿ ಬರುವವರೆಗೂ ಇದನ್ನು process ಮಾಡಬಾರದು

ಎಂದು ಆಡಳಿತ ಮಂಡಳಿಯವರಿಗೆ ನಾವೇ ಹೇಳಿದ್ದೇವೆ. ಯಾರು ಲೋಕಸಭಾ ಸದಸ್ಯರು ಈ ವಿಚಾರದಲ್ಲಿ ಏನು ದೂರು ಮಾಡಿದ್ದಾರೆ, ಅವರನ್ನು ಅಡಿಷನಲ್ ರಿಜಿಸ್ಟ್ರಾರ್ ರವರು ಭೇಟಿ ಮಾಡಿದ್ದಾರೆ, ಆ ನಿರ್ದೇಶಕರುಗಳನ್ನು ಭೇಟಿ ಮಾಡಿದ್ದಾರೆ. ಎಲ್ಲರನ್ನು ಭೇಟಿ ಮಾಡಿದ ನಂತರ ಅಡಿಷನಲ್ ರಿಜಿಸ್ಟ್ರಾರ್ ರವರು ನಮ್ಮ ಇಲಾಖೆಗೆ, ಮತ್ತು ನಮ್ಮ ಸರ್ಕಾರಕ್ಕೆ ವರದಿ ಮಾಡಿದ್ದಾರೆ. ಆ ವರದಿ ಬಂದ ನಂತರವೇ ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನವನ್ನು ಮಾಡಿರುವಂತಹದ್ದು. ಇತ್ತೀಚೆಗೆ ಏನಾಗುತ್ತಿದೆ ಎಂದರೆ ಯಾವುದೇ ಕೆಲಸವಾದರೂ allegation ಆಗುತ್ತದೆ, ಅದಾಗಿದೆ, ಇದಾಗಿದೆ ಎಂದು ಹೇಳುವುದು ರೂಢಿಯಾಗಿದೆ. ನಾನು ಸಹಕಾರಿ ಮಂತ್ರಿಯಾಗಿದ್ದು ಕೋವಿಡ್-19 ಸಂದರ್ಭದಲ್ಲಿ. 5000 ಜನರನ್ನು ನೇಮಕಾತಿ ಮಾಡಬೇಕೆನ್ನುವುದರ ಬಗ್ಗೆ ನಮ್ಮ ಇಲಾಖೆಯಲ್ಲಿ ಘೋಷಣೆ ಮಾಡಿದ್ದು ನಿಜ. ಅದರ ಪ್ರಕಾರ ಕಾರ್ನಾಟಕದ ಎಲ್ಲಾ ಹಾಲು ಒಕ್ಕೂಟಗಳು, ಡಿ.ಸಿ.ಸಿ. ಬ್ಯಾಂಕ್ ಗಳು ಮತ್ತೆ ಬೇರೆ ಬೇರೆ ಇಲಾಖೆಗಳು ನೇಮಕಾತಿಯನ್ನು ಮಾಡುತ್ತಿದ್ದಾರೆ. ಇದರಲ್ಲಿ ಒಂದೇ ಒಂದು ಪರ್ಸೆಂಟ್ ಕೂಡ ಕಾನೂನುಬಾಹೀರ ಅಗಲಿಲ್ಲ. ನಮ್ಮ ಇಲಾಖಾಧಿಕಾರಿಗಳು ಕೂಡ ಆ ಒಂದು ಸಂದರ್ಶನದಲ್ಲಿದ್ದಾರೆ. ಆ ಬೋರ್ಡ್ ಮೀಟಿಂಗ್‌ನಲ್ಲಿಯೂ ಕೂಡ ಅಡಿಷನಲ್ ರಿಜಿಸ್ಟ್ರಾರ್ ಇದ್ದಾರೆ. ಯಾವುದೇ ವಿಧವಾದ ಅವ್ಯವಹಾರ ಆಗಲಿ, ಗೋಲ್‌ಮಾಲ್ ಆಗಲಿ, ಆಗಿಲ್ಲ. ಕಾನೂನು ವ್ಯಾಪ್ತಿಯೊಳಗಡೆ ನೇಮಕಾತಿ ಮಾಡಿದ್ದಾರೆ, ಎಲ್ಲರೂ ಕೂಡ ಕೆಲಸಕ್ಕೆ ಸೇರಿಕೊಂಡಿದ್ದಾರೆ. ಈ ಬಗ್ಗೆ ತಮಗೆ ಆ ರೀತಿಯಲ್ಲಿ ಏನಾದರೂ ಇದ್ದಲ್ಲಿ, ಲೋಕಸಭಾ ಸದಸ್ಯರು ತಮಗೆ ಏನು ದೂರು ಕೊಟ್ಟಿದ್ದಾರೆ, ಅದರ ಬಗ್ಗೆ ತಮಗೆ ವಿವರವನ್ನು ನಾಳೆಯೇ ತಲುಪಿಸುತ್ತೇನೆ. ಅದನ್ನು ತಾವು ಕೂಲಂಕಷವಾಗಿ ನೋಡಬಹುದಾಗಿದೆ. ಇದು 100ಕ್ಕೆ 100 ರಷ್ಟು ಕಾನೂನುಬದ್ಧವಾಗಿ ನಡೆದಿದೆ ಎಂದು ಮಾನ್ಯ ಸಭಾಪತಿಯವರ ಮೂಲಕ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು 3 ಜಿಲ್ಲೆಗೆ ಸಂಬಂಧಪಟ್ಟಂತೆ ಇರುವಂತಹ ಬೆಂಗಳೂರು ಡೈರಿ ಪ್ರತಿಷ್ಟಿತ ಡೈರಿಯಾಗಿದ್ದು ಲಕ್ಷಾಂತರ ರೈತರಿಗೆ ಅನುಕೂಲವಾಗುವಂತಹ ಡೈರಿ ಆಗಿದೆ. 1177 ಸಿಬ್ಬಂದಿ ನೇಮಕಾತಿ ಇರಬೇಕೆನ್ನುವುದು ಸಹಕಾರ ಇಲಾಖೆಯ ವಿಷಯವಾಗಿದೆ. ಎಷ್ಟೋ ವರ್ಷಗಳ ಕಾಲ ನೇಮಕಾತಿ ಆಗಿರಲಿಲ್ಲ. ಈಗ 297 ಹುದ್ದೆಗಳನ್ನು ಕಾನೂನುಬದ್ಧವಾಗಿ

ತೆಗೆದುಕೊಂಡಿದೆ. ಇಂತಹ ಪ್ರತಿಷ್ಠಿತ ಡೈರಿ ವಿಚಾರದಲ್ಲಿ allegation ಮಾಡುವುದು ನನಗೆ ವೈಯಕ್ತಿಕವಾಗಿ ಸರಿ ಇಲ್ಲ ಎನ್ನುವ ಭಾವನೆಯಾಗಿದೆ . ನೀವು ಹೇಳುವಂತೆ ಯಾವುದು ಕೂಡ ಇಲ್ಲ ನಡೆದಿಲ್ಲ ಎನ್ನುವುದನ್ನು ತಮ್ಮ ಮೂಲಕ ಹೇಳಬಯಸುತ್ತೇನೆ.

**ಸಭಾಪತಿಯವರು:-** ಈ ಬಗ್ಗೆ ಇರುವಂತಹ ವರದಿಯ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಕೊಡಿ.

**ಶ್ರೀ ಎಸ್.ಟಿ. ಸೋಮಶೇಖರ್(ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೆ, ಸದರಿ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಮುಂದು.

**(1183) 26.12.2022 06.00 ಎಸ್‌ವಿ-ಆರ್‌ಎನ್** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಚಿವರೇ, ಈ ಆಪಾದನೆಯನ್ನು ಹೊರಗಿನವರು ಯಾರೂ ಮಾಡಿಲ್ಲ. ಅಲ್ಲಿರುವ ಬೋರ್ಡ್ ನಿರ್ದೇಶಕರು ಮಾಡಿದ್ದಾರೆ, ಅಲ್ಲಿನ ಲೋಕಸಭಾ ಸದಸ್ಯರು ಮಾಡಿದ್ದಾರೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ತಿಪ್ಪೇಸ್ವಾಮಿಯವರೇ, ಅದೇ ಲೋಕಸಭಾ ಸದಸ್ಯರು recruitment ಗೆ ಏಕೆ objection ಮಾಡಲಿಲ್ಲ? ನೀವು ಒಂದು ವಿಷಯ ತಿಳಿದುಕೊಳ್ಳಿ. ನೀವು ಸಹ Senior-most officer ಆಗಿದ್ದಂತಹವರು. ಒಂದು ಪ್ರತಿಷ್ಠಿತ ಡೈರಿ ಮೂರು ಜಿಲ್ಲೆಗೆ ಸಂಬಂಧಪಟ್ಟಿದ್ದು, 297 ಜನರನ್ನು appoint ಮಾಡಿದರೆ ಏನಾಗುತ್ತದೆ? ಆ ಡೈರಿಯ ಪ್ರತಿಷ್ಠೆ ಏನಾಗುತ್ತದೆ? ಅದರ ಹಿನ್ನೆಲೆ ನನಗೆ ಗೊತ್ತಿದೆ. ಇದನ್ನು ಯಾರು ಪ್ರಶ್ನೆ ಮಾಡುತ್ತಿದ್ದಾರೆ, ಏಕೆ ಮಾಡುತ್ತಿದ್ದಾರೆ ಎಂಬುದು ನನಗೆ ತಿಳಿದಿದೆ. ನಾನು ಕೇಳಬೇಡಿ ಎಂದು ಹೇಳುತ್ತಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಚಿವರೇ, ಡೈರಿ ಬಗ್ಗೆ ನಮಗೂ ಅಷ್ಟೇ ಕಾಳಜಿಯಿದೆ. ಅದರ ಬಗ್ಗೆ ನಾವು ಮಾತನಾಡುತ್ತಿಲ್ಲ. ಸಾವಿರಾರು ರೈತರಿಗೆ ಒಳ್ಳೆಯದಾಗುತ್ತಿದೆ. ಆಗಿರುವಂತಹ ಅಕ್ರಮದ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಯಾವುದೇ ಅಕ್ರಮ ಆಗಿಲ್ಲ.

**ಈ) ವಿಷಯ:- ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಜಾತಿ ಸಿಂಧುತ್ವ ಪ್ರಮಾಣ ಪತ್ರ ಸಿಗದೆ ಹಲವು ವರ್ಷಗಳಿಂದ ವಿವಿಧ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು ಅತಂತ್ರರಾಗಿರುವ ಕುರಿತು**

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಜಾತಿ ಸಿಂಧುತ್ವ ಪ್ರಮಾಣ ಪತ್ರ ಸಿಗದೆ ಹಲವು ವರ್ಷಗಳಿಂದ ವಿವಿಧ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು ಅತಂತ್ರರಾಗಿರುವ ಕುರಿತು ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ....

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ,"ಗೊಂಡ ಕುರುಬ" ಜಾತಿಯು ಎಸ್.ಟಿ. ಪಟ್ಟಿಯಲ್ಲಿ 1931ರಲ್ಲಿ ನಡೆಸಿದ ಜನಗಣತಿಯಲ್ಲಿ ಇದ್ದು, ಕೇಂದ್ರದಿಂದ ಪ್ರಕಟಗೊಂಡಿರುವ ಎಸ್.ಟಿ. ಪಟ್ಟಿಯಲ್ಲಿ ಸೇರಿಕೊಂಡಿದೆ. ಕ್ರಮ ಸಂಖ್ಯೆ 9 ರಲ್ಲಿ ಗೊಂಡ ಇದ್ದೇ ಇದೆ. ಕಳೆದ ಅನೇಕ ವರ್ಷದಿಂದ ಬೀದರ್‌ನಲ್ಲಿ ಅಂದರೆ ಇದಕ್ಕೆ ಸಂಬಂಧಪಟ್ಟಿದ್ದು ಬೀದರ್ ಮತ್ತು ಕಲಬುರಗಿಯಲ್ಲಿ ಇದೆ. ಅಂದಿನ ಗುಲ್ಬರ್ಗಾ ಅಂದರೆ ಇಂದಿನ ಕಲಬುರಗಿ, ಯಾದಗಿರಿ ಮತ್ತು ಬೀದರ್ ಈ ಮೂರು ಜಿಲ್ಲೆಗಳಿಗೆ ಈ ಗೊಂಡ ಕುರುಬ ವಿಷಯವು ಅನ್ವಯವಾಗುತ್ತದೆ. ಬೀದರ್‌ನಲ್ಲಿ ಶಿಕ್ಷಣಕ್ಕಾಗಲೀ ಅಥವಾ ಉದ್ಯೋಗಾವಕಾಶಕ್ಕಾಗಲಿ ಉಳಿದಂತಹ ಎಲ್ಲಾ ಕೆಲಸಗಳಿಗೆ ಸಿಂಧುತ್ವ ಪ್ರಮಾಣ ಪತ್ರವನ್ನು ಕೊಡುತ್ತಿದ್ದಾರೆ. ಎಲ್ಲರಿಗೂ ಕೊಡುತ್ತಿಲ್ಲ. ಮೀನ-ಮೇಷ ಎಣಿಸುತ್ತಾ ಕೆಲವರಿಗೆ ಬಿಟ್ಟುಬಿಟ್ಟಿದ್ದಾರೆ. ಗೊಂಡ ಎಂಬುದು ತಂದೆ ತಾಯಿಯ ಪ್ರಮಾಣಪತ್ರದಲ್ಲಿದ್ದಾಗ, ಪರಿಶೀಲಿಸಿದಾಗ, ಪಂಚನಾಮೆ ಮಾಡಿ ಕೊಟ್ಟಿದ್ದರೂ ಏಕೆ issue ಮಾಡುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆ. ಕಳೆದ 10 ವರ್ಷಗಳಿಂದ ಅಂದರೆ 2013ರಿಂದ ಕಲಬುರಗಿ ಜಿಲ್ಲೆಯಲ್ಲಿ ಸಿಂಧುತ್ವ ಪ್ರಮಾಣ ಪತ್ರವನ್ನು ಕೊಡುತ್ತಿಲ್ಲ. ಸುಮಾರು 25 ಕೇಸ್‌ಗಳು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಬಾಕಿ ಉಳಿದಿವೆ. ಇದಕ್ಕೆ ಸಂಬಂಧಪಟ್ಟಂತೆ ಏನಾದರೂ ಬಂದಾಗ Additional Director General of Police, Civil Rights Enforcement Cell ಗಳಿಗೆ ಬರೆದು ಅವರಿಂದ ಒಂದು ವರದಿಯನ್ನು ತೆಗೆದುಕೊಳ್ಳುತ್ತಾರೆ. CRE Cell ನವರು ಈ ಜಿಲ್ಲೆಯಲ್ಲಿ ಇದನ್ನು ಕೊಡಬಹುದು ಎಂದು ಸ್ಪಷ್ಟವಾಗಿ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಇಷ್ಟೆಲ್ಲಾ ಇದ್ದರೂ ಡಿ.ಸಿ. ಕಛೇರಿಯಲ್ಲಿ ಅನೇಕ ವರ್ಷಗಳಿಂದ ಇದನ್ನು ಬಾಕಿ ಇಟ್ಟಿರುತ್ತಾರೆ. ದುರ್ದೈವದ ಸಂಗತಿ ಏನೆಂದರೆ ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನಲ್ಲಿ ಓಂಕಾರ್ ಎಂಬಾತ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಉದ್ಯೋಗಕ್ಕೆ ಸೇರುತ್ತಾನೆ. ಅವನಿಗೆ ಸಿಂಧುತ್ವ ಪ್ರಮಾಣಪತ್ರ ಕೊಡದ ಕಾರಣ ಆತ ನೇಣು ಹಾಕಿಕೊಂಡು ಸತ್ತುಹೋಗುತ್ತಾನೆ. ಅನೇಕರು ಈ ರೀತಿಯ ಅರ್ಜಿಗಳನ್ನು ಬಾಕಿ ಉಳಿಸಿಕೊಂಡಿದ್ದಾರೆ. ಶ್ರೀಮತಿ ಚಂದ್ರಲೇಖಾ, D/o Shivasharanappa ಎನ್ನುವವರು ಒಂದು ರಿಟ್ ಅರ್ಜಿ ಸಂಖ್ಯೆ 201392/21 ಯನ್ನು ದಾಖಲಿಸಿದ್ದಾರೆ. ಆ ರಿಟ್ ಅರ್ಜಿಯಲ್ಲಿ ಸ್ಪಷ್ಟವಾದ ಆದೇಶ ಬಂದಿದೆ; *'In view of the aforesaid submission the Writ Petition is*

*disposed of and the Respondent No.5 is directed to consider the case of the petitioner for issuance of Caste Verification Certificate within a period of three months from the date of receipt of the certified copy of this Order."* ಸ್ಪಷ್ಟವಾದ ಆದೇಶ ಇದ್ದರೂ ಕೂಡ ಮತ್ತು ಸಿ.ಆರ್.ಇ. ಸೆಲ್‌ನವರು ಹೇಳಿದರೂ ಕೂಡ ಇನ್ನೂ ಅವರಿಗೆ ಸಿಂಧುತ್ವ ಪ್ರಮಾಣ ಪತ್ರ ಕೊಡುತ್ತಿಲ್ಲ. ಮೂರು ತಿಂಗಳ ಒಳಗೆ ಕೊಡಿ ಎಂದರೂ ಕೊಡುತ್ತಿಲ್ಲ. ಈ ರೀತಿಯಾದ ಅನೇಕ ಪ್ರಕರಣಗಳಿವೆ. ನನ್ನ ಪ್ರಶ್ನೆ ಏನೆಂದರೆ ದಿನಾಂಕ 30.10.2022 ರಂದು ಮಾನ್ಯ ಮುಖ್ಯಮಂತ್ರಿಗಳು ಕಲಬುರಗಿಗೆ ಬಂದಿದ್ದರು. ಅವರ ಭೇಟಿಯ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಧರಣಿ ಸತ್ಯಾಗ್ರಹವನ್ನು ಮಾಡಿದ ಮೇಲೆ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳನ್ನು ಕರೆದು ಏಕೆ ಕೊಡುತ್ತಿಲ್ಲ, ಕೊಡಬೇಕು ಎಂದು ಆದೇಶವನ್ನು ಮಾಡಿದ್ದಾರೆ. ಇದುವರೆಗೆ ಯಾವುದನ್ನೂ ಸರಿಪಡಿಸಿಲ್ಲ.

ದಯವಿಟ್ಟು ಮಾನ್ಯ ಸಚಿವರು confusion ಮಾಡಿಕೊಳ್ಳಬಾರದು. "ಗೊಂಡ ಕುರುಬ" ಅಥವಾ "ಕುರುಬ ಗೊಂಡ" ಎನ್ನುವಂತಹ ವಿಷಯವೇ ಬೇರೆ. ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರದ ಹಂತದಲ್ಲಿ 1996ರಿಂದ ಪ್ರಯತ್ನ ನಡೆದಿದೆ. ಆ ಭಾಗದ ಮಾನ್ಯ ಕೇಂದ್ರ ಸಚಿವರಾದ ಶ್ರೀ ಭಗವಂತ ಖೂಬಾ ಅವರಾಗಲೀ, ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಸುಭಾಷ್ ಜಾಧವ್ ಅವರು, ಹಿಂದಿನ ಸಭಾಪತಿಯವರು ಮತ್ತು ನಮ್ಮ ಸದಸ್ಯರಾದ ಮಾನ್ಯ ರಘುನಾಥರಾವ್ ಮಲ್ಕಾಪೂರೆ ಹೀಗೆ ನಾವೆಲ್ಲರೂ ಸೇರಿ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಅದು ಬೇರೆ ವಿಚಾರ. ಆ ವಿಚಾರವನ್ನು ನಾನು ಇದರ ಜೊತೆಗೆ ಜೋಡಿಸುತ್ತಿಲ್ಲ. ಆ ವಿಚಾರದ ಬಗ್ಗೆ ಕೇಂದ್ರ ಏನು ನಿರ್ಣಯವನ್ನು ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಲಿ. ಆದರೆ ಇಲ್ಲಿ ಪ್ರಶ್ನೆ ಏನೆಂದರೆ ಶಾಲಾ ದಾಖಲಾತಿಗಳನ್ನು ನೋಡಿ ಅವರ ತಂದೆ ತಾಯಿ ಗೊಂಡ ಸಮುದಾಯಕ್ಕೆ ಸೇರಿದ್ದರೂ ಈ ಪ್ರಮಾಣಪತ್ರವನ್ನು ನೀಡುವುದಿಲ್ಲ ಎಂದರೆ ಏನರ್ಥ? ಯಾರಿಗೆ ಕೊಡುತ್ತಾರೆ; ಏಕೆ ಕೊಡುತ್ತಿಲ್ಲ ಎನ್ನುವುದಕ್ಕೆ ಯಾರೂ ಸ್ಪಷ್ಟತೆಯನ್ನು ಕೊಡುತ್ತಿಲ್ಲ. ಕೊಡುವುದಿಲ್ಲ ಎಂದರೆ ಹಿಂಬರಹ ಕೊಡಲಿ. ನ್ಯಾಯಾಲಯಕ್ಕೆ ಹೋಗಿ ನಾಲ್ಕು ದಿನಗಳಲ್ಲಿ ಅವರು ಆದೇಶವನ್ನು ತರುತ್ತಾರೆ.

ಮಾನ್ಯ ಸಚಿವರು ಇದರ ಬಗ್ಗೆ ದಯವಿಟ್ಟು ಸ್ವಲ್ಪ ಗಂಭೀರವಾಗಿ ಗಮನ ಹರಿಸಿ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ಕೊಡಬೇಕು. ಬೀದರ್, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಗೊಂಡ ಎಂದು ದಾಖಲೆಗಳನ್ನು ಕೊಟ್ಟಲ್ಲಿ ದಯವಿಟ್ಟು ಪ್ರಮಾಣಪತ್ರವನ್ನು issue ಮಾಡಬೇಕು. ಬಾಕಿ ಇರುವ 25 ಕೇಸ್‌ಗಳನ್ನು ತಕ್ಷಣವೇ ವಿಲೇವಾರಿ ಮಾಡಿ ಅವರಿಗೆ ಸಿಂಧುತ್ವ ಪ್ರಮಾಣಪತ್ರವನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಡಾ:ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಈ ಹಿಂದೆ ಬೆಂಗಳೂರಿನಲ್ಲಿ ನಡೆದಂತಹ ಅಧಿವೇಶನದಲ್ಲಿಯೂ ಈ ವಿಷಯವನ್ನು ಎತ್ತಿದ್ದೆವು. ಮಾನ್ಯ ಮಲ್ಕಾಪೂರೆಯವರು ಮತ್ತು ನಾನು ಈ ವಿಷಯವನ್ನು ಎತ್ತಿದಾಗ ಸರ್ಕಾರವು ದಿನಾಂಕ 15.03.2022 ರಂದು ಆದೇಶವನ್ನು ಹೊರಡಿಸಿತು. ಜಾರಿ ನಿರ್ದೇಶನಾಲಯಕ್ಕೆ ಒಳಪಟ್ಟಿರುವಂತಹ ಈ ಒಂದು ಸಿಂಧುತ್ವ ಪ್ರಮಾಣ ಪತ್ರವನ್ನು ಜಿಲ್ಲಾ ಸಮಿತಿಗೆ ಒಪ್ಪಿಸಬೇಕೆಂದು ಅವರು ಹೇಳಿದರು. ಇಲ್ಲಿ ಉತ್ತರ ಕರ್ನಾಟಕದ ಎರಡು ಜಾತಿಗಳಿಗೆ ಸಂಬಂಧಪಟ್ಟಂತೆ ಸಮಸ್ಯೆ ಇದೆ. ಒಂದು ಟೋಕ್ರಿ ಕೋಲಿ, ಡೋರ್ ಕೋಲಿ, ಮತ್ತೊಂದು ಗೊಂಡ ಮತ್ತು ರಾಜಗೊಂಡ. ಟೋಕ್ರಿ ಕೋಲಿ, ಡೋರ್ ಕೋಲಿ ದಿನಾಂಕ 20.11.2011 ರ ಪ್ರಕಾರ 1,12,000 ಜನಸಂಖ್ಯೆಯನ್ನು ಹೊಂದಿದ್ದು, ಗೊಂಡ ಮತ್ತು ರಾಜಗೊಂಡ 1,58,000 ಜನಸಂಖ್ಯೆ ಹೊಂದಿದೆ. ಇದು ಕೇವಲ ಬೀದರ್ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಬೀದರ್, ರಾಯಚೂರು, ಯಾದಗಿರಿ, ಕಲಬುರಗಿ, ಬಾಗಲಕೋಟೆ, ವಿಜಯಪುರ ಈ ಜಿಲ್ಲೆಗಳನ್ನು ಒಳಗೊಂಡಿದೆ. ಆದರೆ ಸಮಸ್ಯೆ ಏನೆಂದರೆ, ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರ್‌ಗಳು ಸಿಂಧುತ್ವ ಪ್ರಮಾಣಪತ್ರವನ್ನು ಕೊಡಬೇಕಾದಾಗ ತುಂಬಾ ಕಾಡಿಸುತ್ತಾರೆ. ಎಲ್ಲಿಯವರೆಗೆ ಹೋಗುತ್ತಾರೆ ಎಂದರೆ ಅವರ ತಂದೆಯ ಟಿ.ಸಿ.ಯನ್ನು ಕೊಟ್ಟರೂ ಸರಿ ಹೋಗುವುದಿಲ್ಲ.

**(...ಮುಂದು)**

**(1184) 26-12-2022 (6.10) ಕೆಜಿ-ವಿಕೆ (ಸಭಾಪತಿಯವರ ಉಪಸ್ಥಿತಿ)**

**ಡಾ॥ ತಳವಾರ್ ಸಾಬಣ್ಣ (ಮುಂದು.,):-**

ಅವರ ಸಂಬಂಧಿಕರ ಸುಮಾರು 30-40 ಜನರ ಟಿ.ಸಿಗಳನ್ನು ಸಂಗ್ರಹಣೆ ಮಾಡುತ್ತಾರೆ. 30-40 ಟಿಸಿಗಳನ್ನು ಸಂಗ್ರಹಣೆ ಮಾಡಿದ ಮೇಲೆಯೂ ಸಹ, ಅವುಗಳಲ್ಲಿ ಯಾವುದೋ ಒಂದು ತಪ್ಪನ್ನು ಕಂಡುಹಿಡಿದು ಅವರಿಗೆ ಸಿಂಧುತ್ವ ಪ್ರಮಾಣ ಕೊಡುವುದನ್ನು reject ಮಾಡುತ್ತಿದ್ದಾರೆ. ಈಗಾಗಲೇ ಸುಮಾರು 200-300 ಜನರು ನೇಮಕಾತಿ ಹೊಂದಿ ಆದೇಶಕ್ಕಾಗಿ ಕಾಯುತ್ತಿರುವಂತಹ ಸಮಯಲ್ಲಿ ಅವರಿಗೆ ಸಿಂಧುತ್ವ ಪ್ರಮಾಣ ಪತ್ರ ಸಿಗದಿರುವುದರಿಂದ ಅವರು ಒದ್ದಾಡುತ್ತಿದ್ದಾರೆ. ಇದೊಂದು ಬಹು ಮುಖ್ಯವಾದಂತಹ ವಿಷಯವಾಗಿದೆ. ಇದರಲ್ಲಿ ಮೂರು ವಿಷಯಗಳಿವೆ. ಮೊದಲನೆಯದಾಗಿ, ಪಾಲಕರು ಮತ್ತು ಅಭ್ಯರ್ಥಿಗಳು ಸಿಂಧುತ್ವ ಪ್ರಮಾಣ ಪತ್ರ ಸಿಗದೆ ಒದ್ದಾಡುತ್ತಿದ್ದಾರೆ. ಎರಡನೆಯದಾಗಿ, ಬೀದರ್ ಜಿಲ್ಲೆಯಲ್ಲಿರುವಂತಹ ಗೊಂಡ ಸಮುದಾಯಕ್ಕೆ ಸೇರಿದ ಹೆಣ್ಣು ಮಗಳು ಮದುವೆ ಮಾಡಿಕೊಂಡು ಬೀದರ್ ಜಿಲ್ಲೆಯಿಂದ ಕಲಬುರಗಿ ಜಿಲ್ಲೆಗೆ ಬಂದಾಗ, ಕಲಬುರಗಿ ಜಿಲ್ಲೆಯವರು ನೀವು ಬೀದರ್ ಜಿಲ್ಲೆಯ ವಾಸಿಯಾಗಿದ್ದೀರಿ, ಹಾಗಾಗಿ, ನಿನಗೆ ಸಿಂಧುತ್ವ ಪ್ರಮಾಣ ಪತ್ರ ಕೊಡುವುದಿಲ್ಲವೆಂದು ಹೇಳಿದ್ದಾರೆ. ಹೀಗಾಗಿ, ಆ ಹೆಣ್ಣು ಮಗಳಿಗೆ ಆ ಕಡೆ ಬೀದರ್ ಜಿಲ್ಲೆಯಲ್ಲಿಯೂ ಸಿಂಧುತ್ವ ಪ್ರಮಾಣ ಪತ್ರ ಸಿಗುವುದಿಲ್ಲ, ಈ ಕಡೆ ಕಲಬುರಗಿ ಜಿಲ್ಲೆಯಲ್ಲಿಯೂ ಸಿಂಧುತ್ವ ಪ್ರಮಾಣ ಪತ್ರ ಸಿಗುವುದಿಲ್ಲ. ಅವರು ಜಾತಿ ಪ್ರಮಾಣ ಪತ್ರವನ್ನು ಹೊಂದಿದ್ದರೂ ಸಹ, ಅವರ ಟಿ.ಸಿ. ಯಲ್ಲಿ ಜಾತಿ ನಮೂದಾಗಿದ್ದರೂ ಸಹ ಅವರಿಗೆ ಸಿಂಧುತ್ವ ಪ್ರಮಾಣ ಪತ್ರ ಸಿಗುತ್ತಿಲ್ಲ. ಇದನ್ನು ಬಹಳ ಗಂಭೀರವಾಗಿ ವಿಚಾರ ಮಾಡಬೇಕಾಗಿದೆ. ಮೂರನೆ ವಿಷಯ ಏನೆಂದರೆ, ಈಗಾಗಲೇ ಜಾತಿ ಪ್ರಮಾಣ ಪತ್ರ ಪಡೆದುಕೊಂಡು ಸುಮಾರು 30-40 ವರ್ಷಗಳ ಕಾಲ ನೌಕರಿ ಮಾಡಿದ್ದಾರೆ. ಅವರು ನೌಕರಿ ಮಾಡಿ ನಿವೃತ್ತಿ ಹೊಂದಿದ್ದಾರೆ. ಆದರೆ, ಅವರಿಗೆ ಇದುವರೆಗೂ pension settle ಆಗಿಲ್ಲ. ಅವರ ಮಕ್ಕಳಿಗೆ ಜಾತಿ ಪ್ರಮಾಣ ಪತ್ರ ಕೊಡುತ್ತಿಲ್ಲ. ಇವರ ಮಕ್ಕಳು ನೇಮಕಾತಿ ಹೊಂದಿದ್ದರೂ ಸಹ, ಇವರಿಗೆ ಸಿಂಧುತ್ವ ಪ್ರಮಾಣ ಪತ್ರ ಸಿಗುತ್ತಿಲ್ಲ. ಈ ಎಲ್ಲಾ ವಿಷಯಗಳನ್ನು ಒಟ್ಟಾಗಿ ಇಟ್ಟುಕೊಂಡು ಉತ್ತರ ಕರ್ನಾಟಕದಲ್ಲಿರುವಂತಹ ಟೋಕರ್‌ಕೊಲಿ, ಡೋಕರ್‌ಕೊಲಿ ಹಾಗೂ ಗೊಂಡ ಮತ್ತು ರಾಜಗೊಂಡ

ಸಮುದಾಯದವರಿಗೆ ನ್ಯಾಯವನ್ನು ಕೊಡಬೇಕು. ಈಗಾಗಲೇ ಅವರು ಎಸ್‌ಟಿ ಪ್ರಮಾಣ ಪತ್ರದಲ್ಲಿ ಸಂವಿಧಾನದ ಪ್ರಕಾರ ಬಂದಿದ್ದಾರೆ. ಇವರು ಸಂವಿಧಾನದ ಪ್ರಕಾರ ಬಂದರೂ ಸಹ, ಯಾವ ಕಾರಣಕ್ಕಾಗಿ ಅಧಿಕಾರಿಗಳು ಸತಾಯಿಸುತ್ತಿದ್ದಾರೆ ಎನ್ನುವುದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರೂ ಎಲ್ಲವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ತಾವು ಉತ್ತರ ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಜಾತಿ ಪ್ರಮಾಣ ಪತ್ರವನ್ನು ಹಾಗೂ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡುವಂತಹ ಅಧಿಕಾರ ಕಂದಾಯ ಇಲಾಖೆಯ ಜಿಲ್ಲಾಧಿಕಾರಿಯವರಿಗೆ ಬರುತ್ತದೆ. ಇದರ ಬಗ್ಗೆ ನಾಳೆಯೇ ಅವರಿಗೆ ಮರುಸೂಚನೆಗಳನ್ನು ಕೊಟ್ಟು ಆದೇಶವನ್ನು ಹೊರಡಿಸಿ ಯಾವು ಯಾವುದನ್ನು reject ಮಾಡಿದ್ದೀರಿ ಅವುಗಳನ್ನು ಮರುಪರಿಶೀಲನೆ ಮಾಡಿಕೊಡಬೇಕೆಂಬ ಸೂಚನೆಯನ್ನು ಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರು ಎಲ್ಲವನ್ನು ಹೇಳಿದ್ದಾರೆ. ತಾವು ತಕ್ಷಣ ಆ ಬಗ್ಗೆ ಒಂದು ನಿರ್ದೇಶನವನ್ನು ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆಪೇಕ್ಷೆಪಟ್ಟರೆ, ನಾನು, ಮಾನ್ಯ ಸಚಿವರಾದ ಶ್ರೀರಾಮುಲು ಹಾಗೂ ಕಂದಾಯ ಇಲಾಖೆಯ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಕಾರ್ಯದರ್ಶಿಯವರೊಂದಿಗೆ ಚರ್ಚೆ ಮಾಡಿ ಒಂದು ಸಭೆಯನ್ನು ಮಾಡಿ ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರು ಡಿ.ಸಿ ಯವರ ಬಗ್ಗೆ ಹೇಳಿದ್ದಾರೆ. ತಾವು ಕ್ರಮತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾಳೆಯೇ ಸಂಬಂಧಪಟ್ಟ ಡಿ.ಸಿ.,ಯವರಿಗೆ ಅಧಿಕೃತವಾದ ಸೂಚನೆಯನ್ನು ಕೊಟ್ಟು ಈ ಸಮಸ್ಯೆಯನ್ನು ಪರಿಹಾರ ಮಾಡಿ

ಎಂದು ಹೇಳುತ್ತೇವೆ. ಮಾನ್ಯ ಸದಸ್ಯರಿಗೆ ಇದರಿಂದ ಸಮಾಧಾನವಾಗದಿದ್ದರೆ ಎಲ್ಲಾ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಆಯಿತು.

**ಉ) ವಿಷಯ:- ಗ್ರಾಮ ಪಂಚಾಯಿತಿಗಳನ್ನು ಆರ್ಥಿಕವಾಗಿ ಸದೃಢಗೊಳಿಸಿ ಪರಿಪೂರ್ಣ ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ನಿಯಮಗಳನ್ನು ರೂಪಿಸುವ ಕುರಿತು.**

-- -

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿಗಳನ್ನು ಆರ್ಥಿಕವಾಗಿ ಸದೃಢಗೊಳಿಸಿ ಪರಿಪೂರ್ಣ ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ನಿಯಮಗಳನ್ನು ರೂಪಿಸುವ ಕುರಿತು ಮಾನ್ಯ ಮುಖ್ಯ ಮಂತ್ರಿಯವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯ ಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**(ಉತ್ತರ ಪ್ರತಿಯನ್ನು ಲಗತ್ತಿಸಲಾಗಿದೆ)**

ಮಾನ್ಯ ಸಭಾಪತಿಯವರೇ, ಸಂವಿಧಾನದ 73ನೇ ತಿದ್ದುಪಡಿಯನ್ವಯ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಆಧಿನಿಯಮ 1993 ರಲ್ಲಿ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪ್ರಕಾರ್ಯಗಳನ್ನು ನಿರ್ದಿಷ್ಟಪಡಿಸಲಾಗಿದೆ. ತಳ ಹಂತದಲ್ಲಿ ಸ್ವಯಂ ಆಡಳಿತ ಘಟಕಗಳಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿಗಳು ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಜನರ ಭಾಗವಹಿಸುವಿಕೆಯನ್ನು ಖಾತರಿಪಡಿಸಲು ಜನ ವಸತಿ, ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಹಾಗೆಯೇ, ಪ್ರಕರಣ 61 ಎ ರಡಿ ಗ್ರಾಮ ಪಂಚಾಯಿತಿ ಸಮಿತಿಗಳ ಅಡಿಯಲ್ಲಿ ಸುಮುದಾಯದ ಪ್ರತಿನಿಧಿಗಳ ಪಾಲ್ಗೋಳ್ಳುವಿಕೆ ಮೂಲಕ ಕಾರ್ಯನಿರ್ವಹಿಸಲು ವಿಷಯವಾರು ಉಪ ಸಮಿತಿಗಳನ್ನು ರಚಿಸಲು ಅವಕಾಶ ಕಲ್ಪಿಸಲಾಗಿದೆ. ಅದಕ್ಕೆ ಉತ್ತರದಲ್ಲಿ ಕಾಣಿಸಿರುವಂತೆ, ಸಮಿತಿಗಳನ್ನು ರಚನೆ ಮಾಡಲಾಗಿದೆ ಎಂದು ಹೇಳಿದ್ದೆ. 1 ರಿಂದ 10 ಸಮಿತಿಗಳನ್ನು ರಚನೆ ಮಾಡಲಾಗಿದೆ. ಇದರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಬಾಲವಿಕಾಸ ಸಮಿತಿ) ನಿಯಮಗಳು 2020, ಇದರಲ್ಲಿ ಅಂಗನವಾಡಿ ಸೇರಿದಂತೆ, ಚಿಕ್ಕ ಮಕ್ಕಳ ಮೇಲೆ ಕಣ್ಣಾಗವಾಲು ಮಾಡಿ ಆ ಮಕ್ಕಳ ಸುರಕ್ಷತೆಯನ್ನು ಕಾಪಾಡುವುದಕ್ಕೆ ಸಮಿತಿಗಳನ್ನು ಮಾಡಿದ್ದೇವೆ. ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ ಎಂದು ಮಾಡಿದ್ದೇವೆ. ಆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವಂತಹ ಮಹಿಳೆಯರ ಸಂಕ್ಷರಣೆಗೆ ಬೇಕಾದಂತಹ ಯೋಜನೆಗಳನ್ನು ಇದು ರೂಪಿಸುತ್ತದೆ. ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಇದೆ. ಈ ಮೊದಲು ಜಿಲ್ಲಾ ವ್ಯಾಪ್ತಿಯಲ್ಲಿದ್ದ ಕೆರೆಗಳನ್ನು ಈಗ ಗ್ರಾಮ ಪಂಚಾಯಿತಿಗೆ ಬಿಟ್ಟುಕೊಟ್ಟ ಹಿನ್ನೆಲೆಯಲ್ಲಿ ಅದರಲ್ಲಿ ಉದ್ಯೋಗ ಖಾತರಿಯೂ ಸೇರಿದಂತೆ ಯಾವ ರೀತಿ ಅಭಿವೃದ್ಧಿ ಪಡಿಸಬೇಕು ಮತ್ತು ಸಂರಕ್ಷಣೆ ಮಾಡಬೇಕು, ಒತ್ತುವರಿಗಳನ್ನು ಯಾವ ರೀತಿ ನಿಯಂತ್ರಣ ಮಾಡಬೇಕು ಎನ್ನುವುದರ ಬಗ್ಗೆ ಈ ಸಮಿತಿ ಹೇಳುತ್ತದೆ. ಇದೇರೀತಿ ಗ್ರಾಮ ಪಂಚಾಯಿತಿ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿ, ಗ್ರಾಮ ಪಂಚಾಯಿತಿ ಜೀವ ವೈವಿದ್ಯ ನಿರ್ವಹಣಾ ಸಮಿತಿ ಮತ್ತು ಕರ್ನಾಟಕ ಗ್ರಾಮ ಪಂಚಾಯಿತಿಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಸಹ ಈ ನಿಯಮದಡಿ ರಚನೆ ಮಾಡಲಾಗಿದೆ. ಗ್ರಾಮ ಪಂಚಾಯಿತಿಗಳು ಸರ್ಕಾರದಂತೆ ಕೆಲಸಗಳನ್ನು ಮಾಡಬೇಕು ಮತ್ತು ಜನಸಾಮಾನ್ಯರ ನಡುವೆ

ಇರುವಂತಹ ಸಮಸ್ಯೆಗಳನ್ನು ಪರಹಾರ ಮಾಡುವುದಕ್ಕೆ ಜನಪ್ರತಿನಿಧಿಗಳ ಸಹಭಾಗಿತ್ವವನ್ನು ಗ್ರಾಮಸಭೆ, ವಾರ್ಡ್ ಸಭೆ ಮತ್ತು ಇತರ ಸಭೆಗಳ ಮೂಲಕ ನಿಯಂತ್ರಿಸಬೇಕು ಎನ್ನುವುದು ಇದರ ಮೂಲ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಇದು ಸಮರ್ಪಕವಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತಮ್ಮ ಮೂಲಕ ತರುತ್ತೇನೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರು ಸಹ ನನ್ನಂತೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ 4 ಬಾರಿ ಆಯ್ಕೆಯಾಗಿ ಬಂದಿದ್ದಾರೆ. ಈ ವಿಷಯದ ಬಗ್ಗೆ ಮಾತನಾಡುತ್ತಾ ಹೋದರೆ, ಇದಕ್ಕೆ ಸಮಯ ಸಾಕಾಗುವುದಿಲ್ಲ. ಈ ವಿಷಯ ಬಹಳ ಮಹತ್ವವಾಗಿದೆ. ಮಾನ್ಯ ಸಚಿವರು ಅವರು ನೀಡಿರುವಂತಹ ಉತ್ತರ ಅವರಿಗೆ ನಿಜವಾಗಲೂ ಸಹ ಸಮಾಧಾನ ತಂದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಆ ಮಟ್ಟದ ಸ್ವಯಂ ಆಡಳಿತವನ್ನು ಪಂಚಾಯಿತಿಗಳಿಗೆ strengthen ಮಾಡುವುದಕ್ಕೆ ಕೊಟ್ಟಿದ್ದೇವೆ ಎಂದು ಮಾನ್ಯ ಸಚಿವರೇ ಹೇಳಬೇಕು. ಮಾನ್ಯ ಸಚಿವರು ಅವರ ಆತ್ಮ ಸಾಕ್ಷಿಗೆ ಅನುಗುಣವಾಗಿ ಮಾತನಾಡಬೇಕು. ಗ್ರಾಮ ಪಂಚಾಯಿತಿಗಳ ವ್ಯವಸ್ಥೆ ಬಹಳ ಶೋಚನಿಯವಾದಂತಹ ಪರಿಸ್ಥಿತಿಯಲ್ಲಿವೆ. ಮಹಾತ್ಮ ಗಾಂಧೀಜಿಯವರು ಕಂಡಂತಹ ಗ್ರಾಮ ಸ್ವರಾಜ್‌ನ ಕನಸ್ಸು ಸ್ಥಳೀಯ ಸಂಸ್ಥೆಗಳು ಸ್ಥಳೀಯ ಆಡಳಿತವಾಗಿ ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸುವಂತಹ ಒಂದು ಸಮರ್ಥ ಆಡಳಿತ ಸಂಸ್ಥೆಗಳಾಗಿ ಕಟ್ಟಬೇಕೆಂದು, ಈ ಸಂವಿಧಾನದ ವಿಧಿ ವಿಧಾನಡಿಯಲ್ಲಿ ತಿದ್ದುಪಡಿಗಳನ್ನು ಮಾಡಿ ನಿಯಮ 73 ಮತ್ತು 74 ರಡಿ ಪ್ರತಿಷ್ಠಾಪನೆಯಾಗಿದೆಯೋ, ಅದು ಇವತ್ತು ಉಳಿದಿಲ್ಲ. ಪಂಚಾಯಿತಿಗಳು ಸ್ಥಳೀಯ ಆಡಳಿತಗಳಾಗಿಲ್ಲ. ಅವು ಸ್ವಯಂಪೂರ್ಣ ಸ್ವತಂತ್ರ ಸಂಸ್ಥೆಗಳಾಗಿ ಇಲ್ಲ. ನಾವು ಗ್ರಾಮ ಪಂಚಾಯಿತಿಗಳ ಸದಸ್ಯಗಿಂತ ಮೇಲುಮಟ್ಟದ ಜನಪ್ರತಿನಿಧಿಗಳು ಇರಬಹುದು, ಅವರು ಶಾಸಕರು ಇರಬಹುದು ಅಥವಾ ಇತರರು ಇರಬಹುದು. ಅವರೊಟ್ಟಿಗೆ ಅಧಿಕಾರಿಗಳು ಸೇರಿ ಆ ಪಂಚಾಯಿತ್‌ರಾಜ್ ವ್ಯವಸ್ಥೆಯನ್ನೇ ದಿನೇ ದಿನೇ ಹಾಳುಗೆಡುವಂತಹ ರೀತಿಯಲ್ಲಿ ನಡೆಯುತ್ತಿದೆ. ಪಂಚಾಯಿತಿಗಳಲ್ಲಿ ಯಾವ ಅಧಿಕಾರವು ಸಮರ್ಪಕವಾಗಿಲ್ಲ.

ಮಾನ್ಯ ಸಭಾಪತಿಯವರೇ, ಈಗ ಎಲ್ಲವನ್ನು ಹೇಳುವುದರ ಬದಲಿಗೆ, ಕೆಲವು ವಿಚಾರಗಳನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಆರ್ಥಿಕವಾಗಿ ಬಹಳಷ್ಟು ಪಂಚಾಯಿಗಳು ಸಬಲವಾಗಿಲ್ಲ. ಉದಾಹರಣೆಗೆ, 'ಜಲಜೀವನ್ ಮಿಷನ್ ಯೋಜನೆ'. ಇದಕ್ಕೆ ಕೇಂದ್ರ ಸರ್ಕಾರದ್ದು 45% ಮತ್ತು ರಾಜ್ಯ ಸರ್ಕಾರದ್ದು 45% ಇದ್ದು, ಫಲಾನುಭವಿಗಳದ್ದು 10% ಇದೆ. ಇದರಲ್ಲಿ implement ಮಾಡಬೇಕೆಂದು ಹೇಳಿದೆ. ಇವರು 15$^{th}$ Finance ನಲ್ಲಿ ಜಲಜೀವನ್ ಮಿಷನ್‌ಗೆ 15 ರಿಂದ 45% ವರೆಗೂ ಅಲ್ಲಿಂದ ಹಣವನ್ನು ತೆಗೆದುಕೊಂಡಿದ್ದಾರೆ. ಉದಾಹರಣೆಗೆ, ಸ್ಥಳೀಯ ಸಂಸ್ಥೆಗಳಲ್ಲಿ ಅವರ ಸ್ವಂತ ನಿಧಿಗಳು, ಅವರು ತೆರಿಗೆಳನ್ನು ಸಂಗ್ರಹಣೆ ಮಾಡಿರುವಂತಹ ನಿಧಿಗಳು ಇರಬಹುದು ಅಥವಾ ಇನ್ನಿತರ ಯಾವುದೇ ನಿಧಿಗಳ ಮುಖಾಂತರ ಆ ಸ್ಥಳೀಯ ಅಭಿವೃದ್ಧಿಗಳನ್ನು ಮಾಡುವುದಕ್ಕೆ ಅಲ್ಲಿ ಅವರು ಅವಶ್ಯಕತೆಗೆ ಅನುಗುಣವಾಗಿ ಕಾರ್ಯಕ್ರಾಮಗಳನ್ನು ರೂಪಿಸುವುದಕ್ಕೆ ಹೊರಟ ಸಂದರ್ಭದಲ್ಲಿ ಅವರ ಮೇಲೆ EO and CEO ರವರು ಸವಾರಿ ಮಾಡುತ್ತಾರೆ. ಯಾವುದೋ rooftop solar ಅಂತೆ, rooftop solar ಬಗ್ಗೆ ಬೆಂಗಳೂರಿನ ವಿಧಾನಸೌಧದಲ್ಲಿ ಕುಳಿತುಕೊಂಡು ಸಚಿವಾಲಯದ ಕಾರ್ಯದರ್ಶಿಯವರ ಹಂತದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. rooftop solar 2 ಲಕ್ಷ ರೂಪಾಯಿಗಳದ್ದು ಅಥವಾ ಮೂರು ಲಕ್ಷ ರೂಪಾಯಿಗಳದ್ದೂ ಗೊತ್ತಿಲ್ಲ. ಅದಕ್ಕೆ 6 ರಿಂದ 8 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿ ಅಲ್ಲಿಂದಲೇ ಏಜೆನ್ಸಿಯವರನ್ನು ಕಳುಹಿಸುತ್ತಾರೆ. PDO and Panchayat ಅಧಿಕಾರಿಯವರಿಗೆ ಬಿಲ್ಲು ಅಥವಾ ಚಕ್ಕು ಕೊಡುವಂತಹ ಕೆಲಸ ಮಾತ್ರ ಇರುತ್ತದೆ.

ಮಾನ್ಯ ಸಭಾಪತಿಯವರೇ, ಇನ್ನೂ EO ಹಂತಕ್ಕೆ ಹೋದರೆ, ಆ ಪಂಚಾಯಿತಿಯವರು phenyl ತೆಗೆದುಕೊಳ್ಳುವುದಕ್ಕೂ ಸ್ವಾತಂತ್ರ ಇಲ್ಲ. ಅವರು ಒಂದು ಕಡೆ 3-4 ಏಜೆನ್ಸಿಯವರನ್ನು ನಿಗದಿ ಮಾಡಿರುತ್ತಾರೆ. ಪೇಪರ್, ಪೇನ್ ಮತ್ತು ಪುಸ್ತಕದಿಂದ ಹಿಡಿದು ಇಂತಹ ಏಜೆಸ್ಸಿಯಿಂದಲೇ ತೆಗೆದುಕೊಳ್ಳಬೇಕೆಂದು ಮಾಡಿರುತ್ತಾರೆ. ಅವರು ಅಂತಹ ಕಡೆಗಳಲ್ಲಿ ತೆಗೆದುಕೊಳ್ಳಲಿಲ್ಲವೆಂದರೆ, PDO ರವರಿಗೆ ಬೆದರಿಕೆ ಹಾಕುತ್ತಾರೆ. 15ನೇ ಹಣಕಾಸು ಯೋಜನೆಗೆ ಕೇಂದ್ರದಿಂದ ಬರುವಂತಹ ಹಣದಲ್ಲಿ ಆ ಸದಸ್ಯರು ಕುಳಿತಿಕೊಂಡು. ಕೇಂದ್ರ ಸರ್ಕಾರದ ನಿರ್ದೇಶನ ಪ್ರಕಾರ, ಅದರಲ್ಲಿ CEO, EO ಯಾರು

ಸಹ ಹಸ್ತಕ್ಷೇಪ ಮಾಡುವಂತಿಲ್ಲ. ರಾಜ್ಯ ಸರ್ಕಾರವೂ ಸಹ ಹಸ್ತಕ್ಷೇಪ ಮಾಡುವಂತಿಲ್ಲ. ಸ್ಥಳೀಯ ಸಂಸ್ಥೆಗಳ ಗ್ರಾಮ ಪಂಚಾಯಿತಿಗಳ ಸದಸ್ಯರು ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ಅದರ approval ಗೆ EO and CEO ರವರಿಗೆ ಹೋಗಬೇಕು ಇವರಿಗೆ ಹೋಗುವುದಕ್ಕೂ ಮುಂಚೆಯೇ ರಾಜ್ಯ ಸರ್ಕಾರ ಅದರಲ್ಲಿ ವಿದ್ಯುತ್ ಬಿಲ್ಲನ್ನು ಕಟ್ಟುಮಾಡಿಕೊಂಡಿರುತ್ತಾರೆ. ಈ ವಿದ್ಯುತ್ ಬಿಲ್ ವಿಚಾರವಾಗಿ ಹೋದರೆ, 2015 ರವರೆಗೂ ರಾಜ್ಯ ಸರ್ಕಾರ ಸಂಪೂರ್ಣವಾಗಿ ಪಂಚಾಯಿತಿಗಳು ಭರಿಸಬೇಕಾಗಿರುವಂತಹ ವಿದ್ಯುತ್ ಬಿಲ್ಲನ್ನು ಭರಿಸಿದ್ದೇವೆಂದು ಹೇಳುತ್ತಾರೆ, ಇನ್ನೂ ಯಾವುದು ಬಾಕಿ ಇಲ್ಲವೆಂದು ಹೇಳುತ್ತಾರೆ. ಆದರೆ, ಹಳೆಯ ಬಾಕಿಯೂ ಸೇರಿದಂತೆ ಇವತ್ತಿಗೂ ಸಹ ಬಿಲ್ಲು ಬರುತ್ತಿದೆ. 15ನೇ ಹಣಕಾಸು ಯೋಜನೆಯಲ್ಲಿ ಇವತ್ತಿಗೂ ವಿದ್ಯುತ್ ಬಿಲ್ಲುಗಳನ್ನು ಕಟ್ ಮಾಡುವಂತಹ ಪ್ರಕ್ರಿಯೆ ಇವತ್ತಿಗೂ ಸಹ ನಡೆಯುತ್ತಿದೆ. ಪಂಚಾಯಿತಿ ಸದಸ್ಯರಿಗೆ ಸರ್ಕಾರವೆ ವೇತನ ಕೊಡಬೇಕು ಎನ್ನುವುದನ್ನು ಹಲವಾರು ಬಾರಿ ಹಲವಾರು ವೇದಿಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇರಬಹುದು, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇರಬಹುದು ಅಥವಾ ಜನಪ್ರತಿನಿಧಿಗಳು ಇರಬಹುದು ಪಂಚಾಯಿತಿ ಸದಸ್ಯರಿಗೆ ವೇತನವನ್ನು ಕೊಡುತ್ತೇವೆಂದು ಘೋಷಣೆ ಮಾಡುತ್ತಾರೆ. ಆದರೆ, ಇವತ್ತು ಆ ಸದಸ್ಯರಿಗೆ 15ನೇ ಹಣಕಾಸು ಯೋಜನೆಯ ಮೇಲೆಯೆ, ಅವರ ವೇತನ depend ಆಗಿದೆ. ಅವರಿಗೆ ಸ್ವತಂತ್ರವಾಗಿ ನಿರ್ವಹಣೆ ಮಾಡುವಂತಹ ಕಿಂಚ್ಚಿತ್ತು ಅಧಿಕಾರ ಇಲ್ಲ. ನಮ್ಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ವಿಚಾರವಾಗಿ ಇರುವಂತಹ electricity bill ಏನಿದೆ, ಅದಕ್ಕೆ ಮೀಟರ್ ಇಲ್ಲ. ಆ ಬಿಲ್ಲನ್ನು ಒಂದು ಅಂದಾಜು ಮೇಲೆ ಕೊಡುತ್ತಿದ್ದಾರೆ. ಇವತ್ತಿನ ದಿವಸ ಕುಡಿಯುವ ನೀರಿಗೆ ಇರಬಹುದು, ವ್ಯವಸಾಯ ಮಾಡುವುದಕ್ಕೆ ಇರಬಹುದು ಅಥವಾ ಕೈಗಾರಿಕೆಗಳಗೆ ಇರಬಹುದು ಹಾಗೂ ಇತರ ಕ್ಷೇತ್ರಗಳಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು ಆಗುತ್ತದೆ.

**(ಮುಂದು.,)**

**(1185) 26-12-2022 (6.20) ಎಂವಿ-ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ರವಿ (ಮುಂದು...):-**

ಆದರೆ, ಪಂಚಾಯಿತಿಗಳಲ್ಲಿ ಕುಡಿಯುವ ನೀರಿಗೆ ಕೊಡುತ್ತಿರುವಂತಹ ವಿದ್ಯುತ್ ದರವನ್ನು ಹೋಲಿಕೆ ಮಾಡಿದಾಗ, ಅವರಿಗೆ ಅದು ಕಮರ್ಷಿಯಲ್ ದರದಲ್ಲಿ ಸಿಗುತ್ತಿದೆ. ಅವರಿಗೆ ಯಾವುದೇ ರಿಯಾಯಿತಿ ಇಲ್ಲದೇ ಇರುವುದನ್ನು ನೋಡುತ್ತಿದ್ದೇವೆ. ಈಗ ಪಂಚಾಯಿತಿಗಳನ್ನು strengthen ಮಾಡಬೇಕು ಎನ್ನುವುದಾದರೆ, ನಿಜಕ್ಕೂ ಮೊದಲು ಹಸ್ತಕ್ಷೇಪ ನಿಲ್ಲಬೇಕು. ಸ್ಥಳೀಯಾಡಳಿತಗಳನ್ನು ಪ್ರಬಲವಾಗಿ ಮಾಡಬೇಕು ಎಂದರೆ, ಅವರಿಗೆ ಜವಾಬ್ದಾರಿ ನಕ್ಷೆಯನ್ನು ನಿಗದಿಪಡಿಸಬೇಕು. ಆ ಜವಾಬ್ದಾರಿ ನಕ್ಷೆಯನ್ನು ನಿರ್ವಹಣೆ ಮಾಡುವುದಕ್ಕೆ ಮತ್ತು ಅಧಿಕಾರಿಗಳನ್ನು ನಿಯಂತ್ರಣಕ್ಕೆ ತಂದು, ಪಂಚಾಯಿತಿಗಳನ್ನು ಆರ್ಥಿಕವಾಗಿ strengthen ಮಾಡಬೇಕಾಗುತ್ತದೆ. ಆಗ ಗ್ರಾಮಸಭೆಗಳಲ್ಲಿ ತೆಗೆದುಕೊಳ್ಳುವಂತಹ ನಿರ್ಣಯ ಎಲ್ಲೂ ಸಹ ಉಲ್ಲಂಘನೆಯಾಗುವುದಿಲ್ಲ. ಗ್ರಾಮಸಭೆಗಳಲ್ಲಿ ಆಗುವಂತಹ ನಿರ್ಣಯಗಳು ಅನುಷ್ಠಾನಗೊಳ್ಳುವಂಥದ್ದು ಆಗುತ್ತದೆ ಎಂದು ಜನಸಾಮಾನ್ಯರಲ್ಲಿ ನಂಬಿಕೆ ಮೂಡುವಂತಹ ರೀತಿಯಲ್ಲಿ ಗ್ರಾಮಸಭೆಗಳನ್ನು ಮಾಡಬೇಕು. ಗ್ರಾಮಸಭೆಗಳಲ್ಲಿ ಆ ಗ್ರಾಮಪಂಚಾಯಿತಿಗೆ ಸಂಬಂಧಪಟ್ಟಂತಹ ಎಲ್ಲಾ ಅಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಲೇಬೇಕು ಎಂದು ಮಾಡಬೇಕಾಗುತ್ತದೆ. ಬಾಪೂಜಿ ಸೇವಾ ಕೇಂದ್ರಗಳ ಬಗ್ಗೆ ಹೇಳುವುದಾದರೆ, ಇವತ್ತು ತಾಲ್ಲೂಕು ಕಛೇರಿ ಮತ್ತು ನಾಡಾ ಕಛೇರಿಗಳಿಗೆ ಅಲೆಯುವಂತಹ ಅವಶ್ಯಕತೆ ಇಲ್ಲ.

**ಸಭಾಪತಿಯವರು:-** ಮಾನ್ಯ ಎಸ್.ರವಿಯವರೆ, ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಂತ್ರಿಯಾಗಿದ್ದಾಗ, ಗ್ರಾಮಸಭೆಗಳು ನಡೆಯುವಾಗ ಅದರ ವಿಡಿಯೋ ಮಾಡಿ, ಪ್ರತಿಯೊಂದನ್ನು ಕಳುಹಿಸಬೇಕೆಂದು ಮಾಡಿದ್ದೆ. ಈಗ ಅದು ಎಲ್ಲಿಗೆ ಹೋಯಿತು ಎಂದು ಗೊತ್ತಿಲ್ಲ. ಈಗ ಅದನ್ನು ಕೇಳಬೇಕು ಅಷ್ಟೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದು, ಬಹಳ ಸೂಕ್ತವಾದ ಸಲಹೆ. ಆ ರೀತಿ ವಿಡಿಯೋ ಮಾಡಿದಾಗ ಯಾರು ಹಾಜರಿರುತ್ತಾರೆ? ಆ ಗ್ರಾಮಸಭೆಯ ವೈಖರಿ ಏನು ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಆಗುತ್ತದೆ. ಇದೂ ಕೂಡ ಒಂದು ಸೂಕ್ತವಾದ ಸಲಹೆ. ಇದನ್ನು ಕೂಡ ಅಳವಡಿಸಿಕೊಳ್ಳಬೇಕು. ಅದು ಕಡ್ಡಾಯವಾಗಿ ಆಗುವಂತೆ ಮಾಡಬೇಕು. ಇನ್ನು ಬಾಪೂಜಿ ಸೇವಾ ಕೇಂದ್ರಗಳ ಬಗ್ಗೆ ಹೇಳುವುದಾದರೆ, ಡಾಟಾ ಎಂಟ್ರಿ

ಮಾಡಿಕೊಳ್ಳುವುದಕ್ಕೆ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡಬೇಕು. ಇದಕ್ಕೆ ಸೇವಾ ಶುಲ್ಕ ಪಡೆಯಬೇಕು. ಪಂಚಾಯಿತಿಗಳು ಸೇವಾ ಶುಲ್ಕ ಪಡೆದು ನಿರ್ವಹಣೆ ಮಾಡತಕ್ಕಂಥ ಅಧಿಕಾರವನ್ನು ನೀಡಬೇಕು. ವಿದ್ಯಾರ್ಹತೆ ಇರುವಂತಹವರನ್ನು ಎಲೆಕ್ಟ್ರಿಷಿಯನ್ ಆಗಿ ನೇಮಕ ಮಾಡಿಕೊಳ್ಳಬೇಕು. ಸಮಿತಿಗಳನ್ನು ನೇಮಕ ಮಾಡಿದ್ದೇವೆಂದು ಮಾನ್ಯ ಸಚಿವರು ಹೇಳಿದರು. ಇದರ ಜೊತೆಗೆ ಪಂಚಾಯಿತಿ ಮಟ್ಟದ ಕೆ.ಡಿ.ಪಿ. ಸಭೆಗಳನ್ನು ಮಾಡಿ, ಆ ಕೆ.ಡಿ.ಪಿ. ಸಭೆಯನ್ನು ಸಂವಿಧಾನಬದ್ಧವಾಗಿ ಶಾಸನಬದ್ಧಗೊಳಿಸಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಈ-ಸ್ವತ್ತಿಗೆ ಸಂಬಂಧಪಟ್ಟಂತೆ ಅರ್ಜಿ ಹಾಕುವಂಥದ್ದಕ್ಕೆ ಬದಲಾವಣೆ ತರಬೇಕು. ಈಗ ಪಂಚತಂತ್ರದಲ್ಲಿ ಯಾರ್‍ಯಾರ ರೆಕಾರ್ಡ್ ಆಗಿದೆ, ಎಲ್ಲರಿಗೂ ಸಹ ಈ-ಸ್ವತ್ತು ಸಿಗಬೇಕು. ಇದಕ್ಕಾಗಿ ಜನಸಾಮಾನ್ಯರು ಏಕೆ ಅಲೆಯಬೇಕು? ನಮ್ಮ ಭಾಗದ ಗ್ರಾಮೀಣ ಭಾಗದಲ್ಲಿ ಈ-ಸ್ವತ್ತು ಮಾಡಿಕೊಡುವುದಕ್ಕೆ ಹದಿನೈದರಿಂದ ಇಪ್ಪತ್ತು ಸಾವಿರವಿದೆ. ಈ-ಸ್ವತ್ತಿಗೆ ನಿಜಕ್ಕೂ ಬಹಳ ಅನ್ಯಾಯ ಮಾಡುತ್ತಿದ್ದಾರೆ. ಈ-ಸ್ವತ್ತು ಗ್ರಾಮೀಣ ಭಾಗದಲ್ಲಿ ವಾಸ ಮಾಡುತ್ತಿರುವಂತಹ ಜನರ ಹಕ್ಕು. ಈಗ ಮುಖ್ಯವಾಗಿ ಈ-ಸ್ವತ್ತು ಮಾಡುವುದಕ್ಕೆ ಇರುವಂತಹ ಸಮಸ್ಯೆ ಏನೆಂದರೆ, ಅದು ಯಾವುದೋ ಓಬಿರಾಯನ ಕಾಲದ ಗ್ರಾಮಠಾಣ. ಅವತ್ತು ಗ್ರಾಮಗಳಲ್ಲಿ 50, 100 ಮತ್ತು 200 ಮನೆಗಳಿದ್ದವು. ಆದರೆ, ಇವತ್ತು ಗ್ರಾಮಗಳು ಬೆಳೆಯುತ್ತಿವೆ. ರೈತರು ತಮ್ಮ ಹೊಲಗಳಲ್ಲಿ ಗ್ರಾಮಠಾಣದ ಪಕ್ಕ ತಮ್ಮ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವರಿಗೆ ಯಾವುದೇ ಕಾರಣಕ್ಕೂ ಸಹ ಈ-ಸ್ವತ್ತು ಲಭ್ಯವಿಲ್ಲ. ಇದಕ್ಕೆ ಎಲ್ಲಿಯಾದರೂ ಕೊನೆಯಾಗಬೇಕಲ್ಲವೇ? ದಯಮಾಡಿ ಅದನ್ನು ಮಾಡಬೇಕು. ಈ-ಸ್ವತ್ತಿಗೆ ಸಂಬಂಧಿಸಿದಂತೆ ಒಂದು ಆಂದೋಲನದ ಮಾದರಿಯಲ್ಲಿ ಒಂದು ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ಇನ್ನು ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ಸಂಬಂಧಪಟ್ಟಂತೆ ಒಂದು ಶಿಷ್ಟಾಚಾರವನ್ನು ತೆಗೆದುಕೊಂಡು ಬರಲಿ. ಅವರು ಅಲ್ಲಿನ ಸ್ಥಳೀಯಾಡಳಿತದ ಮುಖ್ಯಸ್ಥ. ಅವರಿಗೆ ಗೌರವ ಕೊಡುವುದಿಲ್ಲ. ಸರ್ಕಾರಿ ಕಾರ್ಯಕ್ರಮಗಳಲ್ಲಿ ಆಹ್ವಾನ ಪತ್ರಿಕೆಗಳಲ್ಲಿ ಅವರ ಹೆಸರನ್ನು ಮುದ್ರಣ ಮಾಡುವುದಿಲ್ಲ. ಶಿಲಾಫಲಕಗಳಲ್ಲಿ ಅವರ ಹೆಸರನ್ನು ಹಾಕುವುದಿಲ್ಲವೆಂದರೆ, ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಯಾರು ಗೌರವ ಕೊಡುತ್ತಾರೆ? ಈಗ ಅವರು ಸಿ.ಇ.ಓ. ಕಛೇರಿಗೆ ಹೋದರೆ, ಅವರನ್ನು ಭೇಟಿಯೇ ಮಾಡುವುದಿಲ್ಲ. ಈಗ ಗ್ರಾಮಪಂಚಾಯಿತಿ ಅಧ್ಯಕ್ಷ ಅಂದರೆ ಏನಕ್ಕೋ ಬಂದಿದ್ದಾರೆಂದು ತಿಳಿದುಕೊಳ್ಳುತ್ತಾರೆ. ಅವರು ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಗೌರವ ಕೊಡುವಂಥದ್ದು ಆಗಬೇಕು. ಗ್ರಾಮಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳು ತಮ್ಮ ಕೆಲಸ ಮಾಡಿಸಿಕೊಳ್ಳುವುದಕ್ಕೆ ಹೋಗುವಂತಹ ವಿಚಾರದಲ್ಲಿ ಅವರಿಗೆ ಗೌರವ ಕೊಡುವಂತಹ ಕೆಲಸ

ಆಗಬೇಕು. ಈಗ ಗೌರವಧನವನ್ನು ಒಂದು ಸಾವಿರದಿಂದ ಎರಡು ಸಾವಿರಕ್ಕೆ ಏರಿಸಿದ್ದಾರೆ. ಆದರೆ, ಅದು ಅಭಿನಂದನಾರ್ಹವಾದ ಸಂಗತಿಯಲ್ಲ. ಆದರೆ, ನಮ್ಮ ಬೇಡಿಕೆ ಬಹಳಷ್ಟು ಇತ್ತು. ಅವರು ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಓಡಾಡುವುದಕ್ಕೆ ಕನಿಷ್ಠ ಪಕ್ಷ ಅವರಿಗೆ ಒಂದು ಬಸ್ ಪಾಸ್ ವ್ಯವಸ್ಥೆ ಕಲ್ಪಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, 2008ರಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ 250/- ರೂಪಾಯಿಗಳ ಗೌರವಧನ ನೀಡಲಾಗಿತ್ತು. ಆ ನಂತರ ಮಾನ್ಯ ಹೆಚ್.ಕೆ.ಪಾಟೀಲರು ಬಂದಾಗ, ನಾವೆಲ್ಲರೂ ವಿರೋಧ ಪಕ್ಷದಲ್ಲಿ ಕುಳಿತು ಒತ್ತಾಯ ಮಾಡುತ್ತಿದ್ದಾಗ ತಾವು ಸಹ ಅಲ್ಲಿ ಇದ್ದೀರಿ. ಕೊನೆಗೆ ಗೌರವಧನ ಒಂದು ಸಾವಿರ ರೂಪಾಯಿಗಳಿಗೆ ಬಂದು ನಿಂತಿತು. ಈಗ ಗ್ರಾಮಪಂಚಾಯಿತಿ ಸದಸ್ಯರಿಗೆ ಒಂದು ಸಾವಿರದಿಂದ ಎರಡು ಸಾವಿರ ರೂಪಾಯಿಯಾಗಿದೆ. ಉಪಾಧ್ಯಕ್ಷರಿಗೆ ಎರಡು ಸಾವಿರದಿಂದ ನಾಲ್ಕು ಸಾವಿರ ರೂಪಾಯಿಯಾಗಿದೆ. ಅಧ್ಯಕ್ಷರಿಗೆ ಮೂರರಿಂದ ಆರು ಸಾವಿರ ರೂಪಾಯಿಯಾಗಿದೆ. ಆರ್ಥಿಕ ಸಮಸ್ಯೆಗಳ ನಡುವೆ ಕೂಡ, ಗೌರವಾನ್ವಿತ ಮುಖ್ಯಮಂತ್ರಿಗಳಿಗೆ ಸುಮಾರು 137 ಕೋಟಿ ರೂಪಾಯಿಗಳ ಹೆಚ್ಚು ಹೊರೆ ಬೀಳುತ್ತದೆ. ಈಗ ಆ ಕಡೆ ನಿಂತಿರುವವರು ಪ್ರೀತಿಯಿಂದ ಇಷ್ಟನ್ನಾದರೂ ಮಾಡಿದ್ದೀರಿ, ಅದಕ್ಕೆ ನಿಮಗೆ ಒಳ್ಳೆಯದಾಗಲಿ ಎಂದು ಹೇಳಬೇಕಲ್ಲವೇ? ಮಾನ್ಯ ಸದಸ್ಯರು ಇಷ್ಟು ಜಿಗುಟಾಗುವುದು ಸರಿಯಲ್ಲ. ಮಾನ್ಯ ಎಸ್.ರವಿಯವರು ದುಪ್ಪಟಾಗಿರುವುದನ್ನು ಕಡಿಮೆ ಎಂದು ಹೇಳುತ್ತಾರೆ. ಒಂದು ಸಾವಿರದಿಂದ ಎರಡು ಸಾವಿರವಾಗಿದೆ. ಎರಡು ಸಾವಿರದಿಂದ ನಾಲ್ಕು ಸಾವಿರವಾಗಿದೆ. ಮೂರು ಸಾವಿರದಿಂದ ಆರು ಸಾವಿರವಾಗಿದೆ. ಮತ್ತೆ ಮಾನ್ಯ ಸದಸ್ಯರು ಇಷ್ಟು ಜಿಗುಟಾಗಬಾರದು. ಅವರು ಇದಕ್ಕಾದರೂ ಸಹ ನಮಗೆ ಒಂದು ಅಭಿನಂದನೆಯನ್ನು ಹೇಳಬೇಕು.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅಭಿನಂದನೆಗಳನ್ನು ಕೇಳಿ ಪಡೆದುಕೊಳ್ಳಬಾರದು. ಅವರು ಜಾಸ್ತಿ ನೀಡಿದ್ದರೆ, ಅಭಿನಂದನೆಯನ್ನು ಮನಃಪೂರ್ವಕವಾಗಿ ಮಾಡುತ್ತಿದ್ದೆ.

**ಶ್ರೀ ಅರಬೈಲು ಹೆಬ್ಬಾರ್ ಶಿವರಾಂ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅಭಿನಂದನೆಯನ್ನು ಹೇಳಲಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಹೇಳುವುದಕ್ಕೆ ಏನು ಸಮಸ್ಯೆ ಇಲ್ಲ. ಅಭಿನಂದನೆಯನ್ನು ಹೇಳುತ್ತೇನೆ. ಆದರೆ, ಗ್ರಾಮಪಂಚಾಯಿತಿ ಸದಸ್ಯತ್ವ ಇರುವವರೆಗೂ ಅವರು ತಾಲ್ಲೂಕು ಮಟ್ಟದಲ್ಲಿ ಓಡಾಡುವುದಕ್ಕೆ ಒಂದು ಬಸ್ ಪಾಸ್‌ನ ವ್ಯವಸ್ಥೆ ಮಾಡಲಿ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇರುವ ಅವಧಿಯವರೆಗೂ ಜಿಲ್ಲಾಮಟ್ಟದಲ್ಲಿ ಓಡಾಡುವುದಕ್ಕೆ ಬಸ್ ಪಾಸ್‌ನ ವ್ಯವಸ್ಥೆ ಮಾಡಲಿ. ಈಗ ಗೌರವಧನವನ್ನು ಏನು 15$^{th}$ Finance ನಲ್ಲಿ deduct ಮಾಡುತ್ತಾರೋ, ಇಲ್ಲವೇ ಅದನ್ನು ಸರ್ಕಾರದ ಹಣದಲ್ಲಿ ನೀಡುತ್ತಾರೋ ಎಂದು ತಿಳಿಸಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅದು ಸರ್ಕಾರದ ಹಣ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಈಗ 15$^{th}$ Finance ನಲ್ಲಿ ಕೊಡುವುದಾದರೆ, ಅಭಿನಂದನೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಆದರೆ, ಅದನ್ನು ಸರ್ಕಾರ ಕೊಟ್ಟರೆ ಸರಿ.

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಎಸ್.ರವಿಯವರೆ, ಮುಂದಿನ ಚುನಾವಣೆಯಲ್ಲಿ ಈ ಯಾವ ಸದಸ್ಯರು ಇರುವುದಿಲ್ಲ. ಆದರೆ, ನೀವು ಅವರ ಪರವಾಗಿ ಬ್ಯಾಟಿಂಗ್ ಮಾಡುತ್ತಿದ್ದೀರಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಈಗ ಯಾರು ಇರುತ್ತಾರೋ ಇರುವುದಿಲ್ಲವೋ ಗೊತ್ತಿಲ್ಲ.

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೆ, ಇರಲಿ ಬಿಡಿ. ಈಗ ಎಲ್ಲರೂ ಸಹ ಅದನ್ನೇ ಮಾಡುತ್ತಾರೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಈಗ calling attention ಗೆ ಸಮಯ ಇದ್ದಿದ್ದರೆ, ಅದಕ್ಕೆಲ್ಲಾ ಉತ್ತರ ನೀಡುತ್ತಿದ್ದೆ. ಕನಿಷ್ಟಪಕ್ಷ ಮಾನ್ಯ ಮಂತ್ರಿಗಳ ಕಾರ್ಯದರ್ಶಿಗಳು ಇರುವುದರಿಂದ ಅವರು ಕೇಳುತ್ತಿದ್ದಾರೆ. ಗ್ರಾಮಪಂಚಾಯಿತಿಗಳಲ್ಲಿ ಇ.ಓ. ಮತ್ತು ಸಿ.ಇ.ಓ.ಗಳ ಹಸ್ತಕ್ಷೇಪ ನಿಲ್ಲಬೇಕು.

**ಸಭಾಪತಿಯವರು:-** ಮಾನ್ಯ ಎಸ್.ರವಿಯವರೆ, ನೀವು ಅದನ್ನು ಹೇಳಿದ್ದೀರಿ. ಮಾನ್ಯ ಮಂತ್ರಿಗಳು ಉತ್ತರ ನೀಡಲಿ ಬಿಡಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಇನ್ನು ಕೇವಲ ಎರಡು-ಮೂರು ಪಾಯಿಂಟ್‌ಗಳಿವೆ. ಆ ನಂತರ ಮಾತನಾಡುವುದಕ್ಕೆ ತಾವು ನನಗೆ ಅವಕಾಶ ಮಾಡಿಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂವಿಧಾನದ 73ನೇ ಕಲಂ ಅನ್ನು ತಿದ್ದುಪಡಿ ಮಾಡಿ, ಗ್ರಾಮಪಂಚಾಯಿತಿಗಳು ಒಂದು ಸ್ವತಂತ್ರ ಸರ್ಕಾರದಂತೆ ಕೆಲಸ ಮಾಡಬೇಕೆಂಬುದು ಸರ್ಕಾರದ ಆಶಯವಾಗಿದೆ. ಅದಕ್ಕೆ ಪೂರಕವಾಗಿ ನಮ್ಮಲ್ಲಿ ಪಂಚಾಯತ್ ಸ್ವರಾಜ್ಯ ಕಾಯಿದೆಯನ್ನು ಮಾನ್ಯ ರಮೇಶ್‌ಕುಮಾರ್ ರವರ ವರದಿಯ ಆಧಾರದ ಮೇಲೆ ತಂದಿರುವುದನ್ನು ನಾವು ಮತ್ತು ನೀವುಗಳೆಲ್ಲರೂ ಚರ್ಚೆ ಮಾಡುವುದನ್ನು ತಾವು ಗಮನಿಸಿದ್ದೀರಿ. ಇದು ಒಂದು ಭಾಗ. ಈಗ ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಯವರು ಹೇಳುತ್ತಿರುವುದು ಏನೆಂದರೆ, ಗ್ರಾಮಪಂಚಾಯಿತಿಗೆ ಬೇರೆ ಬೇರೆ ರೀತಿಯ ಶಕ್ತಿಗಳನ್ನು ಕೊಡಬೇಕು ಮತ್ತು ಬೇರೆ ಬೇರೆ ರೀತಿಯ ಸಮಿತಿಗಳನ್ನು ಮಾಡಬೇಕು ಮತ್ತು ಆ ಸಮಿತಿಗಳೆಲ್ಲಾ ಸಕ್ರಿಯವಾಗಿರಬೇಕು ಎಂದು. ಕೆಲವೊಂದು ಬಾರಿ ಏನಾಗುತ್ತದೆಂದರೆ, ಒಂದು ರೂಪದಲ್ಲಿ ಕಾಯಿದೆ ಬಂದು ಬಿಡುತ್ತದೆ. ಅದಕ್ಕೆ ನಿಯಮಗಳನ್ನು ಮಾಡಲಾಗುತ್ತದೆ. ಅದನ್ನು ಕೆಳಹಂತದಲ್ಲಿ ಅನುಷ್ಠಾನ ಮಾಡುವಂತಹವರು ಯಾರು ಎಂಬುದು ಚರ್ಚೆಯಾಗಿದೆ. ಉದಾಹರಣೆಗೆ; ಶಾಲಾಭಿವೃದ್ಧಿಯ ರಚನೆಯನ್ನು ಗ್ರಾಮಪಂಚಾಯಿತಿಯ ನೇತೃತ್ವದಲ್ಲಿಯೇ ಮಾಡಬೇಕು. ಕರ್ನಾಟಕ ರಾಜ್ಯದಲ್ಲಿ ನಲವತ್ತೆಂಟು ಸಾವಿರ ಸರ್ಕಾರಿ ಶಾಲೆಗಳು ಬರುತ್ತವೆ. ಆರು ಸಾವಿರ ಗ್ರಾಮಪಂಚಾಯಿತಿಗಳಿವೆ. ಒಂದೊಂದು ಗ್ರಾಮಪಂಚಾಯಿತಿಗಳಲ್ಲಿ ನಾಲ್ಕು, ಐದು ಮತ್ತು ಆರು ಶಾಲೆಗಳಿವೆ. ಬಹುತೇಕ ಗ್ರಾಮಪಂಚಾಯಿತಿಗಳಲ್ಲಿ ಅಧ್ಯಕ್ಷರ ಗಮನಕ್ಕೂ ಬಾರದೆ ಶಾಲಾಭಿವೃದ್ಧಿ ಸಮಿತಿ ರಚನೆಯಾಗಿರುವುದನ್ನು ನಾವೆಲ್ಲರೂ ಸಹ ನೋಡಿದ್ದೇವೆ. ಅನುಷ್ಠಾನ ಮಾಡುವಂತಹ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಮತ್ತು ವಿಶೇಷವಾಗಿ ಸ್ಥಳೀಯಾಡಳಿತ ಪ್ರತಿನಿಧಿಗಳು, ನಾವು ಯಾರು ಆ ಕ್ಷೇತ್ರದಿಂದ ಅಯ್ಕೆಯಾಗಿರುತ್ತೇವೆ. ನಾವುಗಳು ಗ್ರಾಮಪಂಚಾಯಿತಿಗಳಿಗೆ ಹೋಗಿ ಒಂದು ಗಂಟೆಯ ಸಮಯ ಅಲ್ಲಿ ಕುಳಿತುಕೊಂಡು, ಅಲ್ಲಿನ ಪಿ.ಡಿ.ಓ. ಮತ್ತು ಸಹ ಸದಸ್ಯರ ಅಭಿಪ್ರಾಯ ಏನು? ಮತ್ತು ಒಟ್ಟು ಆಡಳಿತಾತ್ಮಕವಾದ ವ್ಯವಸ್ಥೆಗಳಲ್ಲಿ ಲೋಪ ಎಲ್ಲಿ ಆಗಿದೆ ಮತ್ತು ಅದನ್ನು ಸರಿಪಡಿಸುವುದು ಹೇಗೆ ಎಂದು ಗಟ್ಟಿಯಾಗಿ ನಿಂತು ಕೆಲಸ ಮಾಡಿದರೆ, ಬಹುತೇಕ ಗ್ರಾಮಪಂಚಾಯಿತಿಗಳಲ್ಲಿ ಕೆಲಸ ಸಮರ್ಪಕವಾಗಿ ಆಗುತ್ತದೆ. ಮಾನ್ಯ ಹೆಚ್.ಕೆ.ಪಾಟೀಲರು ಇದ್ದಾಗ, ಯಾವ ಗ್ರಾಮಪಂಚಾಯತ್ ಸದಸ್ಯ ತನ್ನ ವಾರ್ಡ್‌ನಲ್ಲಿ ಗ್ರಾಮಸಭೆಯನ್ನು ಸೂಸೂತ್ರವಾಗಿ ಮಾಡಿಲ್ಲವೋ, ಆ ಗ್ರಾಮಪಂಚಾಯಿತಿಯ ಸದಸ್ಯನ ಸದಸ್ಯತ್ವ ಅನರ್ಹವಾಗುತ್ತದೆ ಎಂದು ಬಹಳ

ಕಠಿಣತೆಯಾಗಿ ಮಾಡುವುದಕ್ಕೆ ಹೋದರು. ಆಗ ಎಲ್ಲಾ ಪಕ್ಷದ ಸದಸ್ಯರು ಹೇಳಿದೆವು. ಗ್ರಾಮಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಇದ್ದಾರೆ. ಗ್ರಾಮಸಭೆಯನ್ನು ಮಾಡುವುದಕ್ಕೆ ಅವರಿಗೆ ಶಕ್ತಿ ಇಲ್ಲದೇ ಇದ್ದರೆ, ಈ ರಾಜಕೀಯ ದುರುದ್ದೇಶಕ್ಕೋಸ್ಕರ ಅವರು ತಮ್ಮ ಸದಸ್ಯತ್ವವನ್ನು ಕಳೆದುಕೊಳ್ಳುವಂತಹ ಅಪಾಯವಿದೆ. ದಯವಿಟ್ಟು ಈ ರೀತಿ ಮಾಡಬಾರದು ಎಂದು ಹೇಳಿದಾಗ, ಅವರು ಇದೇ ಸದನದಲ್ಲಿ ವಾಪಸ್ಸು ತೆಗೆದುಕೊಂಡರು. ಆ ವಿಧೇಯಕ ಕೆಳಮನೆಯಲ್ಲಿ ಪಾಸ್ ಆಗಿತ್ತು. ಅದನ್ನು ಮೇಲ್ಮನೆಯಲ್ಲಿ ವಾಪಸ್ಸು ತೆಗೆದುಕೊಂಡಿದ್ದನ್ನು ಕೂಡ ನೋಡಿದ್ದೇವೆ. ಗ್ರಾಮಪಂಚಾಯಿತಿ ವಾರ್ಡ್ ಸಭೆಗಳು, ಸಾಮಾನ್ಯ ಸಭೆಗಳು ಮತ್ತು ಗ್ರಾಮ ಸಭೆಗಳು ಸಮರ್ಪಕವಾದರೆ, ಆಗ ಅಲ್ಲಿ ಆಡಳಿತಾತ್ಮಕವಾದ ಪಾರದರ್ಶಕತೆ ಬರುತ್ತದೆ ಎಂದು ನಾವು ಕಂಡುಕೊಂಡಿರುವಂತಹ ಸತ್ಯ. ನಾನು ಒಂದು ಗ್ರಾಮಪಂಚಾಯಿತಿಯ ಒಂದು ಗ್ರಾಮಸಭೆಗೆ ಹೋಗಿದ್ದೆ. ಅಲ್ಲಿ ಪರಿಶಿಷ್ಟ ಜಾತಿಯ ಹೆಣ್ಣು ಮಗಳೊಬ್ಬಳು, ಆ ಗ್ರಾಮಪಂಚಾಯಿತಿ ಅಧ್ಯಕ್ಷಳಾಗಿದ್ದಾಳೆ. ಈಗ ಆಶ್ರಯ ಮನೆಗಳು ಮತ್ತು ಇಂದಿರಾ ಆವಾಸ್ ಮನೆಗಳು ಎಂದು ಐದು ಬಂದಿದೆ, ಅದನ್ನು ಯಾರಿಗೆ ಕೊಡಬೇಕೆಂದು ಗ್ರಾಮಸಭೆಯಲ್ಲಿ ತೀರ್ಮಾನ ಮಾಡಬೇಕೆಂದು ಹೇಳುತ್ತಾರೆ. ಅದಕ್ಕೆ ಗ್ರಾಮಪಂಚಾಯಿತಿ ಅಧ್ಯಕ್ಷೆ ಯಾರಿಗೆ ಕೊಡಬೇಕೆಂದು ಹೇಳಿ ಎಂದು ಕೇಳುತ್ತಾಳೆ. ಆ ಸಭೆಯಲ್ಲಿ ಸುಮಾರು ನೂರರಿಂದ ಇನ್ನೂರು ಜನರು ಕುಳಿತುಕೊಂಡಿದ್ದಾರೆ. ಆಗ ಯಾರೋ ಒಬ್ಬ ಮುಂಡಾಸು ಕಟ್ಟಿಕೊಂಡು ಹೇಳುತ್ತಾನೆ. ನೀವು ಯಾರಿಗೆ ಬೇಕಾದರೂ ಕೊಡಿ, ಅಲ್ಲಿ ಮನೆ ಬಿದ್ದು ಹೋಗಿದೆ, ನೀವು ಆ ಮನೆಯ ಬಡವರಿಗೆ ಕೊಡಬೇಕೆಂದು ಹೇಳುತ್ತಾನೆ. ಮತ್ತೊಬ್ಬರು ಹೇಳುತ್ತಾರೆ, ಒಂದು ಮಗು ತಂದೆ-ತಾಯಿಯನ್ನು ಕಳೆದುಕೊಂಡು ಅನಾಥವಾಗಿ, ತನ್ನ ಅಜ್ಜಿಯ ಜೊತೆ ಇದೆ ಎಂದು. ಈಗ ಅವರಿಗೆ ಎರಡನೆ ಮನೆಯನ್ನು ಕೊಡಬೇಕು. ಈ ರೀತಿ ಒಂದು, ಎರಡು, ಮೂರು ಮತ್ತು ನಾಲ್ಕು ಎಂದು ತೀರ್ಮಾನವಾಗಿದೆ. ಆಗ ಪರಿಶಿಷ್ಟ ಜಾತಿಯ ಮಹಿಳಾ ಅಧ್ಯಕ್ಷೆ ಹೇಳುತ್ತಾಳೆ, ಈಗ ನಾವು ಈ ಐದು ಮನೆಗಳಿಗೆ ಸಂಬಂಧಪಟ್ಟಂತೆ ಅದನ್ನು ರೆಕಾರ್ಡ್ ಮಾಡಿದ್ದೇವೆ. ಇನ್ನು ಹೆಚ್ಚುವರಿಯಾಗಿ ಬಂದರೆ ಮಾತ್ರ ನೀಡುತ್ತೇವೆ ಎಂದು ಹೇಳುತ್ತಾಳೆ. ಈ ಗ್ರಾಮ ಸಭೆಯ ನಿರ್ಣಯವನ್ನು ಸುಪ್ರೀಂ ಕೋರ್ಟ್ ಸಹ ಬದಲಾಯಿಸುವಂತಹ ಅಧಿಕಾರವಿಲ್ಲ. ಅಷ್ಟೊಂದು ಸಶಕ್ತವಾಗಿ ನಮ್ಮ ಪಂಚಾಯತ್‌ರಾಜ್ ಮಸೂದೆಯಲ್ಲಿ ಅಡಕವಾಗಿರುವಂತಹ ವಿಷಯ. ಅನೇಕ ಕಡೆಗಳಲ್ಲಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳು ಆಗುತ್ತಿಲ್ಲ. ಅದೇರೀತಿ ಸಾಮಾನ್ಯ ಸಭೆಗಳಲ್ಲೂ ಕೂಡ ವಿವಾದಗಳು ಹಾಗೂ ಚರ್ಚೆಗಳು ಬರುತ್ತಿವೆ. ಆ ಹಿನ್ನೆಲೆಯಲ್ಲಿ ಒಂದಷ್ಟು ಪಾರದರ್ಶಕತೆ ತರಬೇಕಾದರೆ, ಆ ಎಲ್ಲಾ ವ್ಯವಸ್ಥೆಗಳನ್ನು ಮೇಲ್ನೋಟಕ್ಕೆ ಗಮನಿಸುವಂತಹ ಅವಶ್ಯಕತೆಗಳಿವೆ. ತಾಲ್ಲೂಕು ಪಂಚಾಯಿತಿಯಲ್ಲಿ ಸಮಸ್ಯೆ

ಇದೆಯೇ, ಜಿಲ್ಲಾ ಪಂಚಾಯಿತಿಯಲ್ಲಿ ಸಮಸ್ಯೆ ಇದೆಯೇ ಎಂದು ಕೇಳಿದರೆ. ಹೌದು ಸಮಸ್ಯೆ ಇದೆ. ನಾವು ಇದೆಲ್ಲವನ್ನು ಸರಿಪಡಿಸುವಂತಹ ಅವಶ್ಯಕತೆಗಳಲ್ಲಿ ನಮ್ಮ ಪಾತ್ರವೂ ಸಹ ಇದೆ. ಬಹುತೇಕ ಶಾಸಕರು ಕೂಡ ಇದಕ್ಕೆ ಸಹಕಾರ ನೀಡುತ್ತಿದ್ದಾರೆ. ಬಹುತೇಕ ಕಡೆಗಳಲ್ಲಿ ಗ್ರಾಮಸಭೆಗಳು ವ್ಯವಸ್ಥಿತವಾಗಿ ನಡಯುತ್ತಿವೆ. ಆದರೆ, ಕೆಲವು ಕಡೆಗಳಲ್ಲಿ ಜಗಳವಾಗಿ, ವಿವಾದವಾಗಿ, ಚರ್ಚೆಯಾಗಿ ಮತ್ತು ವಾದಗಳಾಗಿ ಕೇಸ್‌ಗಳಾಗಿರುವುದು ಇದೆ. ಆ ಹಿನ್ನೆಲೆಯಲ್ಲಿ ಗ್ರಾಮಸಭೆಗಳು, ವಾರ್ಡ್ ಸಭೆಗಳು ಮತ್ತು ಸಾಮಾನ್ಯ ಸಭೆಗಳು ಸಮರ್ಪಕವಾಗಿ ಆಗಬೇಕೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಎಸ್.ರವಿಯವರು ಈ ವಿಚಾರದ ಬಗ್ಗೆ ಬಹಳ ಅಧ್ಯಯನ ಮಾಡಿದ್ದಾರೆ. ಜಲಜೀವನ್ ಮೀಷನ್‌ಗೆ 15ನೇ ಹಣಕಾಸು ನಿಧಿಯಿಂದ ಕೊಡುತ್ತಿದ್ದೀರಾ ಎಂದು ಕೇಳುತ್ತಿದ್ದಾರೆ. ಹೌದು, ಅದನ್ನು ಆರಂಭದಲ್ಲಿ ಮಾಡಿದ್ದು. ಈಗ ಅದನ್ನು ನಿಲ್ಲಿಸಿ ಸರ್ಕಾರವೇ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಈಗ ಅದಕ್ಕೆ ನಿಯಮಗಳನ್ನು ಬದಲಾಯಿಸಿದ್ದೇವೆ.

**(ಮುಂದು)**

(1186) 26.12.2022 06.30 LL-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು...)**

ನಿಯಮಾವಳಿಗಳನ್ನು ಬದಲಾವಣೆ ಮಾಡಿದ್ದೇವೆ ಮತ್ತು ಕ್ರಿಯಾ ಯೋಜನೆಗೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯವರು ಅನುಮೋದನೆ ಕೊಡಬೇಕೆಂದು ಏನು ಹೇಳುತ್ತಾರೆ. ಅದಕ್ಕೆ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಅನುಮೋದನೆಯನ್ನು ಗ್ರಾಮ ಪಂಚಾಯಿತಿ ಕ್ರಿಯಾ ಯೋಜನೆಗೆ ತೆಗೆದು ಹಾಕಿರುತ್ತೇವೆ. ಏಕೆಂದರೆ, ಅವರು ಕಡತ ತರಿಸಿಕೊಂಡು ಪಿ.ಡಿ.ಓ. ರವರ ಮೇಲೆ ಜೋರು ಮಾಡಿ, ಏನೇನೋ ಸಮಸ್ಯೆಗಳು ಸೃಷ್ಟಿ ಆಗುತ್ತದೆ ಎನ್ನುವ ಕಾರಣಕ್ಕೆ ಅದನ್ನು ತೆಗೆದು ಹಾಕಿದ್ದೇವೆ.

ಇನ್ನು ವಿದ್ಯುತ್ ಬಿಲ್ ಅನ್ನು ಪಂಚಾಯಿತಿಯವರೇ ಪಾವತಿಸುವುದಕ್ಕೆ ವಿದ್ಯುತ್ ಮೀಟರ್ ಇಲ್ಲದೇ ಇದ್ದರೆ, ಏನು ಮಾಡಬೇಕು ಎನ್ನುವುದು ಮಾನ್ಯ ರವಿಯವರ ಚರ್ಚೆಯಾಗಿದೆ. ಯಾವ ಗ್ರಾಮ ಪಂಚಾಯಿತಿಯವರು ನಮ್ಮಲ್ಲಿ ವಿದ್ಯುತ್ ಮೀಟರ್ ಹಾಕಿಲ್ಲವೆಂದು ಹೇಳುತ್ತಾರೆ, ಆ ವ್ಯಾಪ್ತಿಯ ESCOM ಅಥವಾ ವಿದ್ಯುಚ್ಛಕ್ತಿ ಮಂಡಳಿಯವರ ಮೇಲೆ ಸೂಕ್ತವಾದಂತಹ ನಿರ್ದೇಶನ ಆಗುತ್ತದೆ.

ವಿದ್ಯುತ್ ಮೀಟರ್ ನೀಡದೇ, ವಿದ್ಯುತ್ ಬಿಲ್ ಅನ್ನು ತೆಗೆದುಕೊಳ್ಳುವ ಅಧಿಕಾರವಿಲ್ಲ ಎಂದು ಹೇಳಿರುತ್ತೇವೆ. ಗ್ರಾಮ ಸಭೆಗಳ ವಿಡಿಯೋ ಚಿತ್ರೀಕರಣ ಮಾಡಬೇಕೆಂದು ಮಾನ್ಯ ಸದಸ್ಯರು ಮತ್ತು ತಾವು ಕೂಡ ಹೇಳಿದ್ದೀರಿ. ಈಗಾಗಲೇ ಗ್ರಾಮ ಸಭೆಗಳ ವಿಡಿಯೋ ಚಿತ್ರೀಕರಣ ಆಗಿರುತ್ತದೆ. ಆ ಬಗ್ಗೆ ಎಲ್ಲಾ ದಾಖಲೆಗಳು ಸಹ ಇರುತ್ತವೆ. ಯಾವುದಾದರೂ ಗ್ರಾಮ ಸಭೆಗಳ ವಿಡಿಯೋ ಚಿತ್ರೀಕರಣ ಮಾಡದೇ ಇದ್ದರೆ, ಅವರ ವಿರುದ್ಧ ಕ್ರಮ ತೆಗೆದೆಕೊಳ್ಳುವುದಕ್ಕೆ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಅಧಿಕಾರ ನೀಡಿರುತ್ತೇವೆ.

ಇದರ ಜೊತೆಗೆ, 'ಡೇಟಾ ಎಂಟ್ರಿ ಆಪರೇಟರ್' ಗಳನ್ನು ಖಾಯಂ ಮಾಡಬೇಕೆಂದು ಚರ್ಚೆ ಇರುತ್ತದೆ. ಈ ವಿಷಯದಲ್ಲಿ ಒಂದು ಬಾರಿ ಏನಾಗಿತ್ತೆಂದರೆ, ಡೇಟಾ ಎಂಟ್ರಿ ಆಪರೇಟರ್ ಅವರನ್ನು ಖಾಯಂ ಮಾಡುವುದಕ್ಕೆ ಕನಿಷ್ಠ ಜೇಷ್ಠತಾ ಅಂಕಗಳನ್ನು ಅಂದರೆ, ವರ್ಷಕ್ಕೆ ಇಂತಿಷ್ಟು ಅಂಕಗಳೆಂದು ಕೊಡಲಾಗಿತ್ತು. ಆದರೂ ಕೂಡ ಕೆಲವರು ಪಾಸ್ ಆಗಿರುವುದಿಲ್ಲ. ಈ ವಿಷಯದಲ್ಲಿ ಕೆಲವು ಮಾನವೀಯ ನೆಲೆಗಳ ಸಮಸ್ಯೆ ಇರುತ್ತದೆ ಮತ್ತು ಈ ಪ್ರಕರಣ ಕೋರ್ಟ್‌ನಲ್ಲಿರುತ್ತದೆ. ಈ ಮಧ್ಯೆ, "ಬಾಪೂಜಿ ಕೇಂದ್ರ ನಡೆಸುವುದಕ್ಕೆ ಒಬ್ಬ ಸಿಬ್ಬಂದಿ ನಮಗೆ ಸಾಕಾಗುವುದಿಲ್ಲ. ಅದರಲ್ಲಿ ನೂರು ಸೇವೆಗಳನ್ನು ಕೊಡಬೇಕು ಎಂದು ತಾವು ಹೇಳುತ್ತೀರಿ, ಹೇಗೆ ಮಾಡಬೇಕು" ಎನ್ನುವಂತಹ ಚರ್ಚೆ ಬಂತು. 6,000 ಗ್ರಾಮ ಪಂಚಾಯಿತಿಗಳ ಪೈಕಿ ಕೆಲವು ಕಡೆಗಳಲ್ಲಿ ಶೇಕಡ 95 ರಷ್ಟು ತೆರಿಗೆ ವಸೂಲಿಯಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಯಾವುದೋ ಗ್ರಾಮ ಪಂಚಾಯಿತಿಯಲ್ಲಿ ಕಳೆದ 18 ವರ್ಷಗಳಿಂದ ಶೇಕಡ 100 ರಷ್ಟು ತೆರಿಗೆ ವಸೂಲಿಯಾಗುತ್ತಿರುತ್ತದೆ. ಆದರೆ, ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಶೇಕಡ 1.5 ರಷ್ಟು ತೆರಿಗೆ ವಸೂಲಿಯಾಗುತ್ತಿರುತ್ತದೆ. ಈ ಬಗ್ಗೆ ನಾನು ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಸದಸ್ಯರನ್ನು ಕುರಿತು, "ನೀವಾದರೂ ತೆರಿಗೆ ಪಾವತಿ ಮಾಡಿದ್ದರೆ, ಶೇಕಡ 2ರಷ್ಟು ತೆರಿಗೆ ವಸೂಲಿಯಾಗುತ್ತಿತ್ತು" ಎಂದು ಹೇಳಿರುತ್ತೇನೆ. ಅಂದರೆ, ತೆರಿಗೆ ಪಾವತಿ ಮಾಡುವಂತಹ ಅಥವಾ ವಸೂಲಿ ಮಾಡುವಂತಹ ಕಲ್ಪನೆಗಳೇ ಕೆಲವು ಗ್ರಾಮ ಪಂಚಾಯಿತಿಗಳಿಗೆ ಇರುವುದಿಲ್ಲ. ಅದನ್ನು ಅವರು ಮಾಡುತ್ತಲೇ ಇರುವುದಿಲ್ಲ. ಇಂತಹ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರ ಅನುದಾನ ಕೊಟ್ಟರೆ, ಅದನ್ನು ಅವರು ಯಾವ ರೀತಿ ವಿನಿಯೋಗ

ಮಾಡಬಹುದು? ಇದೆಲ್ಲವೂ ಸಹ ನಾವು ಕಣ್ಣಾರೆ ಕಂಡಂತಹ ಮಾಹಿತಿಗಳ ಆಧಾರದ ಮೇರೆಗೆ ನಾನು ಹೇಳುತ್ತಿರುವುದು. ಹಾಗಾಗಿ, ಯಾವ ಗ್ರಾಮ ಪಂಚಾಯಿತಿ ಶೇಕಡ 75 ಕ್ಕಿಂತಲೂ ಹೆಚ್ಚು ತೆರಿಗೆ ವಸೂಲಿ ಮಾಡಿದೆಯೋ, ಆ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚುವರಿ ಸಿಬ್ಬಂದಿಗಳನ್ನು ಹಾಕುವುದಕ್ಕೆ ಸರ್ಕಾರ ಅನುಮತಿ ನೀಡಿರುತ್ತದೆ. ಅಂದರೆ, ಸುಮಾರು ಒಂದೂವರೆ ಸಾವಿರದಿಂದ ಎರಡು ಸಾವಿರ ಗ್ರಾಮ ಪಂಚಾಯಿತಿಗಳು ಶೇಕಡ 75 ರಷ್ಟು ತೆರಿಗೆ ವಸೂಲಿ ಮಾಡಿರುತ್ತವೆ. ಅವರಿಗೆ ಹೊಸ ಸಿಬ್ಬಂದಿಗಳನ್ನು ನೇಮಕ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಟ್ಟಿದ್ದೇವೆ. ಅದರ ಜೊತೆಗೆ, ರೋಸ್ಟರ್ ಅನ್ನು ಮತ್ತು ಮೆರಿಟ್ ಅನ್ನು ಪಾಲಿಸಬೇಕು ಎನ್ನುವಂತಹ ಸೂಚನೆಯನ್ನು ಕೊಡಲಾಗಿದೆ.

ಕೆ.ಡಿ.ಪಿ. ಸಭೆಗಳನ್ನು ಮಾಡಬೇಕು ಮತ್ತು ಇ-ಸ್ವತ್ತಿನ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದು ಹೇಳಿದ್ದಾರೆ. ಗ್ರಾಮ ಪಂಚಾಯಿತಿ ನೌಕರರ ಸಂಬಳ ಮತ್ತು ವಿದ್ಯುತ್ ಬಿಲ್ ಪಾವತಿಸುವುದಕ್ಕೆ ನಮ್ಮ ಶಾಶ್ವತ ಅನುದಾನದಲ್ಲಿ ಈ ಹಿಂದೆ ನೀಡಲಾಗುತ್ತಿದ್ದ ರೂ.900.00 ಕೋಟಿಗಳ ಅನುದಾನವನ್ನು ರೂ.1,200.00 ಕೋಟಿಗಳಿಗೆ ಹೆಚ್ಚು ಮಾಡಿರುತ್ತೇವೆ. ಇ-ಸ್ವತ್ತನ್ನು ಕೊಡುವುದಕ್ಕೆ ಹಕ್ಕಿನ ದಾಖಲೆಗಳು ಬೇಕು ಕೊಡಬೇಕೆಂದು ಹೇಳಿದ್ದಾರೆ. ಇ-ಸ್ವತ್ತನ್ನು ಮಾಡುವುದಕ್ಕೆ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಆಸ್ತಿ ಸಮೀಕ್ಷೆಯನ್ನು ಮಾಡುತ್ತಿದ್ದೇವೆ. ಅದಾದ ನಂತರ, ಅರ್ಜಿ ಕೊಡದೇ ಇ-ಸ್ವತ್ತು ಕೊಡಬೇಕು ಎನ್ನುವಂತಹ ಕಲ್ಪನೆಗಳಿಗೆ ಒತ್ತು ಸಿಗಬಹುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶಿಷ್ಟಾಚಾರದ ಬಗ್ಗೆ ಹೇಳುವುದಾದರೆ, ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಮಾನ್ಯ ಮಂತ್ರಿಗಳು ಸಭೆ ನಡೆಸುತ್ತಾರೆ, ಕಾರ್ಯಕ್ರಮಗಳ ಉದ್ಘಾಟನೆ ಮಾಡುತ್ತಾರೆ. ಅವುಗಳಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಕರೆಯುವುದಿಲ್ಲ ಎನ್ನುವಂತಹ ಭಾವನೆ ಇತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ಜಿಲ್ಲಾಡಳಿತಗಳಿಗೆ ಸುತ್ತೋಲೆ ಕೊಟ್ಟು, ರಾಜ್ಯ ಶಿಷ್ಟಾಚಾರದಡಿ ಕಡ್ಡಾಯವಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಹೆಸರನ್ನು ಹಾಕಬೇಕೆಂದು ಹೇಳಿದ್ದೇವೆ. ಈ ಮಧ್ಯೆ ಗ್ರಾಮ ಪಂಚಾಯಿತಿ ಅಧ್ಯಕ್ಷರ ಕಲ್ಪನೆ ಏನೆಂದರೆ, ನಮ್ಮ ಗ್ರಾಮದಲ್ಲಿ ನಾವು ಸಭೆ ಮಾಡುತ್ತಿದ್ದೇವೆ, ಆ ಸಭೆಯ ಅಧ್ಯಕ್ಷತೆಯನ್ನು ನಾವೇ ವಹಿಸಬೇಕೆಂದು ಹೇಳುತ್ತಿದ್ದಾರೆ. ಇಲ್ಲಿಯವರೆಗೆ ಸದರಿ ಸಭೆಗಳ

ಅಧ್ಯಕ್ಷತೆಯನ್ನು ಮಾನ್ಯ ಶಾಸಕರು ವಹಿಸುತ್ತಿದ್ದರು. ಆ ವಿಷಯ ಪರಿಶೀಲನೆಯಲ್ಲಿದ್ದು, ಅದನ್ನು ಚರ್ಚೆ ಮಾಡೋಣ.

ಅದೇ ರೀತಿ, ಹಲವಾರು ಯೋಚನೆಗಳನ್ನು ಮತ್ತು ಯೋಜನೆಗಳನ್ನು ಮಾನ್ಯ ರವಿಯವರು ಹೇಳಿದ್ದಾರೆ. ಗೌರವಧನವನ್ನು ರಾಜ್ಯ ಸರ್ಕಾರದಿಂದಲೇ ಪಾವತಿ ಮಾಡಲಾಗುತ್ತಿದೆ. ಸಿ.ಇ.ಓ.ರವರು ಮತ್ತು ಇ.ಓ. ಗಳವರು ಗ್ರಾಮ ಪಂಚಾಯಿತಿಗಳ ಮೇಲೆ ಹಸ್ತಕ್ಷೇಪ ಮಾಡಬಾರದೆಂದು ಈಗಾಗಲೇ ಸೂಚನೆ ಕೊಡಲಾಗಿದೆ. ಒಂದು ವೇಳೆ ಅಧಿಕೃತ ಸೂಚನೆಯನ್ನು ಉಲ್ಲಂಘಿಸಿರುವ ದಾಖಲೆಗಳು ಇದ್ದರೆ, ಗ್ರಾಮ ಪಂಚಾಯಿತಿಗಳಿಗೆ ತೊಂದರೆ ಕೊಟ್ಟಿರುವ ಉದಾಹರಣೆ ಇದ್ದರೆ, ಅದನ್ನು ಗಮನಕ್ಕೆ ತನ್ನಿ. ಇನ್ನೊಂದು ಗಂಭೀರ ವಿಚಾರವೇನೆಂದರೆ, ಯಾವುದೋ ಒಂದು ಸುತ್ತೋಲೆ ಹೊರಡಿಸಿ, "ಸೋಲಾರ್ ಘಟಕವನ್ನು ಇಂತಹ ಏಜೆನ್ಸಿಯಿಂದಲೇ ಖರೀದಿ ಮಾಡಬೇಕೆಂದು" ನಿಗದಿ ಮಾಡಿದರೆ, ನಾಳೆಯ ದಿವಸ ಅಲ್ಲಿ ಏನಾದರೂ ಸಮಸ್ಯೆಗಳು ಬಂದರೆ, ಅದನ್ನು ಸರ್ವೀಸ್ ಮಾಡುವವರು ಇರುವುದಿಲ್ಲ. ಹಾಗಾಗಿ, ಅದನ್ನು ನಿಯಂತ್ರಣ ಮಾಡುವುದಕ್ಕೆ ಬೇಕಾಗುವಂತಹ ಆದೇಶ ಕೊಡುತ್ತೇವೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ, ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಸಹ ನಾನು ಒಂದು ಬಾರಿ ಮಾತನಾಡಿದ್ದೆನು. ಅದೇನೆಂದರೆ, ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆರಿಸಿ ಬಂದಿರುವಂತಹ 25 ಸದಸ್ಯರು ಅನೇಕ ಭಾವನೆಗಳನ್ನು ಹೊಂದಿದ್ದಾರೆ. ಅವರ ಜೊತೆಯಲ್ಲಿ ಚರ್ಚೆ ಮಾಡಿ, ಈ ಪಂಚಾಯತ್ ರಾಜ್ ವ್ಯವಸ್ಥೆಗೆ ಸಬಲೀಕರಣ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದಾರೆ. ಸದ್ಯದಲ್ಲಿಯೇ ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮತ್ತೊಮ್ಮೆ ಚರ್ಚೆ ಮಾಡಿ, ಆ ಸಭೆಗೆ ಎಲ್ಲಾ ಸದಸ್ಯರನ್ನು ಕರೆದು, ಅವರೆಲ್ಲರ ಅಭಿಪ್ರಾಯಗಳನ್ನು ಕೇಳಿ, ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಸ್ಥಳೀಯ ಸಂಸ್ಥೆಗಳಿಂದ ಆರಿಸಿ ಬಂದಿರುವಂತಹ 25 ಜನ ಸದಸ್ಯರನ್ನು, ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಭೆ ಕರೆದು ಚರ್ಚೆ ಮಾಡಬೇಕೆಂದು ಬಹಳಷ್ಟು ಸಾರಿ ಈ ಸದನದಲ್ಲಿ ಚರ್ಚೆಯಾಗಿರುತ್ತದೆ. ಹಾಗಾಗಿ, ಅವರೊಂದಿಗೆ

ಚರ್ಚೆ ಮಾಡುವುದಕ್ಕೆ ಅನುವು ಮಾಡಿಕೊಡಿ. ಆ ಸಭೆಯನ್ನು ತಾವು ಮಾಡಲೇಬೇಕು. ನಾವು ಹೇಳಿದ ಮೇಲೂ ಸಭೆ ಮಾಡಿಲ್ಲವೆಂದರೆ ತಪ್ಪಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಹಿಂದೆ ತಾವು ಹೇಳಿದ ತಕ್ಷಣ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದೆನು. ಆದರೆ, ಮಾನ್ಯ ಮುಖ್ಯಮಂತ್ರಿಗಳು ಸಮಯ ಕೊಟ್ಟಿರಲಿಲ್ಲ. ಆದಷ್ಟು ಬೇಗ ಸಭೆ ಕರೆಯುತ್ತೇವೆ. ಆ ಸಭೆಗೆ ಮಾನ್ಯ ರವಿಯವರನ್ನು ಕಡ್ಡಾಯವಾಗಿ ಆಹ್ವಾನಿಸುತ್ತೇವೆ.

**ಸಭಾಪತಿಯವರು:-** ಆಯಿತು.

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪಂಚಾಯತ್ ರಾಜ್ ವ್ಯವಸ್ಥೆಯಿಂದ ಬಂದಿರುವುದರಿಂದ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಚೆನ್ನಾಗಿ ಉತ್ತರ ನೀಡಿರುತ್ತಾರೆ. ಆದರೆ, ಆ ಉತ್ತರ ಉತ್ತರವಾಗಿ ಇರಬಾರದು. ಮಾನ್ಯ ಸಚಿವರು ಖರೀದಿ ವಿಷಯಕ್ಕೆ ಸಂಬಂಧಿಸಿದಂತೆ, ಒಂದು ವಿಷಯವನ್ನು ಹೇಳಿದರು. ಘನತ್ಯಾಜ್ಯ ವಸ್ತು ನಿರ್ವಹಣಾ ಘಟಕಗಳಿಗೆ ಆಟೋ ಮತ್ತು ಇನ್ನಿತರ ಐಟಂಗಳನ್ನು ಬೆಂಗಳೂರಿನಿಂದ ಅಥವಾ ಸಿ.ಇ.ಓ. ಹಂತದಲ್ಲಿ ಖರೀದಿ ಮಾಡಿ, ಇದಕ್ಕೆ ಚೆಕ್ ಕೊಟ್ಟು ಕಳುಹಿಸಿ ಎಂದು ಹೇಳುವುದಾದರೆ, ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಏತಕ್ಕೆ ಬೇಕು?

**ಸಭಾಪತಿಯವರು:-** ಹೌದು, ಅದನ್ನು ಬದಲಾವಣೆ ಮಾಡಬೇಕು. ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಾಗಿದೆ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಇಲ್ಲವಾದರೆ ಒಂದು ಕೆಲಸ ಮಾಡಲಿ. ಅದೇನೆಂದರೆ, ಈ ದರವನ್ನು ಮೀರಬಾರದು, ಈ ಬ್ರ್ಯಾಂಡ್ ಇರಬೇಕು, ಇಂತಹ ಕ್ವಾಲಿಟಿ ಇರಬೇಕು ಈ ರೀತಿ ಸುಮಾರು 7-8 options ಕೊಡಲಿ. ಅದರಲ್ಲಿ ಅವರು ತೆಗೆದುಕೊಳ್ಳಲಿ. ನರೇಗಾ ಯೋಜನೆಯಡಿಯಲ್ಲಿ ಉದ್ಯೋಗ ಖಾತ್ರಿ ಹಣ ಸಂದಾಯ ಮಾಡಲು ಜಿಲ್ಲೆಯನ್ನು ಘಟಕ ಎಂದು ಪರಿಗಣಿಸಿದ್ದೀರಿ. ಇದು ಶೇಕಡ 30 ರಿಂದ 40 ರಷ್ಟು ಅನುಪಾತ ಕಾಯ್ದುಕೊಳ್ಳುವುದಕ್ಕೆ

ಕಷ್ಟವಾಗುತ್ತಿದೆ. ದಯಮಾಡಿ, ಈ ವಿಚಾರದಲ್ಲಿ ನಾನು ಹೇಳುವುದೇನೆಂದರೆ, ವೈಯಕ್ತಿಕ ಕಾಮಗಾರಿಗಳು ಅಂದರೆ, ಶೌಚಾಲಯ ನಿರ್ಮಾಣ ಇರಬಹುದು, ದನದ ಕೊಟ್ಟಿಗೆ ಇರಬಹುದು, ಕೋಳಿ ಫಾರಂ ಇರಬಹುದು, ಇಂಗು ಗುಂಡಿ ಇರಬಹುದು. ಇಂತಹ ವೈಯಕ್ತಿಕ ಕಾಮಗಾರಿಗಳನ್ನು ಮಾಡಿಕೊಂಡಿರತಕ್ಕಂತಹವರಿಗೂ ಕೂಡ, ಎರಡು ವರ್ಷಗಳಾದರೂ ಸಹ ಅನುದಾನ ಮಂಜೂರಾಗುತ್ತಿಲ್ಲ. ಹಾಗಾಗಿ, ಗ್ರಾಮ ಪಂಚಾಯಿತಿಗಳನ್ನೇ ಘಟಕಗಳನ್ನಾಗಿ ಮಾಡಿ. ಆಗ ಆ ಸಮಸ್ಯೆ ಸರಿಹೋಗುತ್ತದೆ.

ಮಾನ್ಯ ಸಭಾಪತಿಯವರೇ, ಇನ್ನು ಮುಖ್ಯವಾದ ಎರಡು ವಿಚಾರಗಳ ಬಗ್ಗೆ ಹೇಳುತ್ತೇನೆ. ಇನ್ನು ಆಡಿಟ್ ವಿಚಾರಕ್ಕೆ ಬಂದಾಗ, ಜಮಾ ಬಂದಿ ಮತ್ತು ಸೋಷಿಯಲ್ ಆಡಿಟ್ ಎಂದು ಎರಡು ಇದೆ. ಇದರಲ್ಲಿ ಯಾವುದಾದರೂ ಒಂದನ್ನು ಉಳಿಸಿಕೊಳ್ಳಿ. ಹೆಚ್ಚೆಚ್ಚು ಪಾರದರ್ಶಕವಾಗಿ ಆಡಿಟ್ ಮಾಡಿಸಿ. ಅದರಿಂದ, ಎಲ್ಲಿಯೋ ಒಂದು ಕಡೆ ಒಳ್ಳೆಯದಾಗುತ್ತದೆ. ಇನ್ನೊಂದು ಪ್ರಮುಖ ವಿಚಾರವೆಂದರೆ, ಮಾನ್ಯ ಸಚಿವರು ಈಗಾಗಲೇ ಹೇಳಿದ ಹಾಗೆ, ಸಿ.ಇ.ಓ. ಮತ್ತು ಇ.ಓ.ಗಳ ಹಿಡಿತದಿಂದ ಗ್ರಾಮ ಪಂಚಾಯಿತಿಗಳನ್ನು ಮುಕ್ತಗೊಳಿಸಬೇಕು. ಆ ನಂತರ, ಕರ್ನಾಟಕ ವಿಕಾಸ ಪತ್ರಿಕೆಯನ್ನು ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು/ಸದಸ್ಯರಿಗೆ ತಲುಪುವಂತೆ ಮಾಡಿ. ಕರ್ನಾಟಕ ವಿಕಾಸ ಪತ್ರಿಕೆಯಲ್ಲಿ ಯಾವ ಗ್ರಾಮ ಪಂಚಾಯಿತಿಗಳಲ್ಲಿ ಉತ್ತಮವಾದಂತಹ ಕೆಲಸ ನಡೆಯುತ್ತಿದೆ. ಯಾವ್ಯಾವ ಕೆಲಸ-ಕಾಮಗಾರಿಗಳು ಆದರ್ಶವಾಗಿವೆ ಇಂತಹ ಗ್ರಾಮ ಪಂಚಾಯಿತಿಗಳಲ್ಲಿ ಇಂತಹ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಹೈಲೈಟ್ ಮಾಡಬೇಕು. ಆ ನಂತರ, ಪ್ರಶಸ್ತಿ ಮೊತ್ತವನ್ನು ರೂ.10.00 ಲಕ್ಷಕ್ಕಿಂತಲೂ ಹೆಚ್ಚು ಮಾಡಬೇಕು. ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುತ್ತಿರುವಂತಹ ಗ್ರಾಮ ಪಂಚಾಯಿತಿಗಳಿಗೆ ದಯಮಾಡಿ ಆ ಪ್ರಶಸ್ತಿ ಕೊಡುವಂಥದ್ದನ್ನು ಜಿಲ್ಲಾವಾರು ಮಾಡಬೇಕು. ಸಾಧ್ಯವಾದರೆ, ಕೇರಳ ರಾಜ್ಯಕ್ಕೆ ನಮ್ಮ ಗ್ರಾಮ ಪಂಚಾಯಿತಿಗಳ ಸದಸ್ಯರಲ್ಲದಿದ್ದರೂ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಪ್ರವಾಸ ಮಾಡುವುದಕ್ಕೆ ಅನುಕೂಲ ಮಾಡಿ, ಕೇರಳ ರಾಜ್ಯ ಮಾದರಿಯನ್ನು ಅಧ್ಯಯನ ಮಾಡಿ ಕಲಿತುಕೊಳ್ಳುವುದಕ್ಕೆ ಮಾನ್ಯ ಸಚಿವರು ಅವಕಾಶ ನೀಡಬೇಕೆಂದು ಕೋರುತ್ತೇನೆ. ಕೊನೆಯದಾಗಿ, ಪಂಚಾಯತ್ ರಾಜ್ ವ್ಯವಸ್ಥೆಯಿಂದ ಆರಿಸಿ ಬಂದು, ಇವೊತ್ತಿನ ದಿವಸ ಈ ಸದನದ

ಸಭಾನಾಯಕರಾಗಿ ಮಾನ್ಯ ಮಂತ್ರಿಯಾಗಿದ್ದಾರೆ. ಇದು ನಮಗೆ ಬಹಳ ಸಂತೋಷವಾದ ವಿಚಾರ. ಅವರು ಸಮರ್ಥರು, ದಕ್ಷರು ಆಗಿದ್ದಾರೆ. ಅವರು ಮಂತ್ರಿಗಳಾದ ನಂತರ, ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆರಿಸಿ ಬಂದಿರುವಂತಹ 25 ಜನ ಸದಸ್ಯರನ್ನು ಕರೆದು, ಅವರ ಇಲಾಖೆ ವತಿಯಿಂದ ಪ್ರತಿಯೊಬ್ಬ ಸದಸ್ಯರಿಗೆ ರೂ.10.00 ಲಕ್ಷ ಅಥವಾ ರೂ.25.00 ಲಕ್ಷ ಅನುದಾನ ಕೊಟ್ಟು ಒಂದು ಸಮುದಾಯ ಭವನ ಕಟ್ಟಿಸುವುದಕ್ಕೆ ಅಥವಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಏನಾದರೂ ಕೆಲಸ ಮಾಡಿ ಎಂದು ಹೇಳುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ಈ ಸರ್ಕಾರದ ಅವಧಿ ಇನ್ನು ಕೇವಲ 2-3 ತಿಂಗಳು ಇದೆ. ಹಾಗಾಗಿ, ಈ ಕೆಲಸವನ್ನು ಅವರು ಈಗಲಾದರೂ ಮಾಡುತ್ತಾರೋ ಇಲ್ಲವೋ ಅದನ್ನಾದರೂ ಹೇಳಲಿ. ಏಕೆಂದರೆ, ಅಧಿಕಾರ ಶಾಶ್ವತ ಅಲ್ಲ. ಇದ್ದಷ್ಟು ದಿನ ಮಾತ್ರ ಅಧಿಕಾರ. ಅವರು ಈಗ ಮಾನ್ಯ ಸಚಿವರು ಆಗಿದ್ದಾರೆ. ಅವರು ಮೇಲ್ಮನೆಯಿಂದ ಮಂತ್ರಿಮಂಡಲಕ್ಕೆ ಹೋಗಿದ್ದಾರೆ. ಅವರೇ, ನಮ್ಮ ಸಹಾಯಕ್ಕೆ ಬರಲಿಲ್ಲ ಅಥವಾ ನಮ್ಮ ಬೆನ್ನು ತಟ್ಟಲಿಲ್ಲ ಅಂದರೆ, ಬೇರೆ ಯಾರು ಮಾಡುತ್ತಾರೆ? ಒಂದು ವೇಳೆ ನಮಗೆ ಸಹಾಯ ಮಾಡಬೇಕೆಂದು ಇದ್ದರೆ, ಈಗಲೇ ಮಾಡಲಿ. ಇನ್ನು ಎಷ್ಟು ದಿವಸ ಬೇಕು? ಏಕೆಂದರೆ, ಇನ್ನು ಒಂದು ತಿಂಗಳು ಕಳೆದ ನಂತರ, ಅಧಿಕಾರಿಗಳು ಯಾರು ಸಹ ತಮ್ಮ ಮಾತನ್ನು ಕೇಳುವುದಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ, ದಯಮಾಡಿ ಏನಾದರೂ ಅನುದಾನವನ್ನು ಈಗಲೇ ಘೋಷಣೆ ಮಾಡಲಿ.

**ಸಭಾಪತಿಯವರು:-** ಮಾನ್ಯ ರವಿಯವರೇ, ಸಾಕು. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಯವರು ಕೇಳಿರುವುದೇನೆಂದರೆ, ಬೆಂಗಳೂರಿನಲ್ಲಿ ವಾಹನ ಖರೀದಿ ಮಾಡಿ, ಚೆಕ್ ವಿತರಣೆ ಮಾಡುವುದಕ್ಕೆ ಹೇಳುತ್ತಾರೆಂದು ಹೇಳಿರುತ್ತಾರೆ. ಆದರೆ, ಇಲ್ಲಿಯವರೆಗೆ ನಾವು ಯಾವುದೇ ವಾಹನವನ್ನು ಖರೀದಿ ಮಾಡಿರುವುದಿಲ್ಲ. ತಾವು ವಾಹನ ಖರೀದಿ ಮಾಡಿ ಎಂದು ಹೇಳಿದ್ದೇವೆ. ಸುತ್ತೋಲೆ ಕೊಟ್ಟು ಯಾವುದೇ ಕಾರಣಕ್ಕೆ ಇಂತಹ ತ್ರಿಚಕ್ರ ವಾಹನಗಳನ್ನು ಖರೀದಿ ಮಾಡಿ ಎಂದು ಹೇಳಿದ್ದೇವೆಯೇ ಹೊರೆತು, ಯಾವ ಕಂಪನಿ ಅಥವಾ ಬೇರೆ ಯಾವುದನ್ನು ಹೇಳಿರುವುದಿಲ್ಲ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಜಿಲ್ಲಾ ಪಂಚಾಯಿತಿ ಸಿ.ಇ.ಓ.ಯವರು ಗ್ರಾಮ ಪಂಚಾಯಿತಿಗಳ ವಿಚಾರದಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಸೂಚನೆ ನೀಡಬೇಕು. ಏಕೆಂದರೆ, ಅವರು ಗ್ರಾಮ ಪಂಚಾಯಿತಿ ಪಿ.ಡಿ.ಓ. ಫೋನ್ ಮಾಡಿ ಹೇಳುತ್ತಾರೆ. ಆಗ ಅವರು ಅದನ್ನು ಕೊಡದೇ ಅವರಿಗೆ ಬೇರೆ ವಿಧಿ ಇರುವುದಿಲ್ಲ.

**ಸಭಾಪತಿಯವರು:-** ಹೌದು, ಅದು ಸರಿಯಾದುದಲ್ಲ. ಅದನ್ನು ಬದಲಾವಣೆ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಿ.ಇ.ಓ.ಗಳು ಗ್ರಾಮ ಪಂಚಾಯಿತಿಗಳ ಪರಮಾಧಿಕಾರವನ್ನು ಪ್ರಶ್ನೆ ಮಾಡಬಾರದೆಂಬ ಸುತ್ತೋಲೆಯನ್ನು/ಆದೇಶವನ್ನು ಕೊಡುತ್ತೇವೆ. ಇನ್ನು ನರೇಗಾದಲ್ಲಿ ಪಂಚಾಯಿತಿಯನ್ನು ಜಿಲ್ಲಾ ಘಟಕ ಮಾಡುವ ಬದಲಾಗಿ, ಗ್ರಾಮ ಘಟಕ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಸರಿಯಾಗಿದೆ. ಈ ಬಗ್ಗೆ ಸಾಧಕ-ಭಾದಕಗಳನ್ನು ಚರ್ಚೆ ಮಾಡಿ, ಮಾಡುತ್ತೇವೆ. ಆಡಿಟ್ ಅನ್ನು ಎರಡು ರೀತಿಯಲ್ಲಿ ಮಾಡುತ್ತೀರೆಂದು ಹೇಳಿದ್ದಾರೆ. ಅದರ ಬದಲಾಗಿ, ಒಂದೇ ರೀತಿಯ ಆಡಿಟ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಪ್ರಸ್ತುತ ಗ್ರಾಮ ಸಭೆ ರೀತಿಯಲ್ಲಿ ಸಾರ್ವಜನಿಕರು ಬಂದು ಕುಳಿತುಕೊಂಡು ಆಡಿಟ್ ಮಾಡುವಂತಹ ಪರಂಪರೆಗಳು ಇದೆ. ಅದನ್ನು ಮುಂದುವರೆಸುತ್ತೇವೆ. ಅದರಲ್ಲಿ ಯಾವುದಾದರೂ ಒಂದನ್ನು ಮುಂದುವರೆಸಬೇಕೆಂದು ಹೇಳಿದ್ದಾರೆ. ಈಗ ಜಮಾಬಂದಿಯನ್ನು ಮಾತ್ರ ಮಾಡುತ್ತಿದ್ದೇವೆ. ಕರ್ನಾಟಕ ವಿಕಾಸ ಪತ್ರಿಕೆಯನ್ನು ಕೊಡಬೇಕೆಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ ಸುಮಾರು 90 ಸಾವಿರ ಗ್ರಾಮ ಪಂಚಾಯಿತಿ ಸದಸ್ಯರು ಇದ್ದಾರೆ. ಅಂದರೆ, ಹೆಚ್ಚು ಕಡಿಮೆ 1 ಲಕ್ಷ ಸದಸ್ಯರಿದ್ದಾರೆ. ಅದನ್ನು ಸಹ ನಾವು ಪರಿಶೀಲಿಸುತ್ತೇವೆ. ಮಹಾತ್ಮ ಗಾಂಧಿ ಪುರಸ್ಕಾರವನ್ನು ಕೊಡಬೇಕೆಂಬುದು ಮಾನ್ಯ ಸದಸ್ಯರ ಒಟ್ಟು ಮಾತಿನ ಇಂಗಿತವಾಗಿದ್ದು, ಗಾಂಧಿ ಪುರಸ್ಕಾರ ಕೊಡಬೇಕೆಂದು ಹೇಳುತ್ತಿದ್ದಾರೆ. ಗಾಂಧಿ ಪುರಸ್ಕಾರವನ್ನು ಪುನರ್ ಸ್ಥಾಪನೆ ಮಾಡುತ್ತೇವೆ ಮತ್ತು ಆದಷ್ಟು ಬೇಗ ಗಾಂಧಿ ಪುರಸ್ಕಾರವನ್ನು ಕೊಡುವಂತಹ ಕ್ರಮವನ್ನು ಕೈಗೊಳ್ಳುತ್ತೇವೆ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆರಿಸಿ ಬಂದಿರುವಂತಹ 25 ಜನ ಸದಸ್ಯರು ಸೇರಿದಂತೆ, ಒಟ್ಟು 75 ಜನ ವಿಧಾನ ಪರಿಷತ್ತಿನ ಸದಸ್ಯರಿಗೆ ಅನುದಾನವನ್ನು

ಕೊಡಬೇಕೆಂದು ಹೇಳಿರುತ್ತಾರೆ. ಲಭ್ಯತೆ ಅನುದಾನವನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಸದಸ್ಯರನ್ನು ಕರೆದು ಅವರನ್ನು ಸಮಾಧಾನ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

(ಮುಂದು...)

(1187) 26.12.2022 4.10 YL-BNS (ಸಭಾಪತಿಯವರ ಉಪಸ್ಥಿತಿ)

**11. ನಿಯಮ 330ರ ಮೇರೆಗೆ ಚರ್ಚೆ**

**ಅ)ವಿಷಯ:-ಕ್ರೈಸ್ ವತಿಯಿಂದ ನಡೆಸಲಾಗುತ್ತಿರುವ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಶಿಕ್ಷಕರಿಗೆ ಮೂಲ ಸೌಲಭ್ಯಗಳನ್ನು ಮಂಜೂರು ಮಾಡದಿರುವುದು ಹಾಗೂ ವಸತಿ ಶಾಲೆಯಲ್ಲಿನ ವಿದ್ಯಾರ್ಥಿಗಳು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಕುರಿತು.**

*****

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕ್ರೈಸ್ ವತಿಯಿಂದ ನಡೆಯುತ್ತಿರುವ ವಸತಿ ಶಾಲೆಗಳಲ್ಲಿ ಈ ನಾಡಿನ ಪ್ರತಿಭಾನ್ವಿತ ಬಡ ಮಕ್ಕಳಿಗೆ ವಸತಿ ಶಿಕ್ಷಣ ನೀಡಲು ಸರ್ಕಾರ ಬಹಳಷ್ಟು ಯೋಜನೆಗಳನ್ನು ರೂಪಿಸಿದ್ದು, ಇಲ್ಲಿ ನಿಜಕ್ಕೂ ಕೂಡಾ ಒಳ್ಳೆಯ ಕೆಲಸವಾಗುತ್ತಿದೆ. ಬಡ ಪ್ರತಿಭಾನ್ವಿತ ಮಕ್ಕಳು 12ನೇ ತರಗತಿಯವರೆಗೂ ಕಲಿಯಲು ಅವಕಾಶ ಕಲ್ಪಿಸಿಕೊಟ್ಟಿದೆ ಮತ್ತು ಒಳ್ಳೆಯ ಫಲಿತಾಂಶ ಬರುತ್ತಿದೆ. ಶೈಕ್ಷಣಿಕವಾಗಿ ಮಕ್ಕಳು ತುಂಬಾ ಚೆನ್ನಾಗಿ ಅಧ್ಯಯನ ಮಾಡುತ್ತಿದ್ದಾರೆ. ಆದರೆ, ಇದಕ್ಕೆಲ್ಲಾ ಪೂರಕವಾಗಿ ಕೆಲಸ ಮಾಡುವಂಥ ಶಿಕ್ಷಕ ಬಂಧುಗಳು ನೇಮಕಗೊಂಡು ಸುಮಾರು 10, 12 ವರ್ಷಗಳು ಕಳೆದರೂ ಕೂಡಾ ಅವರಿಗೆ ನಮ್ಮ ಸಿ ಅಂಡ್ ಆರ್ ರೂಲ್ ನಲ್ಲಿ ಏನೇನು ನಿಯಮಾವಳಿಗಳನ್ನು ರೂಪಿಸಿಕೊಂಡಿದ್ದೆವು, ಆ ಸವಲತ್ತುಗಳನ್ನು ಇಂದಿಗೂ ಸಹ ವಿಸ್ತರಣೆ ಮಾಡಿಲ್ಲ. ಉದಾಹರಣೆಗೆ ಹೇಳುವುದಾದರೆ, ಡಿ.ಸಿ.ಆರ್.ಜಿ. ಗೆ ಇನ್ನೂ ಕೂಡಾ ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ ಎನ್ನುವಂಥ ಉತ್ತರ ಬರುತ್ತಿದೆ. ದಯವಿಟ್ಟು ಈಗಾಗಲೇ ಕೆಲವು ಖಾಯಂ ನೌಕರರು ಅನೇಕ ಕಾರಣಾಂತರಗಳಿಂದ ಸಾವನ್ನಪ್ಪಿದ್ದಾರೆ. ಅವರಿಗೆ ಯಾರಿಗೂ ಕೂಡಾ ಈ

ಡಿ.ಸಿ.ಆರ್.ಜಿ. ಮಂಜೂರಾತಿ ಆಗದೇ ಇರುವುದರಿಂದ ಆ ಸವಲತ್ತು ಅವರ ಕುಟುಂಬಗಳಿಗೆ ದೊರೆಯುತ್ತಿಲ್ಲ. ಆದಷ್ಟು ಬೇಗ ಡಿ.ಸಿ.ಆರ್.ಜಿ. ಕೊಡಿಸುವಂಥ ತೀರ್ಮಾನವಾಗಬೇಕು.

ಎರಡನೆಯದಾಗಿ, ಕೆ.ಜಿ.ಐ.ಡಿ. ಮತ್ತು ಡಿ.ಸಿ.ಆರ್.ಜಿ. ಇವುಗಳನ್ನು ಸರ್ಕಾರಿ ನೌಕರರಿಗೆ ಮಾತ್ರ ಕೊಡುವಂಥದಾಗಿದ್ದು, ವಸತಿ ಶಾಲಾ ಶಿಕ್ಷಕರಿಗೆ ಕೊಡಲು ಬರುವುದಿಲ್ಲ ಎಂದು ಇಲಾಖಾಧಿಕಾರಿಗಳು ಹೇಳುತ್ತಾರೆ. ಆದರೆ, ಅಲ್ಪಸಂಖ್ಯಾತರ ಇಲಾಖೆ ಅಡಿಯಲ್ಲಿ ನಡೆಯುವಂಥ ವಸತಿ ಶಾಲಾ ನೌಕರರೆಲ್ಲರಿಗೂ ಈ ಒಂದು ಕೆ.ಜಿ.ಐ.ಡಿ. ಮತ್ತು ಡಿ.ಸಿ.ಆರ್.ಜಿ. ಸವಲತ್ತನ್ನು ಕೊಟ್ಟಿದ್ದು, ಇಂತಹ ತಾರತಮ್ಯವಾಗಬಾರದು. ವಸತಿ ಶಾಲೆಗಳಲ್ಲಿ ಕೆಲಸ ಮಾಡುವಂಥ ಸಿಬ್ಬಂದಿಗೆ ಒಂದು ಕಡೆ ಕೊಟ್ಟ ಮೇಲೆ ಇಲ್ಲಿಯೂ ಕೂಡಾ ಕೊಡಬೇಕೆಂಬುದು ನಮ್ಮ ಒತ್ತಾಯವಾಗಿದ್ದು, ಇದನ್ನು ದಯಮಾಡಿ ಕೂಡಲೇ ಸರಿಪಡಿಸಬೇಕು.

ಮೂರನೆಯದಾಗಿ, ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಯೋಜನೆ ವಿಚಾರವಾಗಿ ಹೇಳುವುದಾದರೆ, ಇಲ್ಲಿ ಕೆಲಸ ಮಾಡುವಂಥ ನೌಕರರು ಹಗಲು-ರಾತ್ರಿ ವಸತಿ ಶಾಲೆಯಲ್ಲಿಯೇ ತಂಗಿ ಕೆಲಸ ಮಾಡುವಂಥ ನೌಕರರಾಗಿದ್ದಾರೆ. ಇವರಿಗೆ ಏನಾದರೂ ಸಮಸ್ಯೆಯಾದರೆ ಅಥವಾ ಕುಟುಂಬ ಸದಸ್ಯರಿಗೆ ಸಮಸ್ಯೆಯಾದರೆ ಆರೋಗ್ಯ ವಿಮೆ ಇಲ್ಲ. ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಯೋಜನೆ ವ್ಯಾಪ್ತಿಗೆ ಅವರನ್ನು ತರುವುದಾಗಿ ಸರ್ಕಾರ ಅನೇಕ ಭರವಸೆಯನ್ನು ನೀಡಿದೆ. ಆದರೂ ಕೂಡಾ ತಾಂತ್ರಿಕ ದೋಷದಿಂದ ಇವತ್ತಿನವರೆಗೂ ಪರಿಪೂರ್ಣವಾಗಿ ಆದೇಶವನ್ನು ಜಾರಿಗೊಳಿಸಲು ಆಗುತ್ತಿಲ್ಲ ಎನ್ನುವಂಥ ಉತ್ತರ ಬರುತ್ತಿದೆ. ಇದೇ ರೀತಿ ಮುಂದುವರೆದರೆ ಮತ್ತೆ ಯಾವಾಗ ಈ ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಯೋಜನೆ ನೀಡುವುದು. ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಯೋಜನೆ ಇಲ್ಲದೇ ಬಹಳಷ್ಟು ವಸತಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವಂಥ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಮರಣ ಹೊಂದುತ್ತಿದ್ದಾರೆ ಹಾಗೂ ಆ ಕುಟುಂಬದ ಸದಸ್ಯರು ತೊಂದರೆಗೀಡಾಗುತ್ತಿದ್ದಾರೆ. ಕೂಡಲೇ ಮಾನವೀಯತೆ ದೃಷ್ಟಿಯಿಂದ ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಯೋಜನೆಯನ್ನು ಇವರೆಲ್ಲರಿಗೂ ಜಾರಿಗೊಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು.

ನಾಲ್ಕನೆಯದಾಗಿ, ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವಂಥ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಶೇಕಡ 10 ರಷ್ಟು ಶಾಲಾ ಕ್ಯಾಂಪಸ್ ವಿಶೇಷ ಭತ್ಯೆಯನ್ನು ನೀಡಬೇಕು. ಜವಾಹರಲಾಲ್ ನೆಹರು ವಸತಿ ಶಾಲೆಯಲ್ಲಿ ಮತ್ತು ಇನ್ಯಾವುದೇ ವಸತಿ ಶಾಲೆಯಲ್ಲಿ ಕೆಲಸ ಮಾಡುವಂಥವರಿಗೆ ಆ ವಸತಿ ಶಾಲೆಯಲ್ಲಿಯೇ ಹಗಲು-ರಾತ್ರಿ ಮಕ್ಕಳೊಂದಿಗೆ ತಾವು ವಾಸ್ತವ್ಯ ಮಾಡಿಕೊಂಡು ಶಿಕ್ಷಣ ನೀಡುವಂಥ ನೌಕರರಿಗೆ ಶೇಕಡ 10 ರಷ್ಟು ವಿಶೇಷ ಭತ್ಯೆಯನ್ನು ನೀಡಬೇಕೆಂದು ಕಾನೂನು ಮತ್ತು ನಿಯಮಗಳಲ್ಲಿ ಇದೆ. ಆದರೂ ಕೂಡಾ ಸುಮಾರು 10, 12 ವರ್ಷಗಳು ಕಳೆದರೂ ಈ ಖಾಯಂ ಶಿಕ್ಷಕರಿಗೆ ಶೇಕಡ 10 ರಷ್ಟು ವಿಶೇಷ ಭತ್ಯೆಯನ್ನು ಸರ್ಕಾರ ಜಾರಿಗೊಳಿಸಿಲ್ಲ. ಇದೊಂದು ವಿಚಾರವನ್ನು ಅತ್ಯಂತ ನೋವಿನಿಂದ ಹೇಳಲು ಬಯಸುತ್ತೇನೆ. ದಯವಿಟ್ಟು ಶೇಕಡ 10 ರಷ್ಟು ವಿಶೇಷ ಭತ್ಯೆಯನ್ನು ಕೂಡಲೇ ಭರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಭಾನಾಯಕರಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೊಂದು ವಿಚಾರವೇನೆಂದರೆ, ಇದುವರೆವಿಗೂ ಕೂಡಾ ಹೊಸ ಪಿಂಚಣಿ ಯೋಜನೆಯಲ್ಲಿ ಶೇಕಡ 10 ರಷ್ಟು ಇರುವುದನ್ನು ಶೇಕಡ 14 ರಷ್ಟು ಹೆಚ್ಚಿಗೆ ಮಾಡಿರುವುದರಿಂದ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಅವರಿಗೆ ಸಕಾಲದಲ್ಲಿ ನೀಡಬೇಕಾದಂಥ ಬುಕ್ಸ್, ಕಿಟ್ ಇತರೆ ಸೌಲಭ್ಯಗಳು ಏನೇನು ನೀಡಬೇಕಾಗಿತ್ತು, ಅದ್ಯಾವುದೂ ಕೂಡಾ ವಸತಿ ಶಾಲೆಯಲ್ಲಿ ನಿಗದಿತ ಅವಧಿಯಲ್ಲಿ ನೀಡಿಲ್ಲ. ಅದಕ್ಕೆ ಕಾರಣವೇನೆಂದರೆ, ತಾಂತ್ರಿಕ ಕಾರಣದಿಂದಾಗಿ ಟೆಂಡರ್ ಕರೆಯುವುದರಲ್ಲಿ ವಿಳಂಬವಾಗಿದೆ ಎನ್ನುವಂಥದಾಗಿದ್ದು, ಆ ಮಕ್ಕಳಿಗೆ ಮೂಲಭೂತ ಸೌಕರ್ಯಗಳನ್ನು ನಿಗದಿತ ಸಮಯದಲ್ಲಿ ನೀಡುತ್ತಿಲ್ಲ. ಅದರಿಂದ ಆ ಮಕ್ಕಳ ಶಿಕ್ಷಣಕ್ಕೆ ಬಹಳ ತೊಂದರೆಯಾಗುತ್ತಿದೆ. ದಯವಿಟ್ಟು ಅದನ್ನು ಕಾಲಕಾಲಕ್ಕೆ ವರ್ಷದಲ್ಲಿ ಯಾವ ತಿಂಗಳನಲ್ಲಿ ನೀಡಬೇಕೆಂದು ಇದೆ, ಅದನ್ನು streamline ಮಾಡಿ, ಸಕಾಲದಲ್ಲಿ ಒದಗಿಸುವಂತೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಹಾಗೆಯೇ ಗಳಿಕೆ ರಜೆ, ಮೃತಪಟ್ಟ ಖಾಯಂ ನೌಕರರ ಕುಟುಂಬ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ನಿಯಮಾನುಸಾರ ನೌಕರಿ ನೀಡುವುದು ಮತ್ತು ವೇತನ ಬಡ್ತಿ ಇವುಗಳನ್ನು ಸಹ ಮಾಡಲು ಪ್ರಯತ್ನ ಮಾಡಿದ್ದು, ಅವಕಾಶ ಕಲ್ಪಿಸಲಾಗುತ್ತದೆ, ಮಾಡುತ್ತಿದ್ದೇವೆ ಎನ್ನುವಂಥ ಮಾತನ್ನು

ಹೇಳುತ್ತಿದ್ದಾರೆ. ದಯವಿಟ್ಟು ಇವು ನಿಜಕ್ಕೂ ಸಿ ಅಂಡ್ ಆರ್ ನಿಯಮದ ಪ್ರಕಾರ ನೀಡಲೇಬೇಕಾಗಿದ್ದು, ಅದು ಅವರ ಹಕ್ಕಾಗಿದೆ. ರಜಾ ನಗದೀಕರಣ, ಬಡ್ತಿ, ಗಳಿಕೆ ರಜೆ, ಅನುಕಂಪದ ಆಧಾರದ ಮೇಲೆ ಹುದ್ದೆ ನೀಡುವಂಥದ್ದಾಗಿರಬಹುದು; ಅವುಗಳನ್ನು ಜಾರಿಗೊಳಸದೇ ಇದ್ದರೆ ನಿಜಕ್ಕೂ ಕೂಡಾ ಆ ಶಿಕ್ಷಕರು ನೆಮ್ಮದಿಯಾಗಿ, ಸಂತೋಷವಾಗಿ ಮಕ್ಕಳಿಗೆ ಪಾಠ ಮಾಡಲು ಸಾಧ್ಯವಾಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೆ ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರವನ್ನು ನೀಡಿದ್ದಾರೆ, ತಾವು ಸ್ಪಷ್ಟೀಕರಣವನ್ನು ಮಾತ್ರ ಕೇಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಸಚಿವರಾದ ಮೇಲೆ ನಮಗೂ ಸಹ ಭರವಸೆ ಇದೆ. ಏಕೆಂದರೆ, ಅವರು ಸಚಿವರಾದ ಕೂಡಲೇ ಮಾನ್ಯ ಶಾಸಕರೆಲ್ಲರನ್ನೂ ಕರೆದು ಒಂದೆರಡು ಸಭೆ ಮಾಡಿ, ಒಂದೆರಡು ಸಮಸ್ಯೆಗೆ ಪರಿಹಾರ ಒದಗಿಸುವಂಥ ಪ್ರಯತ್ನ ಮಾಡಿದ್ದಾರೆ. ಅವರ ಬಗ್ಗೆ ನಮಗೆ ಬಹಳ ನಂಬಿಕೆ, ವಿಶ್ವಾಸ ಇದೆ. ಮಾನ್ಯ ಸಭಾನಾಯಕರು ದಯವಿಟ್ಟು ಈ ಅಧಿವೇಶನ ಮುಗಿದ ಕೂಡಲೇ ನಮ್ಮೆಲ್ಲಾ ಶಾಸಕರನ್ನು ಕರೆದು ಕ್ರೈಸ್ ವತಿಯಿಂದ ನಡೆಯುತ್ತಿರುವಂಥ ವಸತಿ ಶಾಲೆಗಳು; ಸರ್ಕಾರದವರು ಹೋಬಳಿಗೆ ಒಂದು ವಸತಿ ಶಾಲೆ ಮಾಡುತ್ತೇವೆ ಎಂದು ಹೇಳಿದ್ದು, ಇವತ್ತಿಗೂ ಕೂಡಾ ಹೋಬಳಿಗೆ ಒಂದು ವಸತಿ ಶಾಲೆಯನ್ನು ಸಹ ಮಾಡಲು ಸಾಧ್ಯವಾಗಲಿಲ್ಲ. ಈ ರೀತಿಯಾದ ನೌಕರರ ಸಮಸ್ಯೆ, ವಿದ್ಯಾರ್ಥಿಗಳ ಸಮಸ್ಯೆ, ಮೂಲಭೂತ ಸೌಕರ್ಯದ ಬಗ್ಗೆ ದಯವಿಟ್ಟು ಗಮನಹರಿಸಬೇಕು. ಏಕೆಂದರೆ, ಕ್ರೈಸ್‌ನವರು ಅವೆಲ್ಲವನ್ನೂ ಕೊಡಬೇಕಾದರೆ ಇಲಾಖೆಯಿಂದ ಮಂಜೂರಾತಿ ನೀಡಬೇಕು. ಕ್ರೈಸ್‌ನವರು ಅದನ್ನು ಒದಗಿಸಬೇಕು. ಎರಡು ಇಲಾಖೆಗಳ ನಡುವೆ ಸಾಮ್ಯತೆ ಮತ್ತು ಕಡತ ವಿಲೇವಾರಿ ವಿಳಂಬ ಆಗುತ್ತಿದೆ. ಸುಮಾರು ೯೦೦ ಕ್ಕೂ ಹೆಚ್ಚು ವಸತಿ ಶಾಲೆಗಳು ತಮ್ಮ ಇಲಾಖೆಯಡಿ ಬರುತ್ತಿದೆ. ದಯವಿಟ್ಟು ತಮ್ಮ ಮೂಲಕ ಹೇಳುವುದೇನೆಂದರೆ, ಇದಕ್ಕೆ ಒಂದು ಪ್ರತ್ಯೇಕವಾದಂಥ ನಿರ್ದೇಶನಾಲಯವಾದರೂ ಮಾಡಿದರೆ ಆ ನಿರ್ದೇಶನಾಲಯದಿಂದ ತಕ್ಷಣ ಎಲ್ಲಾ ಸೌಲಭ್ಯ, ವ್ಯವಸ್ಥೆಗಳನ್ನು ಕೊಡಲು ಸಾಧ್ಯ ಮತ್ತು ಇನ್ನೂ ಉತ್ತಮವಾಗಿ ಈ ಶಾಲೆಗಳಲ್ಲಿ ಮಕ್ಕಳಿಗೆ ಶಿಕ್ಷಣ ದೊರೆಯಲು ಸಹಾಯವಾಗುತ್ತದೆ. ಅದರ ಬಗ್ಗೆ ಚಿಂತನೆ ಮಾಡಬೇಕು. ಕೂಡಲೇ ನಮ್ಮ ಶಾಸಕರೆಲ್ಲರನ್ನೂ ಕರೆದು ಒಂದು ಸಭೆ ನಡೆಸಿ,

ಬಾಕಿ ಇರುವಂಥ ಸವಲತ್ತುಗಳನ್ನು ಒದಗಿಸಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ತಿಳಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ,...

**(ಉತ್ತರವನ್ನು ಲಗತ್ತಿಸಲಾಗಿದೆ)**

ವಸತಿ ಶಿಕ್ಷಣ ಸಂಸ್ಥೆಯೂ ಉತ್ತಮವಾದಂಥ ಶಿಕ್ಷಣ ಕೊಡುವಂಥ ಸಂಸ್ಥೆಯಾಗಿದೆ. ಸುಮಾರು ೮೩೦ ಕ್ರೈಸ್ ವಸತಿ ಶಾಲೆಗಳಿವೆ, ಸುಮಾರು 19,೦೮೮ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ಸುಮಾರು ೮೮೯೫ ಹುದ್ದೆಗಳಲ್ಲಿ ಖಾಯಂ ಸಿಬ್ಬಂದಿಗಳು, ಅತಿಥಿ ಶಿಕ್ಷಕರು, ಉಪನ್ಯಾಸಕರು ಈ ರೀತಿಯಾಗಿ ಬೇರೆ ಬೇರೆ ಸಿಬ್ಬಂದಿಗಳು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಮಾನ್ಯ ಮರಿತಿಬ್ಬೇಗೌಡರವರು ಕೇಳಿರುವಂಥ ಪ್ರಶ್ನೆಗೆ ಸಂಬಂಧಿಸಿದಂತೆ, ಡಿ.ಸಿ.ಆರ್.ಜಿ. ಅಂದರೆ, ಮರಣ ಕುಟುಂಬ ಪಿಂಚಣಿ ಯೋಜನೆಯನ್ನು ವಸತಿ ಶಿಕ್ಷಣ ಸಂಸ್ಥೆಗೆ ವಿಸ್ತರಿಸುವುದು ಕಷ್ಟಸಾಧ್ಯವೆಂದು ಹೇಳಿದರೂ ಕೂಡಾ ಪರಿಶೀಲನೆ ಮಾಡುತ್ತೇವೆ ಎಂದು ತಿಳಿಸಿದ್ದೇವೆ. ಈ ಸಂಬಂಧ ಆರ್ಥಿಕ ಇಲಾಖೆಯವರಿಗೆ ಕಡತವನ್ನು ಕಳುಹಿಸಿಕೊಟ್ಟಿದ್ದು, ಅದಕ್ಕೆ ಒಂದು ತೀರ್ಮಾನ ಮಾಡುತ್ತೇವೆ. ಹಾಗೆಯೇ ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಯೋಜನೆ ಬಗ್ಗೆ ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದು, ಈ ಯೋಜನೆಯೂ ನಗದು ರಹಿತವಾದಂಥ ಆರೋಗ್ಯ ಯೋಜನೆಯಾಗಿದೆ. ನನ್ನ ಅಂದಾಜಿನ ಪ್ರಕಾರ ಒಂದೆರಡು-ಮೂರು ಸಲ ಕಡತ ವಾಪಸ್ಸು ಬಂದಂತಹ ಸಂದರ್ಭದಲ್ಲಿ ಆರ್ಥಿಕ ಇಲಾಖೆಯವರೊಂದಿಗೆ ಮಾತನಾಡಿದ್ದು, ಆರ್ಥಿಕ ಇಲಾಖೆಯವರು ಸಹ ಒಪ್ಪಿಕೊಂಡಿದ್ದಾರೆ. ಇನ್ನು ಒಂದು ತಿಂಗಳಲ್ಲಿ ಇತರೆ ಸರ್ಕಾರಿ ನೌಕರರಂತೆ ಇವರಿಗೂ ಸಹ ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಯೋಜನೆಗೆ ಅಧಿಕೃತ ಆದೇಶವನ್ನು ನೀಡಿ, ನಮ್ಮ ಸಿಬ್ಬಂದಿಗಳಿಗೆ ಬೇಕಾದಂಥ ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಯೋಜನೆ ಸೌಲಭ್ಯವನ್ನು ಕಲ್ಪಿಸುತ್ತೇವೆ.

(ಮುಂದು)

(1188) 26.12.2022/6.50/ಎಸ್‌ಕೆ-ಜಿಆರ್ **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-**

ಖಾಯಂ ಶಿಕ್ಷಕರಿಗೆ ವಿಶೇಷವಾದಂತಹ ಭತ್ಯೆಯನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ರಾಜ್ಯದ ಆರನೇ ವೇತನ ಆಯೋಗದಲ್ಲಿ ಈ ರೀತಿಯ ಭತ್ಯೆಗಳಿಗೆ ಯಾವುದೇ ರೀತಿಯ ಶಿಫಾರಸ್ಸು ಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೇಳಿದರೂ ಕೂಡ ಅದರ ಬಗ್ಗೆ ಚರ್ಚೆಯಾಗುತ್ತಿದೆ. ನಾನು

ಅದರ ಬಗ್ಗೆ ಪುನಃ ಪರಿಶೀಲನೆ ಮಾಡುತ್ತೇನೆ. ನೂತನ ಪಿಂಚಣಿಯನ್ನು ಶೇಕಡಾ 10 ರಿಂದ 14 ಕ್ಕೆ ಹೆಚ್ಚಿಸಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಶೇಕಡಾ 10 ರಿಂದ 14 ಕ್ಕೆ ಹೆಚ್ಚಿಸುವುದಕ್ಕೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆಯೂ ಕೂಡ ನಾನು ಮಾಡುತ್ತಿದ್ದೇನೆ. ಅದರಲ್ಲಿ ಯಾವುದೇ ರೀತಿಯ ಗೊಂದಲವಿಲ್ಲ. ಮೂಲಭೂತ ಸೌಕರ್ಯಗಳನ್ನು ಮಾಡಬೇಕೆಂದು ಹೇಳುತ್ತಾರೆ. ಸುಚಿ ಸಂಭ್ರಮ ಕಿಟ್ ಬಗ್ಗೆ ಸಮಸ್ಯೆಯಿತ್ತು. ಅದನ್ನು ಪರಿಹಾರ ಮಾಡಿದ್ದು, ಇವತ್ತು ಸುಚಿ ಸಂಭ್ರಮ ಕಿಟ್ ಎಲ್ಲಾ ಮಕ್ಕಳಿಗೂ ಸರಬರಾಜು ಆಗಿದೆ. ಮಕ್ಕಳಿಗೆ ಸಮವಸ್ತ್ರ, ಪುಸ್ತಕ, ನೋಟ್ ಪುಸ್ತಕಗಳು ಕೊಡಲಾಗಿದೆ. ಕೋವಿಡ್ ನಿಯಂತ್ರಣ ಬಂದಿರುವ ಹಿನ್ನೆಲೆಯಲ್ಲಿ ಮಕ್ಕಳು ಪ್ರವಾಸಗಳನ್ನು ಮಾಡುತ್ತಿದ್ದಾರೆ. ಶೂಗಳನ್ನು ಶೇಕಡಾ 82 ರಷ್ಟು ಕೊಡಲಾಗಿದೆ. ಉಳಿದಿರುವುದನ್ನು ಇನ್ನು ಹದಿನೈದು ದಿವಸಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕೊಟ್ಟು ಮುಗಿಸುತ್ತೇವೆ.

ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಮರಿತಿಬ್ಬೇಗೌಡರ ಗಮನಕ್ಕೆ ತರಬಯಸುವುದೇನೆಂದರೆ, ಒಂದು ರೀತಿಯಲ್ಲಿ exemption under Section 4G of the K.T.P.P., Act ಹಾಕಿ ಎಲ್ಲವೂ ಕೆಲಸವಾಗುತ್ತಿತ್ತು. ಆದರೆ ಎಲ್ಲಾ ಕೆಲಸಗಳು ಟೆಂಡರ್ ಇರಲಿಲ್ಲ. ಕಡ್ಡಾಯವಾಗಿ exemption under Section 4G ಅನ್ನು ನಿಲ್ಲಿಸಿಬಿಟ್ಟಿದ್ದಾರೆ. ಸರ್ಕಾರಿ ಸ್ವಾಮ್ಯದ ಸಂಸ್ಥೆ ಎಂದು ಯಾವುದೇ ಕಾರಣಕ್ಕೆ ಟೆಂಡರ್ ಇಲ್ಲದೇ ಕೆಲಸ ಮಾಡುವುದಿಲ್ಲ. ಗುತ್ತಿಗೆದಾರರ ಬಹಳಷ್ಟು ಸಮಸ್ಯೆಗಳು ಇತ್ತು. ಅದನ್ನು ಬಹಳ ಕಟ್ಟುನಿಟ್ಟಾಗಿ ನಿಲ್ಲಿಸಿದ್ದೇವೆ. ಇನ್ನೊಂದು ವಿಷಯವೇನೆಂದರೆ, ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವಾಗ, software ಮಾಡಿ, ಅದರಲ್ಲಿ ಯಾರದೂ ಜೇಷ್ಠತಾ ಆಧಾರದ ಮೇಲೆ ಬಂತು, ಅವರು ಯಾರು ತಿರುಗ ಬೇಡಿ. ಆ ಹಣ ಬಂದಾಗ ನಾವು ಹಾಕಿಬಿಟ್ಟಿರುತ್ತೇವೆ. ಅದರ ಬಗ್ಗೆ ಇರುವಂತಹ ಸಮಸ್ಯೆಯೂ ಕೂಡ ಮುಗಿದಿದೆ. ಬಹುತೇಕ ನನಗೆ ಅನಿಸುವುದೇನೆಂದರೆ, ಅಲೆಮಾರಿ ಮಕ್ಕಳು ಮತ್ತು ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡ, ಹಿಂದುಳಿದವರು ಆರ್ಥಿಕವಾಗಿ ಸಂಕಷ್ಟದಲ್ಲಿದ್ದವರಿಗೆ ಕೂಡ ಈ ಬಾರಿ ಮೀಸಲಾತಿಯನ್ನು ಕೊಡುವಂತಹ ವ್ಯವಸ್ಥೆಯನ್ನು ಇದರಲ್ಲಿ ಮಾಡಿದ್ದೇವೆ. ಸುಮಾರು 830 ಶಾಲೆಗಳಲ್ಲಿ ಇವತ್ತು ಏನಾಗಿದೆ ಎಂದರೆ, ಹುಬ್ಬಳ್ಳಿ, ಹಾವೇರಿ, ಮತ್ತು ಕಲ್ಬುರ್ಗಿ ಈ ಭಾಗದಲ್ಲಿ ಆರನೇ ತರಗತಿಗೆ ಐವತ್ತು

ಮಕ್ಕಳನ್ನು ತೆಗೆದುಕೊಂಡರೆ, 300 ಅರ್ಜಿ ಬರುತ್ತದೆ. ಎಲ್ಲರೂ ಬಡವ ಮಕ್ಕಳು ಆಗಿದ್ದರಿಂದ, ಯಾರನ್ನು ಬಿಡಬೇಕು ಎನ್ನುವುದು ಗೊತ್ತಾಗುವುದಿಲ್ಲ, ನಮಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಾರೆ. ಆದ್ದರಿಂದ ಬರುವ ವರ್ಷದಿಂದ ಆರನೇ ತರಗತಿಯನ್ನು "ಎ" ಮತ್ತು "ಬಿ" ವಿಭಾಗ ಮಾಡುತ್ತಿದ್ದೇವೆ. ಅಂದರೆ, ಸುಮಾರು 25,000 ಮಕ್ಕಳನ್ನು ಹೆಚ್ಚುವರಿಯಾಗಿ ತೆಗೆದುಕೊಳ್ಳುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಎಲ್ಲೆಲ್ಲಿ ಅವಕಾಶಗಳಿವೆಯೋ, ಅಲ್ಲಲ್ಲಿ ಪಿ.ಯು. ಕಾಲೇಜಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳಿ ಆರ್ಥಿಕ ಇಲಾಖೆಯವರ ಸಮಸ್ಯೆಗಳ ನಡುವೆಯೂ ಕೂಡ ಕಾಲೇಜುಗಳನ್ನು ಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡಿರುತ್ತೇವೆ. ಸರ್ಕಾರ ತುಂಬಾ ಪಾರದರ್ಶಕ ಮತ್ತು ಶ್ರದ್ಧೆಯಿಂದ ಕೆಲಸ ಮಾಡಬೇಕೆಂಬುದು ನಿಲುವು ಆಗಿದೆ. ಈ ಅಧಿವೇಶನ ಮುಗಿದ ಒಂದು ವಾರದೊಳಗೆ ಬೆಂಗಳೂರಿನಲ್ಲಿ ಒಂದು ಸಭೆಯನ್ನು ಏರ್ಪಡಿಸಿ, ಮಾನ್ಯ ಮರಿತಿಬ್ಬೇಗೌಡರು ಮತ್ತು ಇದರಲ್ಲಿ ಆಸಕ್ತಿ ಇರುವಂತಹ ಮಾನ್ಯ ಸದಸ್ಯರೆಲ್ಲರನ್ನು ಕರೆದು, ಅವರ ನೀಡುವಂತಹ ಸಲಹೆಗಳನ್ನು ಪೂರ್ಣ ಪ್ರಮಾಣದಲ್ಲಿ ತೆಗೆದುಕೊಂಡು, ಶಾಲೆ ಪಾರದರ್ಶಕವಾಗಿ ಮತ್ತು ಶ್ರದ್ಧೆಯಿಂದ ಕೆಲಸ ಮಾಡುವಂತಹ ಕೆಲಸವನ್ನು ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಹೇಳುತ್ತಿರುವುದು ಸರಿಯಿದೆ. ಮಾನ್ಯ ಸದಸ್ಯರುಗಳಾದ ಶ್ರೀ ಯು.ಬಿ. ವೆಂಕಟೇಶ್ ಮತ್ತು ಶ್ರೀ ಮುನಿರಾಜುಗೌಡ ಪಿ.ಎಂ. ರವರು.

**ಆ) ವಿಷಯ:-** ಶ್ರೀಗುರುರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಡೆದಿರುವ ಅವ್ಯವಹಾರದಲ್ಲಿ ಭಾಗಿಯಾಗಿರುವರುವವರ ವಿರುದ್ಧ ಈವರೆವಿಗೂ ಕ್ರಮ ಕೈಗೊಳ್ಳದಿರುವ ಹಾಗೂ ಹಣ ಹೂಡಿಕೆ ಮಾಡಿ ವಂಚಿತರಾದವರಿಗೆ ಪರಿಹಾರ ಒದಗಿಸದಿರುವ ಕುರಿತು.

---------

**ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಯಾರು ತಮ್ಮ ಸಂಧ್ಯಕಾಲದಲ್ಲಿ ನೆಮ್ಮದಿಯ ಜೀವನವನ್ನು ನಡೆಸಬೇಕು ಮತ್ತು ಯಾರ ಅಂಗಿನಲ್ಲಿ ಇರಬಾರದು ಹಾಗೂ ಯಾರಿಗೂ ತೊಂದರೆ ಕೊಡಬಾರದು. "ಹಾಸಿಗೆ ಇದ್ದಷ್ಟು ಕಾಲು ಚಾಚು" ಎನ್ನುವಂತಹ ಗಾದೆಯನ್ನು ಮೈಗೂಡಿಸಿಕೊಂಡು, ತಮ್ಮ ಜೀವಿತಾವಧಿಯಲ್ಲಿ ಕಷ್ಟಪಟ್ಟು ದುಡಿದು ಉಳಿತಾಯ ಮಾಡಿದಂತಹ ಹಣವನ್ನು ಸಂಧ್ಯಾ ಕಾಲದಲ್ಲಿ ಉಪಯೋಗಕ್ಕೆ ಬರುತ್ತದೆ ಎಂಬ ನಂಬಿಕೆಯೊಂದಿಗೆ ಆ ಹಣವನ್ನು ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಠೇವಣಿಯಾಗಿ ಇಟ್ಟಿರುತ್ತಾರೆ. ಆದರೆ ಕಳೆದ ಮೂರು ವರ್ಷಗಳಿಂದ ಅವರ ಗೋಳನ್ನು ಕೇಳುವಂತಹವರು ಯಾರು ಇಲ್ಲದಿರುವಂತಹ ಪರಿಸ್ಥಿತಿ ಇವತ್ತಿನ ದಿನ ನಿರ್ಮಾಣವಾಗಿದೆ. ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಎಂದು ತಕ್ಷಣ ಭಾವನಾತ್ಮಕವಾಗಿ ಈ ಬ್ಯಾಂಕ್‌ನಲ್ಲಿ ಯಾರು ಹಣವನ್ನು ಠೇವಣಿಯಾಗಿ ಇಟ್ಟಿದ್ದಾರೋ, ಆ ಜನರ ಮನಸ್ಸನ್ನು ಒಡೆಯುವಂತಹ ಕೆಲಸವನ್ನು ಈ ಬ್ಯಾಂಕ್‌ನ ಅಧ್ಯಕ್ಷರು ಮಾಡಿದ್ದಾರೆ. ಆದರೆ ಆ ಬ್ಯಾಂಕ್‌ನ ಹೆಸರು ಯಾವಾಗ ಇಟ್ಟಿದ್ದಾರೆ ಎಂಬುದು ಗೊತ್ತಿಲ್ಲ. ಆದರೆ ಇವತ್ತು ಭಾವನಾತ್ಮಕವಾಗಿ ಆ ಬ್ಯಾಂಕ್‌ನಲ್ಲಿ ಠೇವಣಿ ಹಣವನ್ನು ಇಡಿಸುವ ಮುಖಾಂತರವಾಗಿ ಅವರಿಗೆಲ್ಲಾ ದ್ರೋಹ ಬಗೆದಿರುವಂತಹ ಕೆಲಸವನ್ನು ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನ ಅಧ್ಯಕ್ಷರು ಮಾಡಿದ್ದಾರೆ. ಕಳೆದ ಮೂರು ವರ್ಷಗಳಿಂದ ಈ ಬ್ಯಾಂಕ್ ಮಂದಗತಿಯಲ್ಲಿ ಸಾಗುತ್ತಿದೆ. ಠೇವಣಿದಾರರಿಗೆ ಠೇವಣಿ ಹಣವನ್ನು ಹಿಂತಿರುಗಿಸುವಂತಹ ಕೆಲಸವನ್ನು ಆದಷ್ಟು ಬೇಗ ಮಾಡುತ್ತೇನೆಂದು ಕಳೆದ ಬಾರಿ ಇದೇ ಸದನದಲ್ಲಿ ಮಾನ್ಯ ಸಹಕಾರ ಸಚಿವರು

ಹೇಳಿದ್ದರು. ಅದರೆ ಇಲ್ಲಿಯವರೆಗೂ ಸಹ ಆರ್.ಬಿ.ಐ., ಆಗಿರಬಹುದು, R.C.S., ಇರಬಹುದು ಅಥವಾ ಸಿ.ಐ.ಡಿ., ಅಧಿಕಾರಿಗಳಾಗಿರಬಹುದು. ಯಾರು ಸಹ ಇದನ್ನು ಪರಿಪೂರ್ಣವಾಗಿ ಈ ಬ್ಯಾಂಕಿನ ಠೇವಣಿದಾರರಿಗೆ ಹಣವನ್ನು ಹಿಂದುರುಗಿಸುವಂತಹ ಕೆಲಸವನ್ನು ಇಲ್ಲಿಯವರೆವಿಗೂ ಮಾಡಿಲ್ಲ. ಇವತ್ತು ಹೆಚ್ಚಿನ ಬಡ್ಡಿಯ ಹಣವನ್ನು ಕೊಡುತ್ತೇವೆಂದು ಹೇಳಿ, ಜನರಿಗೆ ದ್ರೋಹವನ್ನು ಮಾಡಿದಂತಹ ಈ ಬ್ಯಾಂಕ್‌ನ ಅಧ್ಯಕ್ಷರು ಅಥವಾ ಅಲ್ಲಿನ ಸಿಬ್ಬಂದಿಯವರು ಮಾಡಿರುವ ಪರಿಣಾಮವಾಗಿ ಈ ಪರಿಸ್ಥಿತಿ ಉಂಟಾಗಿದೆ. ಇಡೀ ತಮ್ಮ ಜೀವನದಲ್ಲಿ ಎಷ್ಟು ಜನ ಬಡವರು ಸಹ ಠೇವಣಿ ಹಣವನ್ನು ಇಟ್ಟಿದ್ದಾರೆ. ಎಷ್ಟು ಜನ ಬ್ರಹ್ಮಚಾರ್ಯರಾಗಿರುವಂತಹವರು ತಮ್ಮ ಸಂಧ್ಯಾ ಕಾಲದಲ್ಲಿ ಉಪಯೋಗವಾಗುತ್ತದೆ ಎಂದು ಹೇಳಿ ಈ ಬ್ಯಾಂಕ್‌ನಲ್ಲಿ ಹಣವನ್ನು ಠೇವಣಿಯಾಗಿ ಇಟ್ಟಿದ್ದಾರೆ. ಇವತ್ತು ಅವರಿಗೆ ತಮ್ಮ ಕುಟುಂಬಸ್ಥರು ಸಹಕಾರ ಕೊಡುತ್ತಿಲ್ಲ. ಬ್ಯಾಂಕಿನಲ್ಲಿ ಇಟ್ಟಿರುವ ಹಣ ಕೂಡ ಬರುತ್ತಿಲ್ಲ. ಆದರೆ ಅಲ್ಲಿನ ಯಾವೊಬ್ಬ ಅಧಿಕಾರಿಗಳನ್ನು ನೇಮಿಸಿದ್ದಾರೆ, ಆ ಅಧಿಕಾರಿಗೆ ಈ ಸಹಕಾರ ಇಲಾಖೆಯ ವ್ಯವಸ್ಥೆಯನ್ನು ತಿಳಿಯದೇ ಇರುವಂತಹ ಒಬ್ಬ ಅಧಿಕಾರಿಯನ್ನು ಅಲ್ಲಿ ನೇಮಿಸಿದ್ದರ ಪರಿಣಾಮವಾಗಿ ಇವತ್ತು ಯಾರಿಗೂ ಕೂಡ ಸಹಕಾರವನ್ನು ಕೊಡದೇ ಇರುವಂತಹ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಸುಮಾರು 150ಕ್ಕಿಂತ ಹೆಚ್ಚು ಜನ ಠೇವಣಿದಾರರು ಮತ್ತು ಹಿರಿಯ ಜೀವಿಗಳು ಈಗಾಗಲೇ ತಮ್ಮ ಜೀವನವನ್ನು ಕಳೆದುಕೊಂಡಿದ್ದಾರೆ. ಸುಮಾರು 102 ಸಹಕಾರಿ ಸಂಸ್ಥೆಗಳು ಈ ಸಂಸ್ಥೆಯಲ್ಲಿ ಹೆಚ್ಚು ಬಡ್ಡಿ ಸಿಗುತ್ತದೆ ಎಂಬ ಒಂದು ದೊಡ್ಡ ನಂಬಿಕೆಯನ್ನಿಟ್ಟುಕೊಂಡು ಇವತ್ತು 102 ಸಂಸ್ಥೆಗಳು ಅಲ್ಲಿ ಹಣವನ್ನು ಇಟ್ಟಿರುವಂತಹವರು ಸಹ ಇವತ್ತು ಅಧೋಗತಿಗೆ ತಲುಪುವಂತಹ ಕೆಲಸವಾಗುತ್ತಿದೆ.

ಮಾನ್ಯ ಸಭಾಪತಿಯವರೇ, ನಾನು ಕೇಳಿಕೊಳ್ಳುವುದೇನೆಂದರೆ, ಕಳೆದ ಬಾರಿ ಮಾನ್ಯ ಸಚಿವರು ಸಿ.ಐ.ಡಿ., ಗೆ ವಹಿಸಲಾಗಿದೆ ಎಂದು ಹೇಳಿದ್ದರು. ಇವತ್ತು ಸಿ.ಐ.ಡಿ., ಅಧಿಕಾರಿಗಳು ಸಹ ಅತ್ಯಂತ ಮಂದಗತಿಯಲ್ಲಿ ಈ ಒಂದು ಕಾರ್ಯಾಚರಣೆ ಮಾಡುತ್ತಿರುವುದರಿಂದ, ಇವತ್ತು ಸರ್ಕಾರಕ್ಕೆ ಮತ್ತು ಸಹಕಾರಿ ಬ್ಯಾಂಕ್‌ಗೂ ಸಮೇತ ಕೆಟ್ಟ ಹೆಸರು ಬರುತ್ತಿರುವಂತಹ ವಾತಾವರಣ ನಿರ್ಮಾಣವಾಗಿದೆ. ಉತ್ತರ ಕರ್ನಾಟಕ ಪ್ರದೇಶದಲ್ಲಿರುವ ಅತ್ಯಂತ ಹೆಚ್ಚು ಜನರು ಬಡವರು, ರೈತರು ಇರಬಹುದು. ಎಲ್ಲರೂ ಸಹ ಸಹಕಾರಿ ಬ್ಯಾಂಕ್‌ಗಳಲ್ಲಿ ಸಾಲವನ್ನು ತೆಗೆದುಕೊಳ್ಳುವ ಮುಖಾಂತರವಾಗಿ ಸಹಕಾರಿ

ಸಂಸ್ಥೆಗಳ ಮೇಲೆ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಇವತ್ತು ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಮಾಡಿರುವ ದ್ರೋಹದಿಂದ ಇಡೀ ರಾಜ್ಯದ ಜನತೆ ಸಹಕಾರ ಬ್ಯಾಂಕ್‌ನ ಮೇಲೆ ನಂಬಿಕೆಯನ್ನು ಕಳೆದುಕೊಳ್ಳುವಂತಹ ಕೆಲಸವಾಗಿರುವುದರಿಂದ, ಇದನ್ನು ಸಿ.ಐ.ಡಿ., ಯಿಂದ ಸಿ.ಬಿ.ಐ., ಗೆ ವಹಿಸಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ. ಇದರ ಜೊತೆಯಲ್ಲಿ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನ ಅಧ್ಯಕ್ಷರು ಯಾರಿದ್ದರು ಮತ್ತೊಂದು ಶ್ರೀ ಗುರುಸರ್ವಭೌಮ ಸಹಕಾರ ಬ್ಯಾಂಕ್‌ನಲ್ಲಿ ಅವರೇ ಅಧ್ಯಕ್ಷರಾಗಿದ್ದಾರೆ. ಈ ಬ್ಯಾಂಕ್‌ನಲ್ಲಿ ಸುಮಾರು 235 ಕೋಟಿ ರೂಪಾಯಿಗಳಷ್ಟು ಹಗರಣವಾಗಿದೆ. ಸದರಿ ವಿಷಯದ ಕುರಿತಾಗಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರದ ಸಹಕಾರ ಇಲಾಖೆ ಲೆಕ್ಕ ಪರಿಶೋಧನೆಯನ್ನು ನಡೆಸಿ the Karnataka Protection of Interest of Depositors in Financial Establishments Act ಅಡಿಯಲ್ಲಿ ಇಲಾಖೆಗೆ ಸದರಿಯವರು ಸಂಘದ ಅಧ್ಯಕ್ಷರು ಮತ್ತು ನಿರ್ದೇಶಕರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಮಾನ್ಯ ಉಚ್ಚ ನ್ಯಾಯಾಲಯವು ತಿಳಿಸಿದೆ. ಆದರೆ ಇಲ್ಲಿಯವರೆವಿಗೂ ಯಾವುದೇ ರೀತಿಯಾದಂತಹ ಪ್ರಕ್ರಿಯೆಗಳು ಆಗಿಲ್ಲ. ನನಗೆ ತಿಳಿದಿರುವ ಮಾಹಿತಿಯ ಪ್ರಕಾರವಾಗಿ, ಅಧ್ಯಕ್ಷರು ಮತ್ತು ನಿರ್ದೇಶಕರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವಂತಹದ್ದಕ್ಕೆ ಎಲ್ಲೋ ಒಂದು ಕಡೆ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ಅವರ ಆಸ್ತಿಗಳನ್ನು ಹರಾಜು ಪ್ರಕ್ರಿಯೆಯಲ್ಲಿ ಹೋದಂತಹ ಸಂದರ್ಭದಲ್ಲಿ ಅವರ ಆಸ್ತಿಗೆ ಅತ್ಯಂತ ಕಡಿಮೆ ಬೆಲೆಯನ್ನು ಕಟ್ಟಿ ಅದನ್ನು real estate ದಂಧೆಕೋರರಿಗೆ ಕೊಡಿಸುವ ಮುಖಾಂತರವಾಗಿ ಇದರ ಹಿಂದೆ ಬಹು ದೊಡ್ಡ ಷಡ್ಯಂತ್ರವನ್ನು ನಡೆಸುವಂತಹ ಕೆಲಸವನ್ನು ಮಾಡಿದ್ದಾರೆ ಎಂಬ ವಿಷಯ ಈಗಾಗಲೇ ನಮ್ಮ ಗಮನಕ್ಕೆ ಬಂದಿದೆ. ನಾನು ಕೇಳಿಕೊಳ್ಳುವುದೇನೆಂದರೆ, ಮನೆ-ಮಠ ಆಸ್ತಿಯನ್ನೆಲ್ಲಾ ಮಾರಾಟ ಮಾಡಿ, ವೃತ್ತಿಯ ಹಣವನ್ನು ಈ ಬ್ಯಾಂಕ್‌ನಲ್ಲಿ ಠೇವಣಿಯಾಗಿ ಇಟ್ಟು, ಇದರಲ್ಲಿ ಯಾರು ಬಡವರು ಸಾವನ್ನಪ್ಪಿದ್ದಾರೆ ಮತ್ತು ಇದನ್ನೇ ನಂಬಿಕೊಂಡಿದ್ದಂತಹ ಠೇವಣಿದಾರರು ತೀರಿಕೊಂಡಿದ್ದಾರೆ. ಅವರಿಗೆ ನ್ಯಾಯ ಕೊಡಿಸುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ. ಅವರು ತಮ್ಮ ಸಂಧ್ಯಾ ಕಾಲದಲ್ಲಿ ನೆಮ್ಮದಿಯಾಗಿ ಜೀವನ ನಡೆಸಬೇಕೆಂದು ಯಾರು ಠೇವಣಿದಾರರಿದ್ದಾರೋ, ಅವರ ಕಣ್ಣೀರನ್ನು ಹೊರೆಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ.

ದಯವಿಟ್ಟು, ಮಾನ್ಯ ಸಚಿವರು ಕೂಡಲೇ ಇದರ ಹಿಂದೇ ಅಧ್ಯಕ್ಷರು ಮಾಡಿರುವಂತಹ ಹಗರಣಗಳೇನಿವೆ, ಇದನ್ನೆಲ್ಲಾ ಗಮನಿಸಿ, ಇದಕ್ಕೆ ಹೆಚ್ಚು ಒತ್ತು ಕೊಟ್ಟು, ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ವಿಲೀನಗೊಳಿಸುವ ಮುಖಾಂತರವಾಗಿ ಠೇವಣಿದಾರರ ನೆಮ್ಮದಿಯನ್ನು ಕಾಪಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ಈ ವಿಷಯದ ಕುರಿತಾಗಿ, ಎರಡ್ಮೂರು ಬಾರಿ ಚರ್ಚೆಯಾಗಿದೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರು ಸದನದಲ್ಲಿ ಇಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸದನದಲ್ಲಿ ಮಾನ್ಯ ಸಭಾನಾಯಕರಿದ್ದಾರಲ್ಲ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ ಮಾನ್ಯ ಸಹಕಾರ ಸಚಿವರು ಸದನದಲ್ಲಿ ಇಲ್ಲ.

**ಸಭಾಪತಿಯವರು:-** ಈ ವಿಷಯದ ಕುರಿತಾಗಿ, ಮಾನ್ಯ ಸಭಾನಾಯಕರು ಹೇಳುತ್ತಾರೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರನ್ನು ಈ ಸದನಕ್ಕೆ ಕರೆಸಿದರೆ ಚೆನ್ನಾಗಿರುತ್ತದೆ. ಏಕೆಂದರೆ ಕಳೆದ ಬಾರಿ ಮಾನ್ಯ ಸಹಕಾರ ಸಚಿವರು ಎರಡ್ಮೂರು ಬಾರಿ ಉತ್ತರವನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:-** ಈಗ ಮಾನ್ಯ ಸಭಾನಾಯಕರು ಉತ್ತರವನ್ನು ಕೊಡುತ್ತಾರೆ. ಮಾನ್ಯ ಯು.ಬಿ. ವೆಂಕಟೇಶ್‌ರವರೇ, ತಾವು ಮಾತನಾಡಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರನ್ನು ಈ ಸದನಕ್ಕೆ ಕರೆಸಿದರೆ, ನಾವು ಕುಳಿತುಕೊಳ್ಳುತ್ತೇವೆ. ಇದಕ್ಕೆ ಸಂಬಂಧಪಟ್ಟಂತಹ ಮಾನ್ಯ ಸಚಿವರು ಕರೆಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನು ಕೊಡುತ್ತೇನೆ. ಈ ವಿಷಯದ ಕುರಿತಾಗಿ, ಮಾನ್ಯ ಸಹಕಾರ ಸಚಿವರೇ ಉತ್ತರ ಕೊಡಬೇಕೆಂದರೆ, ನಾಳೆ ಈ ವಿಷಯವನ್ನು ಅಜೆಂಡಾದಲ್ಲಿ ತೆಗೆದುಕೊಳ್ಳಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈ ವಿಷಯದ ಕುರಿತಾಗಿ, ನಾಳೆ ಅಜೆಂಡಾದಲ್ಲಿ ತೆಗೆದುಕೊಳ್ಳಿ. ಏಕೆಂದರೆ ಮಾನ್ಯ ಸಚಿವರು ಸದನದಲ್ಲಿ ಇಲ್ಲದಿರುವುದರಿಂದ ಚರ್ಚೆ ಮಾಡಲು ಆಗುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರದಲ್ಲಿರುವಂತೆ, ದಿನಾಂಕ 31.03.2021 ರಂತೆ ರೂ. 1408.05 ಕೋಟಿ ಸಾಲಗಳ ಪೈಕಿ ರೂ. 1,210.25 ಕೋಟಿಗಳ ನಕಲಿ ಸಾಲದ ಖಾತೆಗಳು. ಯಾರ ತಲೆಯನ್ನು ಹೊಡೆಯುತ್ತಿದ್ದಾರೆ ಸ್ವಾಮಿ? ಆದ್ದರಿಂದ ಮಾನ್ಯ ಸಚಿವರು ಸದನದಲ್ಲಿದ್ದರೆ ಒಳ್ಳೆಯದು.

**ಸಭಾಪತಿಯವರು:-** ಸರಿ. ಮಾನ್ಯ ಸಭಾನಾಯಕರೇ, ಈ ವಿಷಯದ ಕುರಿತಾಗಿ, ನಾಳೆ ಅಜೆಂಡಾದಲ್ಲಿ ತೆಗೆದುಕೊಳ್ಳೋಣ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನದಲ್ಲಿ ಇದ್ದರೆ ಒಳ್ಳೆಯದು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಹೇಳುತ್ತಿರುವುದನ್ನು ನಾನು ಒಪ್ಪಿಕೊಂಡಿದ್ದೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:-** ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಗ್ಗೆ 11 ಗಂಟೆಗೆ ಸೇರುವುದು.

(ಸದನವು ಸಾಯಂಕಾಲ 6 ಗಂಟೆ 59 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ಮಂಗಳವಾರ 27ನೇ ಡಿಸೆಂಬರ್ ಮಾಹೆ 2022 ರಂದು ಬೆಳಗ್ಗೆ 11 ಗಂಟೆಗೆ ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

<><><>